ಗಾಜರಕೋಟ್ ಲೋಹ ಶಿಲ್ಪಕಲೆ

(ಯಾದಗಿರಿ ಜಿಲ್ಲೆ, ಯಾದಗಿರಿ ತಾಲ್ಲೂಕು)

ವಿಶೇಷ ಘಟಕ ಯೋಜನೆಯ ಫೆಲೋಷಿಪ್ ಅಧ್ಯಯನ ಪ್ರಬಂಧ

2015–2016



ಸಂಶೋಧಕರು

ಡಾ. ಲಕ್ಷ್ಮೀಪತಿ. ಜಿ

ಮಾರ್ಗದರ್ಶಕರು

ಡಾ. ಎಸ್. ಸಿ. ಪಾಟೀಲ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – 560002

ಘೋಷಣಾ ಪತ್ರ

ಡಾ. ಲಕ್ಷ್ಮೀಪತಿ. ಜಿ. ಎಂಬ ನಾನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ ಫೆಲೋಷಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯವರಾದ ಡಾ.ಎಸ್.ಸಿ.ಪಾಟೀಲರ ಮಾರ್ಗದರ್ಶನದಲ್ಲಿ **'ಗಾಜರಕೋಟ್ ಲೋಹ ಶಿಲ್ಪಕಲೆ'** ಎಂಬ ಪ್ರಬಂಧ ಸಿದ್ಧಪಡಿಸಿದ್ದೇನೆ. ಇದು ಮೂಲ ಸಂಶೋಧನಾ ಕೃತಿಯಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸದ,

Lakshmipathy. G

(ಡಾ. ಲಕ್ಷ್ಮೀಪತಿ .ಜಿ)

ದಿನಾಂಕ: 19.05.2017

ಸ್ಥಳ : ಬೆಂಗಳೂರು

ಧೃಢೀಕರಣ ಪತ್ರ

ಡಾ. ಲಕ್ಷ್ಮೀಪತಿ. ಜಿ. ಯವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ ಫೆಲೋಷಿಪ್ ಅಧ್ಯಯನಕ್ಕೆ ಸಂಬಂಧಿಸಿದಂತೆ ನನ್ನ ಮಾರ್ಗದರ್ಶನದಲ್ಲಿ 'ಗಾಜರಕೋಟ್ ಲೋಹ ಶಿಲ್ಪಕಲೆ' ಪ್ರಬಂಧ ಸಿದ್ಧಪಡಿಸಿದ್ದಾರೆ. ಇದು ಮೂಲ ಸಂಶೋಧನಾ ಕೃತಿಯಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ. ಮತ್ತು ಪ್ರಕಟಣೆಗೆ ಯೋಗ್ಯವಾಗಿದ್ದು, ಅವಶ್ಯವೆನಿಸಿದ ಸಂದರ್ಭದಲ್ಲಿ ಸಂಶೋಧಕರಿಂದ ಪರಷ್ಕರಣೆಗೆ ಅವಕಾಶ ಒದಗಿಸಬಹುದಾಗಿದೆ. ಈ ಮೂಲಕ ಮುಂದಿನ ಕ್ರಮಕ್ಕಾಗಿ ಪ್ರಬಂಧವನ್ನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸಲಾಗುತ್ತಿದೆ.

ಮಾರ್ಗದರ್ಶಕರು

(ಡಾ. ಎಸ್. ಸಿ. ಪಾಟೀಲ)
ವಿಶೇಷಾಧಿಕಾರಿಯವರು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ-ಬಾದಾಮಿ
ಪ್ರಾದೇಶಿಕ ಕಛೇರಿ, ಬೆಂಗಳೂರು

ದಿನಾಂಕ: 19.05.2017
ಸ್ಥಳ : ಬೆಂಗಳೂರು

ಗಾಜರಕೋಟ್ ಲೋಹ ಶಿಲ್ಪಕಲೆ

(ಯಾದಗಿರಿ ಜಿಲ್ಲೆ, ಯಾದಗಿರಿ ತಾಲ್ಲೂಕು)

ವಿಶೇಷ ಘಟಕ ಯೋಜನೆಯ ಫೆಲೋಷಿಪ್ ಅಧ್ಯಯನ ಪ್ರಬಂಧ

2015–2016

ಸಂಶೋಧಕರು

ಡಾ. ಲಕ್ಷ್ಮೀಪತಿ. ಜಿ

ಮಾರ್ಗದರ್ಶಕರು

ಡಾ. ಎಸ್. ಸಿ. ಪಾಟೀಲ

ವಿಶೇಷಾಧಿಕಾರಿಯವರು

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ–ಬಾದಾಮಿ

ಪ್ರಾದೇಶಿಕ ಕಛೇರಿ, ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – 560002

ಪರಿವಿಡಿ

ಪೀಠಿಕೆ:

ಅಧ್ಯಾಯ –1: **ಅಧ್ಯಯನದ ವಿಧಾನ, ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ**

ಅಧ್ಯಾಯ –2: **ಗಾಜರಕೋಟ್ ಲೋಹ ಮಾಧ್ಯಮದ ಶಿಲ್ಪಗಳ ವರ್ಗೀಕರಣ**

ಅಧ್ಯಾಯ –3: **ಗಾಜರಕೋಟ್ ಶೈಲಿ ಲೋಹ ಶಿಲ್ಪಗಳ ತಯಾರಿಕೆ ಮತ್ತು ವೈಶಿಷ್ಟತೆ**

ಅಧ್ಯಾಯ –4: **ಗಾಜರಕೋಟ್ ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳು**

ಅಧ್ಯಾಯ –5: **ಗಾಜರಕೋಟ್ ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಶಿಲ್ಪಗಳು**

ಅಧ್ಯಾಯ –6: **ಸಮಾರೋಪ**

ಅನುಬಂಧಗಳು:

ಅ. ಪ್ರಶ್ನಾವಳಿ

ಆ. ಗ್ರಂಥಋಣ

ಇ. ಛಾಯಚಿತ್ರಗಳು

ಈ. ಸಂಕ್ಷೇಪಗಳು

ಉ. ನಕ್ಷೆಗಳು

ಪೀಠಿಕೆ:

ಕರ್ನಾಟಕವು ಶಿಲ್ಪಕಲೆಯಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. ಸಂಪ್ರದಾಯಿಕ ಶಿಲ್ಪ, ವಾಸ್ತುಶಿಲ್ಪ, ಶಿಷ್ಟಪದ ಶಿಲ್ಪ, ಜನಪದ ಶಿಲ್ಪ, ಕರಕುಶಲ ಶಿಲ್ಪ, ಸಮಕಾಲೀನ ಶಿಲ್ಪ ಹೀಗೆ ಹಲವಾರು ವೈವಿಧ್ಯತೆಗಳನ್ನು ಶಿಲ್ಪಕಲೆಯ ಪ್ರಮುಖವಾಗಿ ಗುರುತಿಸಿಕೊಂಡಿರುವ ಎಲ್ಲಾ ರಂಗಗಳಲ್ಲಿಯೂ, ಕ್ಷೇತ್ರಗಳಲ್ಲಿಯೂ ಪರಿಣಿತರ ಶ್ರಮಫಲದ ತಕ್ಕ ಸ್ಥಾನಮಾನಗಳೊಂದಿಗೆ ಪ್ರಖ್ಯಾತಿಯನ್ನು ಪಡೆದಿರುವುದನ್ನು ಆಧಾರ ಸಹಿತ ಐತಿಹಾಸಿಕ ಪರಂಪರೆಗಳನ್ನು ಇಂದಿಗೂ ಕಾಣಬಹುದಾಗಿದೆ.

ಮಾನವನ 'ನಿತ್ಯದ ಬದುಕು ಹಸನಾಗಿ ನಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಬಂಧಿಸಿದೆಯೋ ಅದು ಧರ್ಮ. ಈ ಧರ್ಮಪ್ರಜ್ಞೆಯ ಆಚಾರ–ವಿಚಾರಗಳು ನೂರಾರು ಸಂಪ್ರದಾಯಗಳಿಗೆ, ನಂಬಿಕೆಗಳಿಗೆ, ಮೌಲ್ಯಗಳಿಗೆ ಕಾರಣವಾಗಿ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳು ಹುಟ್ಟಿ ವಿಕಾಸಗೊಂಡವು. ಈ ದೃಷ್ಟಿಯಿಂದ, ಮನುಷ್ಯನ ಕ್ರಿಯಾಶೀಲ ಮನಸ್ಸು ಬದುಕನ್ನು ಸುಂದರವಾಗಿಸಲು, ಜಡದಿಂದ ಚೈತನ್ಯಕ್ಕೆ ಸಾಗುವಂತೆ ಮಾಡಲು ಪಟ್ಟ ಪರಿಶ್ರಮವೇ ಕಲೆಗಳ ಹುಟ್ಟಿಗೆ ಕಾರಣವಾಗಿದೆಯೆನಬೇಕು, ಇಂಥ ಕಲೆಗಳ ಬೆಳವಣಿಗೆ, ವಿಕಾಸಗಳೇ ಸಂಸ್ಕೃತಿಯ ವೈಭವವನ್ನು ಸೂಚಿಸುತ್ತದೆ'.(ಡಾ.ಎಸ್.ಸಿ. ಪಾಟೀಲ. ಪುಟ–3, ಕರ್ನಾಟಕದ ಜನಪದ ಚಿತ್ರಕಲೆ, 1993)

ಜನಪದ ಶಿಲ್ಪಕಲೆಯು ಗ್ರಾಮೀಣರ ಮುಖಾಂತರ, ಗಿರಿಜನ, ಅಲೆಮಾರಿ ಮತ್ತು ಬುಡಕಟ್ಟು ಜನರ ಸಾಂಸ್ಕೃತಿಕ ಶ್ರೀಮಂತ ಪರಂಪರೆಯಿಂದ ಅಸ್ತಿತ್ವವನ್ನು ಪಡೆದುಕೊಂಡಿರುವುದು ವಾಸ್ತವವಾಗಿದೆ. ಜನಪದರ ಗರ್ಭದಿಂದ ತಲೆತಲಾಂತರಗಳಿಂದ ತಂದೆಯಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಪೂರ್ವಿಕರಿಂದ ಮುಂದಿನ ಪೀಳಿಗೆಯವರೆಗೆ ಬೆಳೆದು ಬಂದ ಶಿಲ್ಪಕಲೆಯ ಜನಪದ ಶೈಲಿಯು ಕಾಲಕ್ಕನುಗುಣವಾಗಿ ಕರಕುಶಲ

ಮರುಪ್ರತಿ ಸಂಸ್ಕಾರಕ್ಕೆ ಒದಗಿಸಿಕೊಂಡ ಕಲಾಬದುಕಿನ ಸ್ಥಿತ್ಯಂತರಗಳ ಜೊತೆಗಿನ ಸಾಮಾಜಿಕ ನಡೆಯಡೆಗೆ ಸವೆಸಿಕೊಂಡ ದೀರ್ಘ ಪಯಣದ ಹಂತ ಹಂತಗಳ ಬದಲಾವಣೆಗಳನ್ನು ಸಮಗ್ರತೆಯಿಂದ ಗಮನಿಸಲಾಗಿದೆ.

ಪ್ರಾಕೃತ ಕಾಲದಿಂದಲೂ ನಡೆದುಬಂದ ನಂಬಿಕೆಯ ಮೂಲ ದೈವಭಕ್ತಿ, ಭಯ, ಭೀತಿ, ಸಂಸ್ಕಾರ, ಗೌರವ, ಸಮುದಾಯದ ಗುರುತು, ಸಂಪ್ರದಾಯ ಹೀಗೆ ಪಾರಂಪರಿಕ ಆಚರಣೆಗಳ ಮುಖಾಂತರ ಆದಿಮಾನವನಿಂದ ಸಮುದಾಯ ಜೀವಿಯ ವರೆಗೂ ಸಾಗಿಬಂದ ಹಂತ ಹಂತಗಳ ಬದುಕಿನ ವಿವಿಧ ಸ್ತರಗಳನ್ನು (ಚಿತ್ರ) ಗೀರುಚಿತ್ರ, ಶಿಲ್ಪ, ಭಾಷೆ, ಕುಣಿತ, ಸಂಗೀತ, ಆಹಾರ, ಉಡುಗೆ-ತೊಡುಗೆ, ಮದುವೆ, ತೊಟ್ಟಿಲು, ಸಮಾಧಿ, ದೆವ್ವ, ಪಿಶಾಚಿ, ಮುಖಂಡನಲ್ಲಿ ತೋರುವ ಗೌರವ, ಸಮುದಾಯದ ಸಂಕೇತ, ಆಯುಧಗಳು, ಆಭರಣಗಳು ಹೀಗೆ ಪ್ರತಿಹಂತಗಳಲ್ಲಿ ಕಂಡು ಕೊಂಡ ಆಕೃತಿಗಳ ರಚನೆಗಳು ಮಾನವ ಸಂಸ್ಕೃತಿಯನ್ನು ಎತ್ತರಕ್ಕೆ ಕೊಂಡೊಯ್ದಿವೆ.

ಸಾಂಸ್ಕೃತಿಕ ಕಲಾ ಪ್ರಪಂಚದಲ್ಲಿ ಲಲಿತ ಕಲೆಗಳಾದ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ನೃತ್ಯ ಇವುಗಳಲ್ಲಿಯೂ ಪ್ರತಿಯೊಂದು ಹಂತದಲ್ಲಿಯೂ ಆದ ಅಭಿವೃದ್ಧಿಯ ಪರಿವರ್ತನೆಗಳು ಇಂದಿನ ಸಮಕಾಲೀನ ಜಾಗತೀಕರಣದ ಸಂದರ್ಭದಲ್ಲಿಯೂ ಜನಪದ ಕಲಾಪ್ರಕಾರಗಳು ಎಲ್ಲಾ ನವೀನ ಕಲೆಗಳಿಗೆ ಭದ್ರಬುನಾದಿಯನ್ನು ಹಾಕಿಕೊಟ್ಟಿವೆ.

ಕರ್ನಾಟಕದ ಪ್ರತಿ ಜಿಲ್ಲೆಗಳಲ್ಲಿಯೂ ಆಯಾ ಪ್ರಾದೇಶಿಕ ವಿಭಿನ್ನತೆಗೆ ತಕ್ಕಂತೆ ವೈಶಿಷ್ಟ್ಯಪೂರ್ಣವಾದ ಜನರ ಭಾಷೆ, ಉಡುಗೆ-ತೊಡುಗೆ, ಆಚಾರ-ವಿಚಾರ, ಸಾಂಸ್ಕೃತಿಕ ಒಡಂಬಡಿಕೆಗಳು ಹಾಸುಹೊಕ್ಕಾಗಿರುವುದರಿಂದ ಇಲ್ಲಿಯ ಕಲಾ ಪ್ರಕಾರಗಳಲ್ಲಿಯೂ ವಿಶಿಷ್ಟತೆಯ ಹಲವಾರು ಶೈಲಿಗಳನ್ನು

ಕಾಣುತ್ತೇವೆ. ಭೌಗೋಳಿಕ ರಚನೆಯ ವ್ಯತ್ಯಾಸ ವಾತಾವರಣದ ಏರುಪೇರುಗಳನ್ನು ಸ್ವಾಭಾವಿಕ ಪರಿಸರದೊಂದಿಗೆ ರೂಢಿಸಿಕೊಂಡಿರುವ ಸಾಂಸ್ಕೃತಿಕ ಜನಜೀವನ ವ್ಯವಸ್ಥೆಯೂ ಪ್ರತೀ ಜಿಲ್ಲೆಗಳಲ್ಲಿಯೂ ವಿಶೇಷತೆಗೆ ಒಳಗಾಗಿವೆ. ಆದರೆ ಕೊಡುಕೊಳುವಿಕೆಯಿಂದ ಪ್ರಾದೇಶಿಕ ವ್ಯತ್ಯಾಸಗಳೂ ಹಲವಾರು ಸಂದರ್ಭಗಳಲ್ಲಿ ಸಮ್ಮಿಶ್ರ ಬದುಕಿಗೆ ಅವಕಾಶ ಮಾಡಿಕೊಟ್ಟಿವೆ.

ಕರ್ನಾಟಕದ (ಸಂದರ್ಭದಲ್ಲಿ) ಭೂಗೋಳಿಕ ವಿಂಗಡಣೆಯಲ್ಲಿ ಉತ್ತರ ಕರ್ನಾಟಕ, ಮುಂಬೈ ಹಾಗೂ ಹೈದ್ರಾಬಾದ್ ಕರ್ನಾಟಕ, ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ ಹೀಗೆ ಪ್ರಾಕೃತಿಕವಾಗಿ ಪ್ರತ್ಯೇಕತೆಯನ್ನು ಕಂಡರೂ ಕನ್ನಡ ನಾಡಿನ ಸಾಂಸ್ಕೃತಿಕ ವಿಚಾರದಲ್ಲಿ ಸಮಗ್ರತೆಯನ್ನು ಕಾಪಾಡಿಕೊಂಡಿದೆ.

ಪ್ರಸ್ತುತ ಅಧ್ಯಯನಕ್ಕೆ ಹೈದ್ರಾಬಾದ್ ಕರ್ನಾಟಕದ ಪ್ರದೇಶವನ್ನು ಆಯ್ದುಕೊಂಡು ಕ್ಷೇತ್ರಕಾರ್ಯವನ್ನು ಮಾಡಲಾಗಿದ್ದು, ಹಲವಾರು ಸಾಂಸ್ಕೃತಿಕ ಏಕಪ್ರಕಾರಗಳನ್ನು ಇತರೆಡೆಯಲ್ಲಿಯೂ ಹತ್ತಿರ ಸಂಬಂಧ ಪ್ರದೇಶವಾದ ಕಲುಬುರಗಿ ಮತ್ತಿತರ ಪ್ರದೇಶಗಳ ಶಿಲ್ಪ ಸಂಸ್ಕೃತಿಯನ್ನು ಅಧ್ಯಯನಕ್ಕೆ ಅಗತ್ಯಕ್ಕನುಸಾರವಾಗಿ ಬಳಸಿಕೊಳ್ಳಲಾಗಿದೆ.

ಸಾಂಸ್ಕೃತಿಕ ಕ್ಷೇತ್ರವನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳುವಾಗ ಧಾರ್ಮಿಕತೆಯು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಹಲವಾರು ಧರ್ಮಗಳ ಆಳ್ವಿಕೆಯನ್ನು ಕಂಡ ಭಾರತ ದೇಶದ ಸಾಂಸ್ಕೃತಿಕ ರಾಜ್ಯವಾದ ಕರ್ನಾಟಕದಲ್ಲಿ ಇದರ ಪ್ರಭಾವವು ಕಂಡುಬಂದಿರುವುದು ಐತಿಹಾಸಿಕ ಹಿನ್ನೆಲೆಯು ಕಾರಣವಾಗಿದೆ. ಧರ್ಮದಷ್ಟೇ ಪ್ರಮುಖ ಪಾತ್ರವನ್ನು ಭಾಷೆಗಳ ವಿಭಿನ್ನತೆಯು ಪಡೆದುಕೊಂಡಿದೆ.

ಒಂದು ರಾಷ್ಟ್ರವಾಗಲೀ, ಕುಟುಂಬವಾಗಲೀ, ಒಂದೇ ರೀತಿಯ ಅನುಕರಣೆ, ಸಾಮಾನ್ಯವಾದ ಉದ್ಯೋಗ, ಭಾಷೆ, ಧರ್ಮ ಇವುಗಳನ್ನು ಒಟ್ಟಾಗಿ ರೂಪಿಸಿಕೊಂಡ ಸಂಪ್ರದಾಯವನ್ನು ಅವರದೇ ಎನ್ನುವುದೇ ಜಾನಪದದ ನಿಜವಾದ ಅರ್ಥ. ಎಂದು ತಮ್ಮ ತರ್ಕವನ್ನು ವಿಶ್ಲೇಸಿಸಿರುವ ಹಾಗೆಯೇ ಜಾನಪದರು ಕಲಾತ್ಮಕ ಬದುಕಿನಲ್ಲಿ ಒಂದೇ ತೆರನಾದ ಅನುಕರಣೆಯ ಸಾಂಸ್ಕೃತಿಕ ನೆಲಗಟ್ಟನ್ನು ರೂಪಿಸಿಕೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಶಿಲ್ಪಕಲಾ ಕ್ಷೇತ್ರದಲ್ಲಿನ ಪ್ರಾಗೈತಿಹಾಸಿಕ ಕಾಲದ ಶಿಲ್ಪಗಳು, ಜನಪದ ಶಿಲ್ಪಗಳು, ಸಂಪ್ರದಾಯಿಕ ಶಿಲ್ಪಗಳು, ಶಿಷ್ಟಪದ ಶಿಲ್ಪಗಳು, ಸಮಕಾಲೀನ ಶಿಲ್ಪಗಳು, ಅಕಾಡಮಿಕ್ ಶೈಲಿಯ ಶಿಲ್ಪಗಳು ಎಂಬ ವಿವಿಧ ಶೈಲಿಗಳಲ್ಲಿ 'ಗಾಜರಕೋಟ್' ಲೋಹ ಶಿಲ್ಪ ಶೈಲಿಯ ಪ್ರಸ್ತುತತೆಯು ಈ ಅಧ್ಯಯನದಲ್ಲಿ ಅಗತ್ಯಕ್ಕೆ ತಕ್ಕಂತೆ ನಿರ್ವಹಿಸಿಕೊಂಡಿರುವುದನ್ನು ಅವಲೋಕಿಸಬಹುದಾಗಿದೆ.

ಮರಿಕಲ್ಯಾಣ ಗಾಜರಕೋಟ: ಸ್ಥಳೀಯ ಐತಿಹ್ಯ

ಕರ್ನಾಟಕದ ಯಾದಗಿರಿ ಜಿಲ್ಲಾ ಕೇಂದ್ರದಿಂದ 30ಕಿ.ಮೀ ದೂರದಲ್ಲಿರುವ 'ಗಾಜರಕೋಟ' ಬಹಳ ವೈಶಿಷ್ಟ್ಯತೆಯಿಂದ ತನ್ನದೇ ಆದ ಸಾಂಸ್ಕೃತಿಕ ಐತಿಹ್ಯ ಹೊಂದಿರುವಂತಹ ಗ್ರಾಮವಾಗಿದೆ. ಇದು ಕರ್ನಾಟಕ ಮತ್ತು ಆಂದ್ರಪ್ರದೇಶ ರಾಜ್ಯದ ಗಡಿ ಗ್ರಾಮವಾಗಿದ್ದು, ಇಲ್ಲಿಂದ ಆಂದ್ರಕ್ಕೆ 27ಕಿ.ಮೀ ಅಂತರವಿದ್ದು, ಗಾಜುಲಕೋಟ, 'ಗಾಜುಲಕೋಟ್ರಕಿ', 'ಕೋಟ್ರಕಿ', 'ಗಾಜರಕೋಟ' ಎಂಬ ಹೆಸರುಗಳು ಇಂದಿಗೂ ಚಾಲ್ತಿಯಲ್ಲಿವೆ. ಸುಮಾರು 400-500 ವರ್ಷಗಳ ಹಿಂದೆ 'ಗಾಜರಕೋಟ'ದಲ್ಲಿ ಬಳೆಗಳನ್ನು ತಯಾರಿಸುವ ಕಾರ್ಖಾನೆಗಳು ಬಹಳ ಇದ್ದ ಕಾರಣ ಹಾಗೂ ತೆಲುಗು ಭಾಷೆಯ ಪ್ರಭಾವ ಬಹಳ ಇರುವುದರಿಂದ ಈ ಊರನ್ನು "ಗಾಜುಲಕೋಟ" ಎಂದು ಗಾಜುಲು ಎಂದೆ ತೆಲುಗಿನಲ್ಲಿ ಬಳೆಗಳು, ಕೋಟ ಎಂದರೆ ಕೋಟೆ ಇವೆರಡು ಸೇರಿ ಗಾಜುಲಕೊಟ ಎಂದಾಗಿದೆ ಎಂಬುದು ಸ್ಥಳೀಯ ಐತಿಹ್ಯವಾಗಿದೆ.

ಕನ್ನಡದಲ್ಲಿ 'ಬಳಿಪುರ' ಎಂದು ಕೂಡ ಹಿಂದೆ ಕರೆಯುತ್ತಿದ್ದರು. ಕಾಲ ಕ್ರಮೇಣ ಮಾರ್ಪಟ್ಟು ಊರಿನ ಹೆಸರು ಗಾಜರಕೋಟ ಎಂದು ಈಗ ಕರೆಯಲಾಗುತ್ತಿದೆ. ಊರ ಹಿಂಭಾಗದಲ್ಲಿ ಕೋಟೆ ಪ್ರದೇಶದಲ್ಲಿ ಸುಮಾರು ಎರಡು ದಶಕಗಳ ಹಿಂದೆ ಬಳೆಗಳು ತಯಾರಿಸುತ್ತಿದ್ದ ಕಾರ್ಖಾನೆಗಳು, ಗಾಜು ಕಾಯಿಸುವ ಒಲೆಗಳು ಇದ್ದವು. ನಂತರದ ದಿನಗಳಲ್ಲಿ ಆ ಪ್ರದೇಶದಲ್ಲಿ ಮನೆಗಳ ನಿರ್ಮಾಣವಾಗಿ ಅವು ಈಗ ಕಾಣ ಸಿಗುವುದಿಲ್ಲ ಆದರೆ ಮನೆನಿರ್ಮಾಣದ ಅಡಿಪಾಯಕ್ಕೆ ಮಣ್ಣು ಅಗೆಯುವಾಗ ಗಾಜಿನ ಚೂರು ಮಡಿಕೆ ಈಗಲೂ ಸಿಗುತ್ತವೆ.

ಪ್ರಸ್ತುತ ಅಧ್ಯಯನದ ಗಾಜರಕೋಟ ಗ್ರಾಮ ಗಡಿಭಾಗವಾಗಿದ್ದರು, ಇಲ್ಲಿ ಕನ್ನಡದ ಕಂಪು ತುಂಬಿದೆ ಹಾಗೂ ಕನ್ನಡ ನಾಡಿನ ಪ್ರಸಿದ್ಧ ಶರಣ-ಶಿವಯೋಗಿಗಳ ಪಾವನ ಭೂಮಿ ಗಾಜರಕೋಟವಾಗಿದೆ. ದಾಸೋಹ ಮೂರ್ತಿಗಳಾದ ಶಿವಶರಣ ಚನ್ನಪ್ಪಯ್ಯನವುರ, ಶ್ರೀ ಗವಿಸಿದ್ಧಲಿಂಗೇಶ್ವರರು, ಶ್ರೀ ರಾಚಪ್ಪಯ್ಯನವರು-ಕಢ್ಲಪ್ಪ

ಶರಣರು ಕಲೆಗುಂಡದ ಶ್ರೀ ರುದ್ರಮುನಿ ಶಿವಾಚಾರರ್ಯರು, ಅರವತ್ತು ಮೂರು ಪುರಾತನದಲ್ಲಿ ಒಬ್ಬರಾದ ಶ್ರಿ ಕಲಿಗಣನಾಥರು, ಶ್ರೀ ತಿಂತಣಿಯ ಮೌನೇಶ್ವರರ ತಾಯಿ ಶೇಷಮಾಂಜಿ ಇವರೆಲ್ಲರೂ ನೆಲಸಿದ ಪುಣ್ಯಸ್ಥಳ ಈ ಗಾಜರಕೋಟವಾಗಿದೆ.

ಗಾಜರಕೋಟೆ ಗ್ರಾಮವು ಕಲ್ಯಾಣ ಕ್ರಾಂತಿಯ ನೆನಪನ್ನು ತರುತ್ತದೆ ಎಂಬುದಕ್ಕೆ ಇಲ್ಲಿಯ ಅನೇಕ ಶರಣರ ಬಗ್ಗೆ ಮಾಹಿತಿಗಳನ್ನು ಕಲೆಹಾಕಿದಾಗ ತಿಳಿದು ಬಂದಿರುತ್ತದೆ. ಈ ಶರಣರ ಹಾದಿಯನ್ನು ಇಲ್ಲಿ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಗಾಜರಕೋಟದ ಶರಣರಲ್ಲಿ ಪ್ರಮುಖರು ಮತ್ತು ಅವರ ಮಹಿಮೆಗಳು

ಶ್ರೀ ಶಿವಶರಣ ಚನ್ನಪ್ಪಯ್ಯನವರು:

ಗಾಜರಕೋಟದ ಹಾಗೂ ಸುತ್ತಲಿನ ಗ್ರಾಮಗಳ ಆರಾಧ್ಯ ದೈವ, ದಾಸೋಹಮೂರ್ತಿಗಳು ಶಿವಶರಣ ಚನ್ನಪ್ಪಯ್ಯನವರು. ಇವರ ಕಾಲಮಾನವನ್ನು ಸುಮಾರು 17ನೇ ಶತಮಾನ ಎಂದು ಅಂದಾಜಿಸಲಾಗಿದೆ. ಕೆಂಗನಳ್ಳಿ ಶೀಲವಂತರೆಂದು ಇವರ ಮನೆತನವನ್ನು ಗುರುತಿಸಲಾಗಿದೆ. ಶಿವಶರಣರು ಆಚಾರ ಸಂಪನ್ನರು ಮತ್ತು ಮಹಾದಾಸೋಹಿಗಳಾಗಿದ್ದರು.

ಅರಿವು–ಆಚಾರ ಸಂಪನ್ನ ಶರಣರು:

ಒಮ್ಮೆ ಶಿವಶರಣ ಚನ್ನಪ್ಪಯ್ಯನವರು ಭಕ್ತರೊಂದಿಗೆ ಪಾದಯಾತ್ರೆಯನ್ನು ಮಾಡುತ್ತಾ ಶ್ರೀಶೈಲಕ್ಕೆ ಹೋಗಿ ಶಿವಲಿಂಗವನ್ನು ತಂದು ತಮ್ಮ ಹೊಲದಲ್ಲಿಯೇ ದೇವಸ್ಥಾನವನ್ನು ಕಟ್ಟಿ ಅಲ್ಲಿ ಪ್ರತಿಷ್ಠಾಪಿಸಿದವರು. ಈಗಲೂ ಕೂಡ ಊರ ಹಿಂಬದಿಯಲ್ಲಿ ಮಲ್ಲಿಕಾರ್ಜುನ ದೇವಸ್ಥಾನ, ದೊಡ್ಡ ಬಾವಿ ಮತ್ತು ಅವರ ಹೊಲವಿದೆ. ಚನ್ನಪ್ಪಯ್ಯ ಶರಣರು ಪಾದಯಾತ್ರೆ ಮೂಲಕ ಶ್ರೀಶೈಲಕ್ಕೆ ಹೊರಡುವ ದಾರಿಯಲ್ಲಿ ಸ್ನಾನ,

ಪ್ರಸಾದಕ್ಕೆಂದು ಒಂದೆಡೆ ತಂಗಿದ್ದರು. ಶರಣರು ವಿಭಿನ್ನ ಆಚಾರ-ವಿಚಾರವಾಗಿತ್ತು. ಅವರು ಊರು ಬಿಟ್ಟು ಎಲ್ಲೇ ಹೋದರು ಸ್ವಚ್ಛ ಬಾವಿ ನೀರು, ಇಲ್ಲದಿದ್ದರೆ ತಾವೇ ಒಂದು ಸಣ್ಣ ಬಾವಿ ತೆಗೆಸಿ(ಗುಂಡಾ ಹೊಡೆಸಿ) ಸ್ನಾನ, ಪೂಜೆ ಮಾಡುವಂತದ್ದಾಗಿತ್ತು. ಆಗಿನ ಕಾಲದಲ್ಲಿ ಸ್ವಲ್ಪ ಅಗೆದರೆ ಸಾಕು ನೀರು ಕಾಣಿಸಿಕೊಳ್ಳುತ್ತಿತ್ತು. ಶರಣರು ತಂಗಿದ್ದ ಸ್ಥಳದಲ್ಲಿ ನಾಲ್ಕೈದು ಕಡೆ ಭಾವಿಗಳನ್ನು ಅಗೆದರು. ಎಲ್ಲೂ ನೀರು ಕಾಣಿಸಿಕೊಳ್ಳಲಿಲ್ಲ. ಇದು ಶರಣರಿಗೆ ಸತ್ವ ಪರೀಕ್ಷೆಯ ಕಾಲವಾಯಿತು. ನೀರು ಬರದ ಹೊರತು ಸ್ನಾನ, ಪೂಜೆ, ಪ್ರಸಾದಗಳಿಲ್ಲ ಎಂದು ಹಟಹಿಡಿದು ಶರಣರು ಗಂಗಾ ಮಾತೆಗೆ ಕೇಳಿಕೊಳ್ಳುತ್ತಾರೆ 'ಮಾತೆ ಗುಂಡದಲ್ಲಿ ನೀರು ಕಾಣಿಸಿಕೊಳ್ಳದಿದ್ದರೆ ಇಲ್ಲೇ ಪ್ರಾಣ ಬಿಡುವೆ, ಆಚಾರವನ್ನು ಬಿಡುವುದಿಲ್ಲ ಎಂದಾಗ ಗಂಗಾ ಮಾತೆಯು ಪ್ರತ್ಯಕ್ಷಳಾಗಿ ಶರಣರ ಆಚಾರ ಸಂಪನ್ನತೆಗೆ, ಭಕ್ತಿಗೆ ಮೆಚ್ಚಿ ನೀರು ಕಾಣಿಸುವ ಅಭಯವನ್ನಿತ್ತಳು'.

ನಂತರವೇ ಶರಣರ ಪಾದಕಮಲಗಳಿಗೆ ನೀರಿನ ಸಿಂಚನ, ಎರಡು ಕಲ್ಲು ಬಂಡೆಯ ಮಧ್ಯದಿಂದ ನೀರು ಪುಟಿದೇಳುತ್ತಿತ್ತು. ಶರಣರು ಶಾಂತರಾಗಿ ತಮ್ಮ ಮುಂದಿನ ಕಾಯಕದಲ್ಲಿ ನಿರತರಾದರು. ಹಾಗೆ ಶರಣರ ನುಡಿಗಳು ಮುತ್ತುಗಳಿದ್ದಂತೆ. ಎಂಥಾ ಕಠೋರ ಹೃದಯವಿದ್ದರು ಶರಣರ ಮಾತುಗಳನ್ನ ಆಲಿಸಿದರೆ ಹೂವಿನಂತಾಗುತ್ತಿದ್ದರು. ಮಹಾನ್ ಅನುಭಾವಿಗಳಾಗಿದ್ದರು. ಯಾವಾಗಲೂ ಸಂಪೂರ್ಣ ಶರಣರ ಭಾವಶ್ರೀಮಂತಿಕೆಯನ್ನು ಮೆರೆದವರಾಗಿದ್ದರು. ಇದು ಶರಣರ ಅರಿವು-ಆಚಾರ ಸಂಪನ್ನತೆಗೆ ಕೈಗನ್ನಡಿಯಾಗಿದೆ.

ಜಂಗಮ ಪ್ರೇಮಿ ಮತ್ತು ಮಹಾದಾಸೋಹಿ:

ಶರಣರು ಚಿಂತನಹಳ್ಳಿಯ ಗವಿಸಿದ್ಧಲಿಂಗೇಶ್ವರರನ್ನು ತಮ್ಮ ಗುರುವಾಗಿ ಪಡೆದಿದ್ದರು. ಶರಣರದು ಮತ್ತು ಸಿದ್ಧಲಿಂಗೇಶ್ವರರು ಅಪರೂಪದ ಗುರು-ಶಿಷ್ಯರ ಸಂಬಂಧವಾಗಿತ್ತು. ಶರಣರು ಪಾದಯಾತ್ರೆ ಹೋದಾಗ ಸಿದ್ಧಲಿಂಗೇಶ್ವರರನ್ನು ಗಾಜರಕೋಟದಲ್ಲಿಯೇ ಬಿಟ್ಟು ಹೋಗಿದ್ದರು. ಶರಣರು ಶ್ರೀಶೈಲದಲ್ಲಿ ಜಂಗಮ

ದಾಸೋಹ ನಡೆದಾಗ ತುಪ್ಪದ ಗಿಂಡಿ ಹುಡುಕಾಡುವಾಗ ಅದನ್ನು ಮರೆತು ತಂದಿರುವುದಿಲ್ಲ. ಅದೇ ಸಮಯಕ್ಕೆ ಸಿದ್ಧಲಿಂಗೇಶ್ವರರು " ಇಗೋ ತಗೋಳ್ಳಿ ನೀವು ಹುಡುಕುತ್ತಿರುವ ತುಪ್ಪದ ಗಿಂಡಿ ಇಲ್ಲಿದೆ" ಎಂದು ಕೊಟ್ಟರು. ನಂತರ ಎಲ್ಲರ ಪ್ರಸಾದವಾಯಿತು. ಮರಳಿ ಶರಣರು ಪ್ರವಾಸ ಮುಗಿಸಿಕೊಂಡು ಊರಿಗೆ ಹಿಂತಿರುಗಿ ಬಂದಾಗ ಹೀಗೆ ಮಾತನಾಡುತ್ತಿರುವಾಗ ಸಿದ್ಧಲಿಂಗ ಗುರುಗಳು ಮರೆತು ಹೋದ ತುಪ್ಪದಗಿಂಡಿಯನ್ನು ತಂದು ಉಪಕಾರ ಮಾಡಿದ್ದನ್ನು ಸ್ಮರಸಿದರು. ಆಗ ಊರಿನ ಜನ ಸಿದ್ಧಲಿಂಗರು ಆವತ್ತಿನ ದಿನ ನಮ್ಮ ಊರನ್ನು ಬಿಟ್ಟು ಕದಲಿಲ್ಲಾ ಎಂದರು. ಆಗ ಶರಣರಿಗೆ ಸಿದ್ಧಲಿಂಗರ ಮಹಿಮೆ ಅರ್ಥವಾಯಿತು. ಏಕ ಕಾಲದಲ್ಲಿ ಎರಡು ಕಡೆ ದರ್ಶನವಿತ್ತ ಮಹಾನುಭಾವ ಸಾಮಾನ್ಯನಲ್ಲ ಸಾಕ್ಷಾತ್ ಶಿವ ಸ್ವರೂಪಿಯೇ ಜಂಗಮರೂಪದಲ್ಲಿ ಇರುವನೆಂದು ಸಿದ್ಧಲಿಂಗರನ್ನು ಕರೆಸಿ ಸನ್ಮಾಮಾನವನ್ನು ಮಾಡಿ ಸಾಷ್ಟಾಂಗ ನಮಸ್ಕಾರವನ್ನು ಶರಣರು ಮಾಡಿದರು. ಅಂದೇ ಸಾಕ್ಷಾತ್ ಪರಶಿವನು ಸಿದ್ಧಲಿಂಗೇಶ್ವರರ ರೂಪದಲ್ಲಿ ಭೂಮಿಯಲ್ಲಿ ತಿರುಗಾಡುತ್ತಿದ್ದಾರೆಂದು ಶರಣರಿಗೆ ಮನವರಿಕೆಯಾಯಿತು.

ಶರಣರ ಮನೆಗೆ ಯಾರೇ ಬರಲಿ ದಾಸೋಹದ ಪ್ರಸಾದವನ್ನು ತೆಗೆದುಕೊಂಡು ಹೋಗುತ್ತಿದ್ದರು. ಶರಣರ ತಮ್ಮನಾದ ಶಂಕ್ರಪ್ಪನ ಹಣ, ಬಂಗಾರವನ್ನು ದೋಚಿದ ಕಳ್ಳರು ಮರಳಿ ಶರಣರ ಮನೆಗೆ ಬಂದಾಗ, ಇವರು ಕಳ್ಳರೆಂದು ಶರಣರಿಗೆ ತಿಳಿದಿದ್ದರೂ ಅವರಿಗೆ ಪ್ರಸಾದ ಮಾಡಿಸಿ ಕಳುಹಿಸಿದ ಅರ್ಪಣಾ ಮನೋಭಾವದ ಮಹಾದಾಸೋಹಿಗಳಿವರು. ಒಮ್ಮೆ ಶರಣರ ಗೋವುಗಳು ಕಾಕಲವಾರದ ದೇಶಮುಖರ ಕೊಂಡವಾಡಿಯಲ್ಲಿ ಸಿಕ್ಕಿಹಾಕಿಕೊಂಡಿದ್ದವು. ಶರಣರು ತಮ್ಮ ಗೋವುಗಳನ್ನು ಬಿಡಿಸುವಂತೆ ದೇಶಮುಖರನ್ನು ಕೇಳಲಾಗಿ ಅವರನ್ನು ಹಿಡಿಗೋಡೆಯಲ್ಲಿ ಬಂಧಿಸಿದರು. ಈ ಸುದ್ದಿ ಎಲ್ಲೆಡೆ ಹಬ್ಬಿತು. ಕಾಕಲವಾರದ ದೇಶಮುಖರಲ್ಲಿಗೆ ಯತಿಗಳಾದ ಗವಿಸಿದ್ಧಲಿಂಗರು, ಗುರುಮಠಕಲ್‌ದ ಮಹಾಂತ ಸ್ವಾಮಿಗಳು ಬಂದು ದೇಶಮುಖರಿಗೆ ಶರಣರನ್ನು ಬಿಡುವಂತೆ ಹೇಳಿದರು ಕೂಡ ಬಿಡಲಿಲ್ಲ ಅದೇ ಸಮಯಕ್ಕೆ ದೇಶಮುಖರ ಹೆಂಡತಿಗೆ ಹೆರಿಗೆ ನೋವು ಆರಂಭವಾಗಿತ್ತು. ಸಿದ್ಧಲಿಂಗೇಶ್ವರರು "ಶರಣರನ್ನು ಬಿಡದ ಹೊರತು ನಿನ್ನ

ಹೆಂಡತಿಯ ಹೆರಿಗೆ ಆಗದು ಇದು ಶಿವನಾಣೆ" ಎಂದರು. ಒಂದೆಡೆ ಹಿಡಿಗೋಡೆಯಲ್ಲಿನ ಶರಣರ ಓಂಕಾರನಾದ, ಮತ್ತೊಂದೆಡೆ ಹೆರಿಗೆ ನೋವು ತಾಳಲಾರದೆ ದೇಶಮುಖರ ಹೆಂಡತಿಯ ನರಳಾಟ, ಇನ್ನೊಂದೆಡೆ ಕೊಂಡವಾಡಿಯಲ್ಲಿ ಗೋವುಗಳ ಅಂಬಾ ಎನ್ನುವ ಕೂಗು.

ಶರಣರನ್ನು ಬಿಡದ ಹೊರತು ನನ್ನ ಹೆಂಡತಿಯ ಹೆರಿಗೆಯಾಗದು ಎಂಬುದು ಅರಿತ ದೇಶಮುಖರು ಶರಣರೇ ನಿಮ್ಮನ್ನು ಹಿಡಿಗೋಡೆಯಲ್ಲಿರಿಸಿದ್ದು ತಪ್ಪಾಯಿತು. ನನ್ನ ಹೆಂಡತಿಯ ಹೆರಿಗೆ ಸುಗಮವಾಗಲಿ ಎಂದು ಶರಣರನ್ನು ಬೇಡಿಕೊಂಡಾಗ, ಹಿಡಿಗೋಡೆಯು ಸಿಡಿದು ಶರಣರು ಹೊರಬಂದರು. ದೇಶಮುಖರ ಹೆಂಡತಿಂಯು ಗಂಡು ಮಗುವಿಗೆ ಜನ್ಮವನ್ನಿತ್ತಳು. ಶರಣರಿಗೆ ಬಂದಿದ್ದ ಶಿವಯೋಗಿಗಳಿಗೆ ಮಾನ ಸಮ್ಮಾನಗಳನ್ನು ಮಾಡಿ ಸುರಕ್ಷಿತವಾಗಿ ಗೋವುಗಳನ್ನು ಗಾಜರಕೋಟಕ್ಕೆ ತಲುಪಿಸಿದ್ದು ಶರಣರ ಪವಾಡಕ್ಕೆ ಸಾಕ್ಷಿಯಾಗಿದೆ.

ನಂತರ ದೇಶಮುಖರು ಶರಣರ ಮಹಾಮನೆಗೆ ಬಂದು "ಶರಣರೇ ನೀವು ಏನು ಕೇಳಿದರೂ ಕೊಡುವೇ ನಾನು" ಎಂದು ಅಹಂಕಾರದಿಂದ ವಾಗ್ದಾನ ಮಾಡುತ್ತಾನೆ. ಶರಣರು ನಮ್ಮ ಮಹಾದಾಸೋಹಕ್ಕೆ ಪತ್ರೋಳಿಗಳನ್ನು ಸಾಲುವಂತೆ ನೀಡಿದರೆ ಸಾಕು ಎಂದರು. ಒಂದು ದಿನ ಶರಣರ ಮನೆಯಲ್ಲಿ ಮಹಾ ಸಮಾರಂಭವೊಂದು ನಡೆದಿತ್ತು ಅದಕ್ಕೆ ಪತ್ರೋಳಿಗಳನ್ನು ದೇಶಮುಖರು ಎಲ್ಲಾ ಕಡೆಯಿಂದ ಎಷ್ಟು ತಂದರೂ ಸಾಲಲಿಲ್ಲ. ಕೊನೆಗೆ ಶರಣರಿಗೆ ದೇಶಮುಖರು ಶರಣಾದರು ನಿಮಗೆ ನಾನು ಏನು ಕೇಳಿದರೂ ಕೊಡುವೇ ಎಂದು ಅಹಂಕಾರದಿಂದ ನುಡಿದೆನು ನನ್ನ ತಪ್ಪನ್ನು ಇನ್ನೊಮ್ಮೆ ಮನ್ನಿಸಿ, ಇಂದಿಗೆ ನನ್ನ ಅಹಂ ಕರಗಿಹೋಯಿತು. ನನ್ನ ಇಡೀ ರಾಜವೈಭವಕ್ಕಿಂತ ನಿಮ್ಮ ಶರಣತತ್ವ ದೊಡ್ಡದು ಎಂದು ಶರಣರಿಗೆ ಸಂಪೂರ್ಣವಾಗಿ ಭಕ್ತಿಪರವಶನಾಗಿ ಶರಣಾದರು.

ಹೀಗೆ ಶರಣರ ಜೀವನದಲ್ಲಿ ಒಂದಲ್ಲ ಎರಡಲ್ಲ ಅನೇಕ ಪವಾಡಗಳು ನಡೆದವು. ಅವರು ವಾಸವಾಗಿರುವ ಮಹಾಮನೆಯ ಗದ್ದುಗೆಗೆ ಮೂರ್ತಿ ಪ್ರತಿಷ್ಠಾಪನೆ ಮಾಡಿ ಇಂದು ಶಿವಶರಣರು ಸಕಲರಿಂದ ಪೂಜೆಗೊಳ್ಳುತ್ತಿದ್ದಾರೆ.

ಅವರು ಲಿಂಗೈಕ್ಯರಾದ ನಂತರವೂ ಅನೇಕ ಪವಾಡಗಳನ್ನು ತೋರಿದರು ಇಂದು ಗಾಜರಕೋಟ ಮತ್ತು ಸುತ್ತಲಿನ ಜನರ ಮನಸ್ಸಿನಲ್ಲಿ ಭಕ್ತಿಭಾವದ ಪರಿಂಪರೆಯನ್ನು ಮೂಡಿಸಿದವರಾಗಿದ್ದಾರೆ ಶರಣರು. ಇಲ್ಲಿ ಸುಮಾರು ಎರಡು-ಮೂರು ದಶಕಗಳಿಂದಲೂ ಧಾರ್ಮಿಕ-ಸಾಮಾಜಿಕ ಕಾರ್ಯ ಚಟುವಟಿಕೆಗಳು ನಡೆಸಿಕೊಂಡು ಬರಲಾಗಿದೆ. ಪ್ರಸ್ತುತ ಈ ಅರಿವು-ಆಚಾರ ಕಾರ್ಯಕ್ರಮದ ಪ್ರೇರಣೆ ಸ್ಫೂರ್ತಿಯ ಸೆಲೆ ಶಿವಶರಣ ಚನ್ನಪ್ಪಯ್ಯನವರಾಗಿದ್ದಾರೆ ಎಂದು ಇಲ್ಲ ಸ್ಮರಿಸಬಹುದಾಗಿದೆ.

ಗಾಜರಕೋಟದಲ್ಲಿ ಗವಿಸಿದ್ಧಲಿಂಗೇಶ್ವರರು:

ಗವಿ ಸಿದ್ಧಲಿಂಗೇಶ್ವರರು ಚಿತ್ತಾಪುರ ತಾಲ್ಲೂಕಿನ ವನಗುಂಟಿಯ ಭೀಮಾ-ಕಾಗಿಣ ನದಿ ದಡದಲ್ಲಿ ಜಗದ್ಗುರು ರೇಣುಕಾರಂತೆ ಭೂಗರ್ಭದಿಂದ ಅವತರಿಸಿ ಬಂದ ಅವತಾರ ಪುರುಷರಾಗಿದ್ದಾರೆ. ಗುರುಸಣಗಿ, ಸಾವಳಗಿ, ಯಾದಗಿರಿ ಹೀಗೆ ಹಲವಾರು ಊರು ದೇಶಗಳನ್ನು ಸುತ್ತಾಡಿ ಜನರ ಮೌಢ್ಯವನ್ನು ದೂರುಮಾಡಿ ಶಿವತತ್ವವನ್ನು ಪ್ರಚಾರ ಮಾಡಿದರು. ದ್ವಾದಶ ಜ್ಯೋತಿರ್ಲಿಂಗಳನ್ನು ಮೊದಲು ಮಾಡಿಕೊಂಡು ಹಲವು ಪುಣ್ಯಕ್ಷೇತ್ರಗಳಿಗೆ ಭೇಟಿ ಕೊಟ್ಟು ಅಲ್ಲಿನ ಸಾಧು-ಸಂತರ ಜೊತೆ ಸತ್ಸಂಗದಲ್ಲಿ ಪಾಲ್ಗೊಂಡು ಅರ್ಥವಿಲ್ಲದ ಸಾಂಪ್ರದಾಯಿಕ ಆಚರಣೆಗಳ ವಿರುದ್ಧ ದನಿ ಎತ್ತಿದರು. ಮಾನವೀಯ ಮೌಲ್ಯಗಳು, ಶಿವತತ್ವದ ಕುರಿತು ತಮ್ಮ ಉಪನ್ಯಾಸಗಳನ್ನು ಮಂಡಿಸಿದರು.

ಕೊನೆಗೆ ಅವರು ಗಾಜರಕೋಟಕ್ಕೆ ಬಂದು ಶಿವಶರಣ ಚನ್ನಪ್ಪಯ್ಯನವರನ್ನು ಶಿಷ್ಯರನ್ನಾಗಿಸಿಕೊಂಡು. ಸಾಮಾನ್ಯ ಜಂಗಮನಂತೆ ಹೊಟ್ಟಿಯವರ ಮನೆಯಲ್ಲಿ ವಾಸವಾಗಿದ್ದರು. ಸಿದ್ಧಲಿಂಗರಿಗೆ ಒಮ್ಮೆ ಹೊಲದಿಂದ

ಹುಲ್ಲನ್ನು ತೆಗೆದುಕೊಂಡು ಬರುವಂತೆ ಹೊಟ್ಟಿಯವರ ಮನೆಯವರು ಹೇಳಿದರಂತೆ ಆಗ ಸಿದ್ಧಲಿಂಗರು ಹೊಲಕ್ಕೆ ಹೋಗಿ ಹುಲ್ಲಿನ ಬಣವೆಯನ್ನೇ ತಲೆಯಮೇಲೆ ಹೊತ್ತು ತಂದರಂತೆ, ಅವರ ತಲೆಯ ಮೇಲೆ ಎರಡು ಅಡಿ ಎತ್ತರದ ಅಂತರದಲ್ಲಿ ಹುಲ್ಲಿನ ಬಣವೆಯು ಅವರೊಂದಿಗೆ ನಡೆಯುತ್ತಾ ಬರುತ್ತಿರುವುದನ್ನು ಗಾಜರಕೋಟದ ಜನರು ನೋಡಿ ಅಚ್ಚರಿಗೊಂಡರು. ಅವರು ಮಲಗುವ ಕೋಣೆಯನ್ನು ಯರು ತೆರೆಯದಿರಿ ಎಂದು ಹೇಳಿ ಮಲಗುತ್ತಿದ್ದರು. ಒಂದು ದಿನ ಕುತೂಹಲದಿಂದ ಮನೆಯವರು ಬಾಗಿಲನ್ನು ತೆರೆದು ನೋಡಿದಾಗ ಹುಲಿಯಾಗಿ ಮಲಗಿದ್ದು ಕಂಡು ಅಚ್ಚರಿಗೊಂಡರು. ಬಿಡುವಿನ ವೇಳೆಯಲ್ಲಿ ಧ್ಯಾನ ಮಗ್ನರಾಗುತ್ತಿದ್ದರು. ಶಿವಯೋಗಿಗಳು, ಅವರು ಕುಳಿತು ತಪಸ್ಸು ಮಾಡಿದ ಸ್ಥಳದಲ್ಲಿ(ಗಂಗಮ್ಮ ಭಾವಿ ಹತ್ತಿರ) ಸಣ್ಣ ದೇವಸ್ಥಾನ ಕೂಡ ನಿರ್ಮಾಣಗೊಂಡಿದೆ.

ಗಾಜರಕೋಟ ಊರ ಜನರಿಗೆ ಸಾಮಾನ್ಯ ಜಂಗಮನಂತೆ ಕಂಡ ಶಿವಯೋಗಿಗಳು, ಶಿವಶರಣ ಚನ್ನಪಪ್ಯನವರು ಮಾತ್ರ ಅವರ ಅಸಾಮಾನ್ಯ ವ್ಯಕ್ತಿತ್ವವನ್ನು ತಿಳಿದುಕೊಂಡವರಾಗಿದ್ದರು. ಕ್ರಮೇಣ ಅವರ ಒಂದೊಂದು ಪವಾಡಗಳು ಜನರಿಗೆ ತಿಳಿಯತೊಡಗಿದವು. ಕಾಲಕ್ರಮೇಣ ಆಧುನಿಕ ಬದುಕನ್ನು ಹೇರಿಕೊಂಡ ಜನರು ಶಿವಯೋಗಿಗಳ ಧ್ಯಾನಕ್ಕೆ ಭಂಗ ತರಲಾರಂಬಿಸಿದರು. ಈ ಜನರ ಜಂಜಾಟವೇ ಸಾಕೆಂದು ಊರು ಬಿಟ್ಟು ಹೊರಟರು, ಅವರ ಹಿಂದೆ ಚನ್ನಪ್ಪಯ್ಯ ಶರಣರು ಮತ್ತು ಗಾಜರಕೋಟ ಜನರು ಓಡಿಕೊಂಡು ಹೋದರು. ಸಿದ್ಧಲಿಂಗೇಶ್ವರರು ಯಾರಿಗೂ ಸಿಗದೆ ಕಲೇಗುಂಡ ಮಾರ್ಗವಾಗಿ ಚಿಂತನಹಳ್ಳಿಯ ದಟ್ಟ ಅಡವಿಯಲ್ಲಿನ ಮೇಲಿನಿಂದ ನೀರು ಬೀಳುವ ಜಲಪಾತದ ನಡುವಿನ ಗವಿಯೊಳಗೆ ಹೋಗಿ ಬಯಲಲ್ಲಿ ಬಯಲಾದರು.

ಶಿವಶರಣ ಚನ್ನಪ್ಪಯ್ಯನವರು ಗವಿಗೆ ಹೋಗಿ ಸಿದ್ಧಲಿಂಗೇಶ್ವರರಿಗೆ " ನಮ್ಮೆಲ್ಲರನ್ನು ಈ ಭವದಲ್ಲಿ ಬಿಟ್ಟು ಹೋದೆಯಾ ಶಿವಯೋಗಿಗಳೇ? ನಮ್ಮ ಗತಿಯೇನು ತಂದೆ" ಎಂದು ಪ್ರಾರ್ಥಿಸಲು "ಚನ್ನಪ್ಪಯ್ಯ ನಾನು ಇಲ್ಲೇ ಚಿಂತನಳ್ಳಿಯ ಅಡವಿಯಲ್ಲಿಯೇ ನಿಶ್ಚಿಂತನಾಗಿ ಇರುವೆ, ಬರುವ ಭಕ್ತರಲ್ಲಾ ಈ ಪಾವನ

ಗಂಗೆಯಿಂದ ಮಿಂದು ನನ್ನ ದರ್ಶನವನ್ನು ಪಡೆದು ಪುನೀತರಾಗುವರು, ಮುಂದಿನ ದಿನಗಳಲ್ಲಿ ಚಿಂತನಳ್ಳಿ ಗವಿ ಪುಣ್ಯ ಕ್ಷೇತ್ರವಾಗುವುದು" ಎಂದು ಸಿದ್ಧಲಿಂಗೇಶ್ವರರ ಆಕಾಶವಾಣಿಯಾಯಿತು. ನಂತರದ ದಿನಗಳಲ್ಲಿ ಹುಟ್ಟು ಸಾವುಗಳಿರದ ಅವತಾಪುರುಷರಾದ ಗವಿ ಸಿದ್ಧಲಿಂಗೇಶ್ವರರನ್ನು ಸಾಕ್ಷಾತ್ಕರಿಕೊಂಡವರು ಶ್ರೀ ಗವಿಯಪ್ಪ ಮುತ್ಯಾ, ಜಾಕನಳ್ಳಿ ಶಿವಯೋಗಿಗಳು, ಮಳಖೇಡ-ಎಲ್ಹೇರಿ ಶ್ರೀ ಗಂಗಾಧರ ಶಿವಚಾರ್ಯ ಮಹಾಸ್ವಾಮಿಗಳವರಾಗಿದ್ದರು.

ಅನೇಕ ಸಾಧು-ಸಂತರು, ಪ್ರವಾಸಿಗರು, ಭಕ್ತಾಧಿಗಳು ಸದಾ ಕಾಲ ಬರುತ್ತಲೇ ಇರುತ್ತಾರೆ. ಗವಿಸಿದ್ಧಲಿಂಗೇಶ್ವರರ ಕ್ಷೇತ್ರ ಚಿಂತನಳ್ಳಿಯ ಗವಿಯ ದಟ್ಟ ಅರಣ್ಯದ ಮಧ್ಯೆ ರಮಣೀಯವಾದ ಪ್ರವಾಸಿ ತಾಣವಾಗಿದೆ. ಗಾಜರಕೋಟಕ್ಕೆ ಮತ್ತು ಸಿದ್ಧಲಿಂಗೇಶ್ವರರಿಗೆ ಭಕ್ತಿ-ವೈರಾಗ್ಯದ ಅವಿನಾಭಾವ ಸಂಬಂಧವಿದೆ.

ರಾಚಪ್ಪಯ್ಯ ಕಡ್ಲಪ್ಪಯ್ಯನವರು:

ಗಾಜರಕೋಟದ ಊರ ಪ್ರವೇಶವಾಗುತ್ತಿದ್ದಂತೆ ಕಲ್ಲುಕಟ್ಟಡದ ಭವ್ಯ ದೇವಾಲಯ ಇದಾಗಿದೆ. ಮಠದ ರೂಪದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದು ಯಾವ ಕಾಲದಲ್ಲಿ ನಿರ್ಮಾಣವಾಗಿದ್ದೆಂದು ಖಚಿತವಾಗಿ ದಾಖಲೆಗಳು ಲಭ್ಯವಿಲ್ಲ. ಗುರುಮಿಠಕಲ್‌ದ ಖಾಸಾಮಠದ ಶೈಲಿಯನ್ನು ಹೋಲುವಂತದ್ದಾಗಿದೆ. ಇವೆರಡೂ ಒಂದೇ ಕಾಲದಲ್ಲಿ ನಿರ್ಮಾಣವಾಗಿದೆ. ಇದು ಉತ್ತರಾಭಿಮುಖವಾಗಿ ಇದ್ದು, ಪೂರ್ವ, ಪಶ್ಚಿಮ, ಉತ್ತರ ಮೂರು ದಿಕ್ಕಿನಲ್ಲಿ ಬಾವಿಗಳಿವೆ. ದೇವಸ್ಥಾನದ ಮುಂದೆ ಎತ್ತರದ ದೀಪಸ್ತಂಬವಿದೆ. ಪೂರ್ವದ ದಿಕ್ಕಿನಲ್ಲಿ ದೇವಸ್ಥಾನದ ಬದಿಗೆ ಅಂಟಿಕೊಂಡು ಈಶ್ವರ ದೇವಾಲಯವಿದೆ. ಬೃಹದಾಕಾರದ ಅತಿ ವಿನ್ಯಾಸದಿಂದ ಕೂಡಿದ ಕಲ್ಲಿನ ಚೌಕಟ್ಟಿನಿಂದ ಕೂಡಿದ ಮುಖ್ಯ ದ್ವಾರವಿದೆ, ಅದಕ್ಕೆ ದ್ವಾರಪಾಲಕರ ಸುಂದರ ಮೂರ್ತಿಗಳನ್ನು ಎಡಬಲದಲ್ಲಿ ಕೆತ್ತಲಾಗಿದೆ. ದೇವಸ್ಥಾನದ ಒಳಗಡೆ ಹೋದಾಗ ಅಲ್ಲಿ ವಿಶಾಲವಾದ ಹಜಾರ ಸುತ್ತ ಕಮಾನುಗಳು, ಮಧ್ಯದಲ್ಲಿ ಶ್ರೀ ರಾಚಪ್ಪಯ್ಯನವರ ಮತ್ತು ಕಡ್ಲಪ್ಪಯ್ಯನವರ ಕತೃ ಗದ್ದುಗೆಗಳಿವೆ. ಎರಡೂ

ಗರ್ಭಗುಡಿಗಳನ್ನೊಂದಿದ್ದು ಒಂದೊಂದು ಶಿವಲಿಂಗವನ್ನು ಹೊಂದಿವೆ. ಗುರುಶಿಷ್ಯರಿಬ್ಬರ ದೇವಾಲಯಗಳು ಒಂದೇ ಕಡೆ ಕಾಣಿಸಿಕೊಳ್ಳುವುದು ಇಲ್ಲಿನ ವಿಶೇಷತೆಯಾಗಿದೆ.

ರಾಚಪ್ಪಯ್ಯನವರು ಯಾದಗಿರಿ ನಗರದ ದಂಡಿಗಿ ಮಠದ ಮನೆತನದವರೆಂದು ಇತಿಹಾಸ ತಿಳಿಸುತ್ತದೆ. ಅಲ್ಲಿಂದ ಅವರು ಅನೇಕ ಪವಾಡಗಳನ್ನು ತೋರುತ್ತಾ ಚರ ಜಂಗಮರಾಗಿ ತಿರುಗಾಡುತ್ತಾ ಗಾಜರಕೋಟಕ್ಕೆ ಬಂದು ನೆಲೆಸುತ್ತಾರೆ. ಚಿತ್ತಾಪುರ ತಾಲೂಕಿನ ಮಂಗಲಿಗಿ ಗ್ರಾಮದ ಕಡ್ಲಪ್ಪ ಶರಣರನ್ನು ಶಿಷ್ಯರನ್ನಾಗಿಸಿಕೊಂಡರು. ಇವರಿಬ್ಬರದು ಅಪರೂಪದ ಗುರು ಶಿಷ್ಯರ ಸಂಬಂಧವಾಗಿತ್ತು. ನಾನು ಗುರು ನೀನು ಶಿಷ್ಯ ಎಂಬ ಭೇದವಿಲ್ಲದಂತೆ ಏಕೋಭಾವದಿಂದ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದ್ದರು. ಇದು ಈಗಿನ ಕಾಲದಲ್ಲಿ ಗುರುಸ್ಥಳದ ಮಠವೇ ಆಗಿತ್ತು.

ಕಡ್ಲಪ್ಪ ಶರಣರು ಮತ್ತು ಊರ ಪ್ರಮುಖರು ಸೇರಿ ಮಠದ ಏಳಿಗೆಗೆ ಶ್ರಮಿಸಿದರು. ರಾಚಪ್ಪಯ್ಯನವರು ತಮ್ಮ ಇಳಿವಯಸ್ಸಿನಲ್ಲಿ ಊರ ಜನರನ್ನು ಕರೆದು ಹೇಲಿದರಂತೆ "ನಾನು ಎಷ್ಟು ಮುಖ್ಯವೋ ನನ್ನ ಶಿಷ್ಯ ನಿಮಗೆ ಅಷ್ಟೇ ಮುಖ್ಯ ನಾವು ಮೇಲ್ನೋಟಕ್ಕೆ ಗುರು ಶಿಷ್ಯರಂತಿದ್ದರೂ ನಮ್ಮಲ್ಲಿ ಭೇದವಿಲ್ಲ, ಆದ ಕಾರಣದಿಂದಾಗಿ ನಮ್ಮೀರ್ವರ ಲಿಂಗೈಕ್ಯದ ನಂತರ ಮಠದ ಒಳಗಿನ ಆವರಣದಲ್ಲಿ ಇಬ್ಬರಿಗೆ ಆಲಯವನ್ನು ಕಟ್ಟಬೇಕು. ಇಬ್ಬರು ಎಲ್ಲರಿಂದ ಸರಿಸಮಾನರಾಗಿ ಪೂಜಿಸಿಕೊಳ್ಳಬೇಕು. ಮುಂದೆ ಇವರ ಹೆಸರು ಕಡ್ಲಪ್ಪನವರು ಹೋಗಿ ಕಡ್ಲಪ್ಪಯ್ಯನವರಾಗಲಿ. ಈ ಮಠವು ದೇವಸ್ಥಾನವಾಗಿ ರಾಚಪ್ಪಯ್ಯ ಕಡ್ಲಪ್ಪಯ್ಯನ ದೇವಸ್ಥಾನವೆಂದು ಪ್ರಖ್ಯಾತಿಯನ್ನು ಪಡೆಯಲಿ" ಎಂದು ಹೇಳಿ ಕೆಲದಿನಗಳ ನಂತರ ಶ್ರೀಗಳು ಲಿಂಗೈಕ್ಯರಾದರು. ಅವರ ಮಾತಿನಂತೆ ಅವರ ಗದ್ದುಗೆಯ ಮುಂದಯೇ ಕಡ್ಲಪ್ಪಯ್ಯನವರ ಗದ್ದುಗೆ ನಿರ್ಮಿಸಲಾಗಿದೆ.

ವರ್ಷಕ್ಕೊಮ್ಮೆ ಪ್ರತಿ ದವನದ ಹುಣ್ಣಿಮೆಯಾದ ಐದು ದಿವಸಕ್ಕೆ ಶ್ರೀ ರಾಚಪ್ಪಯ್ಯ ಕಡ್ಲಪ್ಪಯ್ಯನವರ ಜಾತ್ರೆ ನಡೆಯುವುದು. ಜಾತ್ರೆಯ ನಿಮಿತ್ಯ ಅಗ್ನಿ ಪ್ರವೇಶ, ರಥೋತ್ಸವ ಧರ್ಮಸಭೆಯಂತಹ ಧಾರ್ಮಿಕ ಕಾರ್ಯಗಳು ವಿಜೃಂಭಣೆಯಿಂದ ಜರುಗುತ್ತಲಿವೆ.

ಕಲೇಗುಂಡದ ರುದ್ರಮುನಿ ಶಿವಾಚಾರ್ಯರು:

ಗಾಜರಕೋಟದ ಶ್ರೀ ರಾಚಪ್ಪಯ್ಯನವರ ದೇವಸ್ಥಾನದಿಂದ ಒಂದು ಕಿ.ಮೀ ದೂರದಲ್ಲಿ ಕೆಲಗುಂಡವಿದೆ. ಅಲ್ಲಿ ಹಿಂದೆ ಅರವತ್ತುಮೂರು ಪುರಾತನರಲ್ಲಿ ಒಬ್ಬರಾದ ಶ್ರಿ ಕಲಿಗಣನಾಥೇಶ್ವರರು ತಪಸ್ಸು ಮಾಡಿದ್ದಾರೆ. ಅದರ ಕುರುಹಾಗಿ ಶ್ರೀ ಕಲಿಗಣನಾಧನ ಮಂದಿರವಿದೆ. ಅಲ್ಲಿ ಸುತ್ತಮುತ್ತ ಕಲ್ಲುಗುಂಡಗಳು ಮತ್ತು ನೀರಿನ ಝುರಿಗಳು ಇರುವುದರಿಂದ ಕಲೇಗುಂಡ ಎಂಬ ಹೆಸರು ಬಂದಿದೆ. ತೆಲುಗು ಭಾಷಿಕರು ಇದನ್ನು ಕಳೇಗುಂಡಂ ಎಂದೂ ಕೂಡ ಕರೆಯುವುದುಂಟು. ಕಲಿಗಣನಾಥರ ಮಂದಿರದ ಪಕ್ಕವೇ ಶ್ರೀ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರ ತೋರು ಗದ್ದುಗೆಯಿದೆ. ಇದೂ ಕೂಡ ಮಠದ ಸ್ವರೂಪದಲ್ಲಿಯೇ ರಚಿತವಾದ ದೇವಸ್ಥಾನವಾಗಿದೆ. ಇಲ್ಲಿ ಅನೇಕ ಶರಣರು–ಸಾದು ಸಂತರು ನಡೆದಾಡಿದ ಪಾವನ ಭೂಮಿಯಾಗಿದೆ.

ಶ್ರೀ ರುದ್ರಮುನಿ ಶಿವಾಚಾರ್ಯರು ಮೈಸೂರು ಪ್ರಾಂತದ ಸಿದ್ಧರಹಳ್ಳಿ ಗ್ರಾಮದಲ್ಲಿ ಜನಿಸಿ ಅಲ್ಲಿಂದ ಚರ ಜಂಗಮರಾಗಿ ತಿರುಗಾಡುತ್ತಾ, ಆಂದ್ರ ಪ್ರದೇಶ ಆಲಂಪುರದಿಂದ ಗಾಜರಕೋಟ ಮಾರ್ಗವಾಗಿ ಕಲೇಗುಂಡಕ್ಕೆ ಬಮದು ನೆಲಸಿದರು. ಇವರು ಯೋಗ ಮತ್ತು ಕಾಲಜ್ಞಾನದಲ್ಲಿ ಪ್ರಾವೀಣ್ಯತೆ ಹೊಂದಿದವರಾಗಿದ್ದರು. ಬರುವ ಭಕ್ತರಿಗೆಲ್ಲಾ ಶಿವಾನುಭವವನ್ನು, ಕಾಲಜ್ಞಾನವನ್ನು ಬೋಧಿಸುತ್ತಿದ್ದರು. ಇವರು ಭಕ್ತರ ಮುಂದೆ ಲಿಂಗೈಕ್ಯರಾಗುವ ದಿನವನ್ನು ಮೊದಲೇ ಇಂಥಾ ದಿನಕ್ಕೆ ನಾವು ಇಹವನ್ನು ತ್ಯಜಿಸುತ್ತೇವೆ ಎಂದು ಹೇಳಿದ್ದರು. ಆಲಂಪುರದ ತನ್ನ ಮಲತಾಯಿಯು ಹಣ್ಣಿನಲ್ಲಿ ವಿಷಬೆರಸಿ ತನಗೆ ನೀಡುವ ಹುನ್ನಾರ

ಇಲ್ಲೇ ಕಲೇಗುಂಡದಲ್ಲಿಯೇ ಕುಳಿತು ತಮ್ಮ ಜ್ಞಾನ ಚಕ್ಷುವಿನಿಂದ ಅರಿತಿದ್ದರು. ಭಕ್ತರಿಗೆ ಹೇಳುತ್ತಾರೆ ಶ್ರೀಗಳು "ಭಕ್ತರೇ ನನ್ನ ತಾಯಿ ನನಗಾಗಿ ಕಾಯುತಿರುವಳು, ನಾನು ಬರುತ್ತೇನೆ, ನಾನು ಆಲಂಪುರದಲ್ಲಿಯೇ ಲಿಂಗೈಕ್ಯನಾಗುತ್ತೇನೆ ಕಲೇಗುಂಡದ ತೋರುಗದ್ದುಗೆಯಲ್ಲಿ ಸದಾ ಇರುತ್ತೇನೆ. ಮುಂದೆ ಇಲ್ಲಿಗೆ ಬರುವ ಭಕ್ತರ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ." ಎಂದು ಆಲಂಪುರದತ್ತ ನಡೆದರು.

ಆಲಂಪುರದಲ್ಲಿ ತನ್ನ ಮಲತಾಯಿಯು ನೀಡಿದ ವಿಷಪೂರಿತ ಹಣ್ಣನ್ನು ತಿಂದು ಲಿಂಗೈಕ್ಯರಾದರು. ಯೋಗಸಾಧಕರಾದ ಶ್ರೀಗಳಿಗೆ ವಿಷವನ್ನು ಸ್ವಯಂ ಸಾಮರ್ಥ್ಯದಿಂದ ದೇಹದಿಂದ ಬೇರ್ಪಡಿಸಿ, ಬದುಕುವುದು ಗೊತ್ತು. ತನ್ನ ಮಲತಾಯಿ ಆತನ ಸಾವನ್ನು ನಿರೀಕ್ಷಿಸಿದ್ದಕ್ಕಾಗಿ, ಆನಂದದಿಂದ ಈ ಇಹದ ಜಂಜಾಟವೇ ಸಾಕು ಎಂದು ಪರಮಾತ್ಮನಲ್ಲಿ ಲೀನವಾದರು.

ಇಲ್ಲಿನ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರತಿ ವರ್ಷ ಆಶಾಢ ಚೌತಿ ದಿವಸ ಶ್ರೀ ರುದ್ರಮುನೀಶ್ವರರ ತೊಟ್ಟಿಲ ಕಾರ್ಯಕ್ರಮ ನಡೆಯುತ್ತದೆ. ಶ್ರೀಗಳ ತೊಟ್ಟಿಲ ಕಾರ್ಯಕ್ರಮದಲ್ಲಿ ಭಾಗವಹಿಸಿ ತೊಟ್ಟಿಲನ್ನು ಜೋ ಜೋ ಎಂದು ತೂಗಿದರೆ ಮಕ್ಕಳಾಗದೇ ಇರುವ ಅನೇಕ ಸ್ತ್ರೀಯರಿಗೆ ಮಕ್ಕಳಾದ ಪ್ರಸಂಗಗಳಿವೆ. ಆದ್ದರಿಂದ ಈ ಕಾರ್ಯಕ್ರಮವು ಮೊದಲಿನಿಂದ ಇಂದಿನವರೆಗೆ ನಡೆಸಿಕೊಂಡು ಬರುವಂತದ್ದಾಗಿದೆ. ಪ್ರತಿವರ್ಷ ಬನದ ಹುಣ್ಣಿಮೆಯ ದಿನ ಶ್ರಿರುದ್ರಮುನಿಗಳ ಜಾತ್ರಾ ಮಹೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಗುವುದು.

ಅರವತ್ತು ಮೂರು ಪುರಾತನರಾದ ಕಲಿಗಣನಾಥರು:

ಕಲಿಗಣನಾಥೇಶ್ವರರು 63 ಪುರಾತನ ಶರಣರಲ್ಲಿ ಒಬ್ಬರು. ಇವರು ದಕ್ಷಿಣ ಭಾರತದ ಚೋಳದೇಶದಲ್ಲಿ ಶಿವಪುರ ಎಂಬ ಪ್ರಖ್ಯಾತ ನಗರದಲ್ಲಿ ಜನಿಸಿದರು. ಇವರು ಚೋಳ ದೇಶದ ರಾಜರಾಗಿದ್ದರು. ಕಲಿಗಣನಾಥರು ಲಿಂಗವಿಲ್ಲದ ಅನುಭವಿಗಳ ಮುಖ ನಾನು ನೋಡುತ್ತಿರಲಿಲ್ಲ ಅದಕ್ಕಾಗಿ ತನ್ನ ಆಸ್ಥಾನಕ್ಕೊಳಪಟ್ಟ ಎಲ್ಲಾ ಜನರೂ ಲಿಂಗಧಾರಿಗಳಾಗಬೇಕೆಂಬ ಕಟ್ಟಪ್ಪಣೆ ಹೊರಡಿಸಿದನು. ಅದರಂತೆ

ಕೆಲವರು ಲಿಂಗವನ್ನು ಧರಿಸಿದರು ಇನ್ನೂ ಕೆಲವರು ನಿರಾಕರಿಸಿದರು. ಈ ಪ್ರಕ್ರಿಯೆ ಹೀಗೆ ನಡೆಯಿತು ಮತ್ತು ರಾಜ್ಯಭಾರದೊಂದಿಗೆ ಶಿವತತ್ವ ಪ್ರಚಾರವು ನಡೆಯಿತು. ಕೊನೆಗೆ ಒಂದು ದಿನ ರಾಜ್ಯದ ಜನತೆಗೆ ಕಲಿಗಣನಾಥರಿಗೆ ಭಿನ್ನಾಭಿಪ್ರಾಯಗಳು ಮೂಡಿದವು. ಕಲಿಗಣನಾಥರು ಇದರಿಂದ ರೋಸಿಹೋಗಿ ತನ್ನ ರಾಜ್ಯವನ್ನು ತ್ಯಾಗಮಾಡಿ ಸಂಪೂರ್ಣ ಶರಣರ ಮಾರ್ಗದಲ್ಲಿ ನಡೆದರು. ಹಾಗೆ ತಮಿಳುನಾಡು, ಆಂದ್ರಗಳನ್ನು ಸುತ್ತಾಡುತ್ತಾ ಕರ್ನಾಟಕದಲ್ಲಿ ಸಂಚರಿಸುತ್ತಾ ಗಾಜರಕೋಟದ ಸಮೀಪದ ದಟ್ಟ ಅಡವಿಯಲ್ಲಿ ಪ್ರಶಾಂತ ಸ್ಥಳದಲ್ಲಿ ತಪಸ್ಸು ಗೈದರು. ಅದೇ ಇಂದಿನ ಕಲೇಗುಂಡವಾಗಿದೆ. ಕಲಿಗಣನಾಥರು ಪಾದವಿಟ್ಟ ಪಾವನ ಭೂಮಿ ಕಲೇಗುಂಡವಾಗಿದೆ. ಕಲಿಗಣನಾಥರು ಬಹುದಿನಗಳವರೆಗೆ ಇಲ್ಲಯೇ ಇದ್ದು ನಂತರ ದೇಶ ಸಂಚಾರವನ್ನು ಮುಂದುವರೆಸುತ್ತಾರೆ ಇವರು ತಪಸ್ಸು ಮಾಡಿದ ಸ್ಥಳದಲ್ಲಿಯೇ ಮುಂದೆ ಶಿವದೇವ ಮುನಿಗಳು, ರುದ್ರಮುನೀಶ್ವರರು, ಸಂತರು, ಶರಣರು ಇಲ್ಲಿ ಬಂದು ತಂಗಿರುವಂತದ್ದಾಗಿದೆ.

ಮೌನೇಶ್ವರರ ಅಜ್ಜಿ ಶೇಷಮಾಂಚಿ:

ಭಾವೈಕ್ಯನಿಧಿ ತಿಂತಣಿ ಮೌನೇಶ್ವರರ ತಾಯಿಯ ತವರೂರು ಗಾಜರಕೋಟವಾಗಿದೆ. ಅಂದರೆ ಮೌನೇಶ್ವರರ ಅಜ್ಜಿಯ ಊರು ಗಾಜರಕೋಟ ಎನ್ನಲಾಗಿದೆ. ಇದನ್ನು ಮೌನೇಶ್ವರರ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಇಲ್ಲಿ ತಿಂತಣಿ ಮೌನೇಶ್ವರರ ದೇವಸ್ಥಾನವಿದೆ. ಹಾಗೆ ಕಂಚು, ಹಿತ್ತಾಳೆ, ಬಂಗಾರ, ಬೆಳ್ಳಿ, ಮರದ ಕೆಲಸ ಮಾಡುವ ಅನೇಕ ವಿಶ್ವಕರ್ಮರ ಮನೆಗಳಿವೆ.

ತಿಂತಣಿ ಮೌನೇಶ್ವರರನ್ನು ಅಲ್ಲಮನಾವತಾರಿ ಎಂದು ಕರೆಯುತ್ತಾರೆ. ಅಲ್ಲಮರಂತೆ ಬೆಡಗಿನ ವಚನಗಳನ್ನು ರಚಿಸಿದ್ದಾನೆ. ಹಿಂದೂ ಮುಸ್ಲೀಮರ ಭಾವೈಕ್ಯದನಿಧಿ ಶರಣ–ಫಕೀರನಂತೆ ಗಡ್ಡಬಿಟ್ಟು, ಹಸಿರು ಶಾಲು, ಕಾವಿಲುಂಗಿ ಧರಿಸಿ ಮೌನೇಶ್ವರರು ಹಂಪೆ, ತಿಂತಣಿ, ವರವಿ, ಕನಕಗಿರಿ, ದೇವದುರ್ಗ, ಕಾಶಿ–ರಾಮೇಶ್ವರ ಮತ್ತು ದೇಶದಾದ್ಯಾಂತ ಸುತ್ತಾಡಿದ್ದಾರೆ. ಸಮಾಜದ ಮೂಢನಂಬಿಕೆಗಳ ವಿರುದ್ಧ ಕಂದಾಚಾರಗಳ

ವಿರುದ್ಧ ತನ್ನ ಮುಂದೆ ಸಾಗುವ ಘೂಳಿಗೆ "ನೋಡ ಬಸವಣ್ಣ" ಎಂದು ಬೆಡಗಿನ ವಚನಗಳನ್ನು ಹೇಳುತ್ತಾ ವಿಭಿನ್ನ ರೀತಿಯಲ್ಲಿ ವೈಚಾರಿಕ ಜಾಗೃತಿಯನ್ನು ಮೂಡಿಸಿದ ಮಹಾನುಭಾವ ಶ್ರೀ ಮೌನೇಶ್ವರರು. ಇಂಥಾ ಪವಾಡಪುರುಷ, ಭಾವೈಕ್ಯದ ತವನಿಧಿ ಮೌನೇಶ್ವರರ ಅಜ್ಜಿಯ ಊರು ಗಾಜರಕೋಟ ಎಂಬ ಹೆಗ್ಗಳಿಕಗೆ ಪಾತ್ರವಾದದ್ದು ನಮ್ಮೆಲ್ಲರ ಭಾಗ್ಯ.

ಶರಣ ಕತಾಲ ಸಾಹೇಬರು: ಹಿಂದೂ ಮುಸ್ಲೀಮರ ಭಾವೈಕ್ಯದ ಹರಿಕಾರ ಕತಾಲ ಸಾಹೇಬರ ದರ್ಗಾ ಗಾಜರಕೋಟದಲ್ಲಿದೆ. ಇವರು ಆಂದ್ರದ ಕೊಲಂಪಲ್ಲಿಯಿಂದ ಬಂದು ಇಲ್ಲಿ ನೆಲಸಿರುವರು. ಹಿಂದೆ ಒಮ್ಮೆ ಕುದುರೆ ಸವಾರಿಯಾಗಿ ದಾಡಿಬಿಟ್ಟು ಹಸಿರು ಶಾಲು ಹೊದ್ದು ಭಾವೈಕ್ಯದ ನುಡಿಗಳನ್ನು, ಷಾಯಿರಿಗಳನ್ನು ಹಾಡೂತ್ತಾ ಊರೊಳಗೆ ಪ್ರವೇಶಿಸಿ ಒಂದು ಕಟ್ಟೆಯಮೇಲೆ ಕುಳಿತು, ಒರ್ವ ಊರಿನ ಯಜಮಾನನಿಗೆ ಯಪ್ಪ ಕುಡಿಯಲಿಕ್ಕೆ ಏನಾದರೂ ತೆಗೆದುಕೊಂಡು ಬಾ ಎಂದು ಹೇಳಿ, ಆತ ಬರುವಷ್ಟರಲ್ಲಿ ಸ್ಥಳದಲ್ಲಿಯೇ ಮಾಯವಾದರು. ಆ ಸ್ಥಳವೇ ಈಗಿನ ಕತಾಲಸಾಹೇಬ ದರ್ಗಾ ಎಂದು ನಾವು ಕರೆಯುವಂತದ್ದಾಗಿದೆ. ಇಲ್ಲಿ ಹಿಂದೂ–ಮುಸ್ಲೀಮರು ಭಾವೈಕ್ಯತೆಯಿಂದ ಶರಣರನ್ನು ಆರಾಧಿಸುತ್ತಾರೆ.

ಗಾಜರಕೋಟದಲ್ಲಿ ಹಿಂದಿನ ಕಾಲದಲ್ಲಿ ಹರಳಯ್ಯ ಸಮಾಜದ **ಸಾಯಮ್ಮಾ ಆಯಿ** ಎಂಬ ಶರಣೆ ಇದ್ದಳು. ಇವರು ಕೆಳವರ್ಗದ ಕುಟುಂಬದಿಂದ ಬಂದರು ಶರಣತತ್ವ ಪರಿಪಾಲಿಸಿಕೊಂಡು ಹೋಗುತ್ತಿದ್ದರು. ಇವರ ಲಿಂಗೈಕ್ಯದ ನಂತರ ಸಮಾಜದವರು ದೇವಸ್ಥಾನವನ್ನು ನಿರ್ಮಿಸಿದ್ದಾರೆ ಮತ್ತು ಚಟ್ಟಿ ಅಮಾವಾಸ್ಯೆಯಾದ ನಂತರ ಐದು ದಿನಕ್ಕೆ ಜಾತ್ರೆ ಮಾಡುತ್ತಾರೆ.

ಹೀಗೆ ಗಾಜರಕೋಟದಲ್ಲಿ ಹತ್ತು ಹಲವು ಶರಣ–ಶಿವಯೋಗಿಗಳ, ಶರಣೆಯರ, ಭಾವೈಕ್ಯನಿಧಿಗಳು ಆಗಿ ಹೋಗಿದ್ದಾರೆ. ಅವರ ಕುರುಹಾಗಿ ಇಡೀ ಗಾಜರಕೋಟವನ್ನೇ ದೇವಾಲಯಗಳ ಸಂಕೀರ್ಣವನ್ನಾಗಿ,

ಪ್ರತಿಮನೆ-ಮನಗಳನ್ನು ಅನುಭವ ಮಂಟಪವನ್ನಾಗಿ ಮಾಡಿರುವಂತದ್ದಾಗಿದೆ. ಅದಕ್ಕಾಗಿಯೇ ಗಾಜರಕೋಟವನ್ನು "ಮರಿಕಲ್ಯಾಣ-ಗಾಜರಕೋಟ" ಎಂದು ಕರೆದರೆ ಅತಿಶಯೋಕ್ತಿಯಾಗಲಾರದು.

ಇಂತಹ ಧಾರ್ಮಿಕ ಹಿನ್ನಲೆಯನ್ನು ಹೊಂದಿರುವಂತಹ ಗಾಜರಕೋಟದಲ್ಲಿ ಹೆಚ್ಚಿನ ಲೋಹಶಿಲ್ಪಗಳು ಇಂತಹ ಮಹಾನುಭಾವ ಮೂರ್ತಿ ಶಿಲ್ಪಗಳನ್ನು ರಚಿಸಲ್ಪಟ್ಟಿವೆ. ಇಂತಹವುಗಳಲ್ಲಿ **ರಾಚಪ್ಪಯ್ಯ ಕಡ್ವಪ್ಪಯ್ಯ** ಇವರ ಲೋಹಶಿಲ್ಪಗಳು ಮುಖ್ಯವಾಗಿವೆ. ಹೆಚ್ಚಿನ ಶಿಲ್ಪಗಳು ಶೈವ ಸಂಪ್ರದಾಯಕ್ಕೆ ಸೇರುವ ಶಿಲ್ಪಗಳನ್ನು ಗಾಜರಕೋಟ್ ಶೈಲಿಯಲ್ಲಿ ಕಾಣಬಹುದಾಗಿದೆ. ಕಲ್ಯಾಣ ಕ್ರಾಂತಿಯ ಪ್ರಭಾವವು ಕೂಡ ಹೆಚ್ಚಿನ ಪರಿಣಾಮ ಬೀರಿರುವುದನ್ನು ನಾವು ಕಾಣಬಹುದಾಗಿದೆ.

ಗ್ರಾಮೀಣರ ಬದುಕಿನಲ್ಲಿ ಅವರು ಬದುಕಿಬಂದಂತಹ ದಾರಿಯೇ ಅವರಿಗೆ ಇತಿಹಾಸದರ್ಶನ. ಪ್ರಸ್ತುತ ಈ ಅಧ್ಯಯನದಲ್ಲಿ ಗಾಜರಕೋಟ್ ಲೋಹ ಶಿಲ್ಪ ಜಾನಪದ ಶೈಲಿಯಲ್ಲಿ ಕಂಡು ಬರುವಂತಹ ಶಿಲ್ಪಗಳ ಹಿನ್ನಲೆಯನ್ನು ಅರಿತುಕೊಳ್ಳಲು ಸಹಾಯವಾಗುವ ರೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ಗಾಜರಕೋಟ್ ಗ್ರಾಮವು ಸುಮಾರು 1200 ಕುಟುಂಬಗಳನ್ನು ಹೊಂದಿದ್ದು, ಅದರಲ್ಲಿ 4ಕುಟುಂಬಗಳು ಮಾತ್ರ ಲೋಹ ಎರಕದ ಶಿಲ್ಪಗಳ ರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಅದರಲ್ಲಿ ಭೀಮಣ್ಣ ಕುಟುಂಬದವರು ಒಬ್ಬರು.

ಗಾಜರಕೋಟ್ ಎರಕದ ಶಿಲ್ಪಗಳು ಇತರೆ ಲೋಹ ಎರಕದ ಶಿಲ್ಪಗಳಿಗೆ ವಿಭಿನ್ನವಾಗಿದ್ದು, ವಿಶಿಷ್ಟವಾಗಿದೆ. ಈ ಶೈಲಿಯ ತಂತ್ರಗಾರಿಕೆಯು ಪಶ್ಚಿಮ ಬಂಗಾಳದ ಡೋಕ್ರಾ ಎರಕದ ಶೈಲಿಗೆ ಸ್ವಲ್ಪಹೋಲಿಕೆಯಿದ್ದರೂ, ವಸ್ತುಗಳ ಬಳಕೆಯು ಬೇರೆ ರೀತಿಯಲ್ಲಿವೆ.

ಕರ್ನಾಟಕದಲ್ಲಿ ಲೋಹ ಶಿಲ್ಪಕಲೆಯ ಪ್ರಾಚೀನ ಪರಂಪರೆಯುಗದಿಂದಲೂ ಕಾಣಿಸಿಕೊಂಡಿದೆ.

ಶಿಲಾಯುಗದಲ್ಲಿ ಶಿಲೆಗಳ ಮೂಲಕ ಆಯುಧಗಳನ್ನು ಸೃಷ್ಟಿಸುವುದರೊಂದಿಗೆ ತಮ್ಮ ಅಗತ್ಯ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಾ ಮಾನವನು ಮುಂದುವರೆಸಿರುತ್ತಾನೆ.

ಸಾಮಾನ್ಯವಾಗಿ ಮಾನವನು ನಡೆದು ಬಂದ ದಾರಿಯನ್ನು ಆದಿಮಾನವನ ಇತಿಹಾಸ ಹಾಗೂ ಪೌರಾಣಿಕ ಹಿನ್ನೆಲೆಯಲ್ಲಿ ಅರಿಯಲಾಗುತ್ತಿದೆ. ಕಲೆಯ ಸಂಬಂಧವಾಗಿ ನಾವು ಇಲ್ಲಿ ಪೌರಾಣಿಕವಾದ ಹಿನ್ನೆಲೆಯಲ್ಲಿ ಆಧರಿಸಿ ನೋಡಲು ಬಹಳಷ್ಟು ಉದಾಹರಣೆಗಳು ಲಭ್ಯವಾಗುತ್ತವೆ.

ಕಲಾ ಪ್ರಕಾರಗಳಲ್ಲಿ ಬಹಳಷ್ಟು ವಿಭಿನ್ನತೆಗಳನ್ನು ಕಾಣಲು ಸಾಧ್ಯವಿದೆ.

ಅಧ್ಯಾಯ –1:

ಅಧ್ಯಯನದ ವಿಧಾನ, ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶ

ಅಧ್ಯಯನದ ಸ್ವರೂಪ:

ಭೂಮಿಯ ರಚನೆಯು ಒಂದು ಅಮೋಘವಾದ ಪರಿಕಲ್ಪನೆಯಿಂದ ಕೂಡಿದುದಾಗಿದೆ. ಇದರ ವೈಶಿಷ್ಯತೆಗಳನ್ನು ಇಂದಿಗೂ ಅಳೆಯಲು ಅಸಾಧ್ಯವಾಗಿದೆ. ಭೂಮಿಯಲ್ಲಿ ಸೃಷ್ಟಿಗೊಂಡ ಮನುಷ್ಯನ ಆದಿಯಾಗಿ ಎಲ್ಲಾ ಪರಿಸರ, ಆನಂತರ ಮಾನವನ ಮೂಲಕ ಸೃಷ್ಟಿಗೊಂಡ ಸಕಲವಸ್ತು ಪರಿಕರಗಳು ವಿಸ್ಮಯಕಾರಿಯಾಗಿ ರೂಪಗೊಂಡಿವೆ. ಅವುಗಳಲ್ಲಿ ಮಾನವನ ಜೀವನಕ್ಕೆ ಉಪಯೋಗವಾಗುವಂತಹುಗಳು ಇವೆ ಅಪಕಾರವಾಗುವಂತಹುಗಳನ್ನು ಮಾನವನು ತಾನೇ ನಿರ್ಮಿಸಿಕೊಂಡಿದ್ದಾನೆ.

ಆದರೆ ಮಾನವ ತನಗೆ ಅನಿಸಿದ್ದನ್ನು, ತನಗೆ ಬೇಕಾದ ರೀತಿ ರಿವಾಜುಗಳನ್ನು ಕಟ್ಟಿಕೊಂಡಿರುವುದರಲ್ಲಿ ಹೆಚ್ಚಿನ ಪಾಲು ತನ್ನ ಸ್ವಾರ್ಥಕ್ಕೆ ಮೀಸಲಿರಿಸಿಕೊಂಡಿದ್ದಾನೆ.

ಜಾನಪದವು ಒಂದು ಗುಂಪು ಆಧಾರಿತ ಮತ್ತು ಸಂಪ್ರದಾಯ ಆಧಾರಿತ ಸಮುದಾಯಗಳ ವಯಕ್ತಿಕವಾದ ಕ್ರಿಯಾತ್ಮಕ ಗ್ರಹಿಕೆಗಳ ಪ್ರತಿಬಿಂಬವನ್ನು ಆಯಾ ಸಮುದಾಯಗಳ ಸಾಂಸ್ಕೃತಿಕ ಗುರುತು / ಕುರುಹು. ಇದು ಆ ಸಾಂಸ್ಕೃತಿಯನ್ನು ಗಟ್ಟಿಗೊಳಿಸುತ್ತ ಮತ್ತು ಅದರ ಮೌಲ್ಯಗಳನ್ನು ಮೌಖಿಕವಾಗಿ ಅನುಕರಣೆ ಅಥವಾ ಪ್ರತಿರೂಪಿಸುವುದು ಎಂಬ ಅರ್ಥವನ್ನೂ ಅದರ ರೂಪಗಳ ಆಕಾರಗಳ, ಭಾಷೆ, ಸಾಹಿತ್ಯ, ಸಂಗೀತ, ನೃತ್ಯ, ಕ್ರೀಡೆ, ಸ್ಮೃತಿ, ಪುರಾಣ, ಆಚರಣೆ, ಸಂಪ್ರದಾಯ, ಕರಕುಶಲ, ವಾಸ್ತು ಹಾಗೂ ಇತರೆ ಕಲೆಗಳ ಮೂಲಕ ಇತರೆ ಯುವಕರಲ್ಲಿ ತೋರ್ಪಡಿಸುವುದೇ ಆಗಿದೆ ಎಂಬ ಅರ್ಥಗರ್ಭಿತವಾದ ಜಾನಪದದ ವಿಶ್ಲೇಷಣೆಯನ್ನು ಮಾಡಿರುತ್ತಾರೆ.

ಜಾನಪದ ಶಿಲ್ಪವು ಸಮಾಜ–ಸಂಸ್ಕೃತಿಗೆ ಸೇರಿದ ಎಲ್ಲರಿಗೂ ಯಾವ ರೀತಿಯ ಕಲ್ಪನೆಯಲ್ಲಿ, ಆಲೋಚನೆಯಲ್ಲಿ ಸ್ಥಾನವನ್ನು ಪಡೆದಿದೆ ಎಂಬುದನ್ನು ಸಮಗ್ರ ಅಭ್ಯಾಸ ಮಾರ್ಗವನ್ನು ಅನುಸರಿಸಿ, ಮಾನವ, ತನ್ನ ದೈಹಿಕ ಮತ್ತು ಬೌದ್ಧಿಕ, ಪ್ರಾಕೃತಿಕದ ವಿಕಾಸ ಆದಂದಿನಿಂದ ತನ್ನದೆನ್ನುವ ಸಂಸ್ಕೃತಿಯನ್ನು ಹಂತ

ಹಂತವಾಗಿ ಭಿನ್ನವಾದ ಅಭಿವೃದ್ಧಿಯನ್ನು ತಲುಪಿದ್ದಾನೆ. ತನ್ನಲ್ಲಿಯ ಬುದ್ಧಿವಂತಕೆಯನ್ನು ಕುಶಲಗಾರಿಕೆಯನ್ನು ಕಲೆಯ ಮುಖಾಂತರ ಮುಂದಿನ ಪೀಳಿಗೆಗೆ, ಸಮಾಜಕ್ಕೆ ನೀಡಿರುವ ಸಂಪನ್ಮೂಲಗಳನ್ನು ವರ್ಣನಾತ್ಮಕ ದೃಷ್ಟಿಯಲ್ಲಿ ಅಭ್ಯಸಿಸಿ, ತುಲನಾತ್ಮಕ ವಿಶ್ಲೇಷಣೆಯನ್ನು ಗುರುತಿಸುವುದು ಅವಶ್ಯವಾಗಿದೆ. ಜನಪದ ಸಂಸ್ಕೃತಿಯನ್ನು ಒಳಗೊಂಡ ಉಪಸಂಸ್ಕೃತಿಗಳ ಅಧ್ಯಯನವು ತೀರಾ ಪ್ರಸ್ತುತವಾದದ್ದಾಗಿದೆ.

ಜನಪದಕ್ಕೆ ವಿಶಾಲವಾದ ಅರ್ಥವಿದ್ದು, ಜನರ ಬದುಕನ್ನೆ ವಿವಿಧ ಆಶಯಗಳಲ್ಲಿ ವಿಂಗಡಿಸಿಕೊಂಡಿರುವುದೇ ಜನಪದವಾಗಿದೆ.

ಶಿಷ್ಟ ಸಂಸ್ಕೃತಿಯ ಮೂಲವೇ ಜನಪದವಾಗಿತ್ತು. ಜನಪದವಾಗಿದೆ. ಜನರೂಢಿಯೇ ಜನಪದವಾದರೆ, ಜನರು ದಿನ ಕಳೆದಂತೆ ರೂಡಿಸಿಕೊಂಡ ಬದುಕಿನ ಶೈಲಿಗಳ ನಾವಿನ್ಯಾತೆಯನ್ನು ಜನಪದವೇ ಎನ್ನಲು ಸಾಧ್ಯವಿದೆಯೇ? ಸಾಧ್ಯವಿದ್ದರೆ ಶಿಷ್ಟ ಪದದ ಹಿನ್ನಲೆಯಲ್ಲಿ, ಅಧುನಿಕರಣದ ಹಿನ್ನಲೆಯಲ್ಲಿ ನೋಡುವುದೇಕೆ.

ಮೂಲ ಜನಪದಕ್ಕೂ, ಶಿಷ್ಟಪದಕ್ಕೂ ಆಧುನಿಕತೆಯ ನವೀನತೆಗೆ ವ್ಯತ್ಯಾಸಗಳಿವೆಯೇ? ಇವುಗಳಲ್ಲಿ ಒಂದಕ್ಕೊಂದು ಸಂಬಂಧವಿದೆಯೇ?

ಜನರ ಜೀವನ ಪದ್ಧತಿ, ಹೊಸ ಹೊಸ ಆವಿಷ್ಕಾರಗಳ, ಸಂಶೋಧನೆಗಳ ಹೊಸ ಪ್ರಯೋಗಗಳ, ಹೊಸಪದ, ಹೊಸ ಪ್ರಯೋಗಗಳ, ಹೊಸಪದ, ಹೊಸ ವಸ್ತುಗಳ ಬಳಕೆಯಿಂದ ಜನರ ಜೀವನ ಅಭಿವೃದ್ಧಿ ಸಾಧ್ಯಗಾಗುತ್ತಿರುವ ಇಂದಿನ ದಿನಗಳಲ್ಲಿ ಮೂಲ ಬದುಕಿನ ಆಧಾರ, ಶೈಲಿಗಳಿಂದ ಈಗಿನ ವಾಸ್ತವ ಬದುಕಿಗೆ ಇರುವ ಅವಶ್ಯಕತೆಗಳಿಂದ ಜನಪದದಿಂದ ಸಾಧ್ಯವೇ? ಜನಪದವೆಂದರೆ ಇವುಗಳಿಗೆ ಮೂಲವಾಗಿ ಹೊಸತನ್ನು ಆವಿಷ್ಕರಿಸಲು ಸಹಾಯ ಮಾಡಿರುವ ಪ್ರಥಮ ಜೀವನ ಶೈಲಿಯೇ ಅಗಿದೆಯೇ ಅಲ್ಲದೆ ಜನಪದವೆಂಬುದನ್ನು ಕಳೆದು ಹೋದ, ಮರೆತುಹೋದ, ಸವಕಲಾದ ಪ್ರಕಾರಗಳೆನ್ನಬಹುದೇ?

ನಾಗರೀಕತೆಯೆಡೆಗೆ ಸಾಗುತ್ತಿದ್ದಂತೆ ಮಾನವ, ಹೊಸತನ್ನು ಬಳಕೆ ತಂದಾಗ, ಉಳಿದ ಹಳೆಯದನ್ನು ಜನಪದವೆನ್ನಲಾಗುತ್ತಿದೆಯೇ ಹೊಸ ತಂತ್ರ, ಜೀವನಗಳಿಗೆ ಬಗ್ಗದೆಯೇ ಹಳೆಯ ಸಂಪ್ರದಾಯ ಜೀವನವನ್ನು

ಮುಂದುವರೆಸಿದ ಜನಾಂಗ, ನಾಗರೀಕತೆಯಿಂದ ದೂರವಿರುವ ಸಮುದಾಯಗಳ ಆಚರಣೆ, ಸಿದ್ಧಾಂತಗಳನ್ನು ಜನಪದವೆನ್ನುತ್ತೇವೆ, ಅಥವಾ ಹೊಸತನ ನಿರಂತರ ನಾಸದ ಬಗೆಗೆ ಅನುಮಾನ ವ್ಯಕ್ತಪಡಿಸಿ, ವಿರೋದಿಸಿ, ಪಿತ್ರಾರ್ಜಿತಕ್ಕೆ ಅಂಟು ಬಿದ್ದ, ಮೂಢನಂಬಿಕೆಗಳಿಗೆ ಬಿಗಿಯಾಗಿ ಬಂದಿಸಿಕೊಂಡಿರುವ ಜನರನ್ನು, ಅವರ ಸಂಪ್ರದಾಯ, ಆಚರಣೆ ಜೀವನವೇ ಜನಪದವಾಗಿದೆಯೇ?

ದುಡಿಸಿ ಕೊಳ್ಳುವವರ, ದಬ್ಬಾಳಿಕೆ ನಡೆಸುವವರ, ಆಳುವವರ ಹಂದಿನಿಂದ ಹೊರಗೆ ಉಳಿದು ಸ್ವತಂತ್ರ ಜೀವನ ಪದ್ಧತಿ, ಸ್ವತಂತ್ರ ಬದುಕನ್ನು ಬಯಸಿ ನೆಲೆಗೊಂಡಿರುವ ಸಮುದಾಯ ಜನಗಳ ಬದುಕನ್ನು ಜನಪದವಾಗಿಸಿದೆಯೇ, ಇಂತಹ ಜನರಿಂದ ಇಂದಿಗೂ ಈ ಅಳಿದುಳಿದ ಪ್ರಕಾರಗಳನ್ನು ಸಾಕ್ಷಿಗಳೆಂಬಂತೆ ಕಾಣಲು ಸಾಧ್ಯವಾಗಿದೆಯೇ? ಎಂಬುದನ್ನು ಜನಪದದ ಈ ಬಗೆಗೆ ಸಾಕಷ್ಟು ಚಿಂತನೆಗಳನ್ನು ನಡೆಸಬೇಕಾಗಿದೆ.

ಜನಪದ ಕಲೆ ಎಂದರೆ ಸಂವಹನ, ಈ ವಿಷಯವನ್ನು ಎರಡು ವಿಭಾಗಗಳಲ್ಲಿ ಚರ್ಚಿಸಬಹುದಾಗಿದೆ.

1. ಸ್ವಾಭಾವಿಕ ಪರಿಸರದ ಹಿನ್ನಲೆಯಲ್ಲಿ.
2. ಪ್ರಾಯೋಗಿಕ ಆಚರಣೆಗಳಲ್ಲಿ ಜನಪದ ಕಲೆ ಎಂದು ವಿಭಾಗಿಸಿ ಕೊಳ್ಳಲಾಗಿದೆ.

ಎರಡನೆಯ ಪ್ರಾಯೋಗಿಕ ಆಚರಣೆಗಳು ಸಂವಹನಕ್ಕಾಗಿ ಮೂಡಿರುವ ಬೆಳೆದು ಬಂದಿರುವ ಜನಪದ ಕಲೆಯಾಗಿದೆ.

ಸಾಮಾನ್ಯ ಕಲೆ

ಕಲೆ ಎಂಬುದಕ್ಕೆ ವಿಸ್ತಾರವಾದ ವಿವರಣೆ ಇಲ್ಲಿ ಇಲ್ಲ, ಇದನ್ನು ಸರಳವಾಗಿ ಹೇಳಬಹುದಾದರೆ ಕಲೆಯೆನ್ನುವುದು ಮಾನವನು ಅನುಭವಗಳನ್ನು ಅಭಿವ್ಯಕ್ತ ಪಡಿಸುವುದಕ್ಕೆ ಆರಿಸಿಕೊಂಡ ವಿವಿಧ ಆಕಾರ, ಸ್ವರೂಪ, ಮತ್ತು ಮಾಧ್ಯಮಗಳ ಕಲೆಯೆಂದು ಕರೆಯಬಹುದಾಗಿದೆ. ಇದು ಒಂದು ಪ್ರಾತ್ಯಕ್ಷಿಕ ಪ್ರದರ್ಶನವಾಗಿ ಮನವನ ಬುದ್ದಿಶಕ್ತಿ, ಕೌಶಲ್ಯತೆಯನ್ನು ಅಭಿನಯಿಸುವ ರೀತಿಯ ಕಲೆಯಾಗಿದೆ. ಕಲೆ ಎನ್ನುವುದು ಮಾನವನ

ಸಮಾಜದಲ್ಲಿ ತುಂಬಿಕೊಂಡಿರುವ ಪ್ರಕಾರವಾಗಿದೆ. 'ಬರ್ತ್ರುಹರಿ' ಎಂಬ ಖ್ಯಾತ ಭಾರತೀಯ ವಿದ್ವಾಂಸಕರ ಪ್ರಕಾರ ಕಲೆಯೆನ್ನುವುದು ಪ್ರಾಣಿ ಮತ್ತು ಮನುಷ್ಯನ ವಿಭಿನ್ನತೆಯನ್ನು ತೋರಿಸುತ್ತದೆ ಎಂದಿದ್ದಾನೆ.

ಪ್ರಾರಂಭದ ಆದಿ ಮಾನವನ ಕಾಲದಿಂದಲೂ ಮಾನವನು ತನ್ನ ಪ್ರಾವೀಣ್ಯತೆಯ ಪ್ರವೃತ್ತಿಯನ್ನು, ಇಚ್ಚೆಯನ್ನು ಕಲೆಯ ಪರವಾಗಿ, ಕಲೆಯಲ್ಲಿ ಬಲವನ್ನು ಮೂಡಿಸಿಕೊಂಡು ಬಂದಿದ್ದಾನೆ. ಇದನ್ನು ಇಂದಿಗೂ ನೋಡಬಹುದಾದ ಗುಹೆಗಳ ಚಿತ್ರಕಥೆ ಮತ್ತು ವೀನಸ್ ಆಫ್ ಡ್ಯೂ ಸೆಲ್ಡರ್ಪಗಳ ಪ್ರಗತಿ ಇತಿಹಾಸದ ಚಟುವಟಿಕೆಗಳಿಗೆ ಸಾಕ್ಷಿಗಳಾಗಿವೆ.

ಕಲೆಯು ಮಾನವನ ಉನ್ನತಿಯ ಬುದ್ಧಿ ಕೌಶಲ್ಯಕ್ಕೆ ತಕ್ಕಂತೆಯೇ ಜೊತೆಯಲ್ಲಿಯೇ ಬೆಳವಣಿಗೆಯನ್ನು ಹೊಂದಿದೆ. ಪ್ರತಿಯೊಂದು ದೇಶವು ಕೂಡ ತನ್ನದೇ ಆದ ಅದ್ವಿತೀಯ ವೈಶಿಷ್ಟಪೂರ್ಣ ಕಲ ಪ್ರಕಾರಗಳನ್ನು ಹೊಂದಿರುತ್ತದೆ. ಈ ರೀತಿಯಾಗಿ ನಾವು ಆಪ್ರಿಕಾ ಕಲೆ, ಪ್ರೆಂಚ್ ಕಲೆ ಭಾರತೀಯ ಕಲೆ ಮುಂತಾದವುಗಳನ್ನು ಹೊಂದಿದ್ದೇವೆ. ಭಾರತೀಯ ನಾಗರೀಕತೆಯು ಬಹಳ ಪ್ರಾಚೀನವಾದದ್ದು ಮತ್ತು ಈ ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ನೀಡಿರುವಂತಹುದಾಗಿದೆ. ನಮ್ಮ ಪೂರ್ವ ಇತಿಹಾಸವು ಸಾಹಿತ್ಯ, ನಾಟಕ, ನೃತ್ಯ, ಚಿತ್ರಕಲೆ, ಶಿಲ್ಪಕಲೆ ಮುಂತಾದವುಗಳಿಂದ ಚಿಂಬಿರುವಂತಹುದಾಗಿದೆ. ಆದಿ ಕಾಲದ ಸಾಹಿತ್ಯ ಮತ್ತು ಜನಪದ ಕ್ಷೇತ್ರವು ರಾಷ್ಟ್ರೀಯ ಸಾಂಸ್ಕೃತಿಕ ಸಾಧನೆಗಳ ಒಂದು ಭಾಗವಾಗಿ ಮುಂದಿನ ಭವಿಷ್ಯದ ಭದ್ರವಾದ ಅಭಿವೃದ್ಧಿಯ ತಳಹದಿಯಾಗಿದೆ.

ಜಾನಪದ ಕ್ಷೇತ್ರ

ಜನಪದ ಎಂದರೆ ಒಂದು ಜನಾಂಗ, ಒಂದು ಬುಡಕಟ್ಟು, ಒಂದು ದೇಶ, ಒಂದು ರಾಷ್ಟ್ರ ಸಮೂಹ. ಜನಪದ ಎಂದರೆ ಒಂದು ರಾಷ್ಟ್ರ ಸಮೂಹ ಮತ್ತು ಆಧ್ಯಾತ್ಮಿಕ. ಜೀವನಾದಾರಗಳನ್ನು ಒಳಗೊಂಡಿರುವ ಜನ ಜೀವನವಾಗಿದೆ.

ಪ್ರಾಚೀನತೆ ಮತ್ತು ಅಧುನಿಕತೆ ಎರಡು ಸಂದರ್ಭಗಳಲ್ಲಿ ವ್ಯಕ್ತವಾಗಿರುವ ಸಾಂಪ್ರಧಾಯಿಕ ನಂಬಿಕೆಗಳು, ಸಂಪ್ರದಾಯಿಕ ರೂಢಿಗಳು, ಸಮುದಾಯ ಸಂಸ್ಥೆಗಳು ಮುಂತಾದ ಆಚರಣೆ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಬಾಯಿ ಮಾತಿನ ಮುಖಾಂತರ ಮತ್ತು ಆಚರಣೆಗಳ ನಿಗಾವಹಿಸುವುದರೊಂದಿಗೆ, ಗ್ರಹಿಸುವುದರೊಂದಿಗೆ ಈ ಸಂಪ್ರದಾಯಗಳು ಉಳಿದುಕೊಂಡು ಬಂದಿವೆ.

ಈ ಜಾನಪದ ಈಂಟಞಟಂಡಿಜ ಎಂಬ ಪದದಬಳಕೆ ಮತ್ತು ಹುಟ್ಟು ಹಾಕಿದವರೆಂದು ಕೊಂಡರೆ W.J.Thomas ರವರು 22–ಆಗಷ್ಟ–1846 ರಲ್ಲಿ ಈ Athena ನಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಾರಂಭಕ್ಕೆ ತಂದನು.

ಜಾನಪದ ಕಲೆಯು ಎಲ್ಲಾ ಕಲೆಗಳ ಮಾತೃ ಸ್ಥಾನವನ್ನು ಹೊಂದಿದೆ, ಎಂದು ತೀರ್ಮಾನಿಸಲಾಗಿದೆ. ಇದು ಜನಪದದ (ಈಂಟಞಟಂಡಿಜ) ಒಂದು ಅಂಗವಾಗಿಯೇ ಇದೆ. ಜನಪದ ಕಲೆಯು ಸ್ವಾಭಾವಿಕವಾಗಿ ಕಲಾತ್ಮಕ ಸ್ಪೂರ್ತಿಯನ್ನು ಜನರಲ್ಲಿ ಮೂಡಿಸುವಂತದ್ದಾಗಿದೆ.

ಈ ಜನಪದವು ಸಾಂಪ್ರದಾಯಿಕ, ಶಾಸ್ತ್ರೀಯ ಮತ್ತು (ಅಕೆಡೆಮಿಕ್ ಕಲೆಗಳ) ಸೈಕ್ಷಣಿಕ ಶಾಸ್ತ್ರೀಯ ಕಲೆಗಳಲ್ಲಿ ಅಸಂಭವನೀಯವಾಗಿದೆ. ಮತ್ತು ಈ ಜನಪದ ಕಲೆಯು ಯಾವುದೇ ಪ್ರಕಾರಗಳು ಇನ್ನಾವುದೇ ರೀತಿಯ ಕ್ರಮಬದ್ದತೆಯ ಅಧ್ಯಯನ ರೀತಿಯ ಕ್ರಮಬದ್ದತೆಯ ಅಧ್ಯಯನಗಳಿಂದ ಮೂಡಿ ಬರದಂತಹ ಕಲೆಯಾಗಿದೆ. ಜನಪದ ಕಲೆಯು ನಿರಂತರವಾದ ಮತ್ತು ಮೂಲಭೂತವಾದದ್ದು.

ಜನಪದ ಕಲೆಯ ಉತ್ಪಾದಕನಿಗೆ ಪರಿಸರದ ನಿಸರ್ಗವೇ ಆತನ ಶಾಲೆಯಾಗಿ ಮತ್ತು ದಿನ ನಿತ್ಯದ ಜೀವನದ ಸ್ವಂತ ಅನುಭವವೇ ಆತನ ಗುರುವಾಗಿದೆ.

ಜಾನಪದ ಸ್ತರಗಳು

1.ವಾಚಕಿ, 2. ಸಂಪ್ರದಾಯಕ, 3. ಸಾಂಸ್ಕೃತಿಕ, 4. ಕಲಾತ್ಮಕ (ಪುಟ,127, "ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಡಾ॥ ಕೆ.ಆರ್ ದುರ್ಗಾದಾಸ್".)

ಆರಂಭದ ಶಿಲ್ಪಗಳ ಬೆಳವಣಿಗೆಯ ಮೂಲ

ಆದಿಮ ಕಾಲದ ಆದಿ ಮಾನವನು ನೈಸರ್ಗಿಕವಾಗಿ ದೊರೆತ ಶಿಲೆ ಹಾಗೂ ಮರದ ತುಂಡುಗಳನ್ನು ಹಾಗೆಯೇ ಉಪಯೋಗಿಸಿ ಮಣ್ಣು-ಮರಗಳಲ್ಲಿ ತನಗೆ ತೋಚಿದ ಹಾಗೆ ರೂಪ-ಆಕಾರಗಳನ್ನು ತಯಾರಿಸಿ ಉಪಯೋಗಿಸಿರಬಹುದಾಗಿದ್ದು, ಉತ್ಖನನದಲ್ಲಿ ಲಭ್ಯಗೊಂಡಿರುವ ಈ ಬಗೆಯ ಶಿಲ್ಪಗಳನ್ನು ಆಟಿಕೆಗಳೆಂದೂ, ಪೂಜಾ ಅಥವಾ ಮಾಂತ್ರಿಕ ಆಚರಣೆಯ ಶಿಲ್ಪಗಳೆಂದೂ ಗುರುತಿಸಲಾಗಿದೆ. ಇಂದಿಗೂ ಈ ರೀತಿ ಮಣ್ಣಿನಲ್ಲಿ ಹಲವಾರು ಮೂರ್ತಿಗಳನ್ನು ಮಾಡಿ ನಿಶ್ಚಿತ ಜಾಗದಲ್ಲಿ ಅರ್ಪಿಸುವ 'ಹರಕೆಯ ಶಿಲ್ಪಗಳು'ಗಳನ್ನು ಕೊಡಗು ಸರಯೂ ಗ್ರಾಮ ಹಾಗೂ ಕರ್ನಾಟಕದಾದ್ಯಂತ ಕಾಣುತ್ತೇವೆ. ನಂತರದಲ್ಲಿನ ಇತಿಹಾಸದ ಆರಂಭ ಕಾಲಕ್ಕೆ ಭಾರತೀಯ ಶಿಲ್ಪಗಳು ಯಾವ ರೀತಿ ಇದ್ದವೆಂಬುದು ಇನ್ನು ಖಚಿತವಾಗಿಲ್ಲದಿದ್ದರೂ ವೈಧಿಕ ಸಾಹಿತ್ಯದಲ್ಲಿ ಮೂರ್ತಿ ನಿರ್ಮಾಣದ ಬಗ್ಗೆ ಶಿಲ್ಪದ ಅಸ್ತಿತ್ವ ಇದ್ದ ಬಗ್ಗೆ ಆಧಾರಗಳು ದೊರೆಯುತ್ತವೆ.

ಬೌದ್ಧ ಹಾಗೂ ಜೈನ ಧರ್ಮದ ಕಾಲದಲ್ಲಿ ಅವರ ಧಾರ್ಮಿಕ ಶಿಲ್ಪಗಳು ವಿಫುಲವಾಗಿ ದೊರೆಯುತ್ತವೆ. ಬೌದ್ಧರ ಮೊದಲು ಕಾಲದ ಶಿಲ್ಪಗಳು ಗ್ರೀಕ್, ರೋಮ್ ದೇಶಗಳ ಶಿಲ್ಪಗಳಿಂದ ದಟ್ಟವಾಗಿ ಪ್ರಭಾವಿತರಾಗಿರುವುದರಿಂದ ಆ ಮೊದಲು ಭಾರತದಲ್ಲಿ ಶಿಲ್ಪಗಳು ಇದ್ದಿರಲಾರವೆಂಬ ಅಭಿಪ್ರಾಯವಿದೆ. ಈ ಮೊದಲೋ ಅಥವಾ ಇದೇ ಕಾಲದಲ್ಲೋ. ವೈದಿಕ ಧರ್ಮವೂ ಮೂರ್ತಿ ಶಿಲ್ಪವನ್ನು ವಿಗ್ರಹಾರಾಧನೆಯ ರೂಪದಲ್ಲಿ ಅಂಗೀಕರಿಸಿದಲ್ಲದೆ ಆಗಮ ಹಾಗೂ ಶಾಸ್ತ್ರ ಗ್ರಂಥಗಳನ್ನು ರಚಿಸಿತು. ಮೂರ್ತಿಗಳಿಗೆ ಆಕಾರ, ವಸ್ತ್ರಾಭರಣ, ನಿಲವು, ಆಯುಧ ಸಂಕೇತ ವಿಶೇಷಕಾರಗಳು, ವಾಹನ ಇತ್ಯಾದಿಗಳನ್ನು ನೀಡಿ ಖಚಿತಗೊಳಿಸಿತು. (ಪುಟ, 6, ಆ.ಲ. ನರಸಿಂಹನ್, ಎನ್. ಮರಿಸಾಮಾಚಾರ, ಸಂಪಾದಕೀಯ, ಶಿಲ್ಪಕಲಾ ಪ್ರಪಂಚ, ಪ್ರ: ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು-2, 1994)

ಕರ್ನಾಟಕ ಶಿಲ್ಪ ಇತಿಹಾಸದ ವಿಸ್ತಾರಣಾ ಕಾಲದಲ್ಲಿ ಶೈವ ಹಾಗೂ ವೈದಿಕದೊಂದಿಗೆ ಬೌದ್ಧ, ಜೈನ ಧರ್ಮಗಳೂ ಸೇರಿ ಶಿಲ್ಪಗಳಿಂದ ಕೂಡಿದ ವಾಸ್ತು ಶಿಲ್ಪಗಳನ್ನು ರಾಜರು, ಸಾಮಾನ್ಯರು ರಚಿಸಿರುವುದು ಕಂಡು ಬರುತ್ತದೆ. ಪ್ರಕೃತಿಯಲ್ಲಿ ದೊರೆಯುವ ಶಿಲೆ, ಲೋಹ ಇತ್ಯಾದಿಗಳನ್ನು ಅನುಸರಿಸಿ ಶಿಲ್ಪ ಕಾಲ ಕಾಲಕ್ಕೆ ಶಿಲ್ಪಗಳನ್ನು ರೂಪಿಸಿದ್ದು, ಮಾಧ್ಯಮವನ್ನು ಅನುಸರಿಸಿ ಅಲ್ಪ ಸ್ವಲ್ಪ ಬದಲಾವನೆಗಳು ಕಂಡು ಬಂದರೂ ಒಂದು ಅವಿಚಿನ್ನವಾದ ಸಂಪ್ರದಾಯ ಭಾರತೀಯ ಶಿಲ್ಪಗಳಲ್ಲಿ ಹರಿದು ಬಂದಿರುವುದು ನಿಚ್ಚಳವಾಗಿ ನೋಡಬಹುದು. ಶೈಲಿ ಹಾಗೂ ಮಾಧ್ಯಮದ ಬದಲಾವಣೆ ಅರಸು ಮನೆತನಗಳಿಗೆ ಹಾಗೂ ಪ್ರದೇಸಗಳಿಗೆ ಹೊಂದಿಕೊಂಡಿರುವುದು ಕುತೂಹಲಕಾರಿಯಾದ ಸಂಗತಿಯಾಗಿದೆ. [ಪುಟ, 6, ಶಿಲ್ಪಕಲಾ ಪ್ರಪಂಚ]

ಪ್ರಸ್ತುತ ಅಧ್ಯಯನದಲ್ಲಿ ಒಂದೇ ವಸ್ತುವಿನ ವಿಷಯಕ್ಕೆ ಸಂಭಂದಿಸಿದಂತೆ ಹಲವಾರು ಶಿಲ್ಪಗಳನ್ನು ಅವುಗಳ ವೈವಿಧ್ಯತೆ, ಅವುಗಳ ಆಚಾರ–ವಿಚಾರ, ಕಾಲಗಳನ್ನು ಅನುಸರಿಸಿ ಅಧ್ಯಯನ ಮಾಡಲಾಗಿರುತ್ತದೆ. ಅಂತೆಯೇ ಇಲ್ಲಿ ಕಂಡು ಬಂದಿರುವ ಆ ಶಿಲ್ಪಗಳ ಶೈಲಿಗಳಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಶಿಲ್ಪಿಯು ಶಿಲ್ಪಗಳಲ್ಲಿಯ ಕೆಲವು ಪ್ರಮುಖವಾದ ಧಾರ್ಮಿಕ ಅಂಶಗಳ ಜೊತೆಗೆ ತನಗರಿವಿಲ್ಲದೆಯೇ ಸಮಕಾಲೀನವಾದ ಹಲವಾರು ಸಂಗತಿಗಳನ್ನು ಅದರೊಟ್ಟಿಗೆ ಶಿಲ್ಪೀಕರಿಸಿರುದನ್ನು ಗಮನಿಸಿ ಅವುಗಳ ವಿಶೇಷತೆಗಳನ್ನು ಬಳಸಿಕೊಂಡು ವಸ್ತ್ರಾಭರಣಗಳಲ್ಲಿನ ವಿಶೇಷತೆ, ದೈನಂದಿನ ಬಳಕೆಯ ವಸ್ತು ವಿಶೇಷತೆ, ಹಾಗೂ ಅಯಾ ಕಾಲದ ದಾಖಲಾರ್ಹ ಮಾಹಿತಿಗಳು ಕೂಡ ಲಭ್ಯಗೊಂಡಿರುವುದನ್ನು ಸಂಶೋಧನಾ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಶಿಲ್ಪದ ರಚನೆ ನಾಲ್ಕು ಬಗೆಯಲ್ಲಿ ಆಗುತ್ತವೆ:

1) ಕೆತ್ತಿ ತೆಗೆಯುವುದು.

2) ಮೆತ್ತಿ ರೂಪಿಸುವುದು,

3) ಎರಕಹೊಯ್ಯುವುದು ಹಾಗೂ

4) ಹಲವಾರು ವಸ್ತುಗಳನ್ನು ಜೋಡಿಸಿ ಅಂಟಿಸುವುದು,

ಈ ಕ್ರಿಯೆಗಳಿಗೆ ಸರಿ ಸುಮಾರು ಎಲ್ಲ ಶಿಲೆಗಳು, ಧಾತುಗಳು, ದಂತ, ಮರ-ಮುಟ್ಟುಗಳು ಉಪಯುಕ್ತವಾಗಿವೆ. ಈಚೆಗೆ ಪ್ಲಾಸ್ಟಿಕ್, ಫೈಬರ್‌ಗ್ಲಾಸ್, ಥರ್ಮೋಕೋಲ್ ಇತ್ಯಾದಿ ಆಧುನಿಕ ಶೋಧಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ಈ ರೀತಿ ವಿವಿಧ ಮಾಧ್ಯಮಗಳ ಬಳಕೆ ಸಾಧ್ಯತೆ ಕುರಿತು ಈ ಸಂಶೋಧನ ಅಧ್ಯಯದಲ್ಲಿ ವಿವರಿಸಲಾಗಿದೆ. [ಪುಟ,7 ಅದೇ]

'ಜನಪದ ಶಿಲ್ಪಗಳದ್ಧೇ ಒಂದು ಪ್ರತ್ಯೇಕ ಪು.ಸ.ಚ ಅವುಗಳ ವೈವಿಧ್ಯತೆ, ಮಾಧ್ಯಮ ತಯಾರಿಕೆ, ಬಳಕೆ, ಆರಾಧನೆ ವಿಧಿ ಕ್ರಿಯೆ ಹಾಗೂ ಅಂತಿಮವಾಗಿ ವಿಸರ್ಜನೆ ಎಲ್ಲವೂ ಕಲಾತ್ಮಕವಾದ ಅಭಿವ್ಯಕ್ತಿಯಿಂದ ಕೂಡಿರುತ್ತವೆ. ಪ್ರಯೋಜನದೊಂದಿಗೆ ಕಲೆಯೂ ಅನಿರ್ಭಂದಿತವಾಗಿ ಬಳಕೆಯಾಗುವುದು ಜನಪದದಲ್ಲಯೇ' ಎಂದರೆ ಅತಿಶಯೋಕ್ತಿಯಾಗಲಾರದು, ಆಧುನಿಕ ಕಲೆಯಲ್ಲಿ ಕಂಡು ಬರುವ ಮುಕ್ತ ಕಸುಬುಗಾರಿಕೆಗೆ ಪ್ರೇರಣೆ ಜನಪದ ಚಿತ್ರ ಶಿಲ್ಪಗಳೇ ಆಗಿವೆ. ಕರ್ನಾಟಕದ (ವಿಶೇಷವಾಗಿ ಉತ್ತರ ಕರ್ನಾಟಕ) ಹಬ್ಬ ಹರಿದಿನಗಳಲ್ಲಿ ರೂಪು ತಳೆಯುವ ಜನಪದ ಶಿಲ್ಪಗಳ ಕುರಿತ (ವಿವರವಾದ) ಆಯ್ದ ವಿವರಗಳ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

ಆಧುನಿಕ ಶಿಲ್ಪಗಳು ಕಳೆದ ಶತಮಾನದ ಮಧ್ಯಭಾಗದಲ್ಲಿ ಪಾಶ್ಚಾತ್ಯ ದೇಶದಲ್ಲಿ ಚಿತ್ರಕಲೆಯಲ್ಲಿ ಮಹತ್ತರ ಬದಲಾವಣೆಗಳು ಉಂಟಾಗಿ, 'ಕಲೆಗಾಗಿ ಕಲೆ' ಎಂಬ ಸಿದ್ಧಾಂತವನ್ನು ಅಂಗೀಕರಿಸಿ ಚಿತ್ರಕಲೆಯನ್ನು ಕೇವಲ ದೃಶ್ಯ ಮಾಧ್ಯಮವನ್ನಾಗಿಸುವ ಕ್ರಿಯೆ ಆರಂಭವಾಯಿತಾದರೂ ಶಿಲ್ಪದಲ್ಲಿ ಈ ಕ್ರಿಯೆ ಒಂದು ಘನ ಆಕಾರ (ಮಾಸ್) ಅದರ ಹೊರ ಹಾಗೂ ಒಳ ಅಂಚುಗಳು; ಮಾಧ್ಯಮಕ್ಕೆ ತಕ್ಕಂತೆ ಮೈವಳಿಕೆ, ರಚನೆಯ ನಂತರ ಇರಿಸುವ ಜಾಗ ಇತ್ಯಾದಿ ಹಲವಾರು ಪ್ರಾಮುಖ್ಯತೆಯನ್ನು ಪಡೆದವು. [ಪುಟ, 9, ಅದೇ]

ಶಿಲ್ಪವು ಅತ್ಯಂತ ಪ್ರಾಚೀನವಾದ ಶಬ್ದ, ಆದರೆ ಅದನ್ನು ವಿಭಿನ್ನ ಯುಗಗಳಲ್ಲಿ ವಿಭಿನ್ನವಾಗಿ ಅರ್ಥೈಸಲಾಗಿದೆ. ಶಿಲ್ಪ ಮತ್ತು ಕಲೆಯ ಪ್ರಾಚೀನತೆಯು ವೈದಿಕ ಯುಗದಷ್ಟು ಹಳೆಯದು. ವೈದಿಕಯುಗದ ಈ ಸಿಲ್ಪಕಲಾ ವಿಧಾನವು ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿತ್ತು. ಆದರೆ ಅನಂತರ ಬೇರೆ ವಿಷಯಗಳಂತೆಯೇ ಅದನ್ನು ಧರ್ಮ, ಅಧ್ಯಾತ್ಮ ಮತ್ತು ಶಾಸ್ತ್ರಗಳ ಬಂಧನದಲ್ಲಿ ಸಿಲುಕಿಸಿ, ಅದರ ಪ್ರಗತಿಯಲ್ಲಿ ತಡೆಯುಂಟು ಮಾಡಲಾಯಿತು. ವೈದಿಕ ಯುಗದ ನಂತರ ಬ್ರಾಹ್ಮಣ ಯುಗದಲ್ಲಿ ಶಿಲ್ಪ ಶಬ್ದವನ್ನು ನೃತ್ಯ, ಗೀತೆ ಮತ್ತು ವಾದ್ಯದ ಅರ್ಥದಲ್ಲಿ ಬಳಸಲಾಗುತ್ತಿತ್ತು. ಹೇಗೆಂದರೆ "ತ್ರಿವಿಧೊ ಶಿಲ್ಪಂ, ನೃತ್ಯಂ ಗೀತಂ-ವಾದಿತ್ರಮಿತಿ" (ಕೌಷೇಕರ್ಮಿ). ಈನೃತ್ವ, ಗೀತೆ ಮತ್ತು ವಾದ್ಯಗಳನ್ನು, ಲಲಿತ ಕಲೆಗಳೆಂದು ಪರಿಗಣಿಸಲಾಯಿತು. 'ರಾಮಾಯಣ'ದಲ್ಲಿ ಶಿಲ್ಪ ಮತ್ತು ಕಲೆ ಈ ಎರಡೂ ಶಬ್ದಗಳನ್ನು ವಿಭಿನ್ನ ಅರ್ಥಗಳಲ್ಲಿ ಉಪಯೋಗಿಸಲಾಗಿದೆ. (ಲೇಖನ ಶಿಲ್ಪ ಮತ್ತು ವಿಶ್ವಕರ್ಮ- ಎನ್. ಮರಿಶಾಮಾಚಾರ್, ಶಿಲ್ಪಕಲಾ ಪ್ರಪಂಚ, ಪ್ರ. ಕ. ಲ. ಕ. ಅ. ಬೆಂ.).

ಸ್ಥಪತಿ, ಸೂಕ್ರಗ್ರಾಹಿ, ವರ್ಧಕಿ, ತಕ್ಷಕ ಎನ್ನುವ ವಿಭಾಗವನ್ನು ಶಿಲ್ಪಗಳಲ್ಲಿ ಮಾಡಿಕೊಳ್ಳಬಹುದು, ಅವರವರ ಸಾಮರ್ಥ್ಯ, ವೈಸಿಷ್ಟ್ಯ, ಕೌಶಲಗಲನ್ನನುಸರಿಸಿ ಈ ತಾರತಮ್ಯ ಏರ್ಪಡುತ್ತದೆ. ಶಿಲ್ಪದ ಕೆಲಸ ಆಗಬೇಕಾದಾಗ, ಎಲ್ಲರಿಗೂ ಮಾರ್ಗದರ್ಶನ ಮಾಡಿ ಎಲ್ಲರ ಮೇಲ್ವಿಚಾರಣೆ ನೋಡಿಕೊಳ್ಳುವವ ಸ್ಥಪತಿ, ಅಳತೆಗಲನ್ನು ನಿರ್ಧರಿಸಿ, ಚಿತ್ರವನ್ನು ಬರೆದು ಉಳಿದಿಬ್ಬರಿಗೆ ಮಾರ್ಗದರ್ಶನ ಮಾಡುವವ ಸೂತ, ಗ್ರಾಹಿ, ಸೂಕ್ರಗ್ರಾಹಿಯನ್ನು 'ರೇಖಾಜ್ಞ' ನೆಂದು ಕರೆದಿದ್ದಾರೆ.

ಅಧ್ಯಯನದ ಉದ್ದೇಶ:

ಕರ್ನಾಟಕ ರಾಜ್ಯವು ಶಿಲ್ಪಕಲೆಗಳಿಗೆ ವಿಶ್ವದಲ್ಲೇ ಹೆಸರು ಪಡೆದಿದ್ದು "ಶಿಲ್ಪಕಲೆಯ ತವರೂರು ಎಂದು ಕರೆಯಲ್ಪಟ್ಟಿದೆ. ಈ ನಾಡಿನಲ್ಲಿ ಅನೇಕ ಶಿಲ್ಪ ಶೈಲಿಗಳು ಹುಟ್ಟಿ, ಅವು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡಿದಿವೆ. ನಮ್ಮ ರಾಜ್ಯದಲ್ಲಿ ಶಿಲ್ಪಕಲೆಗಳಿಗಾಗಿ ದುಡಿದವರು ಹಲವಾರು ಶಿಲ್ಪಿಗಳು. ಕೆಲವು ಶಿಲ್ಪಿಗಳು 'ಶಿಲ್ಪ ರಚಿಸುವುದೇ ತಮ್ಮ ಕಾಯಕ'ವೆಂದು ತಿಳಿದು, ಶಿಲ್ಪದ ಮೇಲೆ ತಮ್ಮ ಹೆಸರುಗಳನ್ನು ನಮೂದಿಸಿರುವುದಿಲ್ಲ, ಸಾಂಪ್ರದಾಯಿಕವಾಗಿ ಶಿಲ್ಪಕಲೆ ಬೆಳೆದು ಬಂದಿದ್ದು ಇಂದಿಗೂ ಈ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವವರು ನಮ್ಮಲಿದ್ದಾರೆ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಇಂತಹ ಹಿರಿಯ ಶಿಲ್ಪಕಲಾವಿದರ ಹಾಗೂ ಕಲಾಶೈಲಿಗಳೊಂದಿಗೆ ಅವರುಗಳ ಕಲಾಕೃತಿಗಳ ವೈವಿಧ್ಯತೆಯ ಬಗ್ಗೆ ಸರ್ಕಾರದ ಫೆಲೋಷಿಪ್ ಯೋಜನೆಗಳ ಮೂಲಕ ಕಾರ್ಯರೂಪಕ್ಕೆ ತರುತ್ತಿರುವುದು ತುಂಬಾ ಶ್ಲಾಘನೀಯವಾದುದು. ಈ ಫೆಲೋಷಿಪ್‌ಗಳ ಮೂಲಕ ಸಂಗ್ರಹವಾಗುವಂತಹ ಗ್ರಂಥಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರೆ ಅದರ ಮೂಲಕ ಶಿಲ್ಪಿಗಳ, ಕಲಾಕೃತಿಗಳ ಹಾಗು ಕಲಾಶೈಲಿಗಳನ್ನು ಪ್ರಪಂಚಕ್ಕೆ ಪರಿಚಯಿಸದಂತಾಗುತ್ತದೆ. ಜೊತೆಗೆ ರಾಜ್ಯದಲ್ಲಿ ಶಿಲ್ಪಕಲೆ ಬೆಳೆದು ಬಂದ ದಾರಿ ಮತ್ತು ಅದರ ಚರಿತ್ರೆಯನ್ನು ದಾಖಲಿಸುವುದರ ಮೂಲಕ ಅದರ ಆಳವನ್ನು ತಿಳಿಯಲು ಸಹಾಯವಾಗುತ್ತದೆ.

ಕರ್ನಾಟಕದ ನೆಲ ಜನಪದ ಶಿಲ್ಪಗಳ ಕಣಜವಾಗಿದೆ. ಪ್ರಾದಿಮ ಕಾಲದಲ್ಲಿ ರೂಪುಗೊಂಡಿರಬಹುದಾದಕೆಲಯ ಕಾಲದ ಪ್ರಶ್ನೆಗಿಂತ, ನಾಡಿನ ಸಂಸ್ಕೃತಿಗೆ ಜನಪದ ಕಲೆ, ಜನರ ಬದುಕಿನ ಆತ್ಮವಾಗಿ, ಜೀವವಾಗಿ ಹೇಗೆ ಜೀವಂತ ಅಸ್ತಿತ್ವವನ್ನು ನೀಡಿದೆ ಎಂಬುದರ ಅಧ್ಯಯನ ಅವಶ್ಯವಾಗಿದೆ. ಈಗಾಗಲೇ ಅನೇಕ ವಿದ್ವಾಂಸರು ಜನಪದ ಶಿಲ್ಪಗಳ ವಿವಿಧ ಕ್ಷೇತ್ರಗಳಲ್ಲಿ ಅಧ್ಯಯನ ನಡೆಸಿದ್ದಾರೆ. ಜನಪದ ಶಿಲ್ಪಗಳು ಅರ್ಥಾತ್ ಜನಪದ ಶಿಲ್ಪಗಳೇ ಅವರ ಜೀವನವೇನೋ ಎಂಬಷ್ಟು ಅವಿನಭಾವ ಸಂಬಂಧ

ಇರುವುದರಿಂದ ಅನೇಕ ವಿಷಯಗಳು ಅಧ್ಯಯನಕ್ಕೆ ಸಾಮಾಗ್ರಿಯಾಗಿ ಕಣ್ಣಿನ ಮುಂದಿವೆ. ಒಂದೊಂದು ಜನಪದ ಶಿಲ್ಪಗಳು ಕಲೆಯ ನೂರಾರು ವಿಷಯ ಸಾಮಾಗ್ರಿಯಿಂದ ಕೂಡಿ, ಅಧ್ಯಯನಕ್ಕೆ ಆಹ್ವಾನ ನೀಡಿವೆ. ಸ್ಪಷ್ಟ ಸ್ವರೂಪದೊಂದಿಗೆ ವೈಜ್ಞಾನಿಕ ವಿಶ್ಲೇಷಣೆಯೊಂದಿಗೆ ಜನಪದ ಶಿಲ್ಪಕಲೆಯ ಅಧ್ಯಯನ ಇಂದಿನ ತುರ್ತು ಅಗತ್ಯವಾಗಿದೆ. ಜನಪದರ ನೂರಾರು ಶಿಲ್ಪಗಳಲ್ಲಿ ಪ್ರಧಾನವಾದ, ಆದರೆ ಸಮಗ್ರವಾಗಿ ಅಧ್ಯಯನ ಮಾಡಲಾರದ "ಗಾಜರಕೋಟ್ ಶಿಲ್ಪಗಳ" ತಲಸ್ಪರ್ಶಿಯಾದ ಅಧ್ಯಯನವನ್ನು ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಗಾಜರಕೋಟ್ ಶಿಲ್ಪಿಗಳ ಬದುಕಿನಲ್ಲಿ ಯಾವುದಕ್ಕೂ ಕೊರತೆಯಿಲ್ಲ, ಕೊರತೆಯುಂಟಾದರೆ ಅವರಿಗೆ ಶುಭ ಸೂಚಕವಲ್ಲ. ಶುಭದ ಸೂಚಕವಾಗಿ, ಸಂಕೇತವಾಗಿ ಬಳಸಲ್ಪಡುವ ಆಕೃತಿ ಹಾಗೂ ನಯಗಾರಿಕೆ ಸ್ವಲ್ಪ ಅಸ್ತವ್ಯಸ್ತಗೊಂಡರೆ ದೊಡ್ಡ ಅನಾಹುತವೇ ಸಂಭವಿಸುತ್ತದೆ. ಅವರದು ಬರೀ ಶಿಲ್ಪ ರಚನೆ ಮಾತ್ರವಲ್ಲ; ಅದರ ಆಚರಣೆಗಳೊಂದಿಗೆ ಬದುಕುತ್ತಾರೆ ಕೂಡ. ಗಾಜರಕೋಟ್ ಶಿಲ್ಪಿಗಳು ಬದುಕನ್ನು ಹೇಗೆ ರೂಢಿಸಿಕೊಂಡಿದ್ದಾರೆ. ಅವರ ಕ್ರಿಯೆಗಳು ಹೇಗೆ ಹುಟ್ಟಿಗೊಂಡಿರುತ್ತವೆ. ಅನೂಚವಾಗಿ ಆಚರಿಸಿಕೊಂಡು ಬಂದಿರುವ ಅವರ ಕಲೆಗಾರಿಕೆ ಹೇಗೆ ಬದುಕೇ ಆಗಿದೆಯೆಂಬುದನ್ನು ಗಾಜರಕೋಟ್ ಶಿಲ್ಪಕಲೆಯಲ್ಲಿ ಅರಿಯಬಹುದಾಗಿದೆ. ಈ ದೃಷ್ಟಿಯಿಂದ ಜನಪದವಾಗಿ ರೂಢಿಗತವಾಗಿರುವ ಗಾಜರಕೋಟ್ ಶಿಲ್ಪಗಳು ಅಲ್ಲಿನ ಶಿಲ್ಪಿಗಳ ಬದುಕೇ ಆಗಿದೆ.

ಅಧ್ಯಯನದ ದೃಷ್ಟಿಯಿಂದ ಅದು ಜನಾಂಗಿಕ ಅಧ್ಯಯನವೂ ಆಗಿದೆ. ವಿವಿಧ ಪ್ರದೇಶಗಳಲ್ಲಿ ವಿವಿಧ ಆಚರಣೆಗಳಲ್ಲಿ ಇರುವ ಸಂಪ್ರದಾಯಗಳು, ಸಂಪ್ರದಾಯಗಳು ಹುಟ್ಟು ಹಾಕಿರುವ ಶಿಲ್ಪಗಳು ನೀಡುವ ಬದುಕಿನ ಹಿನ್ನಲೆಯನ್ನು ಅರಿತುಕೊಳ್ಳುವುದು ಇಲ್ಲಿ ಮಹತ್ವದ್ದಾಗಿರುತ್ತದೆ. ಒಂದೊಂದು ಗಾಜರಕೋಟ್ ಶಿಲ್ಪವು ಒಂದೊಂದು ಸಂಪ್ರದಾಯವಾಗಿ, ಬದುಕಿನುದ್ದದ ಇತಿಹಾಸವನ್ನು ತಿಳಿಸಿಕೊಡುವುದರಿಂದ ಇದು ಜನಪದ ಶಿಲ್ಪಕಲೆಯ ಇತಿಹಾಸವೂ ಹೌದು.

ಪಾರಂಪರಿಕವಾಗಿ ಸಾಮಾನ್ಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿರುವ ಗಾಜರಕೋಟ್ ಶಿಲ್ಪಕಲೆಯ ಎಲ್ಲಾ ಅಂಶಗಳ ಕಡೆಗೆ ಗಮನ ಸೆಳೆಯುವುದೇ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಈ ಎಲ್ಲಾ ಕಾರಣಗಳಿಂದ ಇಂಥ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ.

ಅಧ್ಯಯನದ ಸ್ವರೂಪ:

ಪ್ರಸ್ತುತ ಈ ಫೆಲೋಷಿಪ್ ಪ್ರಬಂಧದ ಅಧ್ಯಯನವು ಒಟ್ಟು ಆರು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಶಿಲ್ಪಕಲಾವಿದರ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದುಕೊಂಡು ಬಂದಿರುವ ಗಾಜರಕೋಟ್ ಶಿಲ್ಪಕಲೆಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರಗಳಾಗಿವೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಬದುಕಿಸಿಕೊಂಡು ಬಂದ ಹಿರಿಮೆ ಇವುಗಳಿಗಿದೆ.

“ಮಾನವನ ಮೂಲ ಸಂವೇದನೆಗಳಿಗೆ ಬಹಳ ಹತ್ತಿರವಾದ ಕಲೆಗಳಲ್ಲಿ ಶಿಲ್ಪಕಲೆಗಳಿಗೆ ಅತ್ಯಂತ ಪ್ರಧಾನವಾದ ಸ್ಥಾನವಿದೆ. ಒಬ್ಬ ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ಅಭೂತಪೂರ್ವವಾಗಿದೆ. ಈ ಶಿಲ್ಪಕಲೆಗಳು ವ್ಯಕ್ತಿ ತನ್ನ ಅನುಭವ, ಆಚಾರಗಳಿಗೆ ಜೀವ ಕೊಟ್ಟದ್ದು, ಜೀವಂತಿಕೆಯನ್ನು ತುಂಬಿದ್ದು, ಇಂತಹ ಕಲೆಗಳ ಮೂಲಕ ಜನಪದರ ಅನುಭವ ಕಲಾಪರಂಪರೆ, ಹೃದಯ ಶ್ರೀಮಂತಿಕೆ, ಸಂಸ್ಕಾರವಂತಿಕೆಗಳು ಈ ಗಾಜರಕೋಟ್ ಶಿಲ್ಪಕಲೆಯಲ್ಲಿ ಅರಳಿ ನಿಂತಿರುವುದನ್ನು ಕಾಣುತ್ತೇವೆ.

ಕೆಲವು ಜನಪದ ಶಿಲ್ಪಗಳು ಸಾಮಾನ್ಯವಾಗಿ ಆಯಾ ಪ್ರದೇಶಕ್ಕೆ ಸೀಮಿತ ಹಾಗೂ ವಿಶಿಷ್ಟವೆನಿಸುವಂತೆ ಕಂಡುಬರುತ್ತವೆ. ಅವು ಆಯಾ ಪ್ರದೇಶದ ಜನಾಂಗಿಕ ಧಾರ್ಮಿಕ ಹಿನ್ನೆಲೆಯನ್ನು, ಭೌಗೋಳಿಕ ಪರಿಸರವನ್ನು

ಅವಲಂಬಿಸಿ ರೂಪು ಪಡೆದಂತೆ ತೋರುತ್ತದೆ. ಹೀಗೆ ಗಾಜರಕೋಟ್ ಶಿಲ್ಪಕಲೆಯ ಅಧ್ಯಯನದ ವಿಧಾನ, ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶಗಳನ್ನು ಸಾಂಸ್ಕೃತಿಕ ಪರಿಚಯದೊಂದಿಗೆ ಈ ಮೊದಲನೆಯ ಅಧ್ಯಾಯ ಒಳಗೊಂಡಿದೆ.

ಜನಪದ ಶಿಲ್ಪಕಲೆಗಳ 'ಉಗಮ ಮತ್ತು ವಿಕಾಸಗಳನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಕಲೆಯ ರೂಪನಿಷ್ಪತ್ತಿ, ಕಲೆಯನ್ನು ಅರ್ಥೈಸುವಿಕೆ. ಪಾಚೀನ ಕಾಲದಲ್ಲಿ ಕಲೆ ಮತ್ತು ವಿದ್ಯೆಗಳು ಸಮಾನಾರ್ಥದಲ್ಲಿ ಬಳಕೆಗೊಂಡ ಬಗೆ, ಅರವತ್ನಾಲ್ಕು ಕಲೆಗಳು, ಅವುಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ಲಲಿತಕಲೆ ಮತ್ತು ಕುಶಲ ಕಲೆಗಳ ಅರ್ಥ ಸ್ವರೂಪ, ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆ – ಅದು ಸರ್ವ ಕಲೆಗಳಿಗೆ ಆಧಾರಭೂತವಾದ ಮತ್ತು ಶ್ರೇಷ್ಠವಾದ ಕಲೆ ಎಂಬುದರ ಕುರಿತಾಗಿರುವ ಪ್ರಾಚೀನ ಉಲ್ಲೇಖಗಳ ವಿವೇಚನೆಯನ್ನು'(ಡಾ.ಎಸ್.ಸಿ. ಪಾಟೀಲ, ಪುಟ–6, ಕರ್ನಾಟಕದ ಜನಪದ ಚಿತ್ರಕಲೆ) ಇಲ್ಲಿ ಮಾಡಲಾಗಿದೆ.

ಶಿಷ್ಟಪದ ಶಿಲ್ಪಕಲೆ ಮತ್ತು ಜನಪದ ಶಿಲ್ಪಕಲೆಯ ಸ್ವರೂಪ, ಲಕ್ಷಣ, ಇವುಗಳ ಪರಿಸ್ಪರ ಸಂಬಂಧ ವಿವರಣೆಯೊಂದಿಗೆ ಗಾಜರಕೋಟ್ ಶಿಲ್ಪಕಲೆಯ ಮುಂದುವರೆದ ರೂಪವಾಗಿ ಶಿಷ್ಟಪದ ಶಿಲ್ಪಕಲೆಯ ಬೆಳವಣಿಗೆ ಹಾಗೂ ಶಿಷ್ಟ ಶಿಲ್ಪಕಲೆಯ ಸುಧಾರಿತ, ನೂತನ ಶೈಲಿಗಳಿಗೆ ಹೇಗೆ ಸಂಪ್ರದಾಯಿಕ ಶೈಲಿ ಶಿಲ್ಪ ಮೂಲವೋ ಹಾಗೆಯೇ ಜನಪದ ಶಿಲ್ಪಕಲೆಗೆ ಗಾಜರಕೋಟ್ ಶಿಲ್ಪ ಶೈಲಿಯೂ ಮೂಲವೆಂಬುದನ್ನು ಇಲ್ಲಿ ವಿವರಿಸಲಾಗಿದೆ.

ಈ ಎರಡನೆಯ ಅಧ್ಯಾಯದಲ್ಲಿ ಗಾಜರಕೋಟ್ ಲೋಹ ಮಾಧ್ಯಮದ ಶಿಲ್ಪಗಳ ವರ್ಗೀಕರಣದ ಅವಶ್ಯಕತೆಯನ್ನು ಹೇಳುತ್ತ, ಪ್ರಸ್ತುತ ಅಧ್ಯಯನದಲ್ಲಿ ಮಾಡಿಕೊಂಡ ವರ್ಗೀಕರಣವನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಗಾಜರಕೋಟ್ ಶಿಲ್ಪಗಳ ನಿರ್ಮಾಣದ ಶೈಲಿ ಮತ್ತು ಅವುಗಳ ಎರಕದ ವಿಧಾನ, ಹಂತ ಹಂತದ ವಿವರಣೆಗಳೊಂದಿಗೆ ಮಾಧ್ಯಮದ ವೈಶಿಷ್ಟ್ಯ ಹಾಗೂ ಸಂಪ್ರದಾಯಿಕ ಎರಕ ಮತ್ತು ಇತರೆ ಎರಕದ ಶೈಲಿಗಳ ಬಗ್ಗೆ ಮೂರ್ತಿ ನಿರ್ಮಾಣದ ವೈವಿಧ್ಯತೆಗಳ ಚರ್ಚಿಸಲಾಗಿದೆ.

ಈ ಅಧ್ಯಾಯವು ಗಾಜರಕೋಟ್ ಲೋಹ ಶೈಲಿ ಶಿಲ್ಪಗಳ ಒಟ್ಟಾರೆ ಅಧ್ಯಯನದಲ್ಲಿ ಪ್ರಮುಖ ಅಧ್ಯಾಯವಾಗಿದ್ದು, ಗಾಜರಕೋಟ್ ಕೇಂದ್ರಿತವಾದ ಶಿಲ್ಪಕಲಾವಿದರ ಪ್ರಾಮುಖ್ಯತೆಗೆ ಒತ್ತನ್ನು ಇಲ್ಲಿ ನೀಡಲಾಗಿದೆ.

ನಾಲ್ಕನೆಯ ಅಧ್ಯಾಯವು ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳನ್ನು ಕುರಿತಾದುದಾಗಿದ್ದು, ಧಾರ್ಮಿಕ ಹಿನ್ನೆಲೆಯ ದೈವೀ ಪರಿಕಲ್ಪನೆಯಲ್ಲಿ ಮತ್ತು ಆರಾಧನಾ ಸಂದರ್ಭಗಳಲ್ಲಿ ಜನಪದ ಗಾಜರಕೋಟ್ ಲೋಹ ಶಿಲ್ಪಕಲೆ ಬೆಳೆದು ಬಂದಂತಹುದರ ಬಗೆಗೆ ವಿವೇಚನೆ ಇಲ್ಲಿದೆ. ಜನಪದರು ದೇವರ ಬಗೆಗೆ ಮಾಡಿದ ಆಚರಣೆಗಳು, ಆರಾಧನೆಗಳು, ಸಂಪ್ರದಾಯಗಳು ಲೋಹ ಶಿಲ್ಪಗಳಿಗೆ ಪ್ರೇರಕವಾಗಿವೆ. ಒಂದು ರೀತಿಯಲ್ಲಿ ಶರಣ ಸಂಸ್ಕಾರಕ್ಕೆ ಮೂಲ ಸ್ವರೂಪಗಳನ್ನು ಈ ಲೋಹ ಶಿಲ್ಪಗಳು ಕೊಡುಗೆಯಾಗಿ ನೀಡಿರುವುದಕ್ಕೆ ಸಾಕ್ಷಿಗಳು ಇಲ್ಲಿವೆ. ದೇವರ ವಿಗ್ರಹಗಳು, ಮೂರ್ತಿಗಳು, ಪ್ರಭಾವಳಿಗಳು, ದೇವಾಲಯ, ಮಠ-ಮಾನ್ಯಗಳು, ಅರಮನೆ, ಗುರುಮನೆಗಳಲ್ಲಿ ಬಳಕೆಯಾದಂತಹ ಪೂಜಾ ಸಾಮಗ್ರಿಗಳು, ನಂದಿಕೋಲುಗಳು, ನಂದಿಕುಣಿತ ಪರಿಕರಗಳು, ಅಲಂಕಾರಿಕ ಆಭರಣಗಳು, ಶಿವಶರಣರ ವಿಗ್ರಹಗಳು, ಗಾಜರಕೋಟ್ ಶೈಲಿಯಲ್ಲಿ ಧರ್ಮ ಮೂಲವಾಗಿ ರಚನೆಗೊಂಡಿರುವಂತಹುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಂತೆಯೇ ಕಲ್ಯಾಣ ಕ್ರಾಂತಿಯ ನಂತರ ಅನೇಕ ಸ್ಥಳಗಳು ಅದರ ಪ್ರಭಾವಕ್ಕೆ ಒಳಗಾಗಿದ್ದವು. ಅಂತಹುಗಳ ಪೈಕಿ ಕರ್ನಾಟಕ ಆಂಧ್ರಪ್ರದೇಶದ ಗಡಿ ಭಾಗವಾಗಿದ್ದ ಈ ಗಾಜರಕೋಟ್

ಕೂಟ ಒಂದಾಗಿದ್ದು "ಮರಿ ಕಲ್ಯಾಣ" ವೆಂತಲೂ ಕರೆಸಿಕೊಂಡಿದೆ. ಇದರ ಪ್ರಭಾವದಿಂದ ಮೂಡಿಬಂದಂತಹ ಶಿಲ್ಪಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವು ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಶಿಲ್ಪಗಳು ಮೂಲಕ ಜನಪದರ ಸೌಂದರ್ಯಮೂಲ ಅಭಿವ್ಯಕ್ತಿಯ ಸಾಧನವಾಗಿ ಜಾನಪದ ಶಿಲ್ಪ ಶೈಲಿಯಾದ ಈ ಗಾಜರಕೋಟ್ ಲೋಹ ಶಿಲ್ಪಕಲೆ ಬಂದುದನ್ನು ವಿವರಿಸುತ್ತಾ, ಇದರಲ್ಲಿ ಪ್ರಯೋಜನಮೂಲ ಮತ್ತು ಮನರಂಜನಮೂಲ ಶಿಲ್ಪಗಳೆಂಬ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಪ್ರಯೋಜನಮೂಲ ಲೋಹ ಶಿಲ್ಪಗಳು ಗೋಡೆಯ ಮೇಲೆ ತೂಗು ಹಾಕುವ ಶಿಲ್ಪಗಳು, ಗೃಹಾಲಂಕರಣದ ಶಿಲ್ಪವಿನ್ಯಾಸಗಳು, ಗೊಂಬೆಗಳು, ಅಡಿಕೆ ಕತ್ತರಿಗಳು, ಕಪಾಟುಗಳ ವಿನ್ಯಾಸಗಳು ಇತ್ಯಾದಿಗಳನ್ನು ಇಲ್ಲಿ ಐದನೆ ಅಧ್ಯಾಯಕ್ಕೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ವೃತ್ತಿಯಾಗಿ ಬೆಳೆದುಬಂದಂತಹ ಈ ಗಾಜರಕೋಟ್ ಲೋಹ ಶಿಲ್ಪಕಲೆಯನ್ನು ವೃತ್ತಿಮೂಲ ಜನಪದ ಶಿಲ್ಪಕಲೆಯ ಪ್ರಕಾರದಲ್ಲಿ ಮತ್ತು ಇವುಗಳಿಂದ ಪ್ರೇರಣೆಗೊಂಡು ಸುಧಾರಿತ ಲೋಹ ಶಿಲ್ಪ ಶೈಲಿಗಳ ಉಗಮಕ್ಕೆ ಗಾಜರಕೋಟ್ ಶೈಲಿಯ ಕೊಡುಗೆ ಹಾಗೂ ಸಮಕಾಲೀನ ಶಿಲ್ಪಕಲಾವಿದರು ಬೆಳೆಸುತ್ತಿರುವ ಪರಿಯನ್ನು, ಇಂದಿನ ಯುವ ಪೀಳಿಗೆಯವರು ಇದರ ಪ್ರಭಾವಕ್ಕೆ ಒಳಗಾಗಿರುವ ಬಗೆಯನ್ನು ವೃತ್ತಿನಿರತರ ಸಾಧಕ ಭಾಧಕಗಳನ್ನು, ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದ್ದು, ಸಂಕ್ಷಿಪ್ತ ಸಮಾಲೋಚನೆ ಹಾಗೂ ಪ್ರಸ್ತು ಅಧ್ಯಯನದಿಂದ ಹೊರಬಂದ ಪ್ರಮುಖ ಸಂಗತಿಗಳ ಸಮೀಕ್ಷೆಯೂ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಪ್ರಸ್ತುತ ಪ್ರಬಂಧದ ಅಧ್ಯಯನಕ್ಕಾಗಿ, ಕರ್ನಾಟಕದ ಯಾದಗಿರಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಗಾಜರಕೋಟ್ ಗ್ರಾಮದಲ್ಲಿ, ಹಲವಾರು ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಲಾಗಿದೆ. ಅಲ್ಲದೆ ಸೀಮಿತ

ವ್ಯಾಪ್ತಿಯನ್ನು ಮೀರಿ ಕರ್ನಾಟಕದ ವಿವಿಧ ಪ್ರದೇಶಗಳಲ್ಲಿರುವ ಸಂಗ್ರಹಗಳನ್ನು ಪೂರಕವಾಗಿ, ತೌಲನಿಕವಾಗಿಯೂ ಇಲ್ಲಿ ಬಳಸಿಕೊಳ್ಳಲಾಗಿದೆ. ಯಾದಗಿರಿ, ಗುಲ್ಬರ್ಗಾ, ರಾಯಚೂರು, ದಾವಣಗೆರೆ, ಬಳ್ಳಾರಿ, ಬೀದರ್, ಬಿಜಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳಲ್ಲಿ ಗಾಜರಕೋಟ್ ಲೋಹ ಶಿಲ್ಪಗಳ ಸಂಗ್ರಹ ಮತ್ತು ಸಂಪ್ರದಾಯಿಕ ಲೋಹ ಎರಕದ ಇತರೆ ಶೈಲಿ ಶಿಲ್ಪಗಳ ತಯಾರಿಕೆಯ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಅಧ್ಯಯನದ ವಿಧಾನ:

ಈ ಪ್ರಬಂಧದ ರಚನೆಗೆ ಎರಡು ರೀತಿಯ ಆಕರಗಳನ್ನು ಬಳಸಿಕೊಳ್ಳಲಾಗಿದೆ.

1. ಮೂಲ ಆಕರ ಸಾಮಾಗ್ರಿ ()
2. ಆನುಷಂಗಿಕ ಆಕರ ಸಾಮಾಗ್ರಿ ()

ಈ ಎರಡೂ ಮೂಲದಿಂದ ಇಲ್ಲಿ ವಿಷಯ ಸಂಗ್ರಹ ಮಾಡಲಾಗಿದೆ. ಕ್ಷೇತ್ರ ಕಾರ್ಯದ ಮೂಲಕ ಹೆಚ್ಚು ಒತ್ತನ್ನು ನೀಡಿ ಸಂಶೋಧನೆ ಕೈಗೊಳ್ಳಲಾಗಿದೆ.

1. ಮೂಲ ಆಕರ ಸಾಮಾಗ್ರಿ:

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದುದು ಕ್ಷೇತ್ರಕಾರ್ಯ() ಈ ಕ್ಷೇತ್ರಕಾರ್ಯ

ಅ) ಸಂದರ್ಶನ

ಆ) ಸಂಭಾಷಣೆ

ಇ) ಧ್ವನಿ ಮುದ್ರಣ

ಈ) ಛಾಯಾ ಚಿತ್ರಣ

ಉ) ಶಿಲ್ಪಗಳ ಪ್ರತಿ ಮಾಡುವಿಕೆ

ಊ) ಸಂಗ್ರಹಿತ ವಿಷಯದ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ ಹೀಗೆ ವಿವಿಧ ಸ್ವರೂಪದಲ್ಲಿರುತ್ತದೆ.

ಅ) ಸಂದರ್ಶನ: ಗಾಜರಕೋಟ್‌ನ ಹತ್ತಿರದ ಗ್ರಾಮಗಳು ಮತ್ತು ಯಾದಗಿರಿ ಜಿಲ್ಲೆಯ ಅಧ್ಯಯನದ ಕ್ಷೇತ್ರಗಳನ್ನು ಜೊತೆಗೆ ಜಿಲ್ಲಾವಾರು ಸಂಗ್ರಹಗಳಲ್ಲಿರುವ ಗಾಜರಕೋಟ್ ಲೋಹ ಶಿಲ್ಪಗಳ ಬಗ್ಗೆ ಮಾಹಿತಿ ಲಭ್ಯತೆ ಇರುವ ಸ್ಥಳಗಳಿಗೆ ಭೇಟಿ ನೀಡಲಾಯಿತು. ಶಿಲ್ಪ ಕಲಾವಿದರು, ಅವುಗಳನ್ನು ಕೊಂಡು ಸಂಗ್ರಹಿಸಿದವರು, ಆಚರಣೆಗಳಲ್ಲಿ ಬಳಸಿಕೊಳ್ಳುತ್ತಿರುವವರನ್ನು ಸಂದರ್ಶನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ವಿಶಿಷ್ಟ ವಿಧಿ-ವಿಧಾನಗಳನ್ನು ಮುಖತಃ ಅರಿಯುವ ಸಲುವಾಗಿ ಆಚರಣೆಗೆ ಸೀಮಿತಗೊಂಡ ದಿನಗಳಂದೇ ಸಂದರ್ಶಿಸಬೇಕಾಗುತ್ತಿತ್ತು. ಜನಪದರ ಆಚರಣೆಗಳು ಕೆಲವು ಸಂದರ್ಭಗಳಲ್ಲಿ ಮಾತ್ರ ಏರ್ಪಡುತ್ತಿದ್ದುದರಿಂದ ಅವುಗಳ ವೈವಿಧ್ಯತೆಗಳನ್ನು ಅರಿಯುವುದು ಬಹಳ ಮುಖ್ಯವೆನಿಸುತ್ತಿತ್ತು. ಈ ಆಚರಣೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿರುವುದರ ಬಗ್ಗೆ ಸಂದರ್ಶನದ ಮೂಲಕ ವ್ಯಕ್ತವಾಗುತ್ತದೆ. ಹೀಗಾಗಿ ಜನಪದವಾಗಿರುವ ಗಾಜರಕೋಟ್ ಲೋಹ ಶಿಲ್ಪಗಳ ಅಧ್ಯಯನಕ್ಕೆ ಸಂದರ್ಶನ ಅನಿವಾರ್ಯ ಮತ್ತು ಅವಶ್ಯಕವಾಗಿರುತ್ತದೆ.

ಆ) ಸಂಭಾಷಣೆ: ಜಾನಪದ ಪ್ರಕಾರವಾದ ಗಾಜರಕೋಟ್ ಲೋಹ ಶಿಲ್ಪಗಳ ಬಗ್ಗೆ ಮೌಖಿಕ ಮತ್ತು ಪ್ರಯೋಗಿಕವಾದದ್ದು, ಲೋಹ ಶಿಲ್ಪಗಳ ಹಿಂದಿರುವ ಜನಪದ ಶಿಲ್ಪಕಾರರ ಬದುಕು ಎಂತಹುದೆಂಬುದನ್ನು ಸಂದರ್ಶಿಸಿದ ಗ್ರಾಮೀಣರಿಂದ ತಿಳಿದುಕೊಳ್ಳಬೇಕಾಯಿತು. ಕಥೆ, ಐತಿಹ್ಯ, ಹಾಡುಗಳನ್ನು ಹೇಳುವ ಜನಪದರನ್ನು ಮಾತಿಗೆ ಎಳೆದು, ಅಧ್ಯಯನದ ವಿಷಯವನ್ನು ಅವರ ಮನಸ್ಸಿಗೆ ಮುಟ್ಟಿಸಿ, ಚರ್ಚೆಯ ಮೂಲಕ ವಿಷಯ ಸಂಗ್ರಹಿಸಿಕೊಳ್ಳಲಾಯಿತು.

ಇ) ಧ್ವನಿಮುದ್ರಣ: ಗಾಜರಕೋಟ್ ಲೋಹ ಶಿಲ್ಪಕಲೆಯನ್ನು ಸಂಪ್ರದಾಯಗಳಿಂದ ಹೊರತುಪಡಿಸುವುದು ಸುಲಭದ ಕೆಲಸವಲ್ಲ. ಗ್ರಾಮೀಣರ ಶಿಲ್ಪ ವಿನ್ಯಾಸ ಯಾವುದೇ ಸ್ವರೂಪದ್ದೇ ಆದರೂ, ಅದರ ಬಗ್ಗೆ ಅವರ ಕಲ್ಪನೆಗಳ ಬಗ್ಗೆ ನೇರ ಸಂದರ್ಶನವೇರ್ಪಟ್ಟಾಗ ಮಾತ್ರ ಅವುಗಳ ಮಾಹಿತಿ ಲಭ್ಯವಾಗುತ್ತದೆ. ಅವರು ನೀಡುವ ಮಾಹಿತಿಗಳು ನೆನಪಿನ ಶಕ್ತಿಯ ಆಧಾರದ ಮೇಲೆ ಅವಲಂಬಿತವಾಗಿರುತ್ತದೆ. ಹೇಳಿದ್ದನ್ನು ಮತ್ತೆ ನಿನಪಿಸಿಕೊಳ್ಳುವುದು ಕಷ್ಟಕರ, ಕೆಲವು ತಾಂತ್ರಿಕ ಶಬ್ಧಗಳು ಉಚ್ಚಾರಣೆಗೆ ಕ್ಲಿಷ್ಟಕರವಾಗಿರುತ್ತವೆ ಅಂತಹುಗಳನ್ನು ಕೂಡ ಧ್ವನಿಗಳ ನೇರ ಮುದಿಸಿಕೊಂಡು, ನಂತರ ಅವುಗಳನ್ನು ಬರಹಕ್ಕೆ ತಂದು, ಸಂಗ್ರಹಿಸಿಕೊಳ್ಳಲಾಗಿದೆ.

ಈ) ಛಾಯಾಚಿತ್ರಣ: ಕಥೆ, ಧ್ವನಿ, ನಿರೂಪಣೆಗಳನ್ನು ಧ್ವನಿ ಮುದ್ರಿಸಿಕೊಂಡಂತೆ ಅವಶ್ಯಕವೆನಿಸಿದ ಚಿತ್ರಗಳನ್ನು ಛಾಯಚಿತ್ರಣದಲ್ಲಿ ಲೋಹ ಶಿಲ್ಪಗಳನ್ನು ಸೆರೆಹಿಡಿಯಬೇಕಾದದು ಬಹಳ ಮುಖ್ಯವೆನಿಸಿತು. ದೃಶ್ಯ ಪ್ರಕಾರಗಳನ್ನು ಛಾಯ ಚಿತ್ರಗಳ ಮೂಲಕ ವಿವರಿಸಲು, ಪರಿಚಯಿಸಲು ಉತ್ತಮವಾದ ಮಾರ್ಗವೆನಿಸುತ್ತದೆ. ಅದರಂತೆ ಹಲವಾರು ಶಿಲ್ಪಗಳನ್ನು ನೇರವಾಗಿ ವೀಕ್ಷಿಸಿ, ಕೆಲವನ್ನು ಸಂಗ್ರಹಕಾರರಲ್ಲಿದ್ದಂತಹುಗಳನ್ನು ಪುನರ್‌ಛಾಯಚಿತ್ರದ ಮೂಲಕ ಸೆರೆಹಿಡಿದು ಸಂಗ್ರಹಿಸಿಕೊಳ್ಳಾಯಿತು. ಮನೆ, ಮಠ, ದೇವಾಲಯ, ಸಂಗ್ರಹಾಲಯಗಳಲ್ಲಿ ಸಂಗ್ರಹಿಸಿದ್ದ ಹಲವಾರು ಲೋಹಶಿಲ್ಪಗಳನ್ನು ನೇರವಾಗಿ ಮತ್ತು ಮುದ್ರಿತ ಪುಸ್ತಕಗಳಲ್ಲಿ ಲಭ್ಯವಾದ ಛಾಯಚಿತ್ರಗಳನ್ನು ಚಿತ್ರಿಸಿಕೊಳ್ಳಲಾಗಿದೆ.

ಉ) ಶಿಲ್ಪಗಳ ಪ್ರತಿ ಮಾಡುವಿಕೆ: ಲೋಹ ಶಿಲ್ಪಗಳ ಅಧ್ಯಯನದ ಸಂದರ್ಭದಲ್ಲಿ ಸಂಚರಿಸುವ ಕಡೆಗಳಲ್ಲಿ ಛಾಯಚಿತ್ರಗಳನ್ನು ತೆಗೆಯಲು ಸಾಧ್ಯವಿಲ್ಲದಿದ್ದಾಗ, ಕ್ಯಾಮಾರದಲ್ಲಿ ಬ್ಯಾಟರಿ ಛಾರ್ಜ್ ಮುಗಿದಾಗ ಅಂತಹ ಸಂದರ್ಭದಲ್ಲಿ ಅಥವಾ ಮತ್ಯಾವುದೋ ತಾಂತ್ರಿಕ ಬೆಳಕಿನ ದೋಷವಿದ್ದಾಗ ಲೋಹ ಶಿಲ್ಪಗಳನ್ನು ಚಿತ್ರ ಬಿಡಿಸುವುದರ ಮೂಲಕ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಊ) ಸಂಗ್ರಹಿತ ವಿಷಯ ಪಟ್ಟಿಕೆಗಳನ್ನು ಸಿದ್ಧಪಡಿಸುವಿಕೆ: ಕ್ಷೇತ್ರಕಾರ್ಯದ ಅನುಭವವೇದ್ಯ, ಶಿಲ್ಪವಿನ್ಯಾಸ ವೇದ್ಯ ವಿವರಗಳನ್ನು ಅಭ್ಯಾಸಕ್ಕೆ – ಬರವಣಿಗೆಗೆ ಅನುಕೂಲವಾಗುವಂತೆ ಪಟ್ಟಿಕೆಗಳನ್ನು ಟಿಪ್ಪಣಿ ಮಾಡಿಕೊಂಡು, ಪ್ರಬಂಧಕ್ಕೆ ಅವಶ್ಯವಾದ ವಿಷಯಗಳನ್ನು ಸಂಗ್ರಹ ಮಾಡಿಕೊಳ್ಳಲಾಗಿದೆ.

2. ಆನುಷಂಗಿಕ ಆಕರ ಸಾಮಾಗ್ರಿ: ಪ್ರಕಟಿತ–ಅಪ್ರಕಟಿತ ಸಾಹಿತ್ಯ ಕೃತಿಗಳು, ಶಾಸನ ಸಂಪುಟಗಳು, ಪಿಹೆಚ್.ಡಿ. ಮಹಾಪ್ರಬಂಧಗಳು, ಪ್ರವಾಸಿಬರಹಗಳು, ಹಸ್ತಪ್ರತಿಗಳು (ಉದ್ಧರಣೆಯ ಪಟಲಗಳು), ನಿಘಂಟು ವಿಶ್ವಕೋಶ, ಗ್ಯಾಝೆಟಿಯರ್‌ಗಳು, ದೇಶಿಭಾಷೆಗೆ ಅನುವಾದಿಸಿದ ಅನುವಾದ ಗ್ರಂಥಗಳು ಇವೆಲ್ಲ ಲೋಹ ಶಿಲ್ಪಗಳ ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಯಾಗಿವೆ.

ಫೆಲೋಷಿಪ್‌ನ ಪ್ರಸ್ತುತ ಅಧ್ಯಯನದ ವಿಷಯಸಂಗ್ರಹಕ್ಕೆ ಕ್ಷೇತ್ರಕಾರ್ಯದ ಸಮಗ್ರ ಮಾಹಿತಿಗಳನ್ನು ಪಟ್ಟಿಕೆಗಳಲ್ಲಿ ಸಂಗ್ರಹಿಸಕೊಂಡಂತೆ ಆನುಷಂಗಿಕ ವಿವರಗಳನ್ನು ಒಂದೊಂದು ವಿಷಯಕ್ಕೊಂದರಂತೆ, ಹಾಗೆಯೇ ಜಿಲ್ಲಾವಾರು ಮಾಹಿತಿ ದೊರೆಯುವಂತೆ, ಬೇರೆ ಬೇರೆ ಉಪಪಟ್ಟಿಕೆಗಳಲ್ಲಿ ಟಿಪ್ಪಣಿಸಿಕೊಂಡು ಈ ಮಹಾಪ್ರಬಂಧವನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

ಅಧ್ಯಾಯ –2:

ಗಾಜರಕೋಟ್ ಲೋಹ ಮಾಧ್ಯಮದ ಶಿಲ್ಪಗಳ ವರ್ಗೀಕರಣ

ಪ್ರಾಚೀನ ಶಿಲಾಯುಗದ ಮಾನವನ ಚಿತ್ರಕಲೆ ಮತ್ತು ಶಿಲ್ಪ ಕಲೆಯೊಡನೆ ಹೋಲಿಸಲು ಕುಂಬಾರಿಕೆಯನ್ನು ಬಿಟ್ಟರೆ ನವ ಶಿಲಾಯುಗವು ಬೇರಾವ ಕಲೆಯನ್ನು ನಮಗೆ ಉಳಿಸಿಲ್ಲ. ಇಂಗ್ಲೆಂಡಿನಿಂದ ಚೀನಾದೇಶದವರೆಗೆ ಅಲ್ಲಲ್ಲಿ ನವ ಶಿಲಾಯುಗದ ಕಾರ್ಯರಂಗಗಳಲ್ಲಿ ತಾಲ್ಮೆನ್ (ಹಾಸು ಬಂಡೆಯ ಗೋರಿ)ಎಂದು ಕರೆಯಲಾಗುವ ವೃತ್ತಾಕಾರದ ಕಲ್ಲು ರಾಶಿಗಳು ಮೆನ್ ಹಿರ್ ಎಂದು ಕರೆಯಲಾಗುವ ಅಖಂಡ ನಿಡಿಗಲ್ಲುಗಳು ಮತ್ತು ಕ್ರಾಮ್ಲೆಕ್ ಎಂದು ಕರೆಯಲಾಗುವ ಮೋರ್ ಬಿಹನ್‌ನಲ್ಲಿರುವಂತೆ, ನಮ್ಮ ಕಣ್ಣಿಗೆ ಬೀಳುತ್ತವೆ. ಪ್ರಾಯಶಃ ಈ ಮಹಾಶಿಲೆಗಳು ಅರ್ಥ ಅಥವಾ ಕಾರ್ಯಭಾರವನ್ನು ನಾವು ಎಂದೂ ತಿಳಿಯಲಾರೆವೇನೋ, ಅವು ಪೂಜಾವೇದಿಕೆಗಳ ಮತ್ತು ದೇವಸ್ಥಾನಗಳ ಅವಶೇಷಗಳಿರಬೇಕೆಂದು, ಮಣ್ಣಿನ ಪತನ ಮತ್ತು ಪುರುತ್ಥಾನ, ಚಂದ್ರನು ಭೂಮಿಯ ಮೇಲೆ ಬೀರುವ ವಿಚಿತ್ರ ಪ್ರಭಾವಗಳು ಮೊದಲಾದವುಗಳನ್ನು ನಾಟಕೀಕರಣ ಗೊಳಿಸುವಂತಹ ಪುರಾಣ ಕಥೆಗಳು ಇದ್ದವೆಂಬುದರಲ್ಲಿ ಅನುಮಾನವಿಲ್ಲ. ಇಂತಹ ಇತಿಹಾಸ ಪೂರ್ವಕಾಲದ ಮೂಲಗಳನ್ನು ಕಂಡು ತರ್ಕಿಸದಿದ್ದರೆ ನಾವು ಐತಿಹಾಸಿಕ ನಂಬಿಕೆಗಳನ್ನು, ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. (ಪುಟ,100 ನಮ್ಮ ಪ್ರಾಚ್ಯ ಪರಂಪರೆ- ವಿಲ್ ಡ್ಯೂರಾಂಟ್, ಅನುವಾದ ಡಾ.ಪ್ರದಾನ್ ಗುರುದತ್, ಸಂ.ಪ್ರೊ. ಎಲ್. ಎಸ್. ಶೇಷಗಿರಿರಾವ್, ಪ್ರಕಟಣೆ. ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ-2007, ಬೆಂಗಳೂರು.)

ಲೋಹಗಳ ಯುಗ ಪ್ರಾರಂಭವಾದದ್ದು, ಅವುಗಳನ್ನು ಕಂಡು ಹಿಡಿದ ಕಾಲದಿಂದಲ್ಲ, ಬೆಂಕಿಯಲ್ಲಿ ಅವನ್ನು ಮಣಿಸಿ ಮಾನವನ ಬಳಕೆಗೆ ರೂಪಾಂತರಿಸಿದಾಗಿನಿಂದ. ಆದಿ ಮಾನವನ ಸಿಬಿರಾಗ್ನಿಯಲ್ಲಿ ಜ್ವಾಲೆಗಳು ಸೋಕಿದ ಬಂಡೆಯಲ್ಲಿ ಅವಿತಿದ್ದ ತಾಮ್ರ ಕರಗಿ ಸೋರಿದಾಗ, ಮೊಟ್ಟಮೊದಲ ಬಾರಿಗೆ ಅದಿರಿನಿಂದ ತಾಮ್ರವನ್ನು ಕರಗಿಸುವ ಕ್ರಿಯೆ ಅಕಸ್ಮಿಕವಾಗಿ ನಡೆದಿರಬಹುದು ಎಂದು ಲೋಹಶಾಸ್ತ್ರಜ್ಞರು ಭಾವಿಸುತ್ತಾರೆ. ಅಂತಹ ಘಟನೆ ನಮ್ಮ ಕಾಲದಲ್ಲೂ ಅನೇಕ ಬಾರಿ ಹಳೆಯ ತರಹದ ಶಿಬಿರಾಗ್ನಿಗಳಲ್ಲಿ ಕಾಣಿಸಿಕೊಂಡಿದೆ. ಕರಗಿಸಲಾಗದ, ಬೆಸೆಯಲಾಗದ ಅಗಡುವಸ್ತುವಾದ ಕಲ್ಲಿನಿಂದಲೇ ದೀರ್ಘಕಾಲದಿಂದ

ಆದಿಮಾನವ ಸಂತೃಪ್ತನಾಗಿದ್ದ. ಪ್ರಾಯಶಃ ಅನೇಕ ಬಾರಿ ಪುನರಾವರ್ತನೆಯಿಂದ ಇಂತಹ ಕುಟ್ಯ (Malleable) ಲೋಹದಲ್ಲಿ ಬಾಳಿಕೆ ಬರುವ ಅಯುಧಗಳು ಹಾಗೂ ಉಪಕರಣಗಳಾಗಿ ಸುಲಭವಾಗಿ (ಪುಟ, 101) ರೂಪಿಸಬಹುದಾದ ವಸ್ತುವನ್ನು ಹುಡುಕುವತ್ತ ಅವನನ್ನು ನಡೆಸಿರಬಹುದು. ಪ್ರಕೃತಿಯ ಧಾರಾಳ ಆದರೆ ನಿರ್ಲಕ್ಷ ಕೈನಿಂದ ನೀಡದ ರೂಪದಲ್ಲಿಯೇ ಈ ಲೋಹವನ್ನು ಮೊದಮೊದಲು ಬಳಸಿರಬೇಕೆಂದು ಭಾವಿಸಬಹುದು. ಕೆಲವು ಸಲ ಅದು ಬಹುತೇಕ ಪರಿಶುದ್ಧವಾಗಿರುತ್ತಿತ್ತು. ಬಹಳ ಸಲ ವಿಪರೀತವಾಗಿ ಮಿಶ್ರಲೋಹವಾಗಿರುತ್ತಿತ್ತು. (ಪುಟ–102).

ಕ್ರಿ. ಪೂ. 3500 ರಲ್ಲಿ ಮಾನವರು ಅದಿರನ್ನು ಕರಗಿಸಿ ಲೋಹಗಳನ್ನು ಹೊರತೆಗೆಯುವ ಕಲೆಯನ್ನು ಕಲಿತರು, ಎನ್ನುವುದರಲ್ಲಿ ಅನುಮಾನವಿಲ್ಲ. ಅನಂತರ ಕ್ರಿ. ಪೂ. 1500ರ ಸುಮಾರಿಗೆ (ಈಜಿಪ್ಟಿನಲ್ಲಿರುವ ರೇಖ್ ಮಾರಗೋರಿಯ ಉಬ್ಬುಶಿಲ್ಪಗಳಿಂದ ನಾವು ತಿರ್ಮಾನಿಸಬಹುದಾದರೆ)ಅವರು ಲೋಹವನ್ನು ಎರಕಹೊಯ್ಯಲು ಪ್ರಾರಂಭಿಸಿದರು. ಜೇಡಿಮಣ್ಣು ಅಥವಾ ಮರಳಿನಿಂದ ಮಾಡಿದ ಅಚ್ಚಿಗೆ ಕರಗಿಸಿದ ತಾಮ್ರವನ್ನು ಸುರಿಯುವುದು, ಅನಂತರ ಈಟಿಯ ಮೊನೆಯೋ ಕೊಡಲಿಯೋ ಆಗಿ ಅಪೇಕ್ಷಿತ ರೂಪವನ್ನು ತಾಳುವಂತೆ ಅದನ್ನು ಆರಲು ಇಡುವುದು. ಒಂದು ಸಲ ಈ ಪ್ರಕ್ರಿಯೆಯನ್ನು ಕಂಡು ಹಿಡಿದ ಮೇಲೆ ನಾನಾ ಬಗೆಯ ಲೋಹಗಳಿಗೆ ಇದನ್ನು ಅನ್ವಯಿಸಲಾಯಿತು. ಈ ಪ್ರಕ್ರಿಯೆಯು ಮಾನವನಿಗೆ ತನ್ನ ಮಹಾನ್ ಉದ್ಯಮಗಳನ್ನು ಕಟ್ಟುವಂತಹ ಹಾಗೂ ಭೂಮಿ, ಸಮುದ್ರ ಮತ್ತು ಗಾಳಿಯ ಮೇಲೆ ಅವನಿಗೆ ವಿಜಯವನ್ನು ಅನುಗ್ರಹಿಸುವಂತಹ ಆ ಬಲಿಷ್ಠ ಮೂಲ ವಸ್ತುವನ್ನು ಒದಗಿಸಿತು. (ಪುಟ, 102).

ತಾಮ್ರ ಸ್ವತಃ ಮೃದು (ಕೆಲವು ಉದ್ದೇಶಗಳಿಗೆ ಶಾರ್ಘ್ಯವಾದ ಮಣಿಯುವ ಗುಣವೂ ಅದಕ್ಕಿದೆ) ಅದನ್ನು ಗಡಸು ಮಾಡಲು ಒಂದು ಮಿಶ್ರಲೋಹ ಬೇಕಾಗಿತ್ತು. ಇದಕ್ಕೆ ಪ್ರಕೃತಿಯಲ್ಲೇ ಅನೇಕ ಸೂಚನೆಗಳಿದ್ದವು. ತವರ ಅಥವಾ ಸತುವಿನೊಡನೆ ತಾಮ್ರವನ್ನು ಬೆರೆಸಿ ಗಡಸುಮಾಡಿ ಆಗಲೇ ಅದು ಮಾನವನಿಗೆ ಒದಗಿಸಿತ್ತು.

ಇದರಿಂದ ಸ್ವಯಂ ಸಿದ್ಧವಾದ ಕಂಚು ಅಥವಾ ಹಿತ್ತಾಳೆ ಲಭ್ಯವಿತ್ತು. ಆದರೂ ಮಾನವನು ಮುಂದಿನ ಹೆಜ್ಜೆ ಇಡಲು ಅನೇಕ ಶತಮಾನಗಳ ಕಾಲ ಮೀನ ಮೇಷ ಎಣಿಸಿದ. ಅದೆಂದರೆ ಉದ್ದೇಶಪೂರ್ವಕವಾಗಿ ವಿಭಿನ್ನ ಲೋಹಗಳನ್ನು ಕರಗಿಸಿ ತನ್ನ ಅಗತ್ಯಗಳಿಗೆ ಹೆಚ್ಚಾಗಿ ಹೊಂದಿಕೊಳ್ಳುವಂತಹ ಮಿಶ್ರಲೋಹಗಳನ್ನು ತಯಾರಿಸುವುದು.

ಈ ಸಂಶೋಧನೆಯು ಕನಿಷ್ಟ ಪಕ್ಷ ಐದುಸಾವಿರ ವರ್ಷಗಳಷ್ಟು ಹಳೆಯದು. ಏಕೆಂದರೆ ಕಂಚು ನಮಗೆ ದೊರೆತಿರುವುದು ಕ್ರಿ. ಪೂ. 3000ದ ವಕ್ರೀಟನ್ ಅವಶೇಷಗಳಲ್ಲಿ ಕ್ರಿ. ಪೂ. 2800 ಈಜಿಪ್ಟಿನ ಅವಶೇಷಗಳಲ್ಲಿ ಮತ್ತು ಕ್ರಿ. ಪೂ. 2000ದ ದ್ವಿತೀಯ ಟ್ರಾಯ್‌ನಗರದಲ್ಲಿ ನಾವು ಇದೇ "ಕಂಚಿನಯುಗ" ಎಂದು ಕಟ್ಟುನಿಟ್ಟಾಗಿ ಹೇಳಲಾಗುವುದಿಲ್ಲ. ಏಕೆಂದರೆ ಈ ಮಿಶ್ರಲೋಹ ನಾನಾ ಜನರಿಗೆ ನಾನಾ ಯುಗಗಳಲ್ಲಿ ಲಭ್ಯವಾಯಿತು. ಆದ್ದರಿಂದ ಕಂಚಿನ ಯುಗ ಎಂಬ ಶಬ್ದವು ಕಾಲಾನುಕ್ರಮಣಿಕೆಯ ಅರ್ಥವನ್ನೆ ಕಳೆದುಕೊಳ್ಳುತ್ತದೆ. (ಪುಟ, 102),(ನಮ್ಮ ಪ್ರಾಚ್ಯ ಪರಂಪರೆ) (ಪುಟ, 498, 500, 501, 503)

ಕಂಚು ಗಟ್ಟಿ ಮತ್ತು ಬಾಳಿಕೆ ಬರುವಂಥದು. ಆದರೆ ಅದನ್ನು ತಯಾರಿಸಲು ಬೇಕಾದ ತಾಮ್ರ ಮತ್ತು ತವರ ಅನುಕೂಲವಾದ ಪ್ರಮಾಣದಲ್ಲಿ ಮತ್ತು ಅನುಕೂಲವಾದ ಪ್ರದೇಶಗಳಲ್ಲಿ ಲಭ್ಯವಿರಲಿಲ್ಲ. ಇದರಿಂದ ಉಧ್ಯಮ ಮತ್ತು ಯುದ್ಧಕ್ಕೆ ಬೇಕಾದ ಅತ್ಯುತ್ತಮ ವಸ್ತು ಮನುಷ್ಯನಿಗೆ ದೊರೆಯದಾಯಿತು. ಹಿಂಚೋ ಮುಂಚೋ ಕಬ್ಬಿಣ ಬರಲೇಬೇಕಾಗಿತ್ತು. ಕಬ್ಬಿಣವು ಸಮೃದ್ದವಾಗಿ ಕೊರಕುತ್ತಿದ್ದರೂ ಕನಿಷ್ಟ ಪಕ್ಷ ತಾಮ್ರ ಮತ್ತು ಕಂಚು ಕಾಣಿಸಿಕೊಂಡಷ್ಟು ಪೂರ್ವಕಾಲದಲ್ಲಿಯೇ ಬರಲಿಲ್ಲ ಎನ್ನುವುದು ಇತಿಹಾಸದ ಅಸಾಮಂಜಸ್ಯಗಳಲ್ಲಿ ಒಂದು. ದಿಬ್ಬ ಕಟ್ಟುವವರು ಮಾಡಿರಬಹುದೆಂದು ತೋರುವ ರೀತಿಯಲ್ಲಿ, ಮಾನವರು ಉಲ್ಕಾಪಾತದ ಕಬ್ಬಿಣದಿಂದ ಅಯುಧಗಳನ್ನು ಮಾಡುವ ಮೂಲಕ ಈ ಕಲೆಯನ್ನು ಆರಂಭಿಸಿರಬಹುದು. ಕೆಲವು ಆದಿವಾಸಿಗಳು ಇಂದಿಗೂ ಹಾಗೆಯೇ ಮಾಡುತ್ತಾರೆ. ಅನಂತರದ ಕಾಲದಲ್ಲಿ ಪ್ರಾಯ ಅವರು ಅದಿರನ್ನು

ಬೆಂಕಿಯಲ್ಲಿ ಕರಗಿಸಿ, ಸುತ್ತಿಗೆಯಿಂದ ತಟ್ಟಿ ಮೆದು ಕಬ್ಬಿಣ ಮಾಡಿಕೊಂಡಿರಬಹುದು. ಪೂರ್ವ ವಂಶಾವಳಿಯ ಈಜಿಪ್ತನ ಗೋರಿಗಳಲ್ಲಿ ಸ್ಪಷ್ಟವಾಗಿ ಉಲ್ಕಾಪಾತದ ಕಬ್ಬಿಣವೆಂದು ತೋರುವ ತುಣುಕುಕಳು ದೊರೆತಿವೆ. ಹಮ್ಮುರಬಿಯ (ಕ್ರಿ.ಪೂ.2100) ರಾಜಧಾನಿಯಲ್ಲಿ ಕಬ್ಬಿಣವು ಅಪರೂಪದ ಅನರ್ಘ್ಯ ವಸ್ತುವಾಗಿತ್ತು ಎಂದು ಬ್ಯಾಬಿಲೋನಿಯದ ಶಾಸನಗಳು ಪ್ರಸ್ತಾವಿಸುತ್ತವೆ. ತ್ತರ ರೊಡೀಷೆಯದಲ್ಲಿ ಪ್ರಾಯಶಃ ನಾಲ್ಕು ಸಾವಿರ ವರ್ಷ ಹಳೆಯದಾದ ಕಬ್ಬಿಣದ ಎರಕಾಗಾರವನ್ನು ಕಂಡು ಹಿಡಿಯಲಾಗಿದೆ. ದಕ್ಷಿಣ ಆಫ್ರಿಕದಲ್ಲಿ ಗಣಿಗಾರಿಕೆ ಆಧುನಿಕ ಆವಿಷ್ಕಾರವೇನಲ್ಲ. ಉಪಲಬ್ಧವಾದ ಅತ್ಯಂತ ಪ್ರಾಚೀನವೆಂದು ಕಬ್ಬಿಣವೆಂದರೆ ಪ್ಯಾಲೆಸ್ಟೈನಿನ ಗೆರಾರ್‌ನಲ್ಲಿ ದೊರೆತ ಚಾಕುಗಳ ಒಂದು ಕಟ್ಟು, ಅದನ್ನು ಪೆಟ್ರಿ ಅವರು ಕ್ರಿ.ಪೂ. 1350 ಕ್ಕೆ ಸೇರಿದ್ದೆಂದು ಕಾಲ ನಿರ್ಣಯ ಮಾಡಿದ್ದಾರೆ. ಅಲ್ಲಿಂದ ಒಂದು ಶತಮಾನದ ಅನಂತರ ಇಮ್ಮಡಿ ರ್‍ಯಾಮ್ ಸೀಸ್ ಮಹಾಶಯನ ಅಡಳಿತ ಕಾಲದಲ್ಲಿ ಈಜಿಪ್ಟಿನಲ್ಲಿ ಲೋಹ ಕಾಣಿಸಿಕೊಂಡಿತು. ಇನ್ನು ಒಂದು ಶತಮಾನದ ಅನಂತರ ಈಜಿಯನ್‌ನಲ್ಲಿ ಲೋಹ ಕಂಡಿತು. ಪಶ್ಚಿಮ ಯುರೋಪಿನಲ್ಲಿ ಅದು ಮೊದಲು ಕಾಣಿಸಿಕೊಂಡದ್ದು ಸುಮಾರು ಕ್ರಿ. ಪೂ. 900 ರಲ್ಲಿ ಆಸ್ಟ್ರೀಯಾದ ಹಾಲ್‌ಸ್ಟಾಟ್‌ನಲ್ಲಿ ಮತ್ತು ಸುಮಾರು ಕ್ರಿ. ಪೂ. 500 ರಲ್ಲಿ ಸ್ವೀವರ್‌ಲ್ಯಾಂಡಿನ ತೇನೆ ಉದ್ಯಮದಲ್ಲಿ ಅದು ಅಲೆಕ್ಸ್ಯಾಂಡರನೊಡನೆ ಭಾರತಕ್ಕೂ, ಕೋಲಂಬಸ್‌ನೊಡನೆ ಅಮೇರಿಕಾಕ್ಕೂ, ಕುಕ್ ಒಡನೆ ಓಷಿಯೇನಿಯಕ್ಕೂ ಪ್ರವೇಶಿಸಿತು. ಈ ರೀತಿ ಕಬ್ಬಿಣವು ವಿರಾಮವಾಗಿ ಶತಮಾನದಿಂದ ಶತಮಾನಕ್ಕೆ ಸಂಚಾರ ಮಾಡುತ್ತಾ ಭೂಮಿಯ ಮೇಲೆ ತನ್ನ ಒರಟಾದ ದಿಗ್ವಿಜಯ ಯಾತ್ರೆಯನ್ನು ನಡೆಸಿತ್ತು. (ಪುಟ, 103, ನ, ಪ್ರಾ. ಪ).

ಗಾಜರಕೋಟ್ ಜನಪದ ಲೋಹ ಶಿಲ್ಪಗಳ ವೈ ಲಕ್ಷಣಗಳು:

ಜನಪದ ಲೋಹ ಶಿಲ್ಪಗಳ ವೈಲಕ್ಷಣಗಳು ಆಯಾ ಶಿಲ್ಪದ ರೂಪ, ಆಕಾರ, ಉಡುಗೆ, ತೊಡುಗೆ, ಹಾಗೂ ಅವುಗಳ ಪ್ರತಿಷ್ಠಾಪನೆಯ ಸ್ಥಳ ವಿಶೇಷಗಳೆಂದು ವಿಶ್ಲೇಷಿಸಲಾಗಿದೆ.

ಧಾರ್ಮಿಕ ಆಚರಣೆಯ ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಶಾಂತ, ಉಗ್ರ, ಗಂಭೀರ, ಸೌಂದರ್ಯ, ಹಾಸ್ಯ ಪ್ರಕಟಣೆಯ ಭಾವನೆಗಳ ಶಿಲ್ಪಗಳು, ಗಂಡು ಹಾಗೂ ಹೆಣ್ಣು, ಪ್ರಾಣಿಗಳು, ವಾಹನಗಳು, ಆಯುಧಗಳ ವಿನ್ಯಾಸಗಳು ಇತ್ಯಾದಿಗಳ ಲಕ್ಷಣಗಳ ವಿವರಗಳ ವಿಶೇಷಣೆಯೊಂದಿಗೆ ಮತ್ತು ಸೌಂದರ್ಯ ಮೂಲ ಶಿಲ್ಪಗಳ ಲಕ್ಷಣಗಳ ಹಿನ್ನಲೆಯನ್ನು ಮಾನವಾಕೃತಿಗಳು, ಪ್ರಾಣಿಗಳಾಕೃತಿಗಳು (ಚಿನ್ಹೆ) ಕುರುಹುಗಳು, ವಿನ್ಯಾಸಗಳ ಪ್ರಾಮುಖ್ಯತೆಯನ್ನು ಆಯಾ ಪ್ರಾದೇಶಿಕ ವಿಶೇಷತೆಗಳ ಆಧಾರಗಳಲ್ಲಿ ಅಧ್ಯಯನ ಮಾಡಲಾಗಿರುತ್ತದೆ.

ಧಾರ್ಮಿಕಾಚರಣೆ, ಉತ್ಸವ, ಮನರಂಜನೆ, ಸೌಂದರ್ಯೋಪಾಸಕ ಉದ್ಧೇಶಿತ ಶಿಲ್ಪಗಳ ವಿಭಿನ್ನ ಸಂಯೋಜನಾ ರಚನಾ ಶೈಲಿಗಳ, ತಂತ್ರಗಾರಿಕೆಯ ವಿಭಿನ್ನ ಆಯಾಮಗಳ ಹಿನ್ನಲೆಯು ಶಿಲ್ಪಗಳ ಲಕ್ಷಣಗಳನ್ನು ಜನಾಂಗೀಯ ಪರಿಕಲ್ಪನೆ ಹಿನ್ನಲೆಯಲ್ಲಿ ರೂಪಗೊಳಿಸಿರುವುದರ ವಿಶೇಷತೆಗಳನ್ನು ಅಧ್ಯಯನದಲ್ಲಿ ಸಮೀಕ್ಷಿಸಲಾಗಿರುತ್ತದೆ.

ಗಾಜರಕೋಟ್ ಜನಪದ ಲೋಹ ಶಿಲ್ಪಗಳ ವರ್ಗೀಕರಣ

ಗಾಜರಕೋಟ್ ಜನಪದ ಲೋಹ ಶಿಲ್ಪಗಳನ್ನು ವರ್ಗೀಕರಣಗೊಳಿಸುವ ಕಾರ್ಯವು ಅಸಾಧಾರಣವಾದುದು. ಜನಪದ ಶಿಲ್ಪಗಳು ಪಡಿಯಚ್ಚುಗಳ ತಯಾರಿಕೆಯ ಅಯಾಮದಲ್ಲಿಂದ ಹೊರತುಪಡಿಸಿದ ಶಿಲ್ಪಗಳನ್ನು ಗಮನಿಸಿದಾಗ ಪ್ರತಿಯೊಂದು ಶಿಲ್ಪವು ಪ್ರತ್ಯೇಕವಾಗಿಯೇ ರೂಪಗಳ

ಸಂಯೋಜನೆಗಳನ್ನು ಪ್ರಕಟಿಸುತ್ತವೆ. ಪ್ರತಿಯೊಂದು ಲೋಹ ಶಿಲ್ಪವು ಅವುಗಳದೇ ಆದ ವಿಶೇಷತೆಗಳನ್ನು ಎಲ್ಲಾ ರೀತಿಯಲ್ಲಿಯೂ ವಿಭಿನ್ನತೆಯಿಂದ ಕೂಡಿರುತ್ತವೆ.

ಧಾರ್ಮಿಕ ಶಿಲ್ಪಗಳ ಹಿನ್ನಲೆಗಳಲ್ಲಿ ಸ್ತ್ರೀದೇವತೆಗಳು, ಪುರುಷ ದೇವತೆಗಳು, ಪರಿವಾರ ದೇವತೆಗಳು, ವಾಹನಗಳು, ಉಗ್ರದೇವತೆಗಳು, ಶಾಂತ ಸ್ವರೂಪ ದೇವತೆಗಳು, ಗಂಭೀರ ಸ್ವರೂಪ ದೇವತೆಗಳು, ಸ್ವಾಭಾವಿಕವಾಗಿ ದೊರೆತ ವಸ್ತುಗಳಲ್ಲಿಯೇ ನೆಲೆಗೊಂಡ ದೇವತೆಗಳ ನಿಸರ್ಗ ರೂಪಾಕಾರಗಳು, ವಿವಿಧ ವರ್ಣಗಳ, ಜನಾಂಗಗಳ, ಲಿಂಗಗಳು, ಆಯಾ ಕಾಲದ ಕಾವ್ಯ, ಘಟನೆ, ಹಿನ್ನಲೆಯ ಹೀಗೆ ಸಹಸ್ರಾರು ವಿವಿಧ ಲೋಹ ಶಿಲ್ಪಗಳನ್ನು ಧಾರ್ಮಿಕವಾಗಿಯೇ ಅಲ್ಲದೇ, ಸೌಂದರ್ಯಾತ್ಮಕವಾಗಿ, ಮನರಂಜನಾತ್ಮಕವಾಗಿ, ಜನಾಂಗೀಯ ಐತಿಹ್ಯಗಳ ಹಿನ್ನಲೆಗಳಲ್ಲಿ ದಕ್ಷಿಣ ಕರ್ನಾಟಕದ ಜನಪದರ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ.

ಗ್ರಾಮೀಣ ಆಚರಣೆಗಳು

ಎಲ್ಲಾ ಜನರು ತಮ್ಮ ಭೌತಿಕ ಇಂದ್ರಿಯಗಳಿಂದಲೇ ಪ್ರಂಪಚವನ್ನು ಗ್ರಹಿಸಿದರೂ ಅವರೆಲ್ಲ ಜಗತ್ತನ್ನು ನೋಡುವ ರೀತಿ ಒಂದೇ ಆಗಿರಬೇಕಾಗಿಲ್ಲ. ಉದಾಹರಣೆಗೆ, ದೈವ ಮಾಟಮಂತ್ರಗಳಲ್ಲಿ ನಂಬಿಕೆ ಇರುವವನಿಗೆ ಪ್ರಪಂಚವೆಲ್ಲ ಚೈತನ್ಯಮಯ; ಸುಣ್ಣ ಹಚ್ಚದ ಬೋಕಿ ಚೂರು ಅವನಿಗೆ ಒಂದು ಶಕ್ತಿಯ ಕೇಂದ್ರವಾಗುತ್ತದೆ. ದೈವ ಮಾಟಮಂತ್ರಗಳಲ್ಲಿ ನಂಬಿಕೆಯಿರದ ಮನುಷ್ಯನಿಗೆ ಕಾಣುವ ಜಗತ್ತು ತೀರ ಬೇರೆ. ಹಾಗೆಯೇ, ಪ್ರಕೃತಿಗೆ ತೀರ ಹತ್ತಿರದ ಬದುಕನ್ನು ಸಾಗಿಸುತ್ತ ಪ್ರಕೃತಿಯ ಜೊತೆ ನಿಕಟ ಸಂಪರ್ಕವನ್ನು ಹೊಂದಿ ದೈವ ಅಥವಾ ದೆವ್ವಗಳಲ್ಲಿ ನಂಬಿಕೆ ಹೊಂದಿರುವ ಅವಿದ್ಯಾವಂತ ಸಮಾಜದ ಕಣ್ಣಿಗೆ ಜಗತ್ತು ಕಾಣುವ ರೀತಿ ಬೇರೆಯಾಗಿರುತ್ತದೆ. ಆ ಸಮಾಜಕ್ಕೆ ಸೂರ್ಯನು ಕೃಪೆಯಿಂದ ಬೆಳಕು ಜೀವಗಳನ್ನು ಕರುಣಿಸುವ ಶಕ್ತಿಯಾಗಿ ಕಾಣಿಸುತ್ತಾನೆ. ಅವನ ಉಳಿವು ಅಳಿವುಗಳು ಸಮಾಜದ ಉಳಿವು ಅಳಿವುಗಳೂ ಆಗುತ್ತವೆ. (ಪುಟ–557–ಜನ–ಜನಪದ–ಜಾನಪದ)

ಹೊನ್ನಾಳಿ ತಾಲ್ಲೂಕು ಕುಳಗಟ್ಟೆ ಗ್ರಾಮದಲ್ಲಿನ ಬನಶಂಕರಿ ವಿಗ್ರಹಕ್ಕೆ ಎದೆಯ ಮೇಲೆ ಸ್ತನಗಳೂ ಮುಖದ ಮೇಲೆ ಮೀಸೆಯೂ ಉಂಟು. ಚನ್ನಗಿರಿ ತಾಲೂಕಿನ ಅನವೇರಿ ಗ್ರಾಮದಲ್ಲೂ ಅಂತಹುದೇ ವಿಗ್ರಹವಿದೆ ಅದು ಗಾಜರಕೋಟ್ ಶೈಲಿಯಲ್ಲಿಯೇ ನಿರ್ಮಾಣವಾದಂತಹ ಲೋಹ ಶಿಲ್ಪವಾಗಿದೆಯೆಂದು ತಿಳಿದು ಬಂದಿದೆ. ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮದ ಬಂದಳಿಗೆ ಅಮ್ಮ ಅಥವಾ ಬನಶಂಕರಿ ವಿಗ್ರಹದಲ್ಲಿ ಎದೆಯ ಮೇಲೆ ಸ್ತನಗಳೂ ಮುಖದ ಮೇಲೆ ಮೀಸೆಯೂ ಕೈಯಲ್ಲಿ ಬಳೆಗಳೂ ಉಂಟು. ವಿಗ್ರಹದ ಗುಪ್ತಾಂಗದ ಮುಂದೆ ಸರ್ಪ ಹೆಡೆಯೆತ್ತಿ ನಿಂತಿದೆ. ಸ್ತನ, ಮೀಸೆಗಳೆರಡೂ ಇರುವ ಬನಶಂಕರಿ ವಿಗ್ರಹಗಳು ಇನ್ನೂ ಕೆಲವು ದೊರಕಬಹುದು. (ಪುಟ–412–ಜನ–ಜನಪದ–ಜಾನಪದ ಡಾ.ಚಿದಾನಂದ ಮೂರ್ತಿ)

ಬನಶಂಕರಿ ಆರಾಧಕರ ಪ್ರಕಾರ, ಅವಳೇ ಆದಿಶಕ್ತಿಯಾದುದರಿಂದ ಮತ್ತು ಅವಳಿಂದ ಈ ಸೃಷ್ಟಿ ನಡೆದಿರುವುದರಿಂದ ಅವಳು ಪುರಷನೂ ಹೌದು, ಸ್ತ್ರೀಯೂ ಹೌದು. ಬನಶಂಕರಿ ವಾಸ್ತವವಾಗಿ ಗಂಡೂ ಅಲ್ಲ, ಹೆಣ್ಣೂ ಅಲ್ಲ ಎಂಬುದನ್ನು ವ್ಯಕ್ತಪಡಿಸುವುದು ಅಸಾಧ್ಯ; ಆದರೆ ಗಂಡೂ ಹೌದು ಹೆಣ್ಣೂ ಹೌದು ಎಂಬುದನ್ನು ಗಂಡು ಹೆಣ್ಣುಗಳೆರಡರ ಚಿಹ್ನೆಗಳನ್ನು ತೋರಿಸುವುದರ ಮೂಲಕ ವ್ಯಕ್ತಪಡಿಸುವುದು ಸಾಧ್ಯ. ಶಿಲ್ಪ ಶಾಸ್ತ್ರಗಳಲ್ಲಿ ಇಂತಹ ಶಿಲ್ಪದ ವಿವರಗಳು ಎಲ್ಲೂ ಬಂದಿಲ್ಲವೆಂಬುದನ್ನ ಖಚಿತಪಡಿಸಿಕೊಂಡಿದ್ದೇನೆ. ಜಾನಪದ ಮಟ್ಟದ ನಂಬಿಕೆಯೊಂದು ಕೆಲಸ ಮಾಸಿದುದರ ಪರಿಣಾಮವಾಗಿ, ಕೆಲವೆಡೆ ಬನಶಂಕರಿ ವಿಗ್ರಹಗಳು ಗಂಡೂ ಹೌದು ಹೆಣ್ಣೂ ಹೌದು ಎಂಬಂತೆ ಚಿತ್ರಿತವಾಗಿದೆ.

ಬಾದುಮೆ–ಬಾದುಮಯ್ಯ

ಈ ಶಿಲ್ಪ ವೈಲಕ್ಷಣ್ಯದ ಹಿನ್ನೆಲೆಯಲ್ಲಿ "ಬಾದುಮೆಯ ಮದುವೆ" ಎಂಬ ಬಸವಣ್ಣನವರ ಉಕ್ತಿ ಗಮನಾರ್ಹ. ಬನಶಂಕರಿಯು ಗಂಡೂ ಹೆಣ್ಣೂ ಏಕಕಾಲದಲ್ಲಿ ಆಗಿರುವುದರಿಂದ, ಬಾದುಮೆ ಅಥವಾ ಬನಶಂಕರಿಗೆ ಮದುವೆ ಎಂಬುದು ಹೇಗೆ ಸಾಧ್ಯ? ಅವಳಿಗೆ ಮದುವೆಯೇ ಇಲ್ಲ ಎಂಬುದು ಸಾರಾಂಶ

ಮೇಲಿನ ಬನಶಂಕರಿಯ ವಿಲಕ್ಷಣ ವಿಗ್ರಹಗಳೂ ಕೂಡ ಬಾದುಬ್ಬೆ(ಮೆ)ಯೂ ಬನಶಂಕರಿಯೂ ಒಂದೇ ಎಂಬುದನ್ನು ಹೇಳುವುದಲ್ಲದೆ, "ಬಾದುಮಯ್ಯ" ಎಂಬ ಪುರುಷ ದೇವತೆಯೂ ಬಾದುಬ್ಬೆ(ಮೆ) ಎಂಬ ಸ್ತ್ರೀ ದೇವತೆಯೂ ಒಂದೇ ಎಂಬುದನ್ನು ಹೇಳುತ್ತವೆ. ಬಾದುಬ್ಬೆ ಅಥವಾ ಬನಶಂಕರಿ ವಿಗ್ರಹದಲ್ಲಿ ಮೀಸೆಯನ್ನು ಗಮನಿಸಿದರೆ ಅದು ಬಾದುಮಯ್ಯ ಎಂಬ ಪುರುಷ ದೇವತೆ; ಎದೆಯನ್ನು ಗಮನಿಸಿದರೆ ಅದು ಬಾದುಮೆ ಎಂಬ ಸ್ತ್ರೀ ದೇವತೆ. ಬಾದುಮಯ್ಯ ಎಂಬ ಪುರಷ ದೇವತೆಯಾಗಲಿ ಬಾದುಬ್ಬೆ ಎಂಬ ಸ್ತ್ರೀ ದೇವತೆಯಾಗಲಿ ಎರಡೂ ಬೇರೆ ಬೇರೆ ದೈವಗಳಾಗಿರದೆ ಬನದಬ್ಬೆ ಅಥವಾ ಬನಶಂಕರಿಯೇ ಆಗಿವೆ ಎಂಬ ಊಹೆ ಬಹುಶಃ ನಿಷ್ಫಲವಲ್ಲ. ಮೀಸೆ, ಸ್ತನಗಳೆರೂ ಇರುವ ಬನಶಂಕರೆ ವಿಗ್ರಹಗಳನ್ನು ಜನ ನೋಡಿದಾಗ, ಅವುಗಳಲ್ಲಿ ಒಂದೊಂದನ್ನೇ ಲಕ್ಷಿಸಿ ಪುರಷ ದೇವತೆ (ಬಾದುಮಯ್ಯ), ಅಥವಾ ಸ್ತ್ರೀ ದೇವತೆ (ಬನಶಂಕರಿ) ಎಂದು ಕಲ್ಪಿಸಿಕೊಂಡರು. ಈ ಊಹೆಯನ್ನು ಕೈ ಬಿಟ್ಟರೆ, "ಬಾದುಮಯ್ಯ" ಎಂಬ ಪುರುಷ ದೇವತೆಯ ಬಗ್ಗೆ ಬೇರೆ ವಿವರಣೆಗಳನ್ನು ಕೊಡುವುದು ಕಷ್ಟವಾಗುತ್ತದೆ. ಈಗ ದೊರಕುವ ಎಲ್ಲಾ ಬನಶಂಕರಿ ವಿಗ್ರಹಗಳಲ್ಲೂ ಮೀಸೆ ಇಲ್ಲ, ನಿಜ. ಬನಶಂಕರಿ ಮುಖ್ಯವಾಗಿ ಗ್ರಾಮ್ಯ ದೇವತೆಯಾಗಿದ್ದು, ಅದು ಹೆಸರಲ್ಲಿ ಪ್ರಧಾನವಾಗಿ ಸ್ತ್ರೀ ದೇವತೆಯೇ ಆದುದರಿಂದ ಆಕೆಯ ವಿಗ್ರಹದಲ್ಲಿ ಬಹುತೇಕ ಸ್ತ್ರೀ ಚಿಹ್ನೆಗಳು ಮಾತ್ರ ಉಂಟು. ಬನಶಂಕರಿ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಕೆಲಸ ಮಾಡಿದ ಶಿಲ್ಪಿಗೆ ಸ್ತನದ ಜೊತೆ ಮೀಸೆಯನ್ನು ಇಡಬೇಕೆನ್ನಿಸಿರಬೇಕು; "ಬಾದುಮಯ್ಯ" ದೇವತೆ ನಿರ್ಮಾಣವಾದುದು ಬಹುಶಃ ಹೀಗೆ, ಹಳ್ಳಿಗಳಲ್ಲಿ ಕೆಲವು ಸ್ತ್ರೀ ದೇವತೆಗಳಿಗೆ ಈಗಲೂ ಲೋಹದ ಮೀಸೆ ಇರುವ ಪದ್ಧತಿಯನ್ನು ಇಲ್ಲಿ ನೆನೆಯುವುದು ಮುಖ್ಯವಾಗಿದೆ. (ಪುಟ–413–ಜನ–ಜನಪದ–ಜಾನಪದ)

ಬನಾಶಂಕರಿ ಪೆಟ್ಟಿಗೆ

ಬನಶಂಕರಿ ಆರಾಧಕರು ಎಲ್ಲ ಜಾತಿಗಳಲ್ಲೂ ಉಂಟು. ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಐದು "ಬನಾಶಂಕರಿ" ಪೆಟ್ಟಿಗೆಗಳಿರುವುದನ್ನು ನಾನು ಗುರುತಿಸಬಹುದು. (ನೀತಿಗೆರೆ, ಚಿಕ್ಕಗಂಗೂರು, ಸೋಮಲಾಪುರ, ಜಕ್ಕಲಿ, ಹಿರೇಮಾಡಾಳು). ಪಕ್ಕದ ದಾವಣಗೆರೆ ತಾಲೂಕಿನಲ್ಲಿ, ಕೊಡಗಿನ ಮಡಕೇರಿಯಲ್ಲಿ ಅಂತಹ ಪೆಟ್ಟಿಗೆಗಳಿರುವುದು ನನಗೆ ತಿಳಿದಿದ್ದರೂ ಅವನ್ನು ನಾನು ನೋಡಿಲ್ಲ. ನೀತಿಗೆರೆಯ ಬನಾಶಂಕರಿ ಪೆಟ್ಟಿಗೆಯನ್ನು ಚಾಕಚಕ್ಯತೆಯಿಂದ ಅಲ್ಲಿನ ಜನರ ಮನವನ್ನು ಒಲಿಸಿ ತೆಗೆದು ನೋಡಿದಾಗ ಅದರೊಳಗೆ ಬರಿಯ ಮಣ್ಣು, ಒಂದು ಹಾವಿನ ಲೋಹದ ವಿಗ್ರಹ, ಒಂದೆರಡು ಚಿಕ್ಕ ಲೋಹದ ಕೊಡೆಗಳು ಮಾತ್ರ ಇದ್ದುವು. ಅದನ್ನು ಅಲ್ಲಿನ ವೀರಭದ್ರಸ್ವಾಮಿಯ ದೇವಾಲಯದಲ್ಲಿ ಇಟ್ಟಿದ್ದರು. ಬನಾಶಂಕರಿಯ ಮೂಲ ಬೆತ್ತದ ಪೆಟ್ಟಿಗೆಗೆ ಗೆಜ್ಜಲು ಹಿಡಿದಾಗ, ಅದೇ ಗೆಜ್ಜಲು ಸಮೇತ ಅದನ್ನು ಒಂದು ಲೋಹದ ಕರಂಡಕಲ್ಲಿ ಹಾಕಿ ಇಟ್ಟಿದ್ದರು. ಯಾರೇ ಆಗಲಿ, ಮುಟ್ಟಲು ತೆರೆದು ನೋಡಲು ಹೆದರುವ ಅಥವಾ ತೆರೆದು ನೋಡಲು ಅಪ್ಪಣೆಯೇ ದೊರಕದ ಆ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಒಳಗಡೆ ಹೆಚ್ಚಿನ ವಿಶೇಷಗಳೇನೂ ಇಲ್ಲದಿದ್ದರೂ ಆ ಪ್ರಸಂಗ ನನ್ನ ಬದುಕಿನ ಒಂದು ಅಪೂರ್ವ ಅನುಭವವನ್ನು ಸೃಷ್ಟಿಸಿತು. **(ಪುಟ–413)** ಚಿಕ್ಕಗಂಗೂರು, ಸೋಮಲಾಪುರಗಳಲ್ಲಿ ಆ ಪೆಟ್ಟಿಗೆಗಳನ್ನು ಪ್ರತ್ಯೇಕ ದೇವಾಲಯಗಳಲ್ಲಿಟ್ಟಿದ್ದರೆ, ಹಿರೇಮಾಡಾಳಿನಲ್ಲಿ ಒಂದು ವಾಸದ ಮನೆಯೇ ಬಿಟ್ಟುಕೊಟ್ಟು ಅದರಲ್ಲಿ ದೂರದಿಂದಲೇ ಒಬ್ಬ ವಿಧವೆ ಅಜ್ಜಿ ಆ ಪೆಟ್ಟಿಗೆಯನ್ನು ಅದು ಇರುವ ಕೊಠಡಿಯ ಹೊಭಾಗದಿಂದಲೇ ಪೂಜೆ ಮಡಿಕೊಂಡಿರಲು ವ್ಯವಸ್ಥೆ ಮಾಡಲಾಗಿದೆ. ಜಕ್ಕಲಿಯಲ್ಲಿ ಮನೆಯಲ್ಲಿ ಒಂದು ಭಾಗದಲ್ಲೇ ಇಟ್ಟು ಪೂಜೆ ಮಾಡಲಾಗುತ್ತಿದೆ.

ಎಲ್ಲಾ ಕಡೆಗಳಲ್ಲೂ ಪೆಟ್ಟಿಗೆಗಳನ್ನು ಬಟ್ಟೆಯಲ್ಲಿ ಸುತ್ತಿಡಲಾಗಿದೆ. ಅವುಗಳನ್ನು ಹೆಂಗಸರು ಮುಟ್ಟುವಂತಿಲ್ಲ. ಗಂಡಸರು, ಅದರಲ್ಲೂ ನಿರ್ಧಿಷ್ಟ ಕೆಲವರನ್ನು ಬಿಟ್ಟರೆ ಕೈಮುಟ್ಟಿ ಪೆಟ್ಟಿಗೆಯನ್ನು ಯಾರೂ ತೆರೆಯಕೂಡದು; ತೆರೆದು ಒಳಗಿರುವುದನ್ನು ನೋಡಕೂಡದು. ನೋಡಿದರೆ ಕಣ್ಣಿಗೆ ಕೇಡು, ಮನೆಗೆ ಊರಿಗೆ ಕೇಡು. ಈ ಭಯ

ಎಷ್ಟು ಪ್ರಬಲವಾಗಿದೆಯೆಂದರೆ, ಯಾರೂ ಆ ಪೆಟ್ಟಿಗೆಗಳನ್ನು ತೆರೆದು ನೋಡುವ ಗೋಜಿಗೇ ಹೋಗಿಲ್ಲ. ವರ್ಷಕ್ಕೊಮ್ಮೆ ಅಥವಾ ವರ್ಷದ ಮಧ್ಯೆ ಯಾರಾದರೂ ಬಯಸಿದರೆ, ಆ ಪೆಟ್ಟಿಗೆಯನ್ನು ಊರ ಹೊರಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಹೆಜ್ಜೆಗೊಂದು ತೆಂಗಿನಕಾಯಿ ಒಡೆಯಬೇಕು ಎಂಬುದು ಒಂದು ಕಟ್ಟಳೆ. ಹೆಜ್ಜೆಗೊಂದಲ್ಲದಿದ್ದರೂ, ಅಲ್ಲಲ್ಲಿ ನಿಂತು ಬಹಳ ತೆಂಗಿನಕಾಯಿ ಒಡೆಯುತ್ತಾರೆ. ಊರ ಹೊರಗಡೆ ಜಲಾಶಯದ ಹತ್ತಿರಕ್ಕೆ (ಬಾವಿ, ಕೆರೆ, ಅಥವಾ ಹೊಳೆ) ಹೋಗಿ ಅಲ್ಲಿ ಕಂಬಳಿ ಅಥವಾ ಚಾಪೆಗಳಲ್ಲಿ ಸುತ್ತುಗೋಡೆಯನ್ನು ನಿರ್ಮಿಸಿ ಅದರ ಮಧ್ಯ ಪೆಟ್ಟಿಗೆಯನ್ನಿಟ್ಟು ಅದರ ಸುತ್ತ ಪೂಜಾದ್ರವ್ಯಗಳನ್ನು ಅಣಿಯಾಗಿ ಇಟ್ಟು ಪೂಜಾರಿ ಒಬ್ಬನನ್ನು ಬಿಟ್ಟು ಎಲ್ಲರೂ ಹೊರಬಂದು ನಿಲ್ಲಬೇಕು. ಶುಚಿರ್ಭೂತವಾಗಿ ಬಂದಿರುವ ಪೂಜಾರಿ ತನ್ನ ಕಣ್ಣುಗಳನ್ನು ಪೂರ್ತಿಯಾಗಿ ಕಟ್ಟಿಕೊಂಡು, ಹಾಗೇ ತಡವಿ ತನ್ನ ಮುಂದಿನ ಪೆಟ್ಟಿಗೆಯ ಸುತ್ತಣ ಬಟ್ಟೆಯನ್ನು ಬಿಚ್ಚಿ ಪೆಟ್ಟಿಗೆ ಬಾಗಿಲು ತೆರೆದು ಒಳಗಿನ ಮೂರ್ತಿಯನ್ನು ಕೈಯಲ್ಲಿಟ್ಟುಕೊಂಡು ಬಲಗೈಯಿಂದ ತಡವುತ್ತಲೇ ಎಲ್ಲ ಪೂಜಾ ದ್ರವ್ಯಗಳನ್ನು ಸೋಕಿಸಿ ಪೂಜೆ ಮಾಡಿ, ಗಂಧದ ಕಡ್ಡಿ ಬೆಳಗಿ, ನೈವೇದ್ಯವನ್ನು ಕೊಟ್ಟು, ಮತ್ತೆ ಹೂವು ಪತ್ರೆ ಭಸ್ಮ ಸಮೇತ ಆ ಬನಾಶಂಕರಿ ಮೂರ್ತಿಯನ್ನು ಹಾಗೇ ಪೆಟ್ಟಿಗೆಯಲ್ಲಿ ಮುಚ್ಚಿ, ಬಟ್ಟೆಯಲ್ಲಿ ಅದನ್ನು ಸುತ್ತಿ, ಆ ಮೇಲೆ ತನ್ನ ಕಣ್ಣಿಗೆ ಕಟ್ಟಿದ ಬಟ್ಟೆ ಬಿಚ್ಚುತ್ತಾನೆ. ಅಲ್ಲಿಗೆ ಬನಾಶಂಕರಿ ಪೂಜೆ ಮುಗಿಯುತ್ತದೆ. ಹರಕೆ ಹೊತ್ತವರು ಯಾಗೂ ಬೇಕಾದರೂ ಯಾವುದೇ ದಿನ ಈ ಪೂಜೆಯನ್ನು ಏರ್ಪಡಿಸಬಹುದು. ಉಳಿದ ದಿನಗಳಿಗಿಂತ ಶುಕ್ರವಾರ ಬಹುಶಃ ಹೆಚ್ಚು ಪ್ರಾಶಸ್ತ್ಯ ಬನಶಂಕರಿ ವಿಗ್ರಹವನ್ನು ಪೂಜಿಸಿರುವವರು ಅದರ ಸ್ಪರ್ಶದ ಅನುಭವದ ಮೇಲೆ ಹೇಳುವುದಾದರೆ ಅದೊಂದು ಲಿಂಗಾಕೃತಿಯ ಶಿಲೆ. ಯಾವುದೇ ಆಕಾರವೂ ಇಲ್ಲ. ಚಿಕ್ಕಗಂಗೂರಿನಲ್ಲಿರುವ ಬನಾಶಂಕರಿ ಪೆಟ್ಟಿಗೆಯನ್ನು ಮಾತ್ರ ವರ್ಷಕ್ಕೊಮ್ಮೆ, ದೀಪಾವಳಿ ಬಳಿಕ ಹದಿನೈದು ದಿನಗಳಲ್ಲಿ ಬರುವ "ಕಿರುದೀವಳಿಗೆ" ದಿನ ತೆರೆದು ಅದರಲ್ಲಿನ ಲಿಂಗಾಕೃತಿಯ ಹತ್ತು ಹದಿನೈದು ವಸ್ತುಗಳನ್ನು ಹೊರಗಡೆ ಇಟ್ಟು ಪೂಜಿಸಲಾಗುತ್ತದೆಯೆಂದೂ ಆಗ ಎಲ್ಲರೂ ನೋಡಬಹುದೆಂದೂ ತಿಳಿದುಬರುತ್ತದೆ. ಇದು ಒಂದು ಅಪವಾದ ಮಾತ್ರ.

ಮಡಕೇರಿಯಲ್ಲಿರುವ ಬನಾಶಂಕರಿ ಪೆಟ್ಟಿಗೆಯನ್ನೂ ಕೂಡ ತೆರೆದು ನೋಡಲು ಯಾರಿಗೂ ಎಂದೂ ಅವಕಾಶವೇ ಇಲ್ಲ. ಹೆಂಗಸರು ಬನಾಶಂಕರಿ ಪೆಟ್ಟಿಗೆಯನ್ನು ಮುಟ್ಟಕೂಡದು; ಪೂಜೆ ಸಲ್ಲದು.

ಬನಶಂಕರಿ ಕಾಡಿನ ದೇವತೆ, ಸಸ್ಯಗಳ ದೇವತೆ; ಬೆಳೆಯ ದೇವತೆಯೂ ಆಗಬಹುದು. ಜೊತೆಗೆ, ಅವಳು ಆದಿಶಕ್ತಿ, ಏಕಕಾಲಕ್ಕೆ ಗಂಡೂ ಹೆಣ್ಣೂ ಆಗಿ ಸೃಷ್ಟಿಗೆ ಜನ್ಮದಾತೆ ಯಾಗಿರುವವಳು ಎಂಬ ನಂಬಿಕೆಯನ್ನು ಹಿಂದೆ ನೋಡಿದ್ದೇವೆ. (ಈ ನಂಬಿಕೆ ಈಗಲೂ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಚಲಿತವಾಗಿದೆ.) ಗಂಡು, ಹೆಣ್ಣು ಬಹಿರಂಗವಾಗಿ ಒಟ್ಟಿಗೆ ಇರುವುದು ಭಾರತೀಯ ಸಮಾಜದಲ್ಲಿ ನಿಷಿದ್ಧ. ಸೃಷ್ಟಿ ಮೂಲಳಾದ ಬನಶಂಕರಿಯಲ್ಲಿ ಏಕಕಾಲಕ್ಕೆ ಗಂಡೂ ಹೆಣ್ಣೂ ಒಟ್ಟಿಗೆ ಇರುವುದರಿಂದ ಅವಳನ್ನು ನೋಡಬಾರದೆಂಬ ಜಾನಪದ ನಂಬಿಕೆ ಕೆಲಸ ಮಾಡಿರುವಂತಿದೆ. ಇದು ಒಂದು ಸರಳೀಕೃತ ವಿವರಣೆ ಮತ್ತು ಈ ಬಗ್ಗೆ ಹೆಚ್ಚಿನ ವ್ಯಾಖ್ಯಾನಕ್ಕೆ ನಿಶ್ಚಿತವಾಗಿಯೂ ಅವಕಾಶವಿದೆ. **(ಪುಟ–415)**

ಲಜ್ಜಾ ಗೌರಿ

ಬನಾಶಂಕರಿ ಪೆಟ್ಟಿಗೆಗಳಲ್ಲಿನ ಮೂರ್ತಿ ಒಂದು ಲಿಂಗದಂತಹ ಆಕಾರ ರಹಿತ ಶಿಲೆ; ಬನಾಶಂಕರಿ ಪೆಟ್ಟಿಗೆಗಳಲ್ಲಿ ಅಂತಹ ಹತ್ತಾರು ಗುಂಡನೆಯ ಶಿಲೆಗಳಿರಬಹದು; ಇಲ್ಲಿಯ ವಿಗ್ರಹದಲ್ಲಿ ರಹಸ್ಯವೇನೂ ಇಲ್ಲ. ಇಡೀ ಪೆಟ್ಟಿಗೆಯ ಸುತ್ತಮುತ್ತ ಹಬ್ಬಿರುವ ನಂಬಿಕೆಯೇ ಒಂದು ದೊಡ್ಡ ರಹಸ್ಯ. ಆದರೆ ಮಧ್ಯ ಮತ್ತು ಉತ್ತರ ಕರ್ನಾಟಕಗಳಲ್ಲಿ ಲಜ್ಜಾಗೌರಿ ಎಂದು ಜನರಿಂದ ಕರೆಯಿಸಿಕೊಳ್ಳುವ ಕೆಲವು ಬತ್ತಲೇ ಸ್ತ್ರೀ ವಿಗ್ರಹಗಳು ತಮ್ಮ ವಿಶಿಷ್ಟ ಲಕ್ಷಣಗಳಿಂದಾಗಿ ರಹಸ್ಯಾತ್ಮಕವಾಗಿವೆ. ಬಾದಾಮಿಯ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿರುವ ಲಜ್ಜಾಗೌರಿ ಹೀಗಿದೆ: ಕುಕ್ಕರುಗಾಲಲ್ಲಿ ಕುಳಿತಿರುವ ಆಕೆಯ ಯೋನಿ ತೆರೆದುಕೊಂಡಿದೆ. ಸ್ತನಗಳು ಎದ್ದು ಕಾಣುತ್ತವೆ. ಕೊರಳಲ್ಲಿ ಹಾರ, ಎರಡೂ ಕೈಗಳಲ್ಲಿ ಬಳೆ, ತೋಳ ಬಂದಿಗಳಿದ್ದು, ಎರಡೂ ಕೈಗಳಲ್ಲಿ ಕಮಲದ

ಮೊಗ್ಗುಗಳನ್ನು ಹಿಡಿದ್ದಾಳೆ. ಆದರೆ ತಲೆಯ ಜಾಗದಲ್ಲಿ ಅರಳಿದ ಒಂದು ಕಮಲವಿದೆ. ಇಂತಹುದೇ ವಿಗ್ರಹಗಳು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿದೆ. (ಪುಟ–415)

ಒಂದು ವೇಳೆ ಅದು ಯೋಗಾಭ್ಯಾಸಕ್ಕೆ ಸಂಕೇತವಾಗಿದ್ದು, ತಾಂತ್ರಿಕರ ಪೂಜಾ ಮೂರ್ತಿಯಾಗಿ ಬಳಕೆಯಾಗುತ್ತಿದ್ದರೂ, ಮೂಲತಃ ಇತಿಹಾಸ ಪೂರ್ವದ ಕಾಲದಲ್ಲಿ ಲಜ್ಜಾಗೌರಿಯು ಫಲ ಶಕ್ತಿಗೆ ಸಂಬಂಧಿಸಿದ ಜಾನಪದ ಸೃಷ್ಟಿಯಾಗಿರುವಂತಿದೆ. ಎಲ್ಲ ದೇಶಗಳಲ್ಲೂ ಫಲಶಕ್ತಿ ದೇವತೆಯನ್ನು ಹೆಣ್ಣಿಂದೇ ಭಾವಿಸಿದ್ದಾರೆ. ಲಜ್ಜಾಗೌರಿಯ ತೆರೆದ ಯೋನಿಯು ಸಂಭೋಗಕ್ಕೆ ಸಿದ್ಧವಾಗಿರುವ ಹೆಣ್ಣಿನ ಸಂಕೇತ. ಬೆಳೆಯಿರುವ ಹೊಲದಲ್ಲಿ ಗಂಡೂ ಹೆಣ್ಣೂ ಸಂಭೋಗ ಮಾಡಿದರೆ ಅವರ ವೀರ್ಯ ಸ್ಪರ್ಶದಿಂದ ಬೆಳೆ ಸಮೃದ್ಧವಾಗುವುದೆಂದು ಎಲ್ಲೆಡೆ ನಂಬಿಕೆಯಿದೆ. ಲಜ್ಜಾಗೌರಿಯ ದೇಹವು ಭೂಮಿಗೆ ಮಣ್ಣಿಗೆ ಸಂಕೇತವಾಗಿದ್ದರೆ, ಮೇಲಿನ ಕಮಲವು ನೀರಿಗೆ ಅಥವಾ ಮಳೆ ಅಥವಾ ಸೂರ್ಯನಿಗೆ ಸಂಕೇತ. ಇಡೀ ವಿಗ್ರಹವು ಆಕಾಶ–ಭೂಮಿ, ಮಳೆ–ಮಣ್ಣು, ಸೂರ್ಯ–ಭೂಮಿಯರ ಪ್ರತೀಕವಾಗಿದ್ದು, ಒಟ್ಟು ಫಸಲಿಗೆ ಸಂಬಂಧಿಸಿದ ದೇವತೆ ಎನ್ನುವ ಭಾವನೆಯನ್ನು ತರಿಸುತ್ತದೆ. **(ಪುಟ–416)**

ಕೆಲವೆಡೆ ಇರುವ ಜಾನಪದ ನಂಬಿಕೆಗಳ ಪ್ರಕಾರ ಲಜ್ಜಾಗೌರಿಯು ಪ್ರಸವ ವೇದನೆಯ ಗರ್ಭಿಣಿಯರ ಅಧಿದೈವವಾಗಿದ್ದು, ಸುಖಪ್ರಸವಕ್ಕೆ ಅವಳ ಪೂಜೆ ಅಗತ್ಯ. ಗರ್ಭಿಣಿ, ಮಳೆಯ ಮೋಡ, ಬೆಳೆಯ ಹೊಲ ಎಲ್ಲವೂ ಒಂದೇ.

ಗ್ರಾಮದೇವತೆ–ಗ್ರಾಮ್ಯದೇವತೆಗಳು

ಮಹೇಶ್ವರಮ್ಮ, ಮುನೇಶ್ವರ, ಮಾರವ್ವ, ಕರಿಯವ್ವ, ದುರಗವ್ವ, ಹುಲಿಗವ್ವ, ಮಾಸ್ತ್ಯಮ್ಮ, ಚೌಡಿ, ಅಂಕಲಮ್ಮ, ಪಟಾಲಮ್ಮ, ವನತ್ಯಮ್ಮ , ಅಣ್ಣಮ್ಮ, ಎಲ್ಲಮ್ಮ, ಜೋಕುಮಾರ, ಹೊನ್ನಾಲದಮ್ಮ, ಗಿಡ್ಡಮ್ಮ, ಬಳಲಿಕವ್ವ, ಬೀರ, ಚಿಕ್ಕಮ್ಮ, ಬಾಣಂತಮ್ಮ ಇವಲ್ಲದೆ ಆಯಾ ಊರಿನ ಹೆಸರನ್ನೇ ಹೊತ್ತ ಮದ್ದೂರಮ್ಮ,

ಹಾಸನಾಂಬಾ, ಕಿಕ್ಕೇರಿ ಅಮ್ಮ, ಅಂತರಗಟ್ಟೆ ಅಮ್ಮ, ಕೋಲಾರಮ್ಮ, ಬಾಚಳ್ಳಿ ಅಮ್ಮ ಇವೇ ಮೊದಲಾದ ಶಿಷ್ಟೇತರ ದೈವಗಳೆಲ್ಲವೂ ಗ್ರಾಮ್ಯದೇವತೆಗಳು.

ಹಳ್ಳಿಯ ಅಥವಾ ಗ್ರಾಮದ ಎಲ್ಲ ಕೆಳವರ್ಗದ, ಅಪೌರಾಣಿಕ ದೇವತೆಗಳೇಲ್ಲವೂ ಗ್ರಾಮ್ಯ ದೇವತೆಗಳು. "ಗ್ರಾಮದೇವತೆ"ಯೂ ಗ್ರಾಮ್ಯ ದೇವತೆಯೇ ಅದರೂ ಅದು ತನ್ನದೇ ವೈಶಿಷ್ಟ್ಯವನ್ನು ಹೊಂದಿರುವ ಊರಿನ ದೇವತೆ. ಊರಿನ ಎಲ್ಲ ಕೆಳವರ್ಗದ ದೇವತೆಗಳೂ ಗ್ರಾಮ ದೇವತೆಗಳಲ್ಲಿ; ಅವು ಬರೀ ಗ್ರಾಮ್ಯ ದೇವತೆಗಳು. ಬ್ರಾಹ್ಮಣರೂ ಸೇರಿದಂತೆ ಊರಿನ ಎಲ್ಲ ಜಾತಿ ವರ್ಗಗಳ ಜನರೂ ಅಥವಾ ಇಡೀ ಊರಿಗೆ ಊರೇ ಯಾವ ಗ್ರಾಮ್ಯ ದೇವತೆಯ ಉತ್ಸವ ಅಥವಾ ಜಾತ್ರೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗುವುದೋ ಅದು ಆ ಊರಿನ "ಗ್ರಾಮದೇವತೆ" ಎಂದರೆ ಯಾವುದೇ ಊರಿಗೆ ಇರುವುದು ಒಂದೇ ಒಂದು ಗ್ರಾಮದೇವತೆ; ಊರಲ್ಲಿ ಗ್ರಾಮದೇವತೆಯೂ ಸೇರಿದಂತೆ ಹಲವು ಗ್ರಾಮ್ಯದೇವತೆಗಳಿರಬಹುದು. ಒಂದು ಊರಿಗೆ ಒಂದಕ್ಕಿಂತ ಹೆಚ್ಚು ಗ್ರಾಮ ದೇವತೆಗಳಿರುವುದು ಸಾಧ್ಯವಿಲ್ಲ. ಗ್ರಾಮದೇವತೆ ಒಂದು ಸ್ಪಷ್ಟ ಗ್ರಾಮದ ಅಧಿದೇವ; ಅದರ ನಿಜವಾದ ದೈವ; ಅದರ ರಕ್ಷಾ ದೇವತೆ. ಇದಕ್ಕೆ ಒಂದು ಸ್ಪಷ್ಟ ಉದಾಹರಣೆ ಕೊಡುತ್ತೇನೆ.

ಶ್ರೀರಂಗಪಟ್ಟಣ ತಾಲೂಕಿನ ಅರಕೆರೆಯ ಬಿಸಿಲ ಮಾರಮ್ಮ ಆ ಊರಿನ ಅಧಿದೇವತೆ. ಅದರ ಅರ್ಚಕ ('ತಮ್ಮಡಿ') ಒಬ್ಬ ಒಕ್ಕಲಿಗ. ಸುತ್ತಲೂ ಒಂದು ಪ್ರಾಕಾರ ಬಿಟ್ಟರೆ, ಮೇಲೆ ಚಾವಣಿಯೂ ಇಲ್ಲದ ಜಾಗದಲ್ಲಿ ಇರುವ ಒಂದು ಮರದ ಕಂಬವೇ ಬಿಸಿಲು ಮಾರಮ್ಮ (ಅದರ ಉತ್ಸವ ಮೂರ್ತಿ ಒಂದು ಲೋಹದ ವಿಗ್ರಹ). ಬಿಸಿಲ ಮಾರಮ್ಮನ ಹೆಸರಲ್ಲಿ ನಡೆಯುವ ಶೂಲದ ಹಬ್ಬ ಎಂಬ ಮೂರು ವಾರಗಳ ಹಬ್ಬದಲ್ಲಿ ಕುರಿ ಕೋಳಿಗಳ ಬಲಿ, ಕೆಂಡ ಹಾಯುವುದು ಇತ್ಯಾದಿ ಎಲ್ಲ ಉಂಟು. ಆ ದೇವತೆಯ ಗುಡಿಗೆ ಆ ಹಬ್ಬದ ಬೇರೆ ಬೇರೆ ದಿನಗಳಲ್ಲಿ ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು, ಗಾಣಿಗರು, ಬೆಸ್ತರು, ಹರಿಜನರು ಇತ್ಯಾದಿ ಎಲ್ಲ ಜಾತಿಯ ಜನರೂ ಎಡೆ ತರುತ್ತಾರೆ. ಆ ಊರಲ್ಲಿ ಬೇಟಯ್ಯ, ಮಾಸ್ತ್ಯಮ್ಮ, ಅಜ್ಜಿ, ಗುಜ್ಜಮ್ಮ, ಕೆಮ್ಲಮ್ಮ, ಮಹಾದೇವಮ್ಮ, ಪಟಾಳಮ್ಮ ಮುಂತಾದ ಗ್ರಾಮ್ಯದೇವತೆಗಳೂ ಚೆನ್ನಕೇಶವ ಮೊದಲಾದ ಶಿಷ್ಟದೇವತೆಗಳೂ

ಇದ್ದರೂ ಸಮಸ್ತ ಊರಿನ ದೇವತೆಯೆಂದರೆ ಬಿಸಿಲು ಮಾರಮ್ಮ ಒಬ್ಬಳೇ. ಅವಳ "ಗುಡಿ" ಊರ ದ್ವಾರದಲ್ಲಿಯೇ ಇದೆ; ಮತ್ತು ಅವಳ ಜಾತ್ರೆಯಲ್ಲಿ ಮುಸಲ್ಮಾನರಾದಿಯಾಗಿ ಎಲ್ಲರಿಗೂ ಬೇರೆ ಬೇರೆ ಕರ್ತವ್ಯಗಳೂ ಜವಾಬ್ದಾರಿಗಳೂ ಹಕ್ಕುಗಳೂ ಉಂಟು. ಮಾಸ್ತ್ಯಮ್ಮ, ಪಟಾಳಮ್ಮಗಳಂತೆ ಗ್ರಾಮ್ಯ ದೇವತೆಯೂ ಆಗಿರುವ ಬಿಸಿಲ ಮಾರಮ್ಮ ಒಬ್ಬಳು ಮಾತ್ರ ಅರಕೆರೆಯ "ಗ್ರಾಮದೇವತೆ". ಹಲವಾರು ಹಳ್ಳಿಗಳು ಈಗಿನ ಬೆಂಗಳೂರು ನಗರದಲ್ಲಿ ಸೇರಿ ಹೋಗಿವೆಯಾದರೂ ಆ ಹಳ್ಳಿಗಳಲ್ಲಿ ಒಂದೊಂದಕ್ಕೊ ಪ್ರತ್ಯೇಕ ಗ್ರಾಮದೇವತೆ ಉಂಟು. ಹೀಗಿದ್ದೂ, ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶ ಬಹು ಮುಖ್ಯವೆಂದು ನಾಗರಿಕರು ಭಾವಿಸಿರುವುದರಿಂದ ಅಲ್ಲಿನ ಅಣ್ಣಮ್ಮ ಇಂದಿನ ಬೆಂಗಳೂರು ನಗರದ "ಗ್ರಾಮ ದೇವತೆ" ಎನ್ನಿಸಿಕೊಳ್ಳುವಷ್ಟು ಪ್ರಮುಖಳಾಗಿದ್ದಾಳೆ. ಆ ದೇವತೆಯ ಉತ್ಸವದ ಮೂರ್ತಿಯನ್ನು ಬೆಂಗಳೂರಿನ ಎಲ್ಲ ಭಾಗದ ಜನರೂ ಡಿಪಾಸಿಟ್ ಹಣ ಕಟ್ಟಿ ತಮ್ಮ ಭಾಗಕ್ಕೆ ಕೊಂಡೊಯ್ದು ಮೆರವಣಿಗೆ ಮಾಡಿ ಹಿಂದಿರುಗಿಸುತ್ತಾರೆ. (ಪುಟ–402)

ಗ್ರಾಮದೇವತೆಗಳೆಲ್ಲ ಕೆಳವರ್ಗದವು. ಅವುಗಳನ್ನು ಮಧ್ಯಮ ವರ್ಗದ ಮತ್ತು ಮೇಲು ವರ್ಗದ ದೇವತೆಗಳಿಂದ ಬೇರ್ಪಡಿಸುವ ಮೌಲಿಕಾಂಶಗಳು (distinguishing geatures) ಹೀಗಿವೆ.

ಕಟ್ಟಡ–ಇಲ್ಲ; ಇದ್ದರೂ ತೀರ ಸಾಮಾನ್ಯ

ಆಕಾರ ಸಹಿತ ವಿಗ್ರಹ–ಇಲ್ಲ; ಇದ್ದರೂ ವಿರಳ

ಭಕ್ತರು–ತೀರ ಸಾಮಾನ್ಯ ವರ್ಗದವರು

ವ್ಯಾಪ್ತಿ–ಹಳ್ಳಿಯ ಒಂದು ವರ್ಗದ ಜನ/ಕೆಲವೊಮ್ಮೆ ಕೆಲ ಸಂಸಾರಗಳು ಮಾತ್ರ

ಪೂಜೆ–ಇಲ್ಲ; ಅಥವಾ ವಿರಳ; ಅಥವಾ ಅನಿಯತ

ಅರ್ಚಕ–ಇಲ್ಲ; ಇದ್ದರೂ ತೀರ ಅವಿದ್ಯಾವಂತ

ಅರ್ಪಣೆ–ಮಾಂಸಾಹಾರ

ದೈವ–ಸ್ಥಳೀಯ ಮತ್ತು ಕೆಲವೊಮ್ಮೆ ಅರೆ ಐತಿಹಾಸಿಕ

ಆಸ್ತಿ–ಇಲ್ಲ

ಆಡಳಿತ–ಇಲ್ಲ

ಲಿಖಿತ ಇತಿಹಾಸ–ಇಲ್ಲ

ಜಾನಪದ ವಾಙ್ಮಯ–ಸಮೃದ್ಧ

ಭಾರತೀಯ ಪರಂಪರೆ ಇಲ್ಲ

ಗ್ರಾಮ್ಯ ದೇವತೆಗಳ ಕೆಲವು ಸಮಾನ ಲಕ್ಷಣಗಳು ಹೀಗಿವೆ.

1. ಗ್ರಾಮ್ಯ ದೇವತೆಗಳು ಬಹುತೇಕ ಸ್ತ್ರೀ ದೇವತೆಗಳು; ಪುರುಷ ದೇವತೆಗಳ ಸಂಖ್ಯೆಯೂ ಮಹತ್ವವೂ ಸ್ತ್ರೀ ದೇವತೆಗಳಿಗೆ ಹೋಲಿಸಿದರೆ ಗಣನೀಯವಾಗಿ ಕಡಿಮೆ. ಪುರುಷ ದೇವತೆಗಲ್ಲಂತೂ ಯಾವುದೂ 'ಗ್ರಾಮದೇವತೆ' ಅಲ್ಲ.
2. ಗ್ರಾಮ್ಯ ದೇವತೆಗಳ ಹೆಸರುಗಳೆಲ್ಲ ಬಹುತೇಕ ದ್ರಾವಿಡ. ದುರ್ಗವ್ವ, ಕಾಳವ್ವ ಇಂತಹ ಕೆಲವು ಹೆಸರುಗಳಲ್ಲಿ ಸಂಸ್ಕೃತ ಅಂಕಿತ ನಾಮಗಳು (ದುರ್ಗಾ, ಕಾಲೀ) ಹುದುಗಿದ್ದರೂ ಅವುಗಳಿಗೂ ಆ ದೇವತೆಗಳಿಗೂ ಯಾವುದೇ ಸಂಬಂಧವೂ ಇಲ್ಲ. ಎಲ್ಲ ಗ್ರಾಮ್ಯ ಸ್ತ್ರೀ ದೇವತೆಗಳನ್ನೂ ಶಕ್ತಿಯ ಅಥವಾ ದುರ್ಗೆಯ ಅವತಾರವೆಂದು ವಿದ್ಯಾವಂತರು ಹೇಳುತ್ತಾರೆ. ಹಳ್ಳಿಗರಿಗೆ ಅವೆಲ್ಲ ಶಿವನ ಹೆಂಡತಿ ಪಾರ್ವತಿಯ ಅವತಾರಗಳು (ಶಿವ ಮೂಲತಃ ದ್ರಾವಿಡರ ದೈವ) ಪ್ಲೇಗಮ್ಮ, ಸಿಡುಬಮ್ಮ, ಕೆಮ್ಮಮ್ಮ ಇತ್ಯಾದಿಗಳೂ ಪಾರ್ವತಿಯ ಅವತಾರಗಳೇ, ತಾತ್ವಿಕವಾಗಿ.
3. ಗ್ರಾಮ್ಯ ಸ್ತ್ರೀ ದೇವತೆಗಳಿಗೆ ಮದುವೆ ಆಗಿದ್ದರೂ ಅವುಗಳ ಗಂಡಂದಿರು ಸತ್ತು ಅವು ವಿಧವೆಯರೆಂಬ ಕತೆಗಳು ಬಹುತೇಕ ಸಾಮಾನ್ಯ.
4. ಶಿಷ್ಟ ದೇವತೆಗಳಿಗೂ ಹೊಗಳಿದರೆ ಸಂತೋಷ; ಗ್ರಾಮ್ಯದೇವತೆಗಳಿಗೆ ಬೈಗುಳಗಳೂ ಅಶ್ಲೀಲ ಭಾಷೆಯೂ ಬಹಳ ಪ್ರಿಯ. ಶಿಷ್ಟದೇವತೆಗಳಿಗಾದರೋ ಸಸ್ಯಾಹಾರದ ಅರ್ಪಣೆಯಾದರೆ ಗ್ರಾಮ್ಯದೇವತೆಗಳಿಗೆ

ಮಾಂಸಾಹಾರ ಮದ್ಯಗಳು ಪ್ರಿಯ. ಗ್ರಾಮ್ಯದೇವತೆಗಳಿಗೆ ಬೆತ್ತಲೆ ಸೇವೆ. ಬೇವಿನ ಸೇವೆಯಂಥವೂ ಪ್ರಿಯವಾಗುತ್ತವೆ.

5. ಗ್ರಾಮ್ಯ ದೇವತೆಗಳ ವಿಷಯದಲ್ಲಿ ಜನಕ್ಕೆ ಇರುವುದು ಭಕ್ತಿ ಪ್ರೀತಿಯಗಳಿಗಿಂತ ಹೆಚ್ಚಾಗಿ ಭಯ. ಈ ಸಂದರ್ಭದಲ್ಲಿ ಹೆನ್ರಿ ವೈಟ್‌ಹೆಡ್ ಆಡಿರುವ ಮಾತುಗಳು ಉಲ್ಲೇಖನೀಯವಾಗಿವೆ:-

"Shiva and Vishnu represent forces of nature: Shiva symbolises the power of destruction and the idea of life through death. Vishnu the power of preservation and the idea of salvation. Both these deities and the system of religion connected with them are the outcome of philosopic reflection on the Universe as a whole. But the village deities. on the other hand. have on relation to the Universe. They symbolize only the facts of village life. They are related not to the great world forces, but to such simple facts as cholera, small pox and cattle diseases."

ಮಳೆ, ಬೆಳೆ, ಮಕ್ಕಳು, ಕಾಲರದಂತಹ ರೋಗಗಳು, ಕ್ಷಾಮ, ಊರು, ಗಡಿ ಇಂತಹ ಜೀವನದ 'ವಾಸ್ತವ'ಗಳಿಗೆ ಗ್ರಾಮ್ಯದೇವತೆಗಳು ಬಹುತೇಕ ಸಂಬಂಧಿಸಿವೆ.

ಗ್ರಾಮ್ಯ ದೇವತೆಗಳ ಬಗ್ಗೆ ಜನಕ್ಕೆ ಇರುವುದು ಭಯ: ಅವನ್ನು ಪೂಜಿಸುವುದು ಭಕ್ತಿ ಪ್ರೀತಿಗಳಿಗಿಂತ ಭಯಕ್ಕಾಗಿ, ಆ ಪ್ರಕೃತಿಕ ಶಕ್ತಿಗಳ ಉಪಶಮನಕ್ಕಾಗಿ, ಅವುಗಳ ಕೋಪವನ್ನು ತಣಿಸುವುದಕ್ಕಾಗಿ.

ಗ್ರಾಮ್ಯದೇವತೆಗಳ ಅಧ್ಯಯನದಿಂದ ಕೆಲವು ಸಾಮಾನ್ಯೀಕರಣಗಳಿಗೆ ನಾವು ಬರಬಹುದು.

1. ಇಂದಿನ ಗ್ರಾಮ್ಯದೇವತೆಗಳೆಲ್ಲ ಬಹುಪಾಲು ಹೆಣ್ಣು ಮತ್ತು ಅವು ವಿಧವೆಯರು. ಎಂದರೆ ಪ್ರಚೀನ ದ್ರಾವಿಡರ ಮಾತೃ ಪ್ರಧಾನ ಕುಟುಂಬದ ಪರಿಣಾಮ ಅದು. ಮಾತೃಪ್ರಧನ ಕುಟುಂಬದಲ್ಲಿ ಪುರುಷನು

ಮಕ್ಕಳನ್ನು ಹುಟ್ಟಿಸಲು ಒಂದು ಉಪಕರಣ ಮಾತ್ರ. ಹೆಣ್ಣು ವಿಧವೆಯಾದಲ್ಲಿ ಇನ್ನೊಬ್ಬ ಪುರುಷ ಬರುತ್ತಾನೆ. ಇಂದಿನ ಗ್ರಾಮ್ಯದೇವತೆಗಳ ಅಧ್ಯಯನ ಪ್ರಚೀನ ದ್ರಾವಿಡ ಕುಟುಂಬ ವ್ಯವಸ್ಥೆಯನ್ನು ಕಾಣಲು ಒಂದು ಬೆಳಕಿಂಡಿ ಆಗುವ ಸಾಧ್ಯತೆ ಇದೆ.

2. ದ್ರಾವಿಡರದು ಮುಖ್ಯವಾಗಿ ವ್ಯವಸಾಯ ಪ್ರಧಾನ ಜನಾಂಗ, ವ್ಯವಸಾಯದಲ್ಲಿ ಮೂಲತಃ ಪಾಲುದಾರರಾಗಿದ್ದವರು ಗಂಡಸರಿಗಿಂತ ಹೆಚ್ಚಾಗಿ ಹೆಂಗಸರು. ಸ್ತ್ರೀ ಗ್ರಾಮ್ಯ ದೇವತೆಗಳ ಪ್ರಾಬಲ್ಯಕ್ಕೆ ಇದೂ ಒಂದು ಕಾರಣವಿರಬಹುದು. ದ್ರಾವಿಡ ಗ್ರಾಮ್ಯದೇವತೆಗಳಲ್ಲಿ ಅನೇಕವು ಫಲಶಕ್ತಿ (Fertility) ದೇವತೆಗಳು. ಬೆತ್ತಲೆ ಸೇವೆ, ಬೈಗುಳ ಹಾಡುಗಳು ಇವೇ ಮೊದಲಾದ ಆಚರಣೆಗಳನ್ನು ಈ ಹಿನ್ನಲೆಯಲ್ಲಿ ವಿವರಿಸಲು ಸಾಧ್ಯ.

3. "ಗ್ರಾಮದೇವತೆ" ಊರಿನ ಆಧಿದೈವ. ಸಮಕಾಲೀನದಲ್ಲಿ ಅದು ಒಂದು ಊರಿನ ಅತಿ ಮುಖ್ಯ ಅಥವಾ ಪ್ರತಿಷ್ಠಿತ ಅಥವಾ ವೈಭವದ ದೈವವಲ್ಲದಿದ್ದರೂ ಅದು ಆ ಊರಿನ ರಕ್ಷಣಾ ದೇವತೆ: ಊರೊಟ್ಟಿನ ದೈವ ಅದು. ಇಂದು ಅದು ಹೆಚ್ಚಾಗಿ ಕೆಳ ಜಾತಿಯವರ ಮನೆದೇವರಾಗಿದ್ದರೂ ಊರಿನ ಎಲ್ಲ ವರ್ಗದ ಜನರೂ ಉತ್ಸವದಲ್ಲಿ ಪಾಲುದಾರರು. ಅವು ಪೂರ್ವಕ್ಕೆ ಮುಖ ಮಾಡಿ ನಿಂತಿರುತ್ತವೆ ಮತ್ತು ಸಾಮಾನ್ಯವಾಗಿ ಊರಿನ ಪ್ರವೇಶ ದ್ವಾರದಲ್ಲಿ ಸ್ಥಾಪಿತವಾಗಿರುತ್ತವೆ. ಒಂದು ವೇಳೆ ಊರಿನ ರಚನೆ ಕಾಲಕ್ರಮದಲ್ಲಿ ಬದಲಾವಣೆಯಾಗಿದ್ದರೂ, ಮೂಲ ಊರಿನ ರಚನೆಯನ್ನುಕಲ್ಪಿಸಿಕೊಳ್ಳಲು "ಗ್ರಾಮದೇವತೆ"ಗಳ ಗುಡಿಗಳು ಸಹಾಯಕವಾಗಬಲ್ಲವು. [ಪುಟ, 405]

ಶ್ರೀ ಕಾಳೇಗೌಡ ನಾಗವಾರ ಸಂಗ್ರಹಿಸಿರುವ ವಡ್ಡಗೆರೆ ನಾಗಮ್ಮನ ಕಥನ ಗೀತದಲ್ಲಿ, ಗಂಡ ಆಕೆಯ ಚಿಕ್ಕ ವಯಸ್ಸಿನಲ್ಲಿ ಸಾಯುತ್ತಾನೆ. ಎಲ್ಲರ ಇಷ್ಟಕ್ಕೆ ವಿರುದ್ಧವಾಗಿ ಆಕೆ 'ಕೆಂಡ-ಕೊಂಡ' ಆಗಲು ನಿರ್ಧರಿಸುತ್ತಾಳೆ. ಅಗ್ನಿಕುಂಡ ಪ್ರವೇಶಿಸುವ ಮುನ್ನ ಬಲಗೈಯಿಂದ ತೌರುಮನೆ, ಗಂಡನ ಮನೆಗಳನ್ನು ಹರಸುತ್ತಾಳೆ. ("ಬಾಸೆ ಕೊಟ್ಟಾಳೆ ಬಲಗೈಯ") ತನ್ನ 'ಒಕ್ಕಲಿ'ನವರು ತನಗೆ ಗುಡಿಯೊಂದನ್ನು ನಿರ್ಮಿಸಲು ಆಜ್ಞಾಪಿಸುತ್ತಾಳೆ.

ಅದರಂತೆ ಜನ ಗುಡಿ ಕಟ್ಟಿದರು. ಮುಂದೆ ಹುಟ್ಟುವ ಗಂಡು ಹೆಣ್ಣು ಮಕ್ಕಳಿಗೆ ನಾಗಮ್ಮನ ಹೆಸರಿಡಲಾಗುವುದೆಂದು ಆ ಹಾಡು ಕೊನೆಯಾಗುತ್ತದೆ. ಇದು ಸ್ವಾರಸ್ಯ ಸಂಗತಿ. ಏಕೆಂದರೆ ತುಮಕೂರು ಜಿಲ್ಲೆಯ ಹಳ್ಳಿ ಕೈದಾಳದಲ್ಲಿ ಸಹಗಮನವಾದ ಲಕ್ಷ್ಮೀದೇವಮ್ಮನ ವಂಶಸ್ಥರು ಇಂದಿಗೂ ತಮ್ಮ ಮನೆಯ ಹಿರಿಯ ಹೆಣ್ಣು ಮಗಳಿಗೆ ಆಕೆಯ ಹೆಸರನ್ನು ಇಡುತ್ತ ಬಂದಿರುವ ಪದ್ಧತಿಯನ್ನು ಉಳಿಸಿಕೊಂಡು ಬರುತ್ತಿದ್ದಾರೆ. [ಪುಟ, 199)

ನುಂಕೆಮಲೆಯ ಹರಳಯ್ಯ:

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಇತಿಹಾಸ ಪ್ರಸಿದ್ಧವಾಗ ತಾಲ್ಲೂಕು ಮತ್ತು ಪಟ್ಟಣ. ಪ್ರಾಚೀನ ಹಿನ್ನಲೆಯುಳ್ಳ ಈ ಪ್ರದೇಶದಲ್ಲಿ ನುಂಕೆ ಬೆಟ್ಟವೊಂದಿದೆ. ಇಂದಿಗೂ ನುಂಕೆಬೈರಪ್ಪನ ಭಕ್ತರು ಅಲ್ಲಿದ್ದು, ಪ್ರತೀ ವರ್ಷವೂ ಜಾತ್ರೆ ನಡೆಯುವುದು. ಆ ಪ್ರದೇಶದ 33 ಹಳ್ಳಿಯ ಗ್ರಾಮಸ್ಥರು ನುಂಕೆ ಬೈರವನ ಒಕ್ಕಲು, ಮಾದಾರ ಜನಾಂಗದವರು ಆತನ ಒಕ್ಕಲೇ ಅಗಿದ್ದು, ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ನುಂಕಪ್ಪ, ನುಂಕೇಶ್ವರ, ಇತ್ಯಾದಿ ಹೆಸರುಗಳನ್ನಿಡುವ ಸಂಪ್ರದಾಯವಿದೆ. ಅಷ್ಟೇ ಅಲ್ಲ 'ನುಂಕೆ ಬೈರವ' ಮತ್ತು ಆತನ ಭಕ್ತನಾದ 'ಹರಳಯ್ಯ'ನನ್ನೂ (12ನೇ ಶತಮಾನದ ಹರಳಯ್ಯನಿಗೂ ಐತಿಹ್ಯದ ಹರಳಯ್ಯನಿಗೂ ಸಂಬಂಧವಿಲ್ಲ) ಆರಾದಿಸುವ ಕುಟುಂಬಗಳು ಆ ಬೆಟ್ಟದಲ್ಲಿರುವರು, ಇವರನ್ನು 'ಗೊರವರು' ಹೆಸರಿನಿಂದ ಕರೆಯುವರು. ಇವರು ನುಂಕೇ ಭೈರವನ ಭಕ್ತರಾಗಲು ಹರಳಯ್ಯ, ಭೈರವನ ಭಕ್ತನಾದುದೇ ಮುಖ್ಯ ಕಾರಣವೆಂದೂ ಐತಿಹ್ಯ ಹೇಳುತ್ತದೆ. ಭೈರವನ ಬೆಟ್ಟ ಹತ್ತುವ ಮೊದಲು ಹರಳಯ್ಯ ಪಾದಗಟ್ಟವಿದ್ದು, ಅದಕ್ಕೆ ಮೊದಲ ಪೂಜೆ ಸಲ್ಲಿಸುವರು. ಅದರ ಪಕ್ಕದಲ್ಲೇ ಹರಳಯ್ಯನ ಭಾವಿಯೊಂದಿದ್ದು, ಅಲ್ಲಿ ಜಾತಿ–ಮತದ ತಾರತಮ್ಯವಿಲ್ಲದೆ ನೀರು ಕುಡಿದು, ಬೆಟ್ಟವನ್ನೇರಿ ನುಂಕೆ ಭೈರವನ ಪೂಜೆಯನ್ನು ಮಾಡುವರು. ಬೈರವನಿಗಿಂತ ಹರಳಯ್ಯನ ಪೂಜೆ ಮೊದಲು ನಡೆಯಬೇಕೆಂಬುದು ಅಲ್ಲಿಯ ನಿಯಮ. ಅದರ ಸ್ವಾರಸ್ಯಕರ ಐತಿಹ್ಯವೊಂದು ಹೇಗಿದೆ.

ಒಮ್ಮೆ ನುಂಕೇ ಭೈರವ, ರಸಾಸಿದ್ಧ ರಾಕ್ಷಸನನ್ನು ಸಂಹರಿಸಲು ತನ್ನ ಕುದುರೆಯನ್ನೇರಿ ಬೆಟ್ಟಕ್ಕೆ ಹೋದನು. ಅಲ್ಲಿನ ಎತ್ತರದ ಬಂಡೆಗಳನ್ನು ಏರಿಕೊಂಡು ಮಧ್ಯಕ್ಕೆ ಹೋಗಿತ್ತಿದ್ದಂತೆ ಕುದುರೆಯ ಕಡಿವಾಣ ಹರಿದು ಹೋಯಿತೆಂದೂ ಆಗ ಜೊತೆಯಲ್ಲಿದ್ದ ತನ್ನ ಶಿಷ್ಯ ಹರಳಯ್ಯ ಕೂಡಲೇ ಕಾಲಿನ ಹೆಬ್ಬರಳಿನ ತುದಿಯಿಂದ ತನ್ನ ತೊಡೆಯವರೆಗೂ ಚರ್ಮವನ್ನು ಎಳೆದು ಹರಿದುಹೋಗಿದ್ದ ಲಗಾಮಿಗೆ ಗಂಟುಹಾಕಿಕೊಂಡನೆಂದೂ ಆ ಸಹಾಯದಿಂದ ರಸಾಸಿದ್ಧನನ್ನು ಕೊಂದು ಜಯಶಾಲಿಯಾಗುವನು. ಹರಳಯ್ಯನ ಭಕ್ತಿ ಮತ್ತು ನಿಷ್ಠೆಗೆ ಮೆಚ್ಚಿ 'ಹರಳಯ್ಯ "ಸ್ವಾಮಿ ಭಕ್ತಾದಿಗಳು ತಮ್ಮ ದರ್ಶನಕೆಂದು ಈ ಬೆಟ್ಟವನ್ನೇರುವ ಮುನ್ನ ಪ್ರಥಮ ಪೂಜೆಯನ್ನು ನನಗೆ ಸಲ್ಲಿಸಬೇಕು, ಇಲ್ಲಿರುವ ಪುಷ್ಕರಣಿಯ ನೀರನ್ನು ಜಾತಿ ಭೇದವಿಲ್ಲದೇ ಉಪಯೋಗಿಸುವಂತಾಗಲೆಂದು ಕೇಳಿಕೊಂಡಂತೆ ಈ ಪದ್ಧತಿ ಇಂದಿಗೂ ಜೀವಂತವಾಗಿದೆ". (ವಸಂತ ಮಾಸ್ತರು, (ಮಾಹಿತಿದಾರ) ಮೊಳಕಾಲ್ಮೂರು). ಇಲ್ಲಿಯ ಶಿಲಾ ಶಿಲ್ಪದ ಮೇಲೆ ಇರುವ ಕವಚಗಳು, ಮುಖವಾಡಗಳು ಇತ್ಯಾದಿಗಳು ಗಾಜರಕೋಟ್ ಶೈಲಿ ರಚನೆಯ ಲೋಹಶಿಲ್ಪಗಳೇ ಆಗಿರುತ್ತವೆ.

ಕದಂಬರ ಕಾಲದಲ್ಲೇ ನುಂಕೇ "ಭೈರವ"ನ ದೇವಸ್ಥಾನ ಮತ್ತು ಹರಳಯ್ಯನ ಪಾದಗಟ್ಟೆ ನಿರ್ಮಾಣವಾಗಿರಬಹುದೆಂದು ಭಕ್ತರ ನಂಬಿಕೆ (ಪುಟ, 184, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ).

ಪ್ರಕಟಣೆ: "ರಾಜ್ ಪ್ರಕಾಶನ, ಮೈಸೂರು, 2004"

ಮಾತಂಗಿ ಶಿಲ್ಪ:

ಮಾತಂಗಿ ಮಾದಾರರ ಕುಲದವಳೆಂದೂ ಆಕೆಯೇ 'ಕುಲದೇವತೆ' ಎಂದು ನಂಬಿರುವರು. 'ಮಾತಂಗಿ ದೇವತೆಯಾಗಿ' ಹೇಗೆ ಪೂಜೆಗೆ ಅರ್ಹಳಾದಳು ಎಂಬುದಕ್ಕೆ ಪುರಾಣವೊಂದು ಹೇಗಿದೆ. ಜಮದಗ್ನಿ ಮಹರ್ಷಿ ದೇವತಾ ಶಕ್ತಿಯಿಂದ ರೇಣುವಿನ ಮಗಳಾದ ರೇಣುಕಾಳನ್ನು ಮದುವೆಯಾದ ಹಾಗೂ ಅವಳಿಂದ ಐದು ಜನ ಮಕ್ಕಳನ್ನು ಪಡೆದ. ಕಿರೀಯ ಮಗನೇ ವಿಷ್ಣುವಿನ ಅವತಾರದ ಪರಶುರಾಮ, ಭಾಗವತ ಪುರಾಣದ ಪ್ರಕಾರ, ಒಮ್ಮೆ ರೇಣುಕೆ ನೀರು ತರಲು ಹೋದಾಗ, ಜಲ ಕ್ರೀಡೆಯಲ್ಲಿ ತೊಡಗಿದ್ದ ಗಂಧರ್ವರನ್ನು ನೋಡುವಳು,

ರೇಣುಕೆಯೊಂದಿಗೆ ಅವಳ ಅಂಗರಕ್ಷಕಿ ಮಾತಂಗಿ ಹೋಗಿದ್ದಳು. ಎಂದಿನಂತೆ ಅಂದು ಪತಿಗೆ ಬೇಕಾದ ಹೋಮದ ನೀರ ತರಲಾಗಲಿಲ್ಲ. ಜಮದಗ್ನಿಯ ದಿವ್ಯ ದೃಷ್ಟಿಗೆ ತನ್ನ ಪತ್ನಿಯ ಮನಸ್ಸು ತಿಳಿಯಿತು. ಪತ್ನಿ ಬರಿಗೈಲಿ ಹಿಂದಿರುಗಿದ ವಿಚಾರ ಗೊತ್ತಾಗಿ, ಕೋಪಗೊಂಡು, ತಪ್ಪಿತಸ್ಥ ತಾಯಿಯನ್ನು ಕೊಲ್ಲುವಂತೆ ಪರಶುರಾಮನಿಗೆ ಆಜ್ಞಾಪಿಸುತ್ತಾನೆ. ಪರಶುರಾಮನು ನದಿಯ ಕಡೆಗೆ ಬರುವಾಗ, ದಾರಿಯಲ್ಲಿ ಬರುತ್ತಿರುವ ತಾಯಿಯನ್ನು ಕಂಡು ಬಾಣ ಬಿಡುವನು. ಆಗ ಅವಳ ರುಂಡ ಹಾಗೂ ಮುಂಡಗಳು ಬೇರೆ ಬೇರೆಯಾಗಿ ಬೀಳುವುವು. ಅವಳ ಜೊತೆಯಲ್ಲಿದ್ದ ಸೇವಕಿಯ ದೇಹ ಅದೇ ತೆರನಾಗಿ ಬೀಳುವುದು, ಆದರೆ ಈ ಅಂಶ ಪರಶುರಾಮನ ಗಮನಕ್ಕೆ ಬಂದಿರುವುದಿಲ್ಲ.

ತಾಯಿಯ ಶಿರಶ್ಚೇದನದ ವಿಷಯ ತಿಳಿಸಲು ತಂದೆಯ ಬಳಿಗೆ ಬರುವನು. ಮಗನ ವಿಧೇಯತೆಯನ್ನು ಕಂಡು ಮೆಚ್ಚಿ, ಏನು ವರಬೇಕು ಕೇಳೆಂದನು. ಆಗ ಅವನು ಮತ್ತೆ ತನಗೆ ತಾಯಿಬೇಕೆಂದು ಬೇಡಿಕೊಂಡನು. ಕೂಡಲೇ ಜನದಗ್ನಿ ಕಮಂಡಲದಿಂದ ಪವಿತ್ರವಾದ ತೀರ್ಥವನ್ನು ನೀಡಿ, ತುಂಡರಿಸಲ್ಪಟ್ಟ ದೇಹದ ಭಾಗಗಳನ್ನು ಜೋಡಿಸಿ, ನಂತರ ನೀರನ್ನು ಸಿಂಪಡಿಸಲು ಸೂಚಿಸಿದನು. ಪರಶುರಾಮನು ಅತ್ಯಂತ ಸಂತೋಷ ಭರಿತನಾಗಿ ಹಾಗೂ ದುಡುಕುತನದಿಂದ ಮುಂಜಾವಿನ ಬೆಳಕಿನಲ್ಲಿ, ತನ್ನ ತಾಯಿ ಶಿರಕ್ಕೆ ಮಾತಂಗಿ ದೇಹವನ್ನು ಜೋಡಿಸಿ, ಪವಿತ್ರ ನೀರನ್ನು ಚುಮುಕಿಸಿದನು, ಅಲ್ಲೇ ಇದ್ದ ಮತ್ತೊಂದು ಶಿರವನ್ನು ದೇಹಕ್ಕೆ ಜೋಡಿಸಿ, ಅದಕ್ಕೂ ಸಹ ಜೀವ ನೀಡಿದ್ದನು ತಾನು ಮಾಡಿದ ತಪ್ಪನ್ನು ತಿಳಿದು, ತಂದೆಯ ಬಳಿ ಇಬ್ಬರನ್ನು ಕರೆದೊಯ್ದು ಕ್ಷಮೆ ಬೇಡಿದನು. ತನ್ನ ಮಡದಿಯ ಶಿರವಿರುವವಳನ್ನು ಮುನಿ ಒಪ್ಪಿಕೊಂಡು, ಮತ್ತೊಬ್ಬಳಿಗೆ ಕೆಳದರ್ಜೆಯ ದೇವತೆ ಸ್ಥಾನವನ್ನು ನೀಡಿದನು. ಇದೇ ಮಾತಂಗಿಯ ಹುಟ್ಟಿಗೆ ಕಾರಣವಾಯಿತು. [ಅನಂತಕೃಷ್ಣ ಅಯ್ಯರ್ ಮತ್ತು ಎಲ್.ಕೆ. ನಂಜುಂಡಯ್ಯ, ಮೈಸೂರು ಬುಡಕಟ್ಟು ಮತ್ತು ಜಾತಿ, 1928–1936 ಪುಟ,131]

ಇಂದೂ ಕೂಡ ಮಾದಾರರು ಕೆಲವು ಕಡೆ ತಾವು ಮತಂಗಿ ಮಕ್ಕಳೆಂದು ಹೇಳಿಕೊಳ್ಳುವರು. ಸ್ಟೂವರ್ಟ್ ಅವರ ಪ್ರಕಾರ ಹಿಂದೆ ಕನ್ನಡ ನಾಡಿನಲ್ಲಿ 'ಮಾತಂಗ' ಸಾಮ್ರಾಜ್ಯವಿತ್ತು. ಮಾತಂಗಿ 'ಕಾಳಿಗೆ' ಇರುವ

ಮತ್ತೊಂದು ಹೆಸರು. ಈ ದೇವತೆಯನ್ನು ಮನೆದೇವತೆಯಾಗಿ ಪೂಜಿಸುವರು. ಫ್ಲೀಟ್ ಅವರ ಪ್ರಕಾರ 'ಮಾತಂಗರು' ಮತ್ತು 'ಕಲಚೂರಿಗಳು' 'ಮಂಗಳೇಶನ' ಸಂಬಂಧಿಗಳು ಮಂಗಳೇಶನು ಒಂದನೆಯ ಕೀರ್ತಿವರ್ಮನ ಕೊನೆಯ ಸೋದರನೆಂದೂ ಆತನ ಆಳ್ವಿಕೆಯ ಕಾಲ ಕ್ರಿ.ಶ.489 ರಿಂದ ಕ್ರಿ.ಶ.532 ರವರೆಗೆ, 'ಮಾತಂಗ' ಎಂಬುದಕ್ಕೆ ಮಾದಿಗ, ಚಂಡಾಲ, ಕೀಳು ಜಾತಿಗೆ ಸೇರಿದವ, ಬೆಟ್ಟಗುಡ್ಡಗಳಲ್ಲಿ ಬೇಟೆಯಾಡುವವ, ಅನಾಗರೀಕನೆಂಬ ಹೆಸರುಗಳಿವೆ. ಕೋಮಟಿಗರು, 'ಕನ್ನಿಕಾ ಪರಮೇಶ್ವರಿ' ಹೆಸರಿನಲ್ಲಿ 'ಮಾತಂಗಿ'ಯನ್ನು ಪೂಜಿಸುವರು, ಮತ್ತೆ ಕೆಲವು ಸ್ಥಳಗಳಲ್ಲಿ ಮದುವೆಯಾಗದ ಮಾದಿಗರ ಹುಡುಗಿಯರಲ್ಲಿ ಒಬ್ಬಳನ್ನು ಮಾತ್ರ ಮಾತಂಗಿಯನ್ನಾಗಿ ಆರಿಸುವ ವಿಧಿಯು ಇದೆ. [ಪುಟ,178, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ ಡಾ. ಮೈಲನಹಳ್ಳಿ ರೇವಣ್ಣ].

ಚಿತ್ತಾಪುರದ ಊರಿನ ಹೊರಭಾಗದ ದೇವಾಲಯದಲ್ಲಿ ಮಾತಂಗಿಯ ವಿಗ್ರಹವಿದ್ದು, ಇಂದಿಗೂ ಅದರ ಸಂಸ್ಕಾರಕ್ಕೆ ತಕ್ಕುದಾದ ಜೀವಂತ ಆಚರಣೆಗಳು ಅಲ್ಲಿ ಚಾಲ್ತಿಯಲ್ಲಿದ್ದು, ಮಾತಂಗಿಯರಾದವರು ಅಲ್ಲಿ ಭಕ್ತರು ನೆರವೇರಿಸುವ ಪೂಜೆ ಪುನಸ್ಕಾರಗಳ ಮೂಲಕ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ.

ಈ ರೀತಿಯಾಗಿ ಹಲವಾರು ಆಚರಣೆಗಳಲ್ಲಿ ಇರುವ ದೈವಗಳ, ಗ್ರಾಮದೇವತೆಗಳ ಹಿನ್ನೆಲೆಗಳಿಗೆ ತಕ್ಕಂತಹ ಲೋಹ ಶಿಲ್ಪಗಳನ್ನು ಅನುಕ್ರಮವಾಗಿ ಧಾರ್ಮಿಕ ಶಿಲ್ಪಗಳೆಂತಲೂ, ಆಚರಣೆ ಸಂದರ್ಭಗಳಲ್ಲಿ ಉಪಯೋಗಿಸುವ ಲೋಹ ಮೂರ್ತಿಗಳನ್ನು ಆಚರಣಾತ್ಮಕ ಶಿಲ್ಪಗಳೆಂತಲೂ ಕರೆಯಲ್ಪಡುತ್ತದೆ.

ಧಾರ್ಮಿಕ ಸಂದರ್ಭಗಳಲ್ಲಿ ಅದು ಯಾವುದೇ ಧರ್ಮಕ್ಕೆ ಸೇರಿದಂತಹ ಶಿಲ್ಪಗಳಾದರೂ ಸರಿಯೇ ಗಾಜರಕೋಟ್ ಶಿಲ್ಪಕಲಾವಿದರು ತಮ್ಮ ಬೇಧಭಾವಗಳನ್ನು ತೋರದೆ ಅವುಗಳ ಪಾವಿತ್ರ್ಯಕ್ಕೆ ಧಕ್ಕೆ ಒದಗದ ರೀತಿಯಲ್ಲಿ ರಚಿಸಿ ಅವುಗಳಿಗೆ ಪವಿತ್ರತೆಯನ್ನು ಅಳವಡಿಸಿ, ಆರಾಧನೆಗೆ ಸೂಕ್ತವಾಗಿ ಸಿದ್ಧಪಡಿಸಿ ಕೊಡುತ್ತಾರೆ.

ಧಾರ್ಮಿಕ ಲೋಹ ಶಿಲ್ಪಗಳಂತೆಯೇ ಇಲ್ಲಿ ಸೌಂದರ್ಯಾತ್ಮಕ ದೃಷ್ಟಿಯುಳ್ಳಂತಹ ಲೋಹ ಶಿಲ್ಪಗಳನ್ನು ಗಾಜರಕೋಟ್ ಲೋಹ ಶೈಲಿಗಳಲ್ಲಿ ನಿರ್ಮಾಣವನ್ನು ಮಾಡುತ್ತಾರೆ.

ಸೌಂದರ್ಯಾತ್ಮಕ ಗಾಜರಕೋಟ್ ಲೋಹ ಶಿಲ್ಪಗಳು ಆಕೃತಿಗಳಲ್ಲಿ ಬೇರೆ ಶಿಲ್ಪಗಳನ್ನು ಹೋಲುವಂತಿದ್ದರೂ ಅವುಗಳ ಸೃಷ್ಟಿಯು, ರಚನೆಯ ಪ್ರತಿ ಹಂತಗಳೂ ಗಾಜರಕೋಟ್ ಶೈಲಿಯಲ್ಲಿಯೇ ನಿರ್ಮಿಸಿರುತ್ತಾರೆ.

ಪ್ರಸ್ತುತವಾಗಿ ಗಾಜರಕೋಟ್ ಲೋಹ ಶಿಲ್ಪಗಳನ್ನು 1) ಧಾರ್ಮಿಕ ಹಿನ್ನೆಲೆಯಲ್ಲಿನ ಶಿಲ್ಪಗಳನ್ನು ಮತ್ತು 2) ಸೌಂದರ್ಯಾತ್ಮಕ ಶಿಲ್ಪಗಳು ಎಂದು ಅಂದರೆ 1) **ಗಾಜರಕೋಟ್ ಶಿಲ್ಪಗಳಲ್ಲಿ ಧಾರ್ಮಿಕ ಲೋಹ ಶಿಲ್ಪಗಳು ಮತ್ತು 2) ಗಾಜರಕೋಟ್ ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಲೋಹ ಶಿಲ್ಪಗಳು** ಎಂದು ವರ್ಗೀಕರಿಸಿಕೊಂಡು ಅಧ್ಯಾಯಗಳ ಮೂಲಕ ಅಧ್ಯಯನ ಪೂರೈಸಲಾಗಿದೆ.

ಅಧ್ಯಾಯ –3:

ಗಾಜರಕೋಟ್ ಶೈಲಿ ಲೋಹ ಶಿಲ್ಪಗಳ ತಯಾರಿಕೆ ಮತ್ತು ವೈಶಿಷ್ಟತೆ

ಜನಪದ ನಂಬಿಕೆಗಳು :

ಮಾನವನ ಬದುಕು ನಂಬಿಕೆಗಳನ್ನು ಆಧರಿಸಿ ರೂಪಗೊಂಡಿರುತ್ತದೆ. ವ್ಯಕ್ತಿ–ವ್ಯಕ್ತಿಗೆ, ಜನಾಂಗ–ಜನಾಂಗಕ್ಕೆ ಕೆಲಸ ಮಾಡುವ ವಿಧಾನ, ಗ್ರಹಿಕೆ, ಕಲ್ಪನಾಶಕ್ತಿ, ಆಲೋಚನಾಕ್ರಮಗಳ ಆಧಾರದ ಮೇಲೆ ಭಿನ್ನಭಿನ್ನವಾಗಿ ನಂಬಿಕೆಗಳು ಆಚರಣೆಯಲ್ಲಿರುತ್ತವೆ. ಸಮಷ್ಟಿ ಅಭಿವ್ಯಕ್ತಿಯ ಮಾಧ್ಯಮಗಳಾದ ನಂಬಿಕೆಗಳು ಮನಸ್ಸಿನಲ್ಲಿ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಬಂದು ಘಾಢವಾಗಿ ಉಳಿದುಕೊಂಡು ಬಂದು, ಮಾನವನ ಜೀವನವನ್ನೇ ಆವರಸಿಕೊಂಡಿವೆ.

ವಸ್ತುಗಳಲ್ಲಿ ಜನಪದ ಶಿಲ್ಪಕಲೆ :

ಅಡಕತ್ತರಿಗಲು ಅಡಕೆ ಕತ್ತರಿಸುವ ಸಾಧನಗಳು ಪ್ರತಿಯೊಬ್ಬರ ಬಳಿಯೂ ಇವು ಇರಲೇಬೇಕು. ಅಡಕತ್ತರಿಯ ಬೇರೆ ಬೇರೆಯ ವಿನ್ಯಾಸಗಲು ಆಶ್ಚರ್ಯವನ್ನುಂಟು ಮಾಡುತ್ತವೆ. ಇದನ್ನು ಮಾಡಿದ ಲೋಹಶಿಲ್ಪಿಗಳು ಅಪಾರ ರಸಿಕರೂ, ಕಲಾವಂತರೂ ಆದವರು. ನಿತ್ಯವೂ ಬಳಸುವ ವಸ್ತು ತೀರ ಸಾಧರಣವಾದುದಾದರೆ ಎಂತು! ಅದರಲ್ಲಿ ಏನಾದರೂ ಒಂದು ಕುಸುರಿ ಕೆಲಸ ಇರಬೇಕು. ಕಲ್ಪನೆಯ ಕೌತುಕ ಇರಬೇಕು. ಈ ಅಡಕತ್ತರಿಗಳಲ್ಲಿ ಕುದುರೆ ಸವಾರರಿರುತ್ತಾರೆ. ಪರಸ್ಪರ ಅಪ್ಪಿ ಮದ್ದಾಡುವ ಪ್ರೇಮಿಗಳಿರುತ್ತಾರೆ. ಇದರ ಎರಡು ಭಾಗಗಳಲ್ಲಿ ಒಂದು ಹೆಣ್ಣು ಇನ್ನೊಂದು ಗಂಡು. ಅಡಿಕೆಯನ್ನು ಇದರ ಬಾಯಿಗೆ ಇಟ್ಟಾಗ ಪ್ರೇಮಿಗಳಿಬ್ಬರೂ ಬೇರೆ ಬೇರೆಯಾಗಿರುತ್ತಾರೆ. ಅಡಿಕೆ 'ಕಟ್' ಎಂದು ಚೂರಾದ ಕೂಡಲೇ ಆ ಎರಡು ಭಾಗಗಳೂ ಕೂಡಿಕೊಳ್ಳುತ್ತವೆ. ಪ್ರೇಮಿಗಳು ಪರಸ್ಪರ ಅಪ್ಪಿದಷ್ಟೇ ಸಂತೋಷ. ಆ ಚೂರನ್ನು ಬಾಯಿಗೆ ಎಸೆದುಕೋಳ್ಳುವ ರಸಿಕರಿಗೂ ಆಗಬಹುದು(ಡಾ.ಜಿ.ಶಂ.ಪರಮಶಿವಯ್ಯ : ಮನೆಬಳಕೆಯ ವಸ್ತುಗಳಲ್ಲಿ ಕಲಾತ್ಮಕತೆ : ಪುಟ ೩೫ : ಡಾ.ಚಕ್ಕರೆ ಶಿವಶಂಕರ : ಜನಪದ ತಂತ್ರಜ್ಞಾನ)ಇಂತಹ ನಾನಾ ರೀತಿಯ ವಿಡಂಬನಾತ್ಮಕ, ಹಾಸ್ಯ ಮತ್ತು ಚಮತ್ಕಾರಗಳನ್ನು ಜನಪದ ಶಿಲ್ಪಿಗಳು ಪ್ರಕಟಿಸುತ್ತವೆ.

ವೀಳ್ಯದ ತಟ್ಟೆಗಳದೇ ಒಂದು ವಿಶಿಷ್ಟ ಕಲಾಲೋಕ. ಲೋಹದ ತಟ್ಟೆಗಳಲ್ಲಿ ಸೊಗಸಾದ ಕೆತ್ತನೆಗಳಿರುತ್ತವೆ. ಒಳ್ಳೆಯ ವರಸೆಗಳಿರುತ್ತವೆ. ಬಿದಿರು, ಬೆತ್ತಗಳ ವೀಳ್ಯದ ತಟ್ಟೆಗಳೂ ಉಂಟು. ಸಾಮೂಹಿಕ ಭೋಜನಗಳಲ್ಲಿ ಎಲ್ಲರಿಗೂ ವೀಳೆಯನ್ನು ಒದಗಿಸುವುದೆಂತು! ಅದಕ್ಕಾಗಿ ಒಬ್ಬ ಕುಶಲ ಚಕ್ರವಿರುವ ವೀಳೆಯ ತಟ್ಟೆಯನ್ನು ರೂಪಿಸಿಬಿಟ್ಟ. ಪಂಕ್ತಿಗಳಲ್ಲಿ ಅಥವಾ ಗುಂಪುಗಳಲ್ಲಿ ಕುಳಿತವರ ಬಳಿಗೆ ಯಾರೂ ವೀಳೆಯನ್ನು ಒಯ್ಯಬೇಕಾದುದಿಲ್ಲ. ಗಾಲಿಗಳ ಮೇಲೆ ಉರುಳಿಕೊಂಡು ಈ ತಟ್ಟೆ ಎಲ್ಲರ ಬಳಿಗೂ ಸಾಗುತ್ತದೆ. ಸೌಟುಗಳಲ್ಲಿ, ಲಟ್ಟಣಿಗೆಗಳಲ್ಲಿ, ಕವೆಗೋಲು ಹಿಟ್ಟಿನ ಕೋಲುಗಳಲ್ಲಿ, ಅನ್ನ ಬಸೆಯುವ ಸಾಧನಗಳಲ್ಲಿ, ಮಡಿಕೆ ಕುಡಿಕೆಗಳಲ್ಲಿ, ಪಾತ್ರೆ ಪರಡಿಗಳಲ್ಲಿ ಬಗೆಬಗೆಯ ಚಿತ್ತಾರಗಳು, ಆಧುನಿಕ ಸ್ಟೀಲ್ ಪಾತ್ರೆಗಳಲ್ಲಿ ಸಾಂಬಾರು ಬಟ್ಟಲುಗಳನ್ನು ನಾವು ಕಾಣುತ್ತೇವೆ. ಆದರೆ ಪ್ರಾಚೀನ ಕಾಲದಲ್ಲಿಯೇ ಮರದ ಸಾಂಬಾರು ಬಟ್ಟಲುಗಳು ಕಂಡು ಬರುತ್ತವೆ. ನಾಲ್ಕಾರು ಒಳಬಟ್ಟಲುಗಳನ್ನೊಳಗೊಂಡ ಇವಕ್ಕೆ ಹೊಂದಿಕೊಂಡ ಮುಚ್ಚಳಗಳು, ಜೊತೆಗೆ ಒತ್ತಿದ್ದರೆ ಹಾಕಿಕೊಳ್ಳುವ ಬೀಗ! ಇಂಥ ಬಗೆಯ ವಿಶಿಷ್ಟ ಸಾಧನಗಳನ್ನು ಇಂದಿಗೂ ನಿತ್ಯ ಬಳಕೆಯಲ್ಲಿ ಕಾಣಬಹುದು. ಲೋಹದ ಪಾತ್ರೆಗಳಲ್ಲಿ ಹಂಡ, ಬಿಂದಿಗೆ, ತಂಬಿಗೆ, ಚರಿಗೆ, ಪಂಚಪಾತ್ರೆ, ಬೋಗಣಿ, ತಣಿಎ, ಬೂಸಿ, ಕೈಬಟ್ಟಲು, ಮೂಗಬಟ್ಟಲು, ಮೀಳ್ಳೆ, ಕಳಸ ಮುಂತಾದವುಗಳನ್ನು ಕಾಣುತ್ತೇವೆ. ಇವೆಲ್ಲ ಕಂಚುಮಟ್ಟುಗಳು. ಒಂದೊಂದು ಜನಾಂಗಕ್ಕೆ ಮೀಸಲಾದ ಕಂಚು ಮಟ್ಟುಗಳರುತ್ತವೆ. ಅವು ಪವಿತ್ರ ಸಾಧನಗಳೂ ಹೌದು. ಬೇರೆಯವರಿಗೆ ಕಂಚು ಮಟ್ಟುಗಳನ್ನು ನೀಡುವುದಿಲ್ಲ. ತಮ್ಮವರಿಗೆ ಮಾತ್ರ ಅದನ್ನು ಬಳಸುವ ಹಕ್ಕುಂಟು. ಇಂಥ ನಿತ್ಯ ಬಳಕೆಯ ವಸ್ತುಗಳಲ್ಲೂ ಕಲೆಯ ಕುಸುರಿ ಇದ್ದೇ ಇರುತ್ತದೆ. (ಡಾ.ಜೀ.ಶಂ.ಪರಮಶಿವಯ್ಯ : ಮನೆಬಳಕೆಯ ವಸ್ತುಗಳಲ್ಲಿ ಕಲಾತ್ಮಕತೆ : ಪುಟ ೩೬ : ಸಂ : ಡಾ. ಚಕ್ಕರೆ) ಪ್ರತಿಯೊಂದು ಮನೆಯ, ಮನೆತನದ, ಪರಾಂಪರ್ಯದ ವಿಶೇಷ ಗೌರವಗಳನ್ನು ಕಾಪಾಡಿಕೊಳ್ಳಲು ಗ್ರಾಮೀಣರು ಪ್ರತಿಯೊಂದು ವಸ್ತುವನ್ನು ಬಹಳ ವಿಶೇಷ ಆದರಗಳಿಂದ ಕಾಣುತ್ತಾರೆ.

ಪೀಟಾರಿಗಳು, ಪೀಠೋಪಕರಣಗಳು, ಆಯುಧ ಮುಸ್ತಾಪುಗಳು, ಆಟದ ಸಾಧನಗಲು, ಮನೆ ಬಳಕೆಯ ವಸ್ತುಗಳಲ್ಲಿ ಕಂಡುಬರುತ್ತವೆ. ನಮ್ಮ ಪ್ರಾಚೀನ ಕುಶಲಕರ್ಮಿಗಳು ಕಲಾಕೌಶಲ್ಯವನ್ನು ಶಾರುವ ವಸ್ತುಗಳು ನಮ್ಮ ಹೆಮ್ಮೆಯ ಆಸ್ತಿ. ಮಲೆನಾಡಿನಲ್ಲಿ ಒಂದು ಸಂಪ್ರದಾಯ ಉಂಟು. ಮದುವೆಯಾದ ಹೆಣ್ಣು ಗಂಡನ ಮನೆಗೆ ಹೋಗುವಾಗ ಅವಳಿಗೆ ಬಳುವಳಿಯಾಗಿ ಕೆಲವು ವಸ್ತುಗಳನ್ನು ಕೊಡಲಾಗುವುದು. ಅದರಲ್ಲಿ 'ಬಳುವಳಿ ಸಟ್ಟು'ಗೆ (ನಾಗವಲ್ಲಿ ಸಟ್ಟುಗೆ) ಒಂದು. ಇದು ವಿಶಿಷ್ಟ ಆಕಾರದಲ್ಲಿ ಬಡಗಿಯೊಬ್ಬ ಕಡೆದ ಒಂದು ಸುಂದರ ವಸ್ತು ಮನೆಯಲ್ಲಿ ಸದಾ ಸೌಟು ಆಡುತ್ತಿರಬೇಕು. ತಮ್ಮ ಮಗಳು ಬಾಳುವ ಮನೆಯಲ್ಲಿ ಭೋಗ ಭಾಗ್ಯಗಳು ತುಂಬಿರಬೇಕು. ಎಂಬ ಹಾರೈಕೆಯೊಡನೆ ನೀಡುವ ವಸ್ತು ಇದು. ತನ್ನ ತೌರಿನವರು ಕೊಟ್ಟ ಈ ಅಪೂರ್ವ ಕೊಡುಗೆಯನ್ನು ಮಗಳು ಅತ್ಯಂತ ಎಚ್ಚರದಿಂದ ಗೌರವ ಭಾವದಿಂದ, ಪ್ರೀತಿ ಮಮತೆಗಳಿಂದ ಕಾದಿಟ್ಟುಕೊಳ್ಳುತ್ತಾಳೆ. ನಮ್ಮ ಮನೆಯ ಸಂಸ್ಕೃತಿಯನ್ನು ಬೆಳಗುವ ಇಂಥ ಪ್ರಾಚೀನ ವಸ್ತು ವಿಶೇಷಗಳನ್ನು ನಾವು ಅಕ್ಕರೆಯಿಂದ ರಕ್ಷಿಸಬೇಕು. ನಮ್ಮ ಮುಂದಿನ ಪೀಳಿಗೆಗೆ ಇವುಗಳ ಹಿರಿಮೆಯನ್ನು ಸಾರಬೇಕು. ನಮ್ಮ ಹಿರಿಯರು ಬಾಳಿ ಬದುಕಿದ ರೀತಿಯಿಂದ ಕಿರಿಯರು ಸ್ಫೂರ್ತಿಪಡೆಯುವಂತೆ ಮಾಡಬೇಕು. ಎಷ್ಟೋ ಕಾಲದಿಂದ ಪರಂಪರಾನುಗತ ಕೊಡುಗೆಯಾಗಿ ಬಂದ ಸಾಂಸ್ಕೃತಿಕ ದಾಖಲೆಯನ್ನು ಮುಂದೆ ಮುಂದೆ ಒಯ್ಯುವ ಕರ್ತವ್ಯದಿಂದ ನಾವು ವಂಚಿತರಾಗಬಾರದು (ಪುಟ ೩೭ ಅದೇ) ಎಂಬ ಜವಾಬ್ದಾರಿಯನ್ನು ಮುಂದಿನ ಪೀಳಿಗೆಯವರಿಗೆ ಯುವ ಜನತೆಗೆ ನೀಡಿರುವ ಜೀ.ಶಂ.ಪ. ರವರು ಶ್ರೇಷ್ಟ ಜನಪದ ತಜ್ಞರಾಗಿದ್ದಾರೆ.

ಲೋಹ ಶಿಲ್ಪ:

ಜ್ಞಾನ, ಅನುಭವ ಮತ್ತು ಪ್ರಯೋಗದಿಂದ ಪ್ರಾಪ್ತವಾಗುತ್ತದೆ. ಅನುಭವ ಗ್ರಹಿಕೆ ಮತ್ತು ಅನುಸರಣೆಯಿಂದ ಸಿದ್ಧವಾಗುತ್ತದೆ. ಅನುಸರಣೆಯಲ್ಲಿ ಪ್ರಯೋತಾತ್ಮಕ ಕೂಡ ಇದೆ. ನಮ್ಮ ಜನಪದ ಆಹಾರ ಮತ್ತು ಔಷಧ ಪದ್ಧತಿಗಳು ಅನುಭವದಿಂದ ಸಿದ್ಧವಾದವು ಎಂದಾಗ ಅವು ನಿರಂತರ ಉಪಕರಣಗಳು ಆಯುಧಗಳು, ಅಲಂಕಾರಿಕ ವಸ್ತುಗಳು, ವ್ಯಾಯಾಮ ಪದ್ಧತಿಗಳು, ಕುಟ್ಟಿ ಬೀಸುವ ಪದ್ಧತಿಗಳು, ಯುದ್ಧ ತಂತ್ರಗಳು, ಮಳೆ, ಭೂಮಿ ಮತ್ತು ವಾತಾವರಣಕ್ಕೆ ಸಂಬಂಧಿಸಿದ ಅರಿವು, ಸಾಗಣೆ ಸಾಧನಗಳು, ದವಸ ಧಾನ್ಯ ಸಂರಕ್ಷಕ ಪದ್ಧತಿಗಳು, ಕುಯ್ಲು ಮತ್ತು ಕತ್ತರಿಸುವ ಸಾಧನಗಳು, ಜಲ ಸಂರಕ್ಷಣೆ ಮತ್ತು ಜಲವಾಹಕ ಪದ್ಧತಿಗಳು, ಬೇಟೆಯ ವಿಧಾನಗಳು, ಲೋಹ ಪರೀಕ್ಷೆ, ಲೋಹ ಪರಿವರ್ತನೆ ಮತ್ತು ಲೋಹ ಸಂಯೋಗ ವಿಧಾನಗಳು (ಪ್ರೊ.ಹಿ.ಚಿ.ರಾಮಚಂದ್ರೇಗೌಡ : ಜನಪದ ತಂತ್ರಜ್ಞಾನ : ಪುಟ ೩, ಸಂ: ಡಾ. ಚಕ್ಕರೆ ಶಿವಶಂಕರಯ್ಯ) ನಿರಂತರ ಪ್ರಯೋಗಗಳಿಂದ ಕರಗತಗೊಂಡಂತಹವು. ಕಾಲದ ಪರಿವರ್ತನೆ ಹಂತಗಳಲ್ಲಿ ಹಲವು ಕಳೆದುಕೊಂಡು ಕೆಲವನ್ನು ಪಡೆದುಕೊಂಡು ಭೂತಕಾಲದಿಂದ ವರ್ತಮಾನಕ್ಕೆ ವರ್ತಮಾನದಿಂದ ಭವಿಷ್ಯತ್ ಕಾಲಕ್ಕೆ ಪರಂಪರೆಯ ಜಾಡನ್ನು ಜನಪದ ಸಂಸ್ಕೃತಿಯು ತನ್ನ ಕೊಡುಗೆಗಳ ಮುಖಾಂತರ ಮಹತ್ವದ ಹಾದಿಯನ್ನು ತೋರಿಸಿಕೊಟ್ಟಿದೆ.

ಲೋಹ ಮಾಧ್ಯಮದಲ್ಲಿ ಶಿಲ್ಪ ತಯಾರಿಕೆ : ಗಾಜರಕೋಟ್ ಶೈಲಿ –೧

ಲೋಹ ಎರಕ ವಿಧಾನ :

ತ್ರಿಮಾನ ಕಲಾಕೃತಿಯನ್ನು ಲೋಹದಲ್ಲಿ ನಿರ್ಮಾಣ ಮಾಡುವುದಕ್ಕೆ ಮೂಲವಸ್ತುಗಳು ಮೊದಲು ಒದಗಿಸಿಕೊಳ್ಳುತ್ತಾರೆ. ಅವುಗಳೆಂದರೆ,

ಲೋಹ ಶಿಲ್ಪಕ್ಕೆ ಬಳಸುವ ವಸ್ತುಗಳು ಪರಿಕರಗಳು:

೦೧. ಶುದ್ಧೀಕರಿಸಿದ ಜೇಡಿಮಣ್ಣು

೦೨. ಉಸುಕು (ಮರಳು)

೦೩. ಸಗಣಿ

೦೪. ಬೂದಿ

೦೫. ಇಟ್ಟಿಗೆ ಪುಡಿ

೦೬. ಹೆಂಚಿನ ಪುಡಿ

೦೭. ಮೇಣ (ವ್ಯಾಕ್ಸ್ ಬಿ)

೦೮. ರಾಳ

೦೯. ಎಣ್ಣೆ (ಕಡಲೆಕಾಯಿ ಎಣ್ಣೆ)

೧೦. ಮೊಳೆಗಳು

೧೧. ಸಣ್ಣತಂತಿ

೧೨. ಕಲ್ಲಿದ್ದಲು

೧೩. ಕಟ್ಟಿಗೆ

೧೪. ಸೀಮೆಎಣ್ಣೆ

೧೫. ತೆಂಗಿನಕಾಯಿ

೧೬. ಸ್ಯಾಂಡ್ ಪೇಪರ್ (ಮರಳಿನ ಕಾಗದ)

ಸಲಕರಣೆಗಳು:

೦೧. ಸುತ್ತಿಗೆಗಳು

೦೨. ಹಿಡಿಕೆಗಳು

೦೩. ಮೂಸೆಗಳು

೦೪. ತೂಕಮಾಡುವ ತಕ್ಕಡಿ

೦೫. ಜರಡಿ

೦೬. ಬಟ್ಟೆ

೦೭. ಬಾಟ್ಲಿ

೦೮. ಏರ್ ಪಂಪ್

೦೯. ಊದುಕೊಳವೆ

೧೦. ರಬ್ಬಿಂಗ್ ಯಂತ್ರ

೧೧. ಕಟಿಂಗ್ ಪ್ಲೈರ್

೧೨. ಹಗ್ಗ

೧೩. ಬ್ಲೋಯರ್ ಲ್ಯಾಂಪ್

೧೪. ಆಕ್ಸಲ್ ಬ್ಲೇಡ್ ಆಂಡ್ ಪ್ರೇಮ್

೧೫. ಬಾಣಲಿಗೆ

ಚಾಣ: ಕಂಚು ಅಥವಾ ಇನ್ನು ಯಾವುದೇ ಮಾಧ್ಯಮ ಇರಬಹುದು ಅದನ್ನು ಕಟ್ ಮಾಡಲು ಬಳಸುವ ವಿಧಾನ ಇದು ಚಿಕ್ಕದಿಂದ ಹಿಡಿದು ದೊಡ್ಡ ಚಾಣದವರೆಗೆ ಇರುತ್ತದೆ.

ರಂಫ: ದೊಡ್ಡ-ದೊಡ್ಡ ರನ್ನರ್‌ಗಳನ್ನು ಕತ್ತರಿಸಲು ಬಳಸುವ ವಿಧಾನ

ಗೋಧಿ ಮೊಳೆ: ಕಂಚಿನ ವಿಗ್ರಹವನನು ಮಾಡಬೇಕಾದರೆ ಅಂದರೆ ಕೈಗಳಲ್ಲಿ ಬಳೆಗಳು ಮಾಡುವಾಗ ತಗ್ಗು ಜಾಗದಲ್ಲಿ ಉಪಯೋಗಿಸುತ್ತಾರೆ.

ವಾರರೇಖೆ ಮೊಳೆ: ಗೆರೆಗಳನ್ನು ಹಾಕಬೇಕಾದರೆ ಈ ಮೊಳೆ ಉಪಯೋಗಿಸಲಾಗುತ್ತದೆ.

ಪ್ಯಾರೆ ಮೊಳೆ: ಕೊರಳಲ್ಲಿ ಆಭರಣಗಳನ್ನು ಮಾಡುವಾಗ ಮಣಿ ಕಟ್ಟುವ ಮೊಳೆ

ಮಿದ್ದಿ ಮೊಳೆ: ದೇವತೆಗಳ ಮೈಮೇಲೆ ಬಟ್ಟೆ(ವಸ್ತ್ರ)ಮಾಡುವಾಗ ಬಳಸುವ ಮೊಳೆ

ಗುಬ್ಬೆ ಮೊಳೆ: ತಗಡಿನಲ್ಲಿ ವಿಗ್ರಹ ಮಾಡಬೇಕಾದರೆ ಹೊರಗಡೆ ಉಬ್ಬು ಎತ್ತುವ ವಿಧಾನ

ನೇರ ಮೊಳೆ: ನೇರವಾಗಿ ಗೆರೆ ಹಾಕುವಾಗ ಬಳಸುವ ವಿಧಾನ

ಹರ: ವಿಗ್ರಹ ಪಾಲಿಶ್ ಮಾಡುವಾಗ 0 ನಂತಹ ದೊಡ್ಡ ಹರ ಬೇಕಾಗುತ್ತದೆ. ಪ್ಲಾಟ್, ಕೊಳವೆ, ಚದುರ ಹಾರ, ಆಫ್‌ರೌಂಡರ್, ಮೂರು ಏಣಿ ಹರ

ಸುತ್ತಿಗೆ: ವಿಗ್ರಹ ಮಾಡಬೇಕಾದರೆ ಸುತ್ತಿಗೆ ಅವಶ್ಯಕ ಇದರಲ್ಲಿ ಚಿಕ್ಕದು, ಮಧ್ಯಮ, ದೊಡ್ಡದು ಇರುತ್ತವೆ.

ಮೊಳೆ: ಗುಂಡು ಮೊಳೆ, ನೈಸ್ ಮೊಳೆ, ಒಳ್ಳೆಮಟ್ಟ, ದಪ್ಪ ಮೊಳೆ, ಎರಡು ಮೂತಿ ಮೊಳೆ

ಬ್ರಶ್: ಬ್ರಶ್ ಸಣ್ಣ ತಂತಿಗಳಿಂದ ಅದನ್ನು ವಿಗ್ರಹವನ್ನು ತೊಳೆಯಲು ಬಳಸುತ್ತಾರೆ

ಕೈವಾರ: ವಿಗ್ರಹ ಮಾಡಬೇಕಾದಾಗ ಕೈವಾರದ ಸಹಾಯದಿಂದ ಅಳತೆ ತೆಗೆದುಕೊಳ್ಳಲು ಉಪಯೋಗಿಸುತ್ತಾರೆ.

ಮೇಣದಲ್ಲಿ ಆಕೃತಿಯನ್ನು ತಯಾರಿಸಬೇಕಾದರೆ ಬಳಸುವ ಉಪಕರಣಗಳು:

1. ಮರದ ಉಪಕರಣಗಳು,
2. ತಾಮ್ರದ ಉಪಕರಣಗಳು,
3. ಕಂಚಿನ ಉಪಕರಣಗಳು

ಪಂಚಲೋಹ ಮಾಧ್ಯಮದ ಎರಕದ ಲೋಹಶಿಲ್ಪಕ್ಕೆ ಬೇಕಾದ ಲೋಹಗಳು:

೧. ಚಿನ್ನ

೨. ಬೆಳ್ಳಿ

೩. ಹಿತ್ತಾಳೆ

೪. ತಾಮ್ರ

೫. ಸೀಸ (ಕಡಿಮೆ ಪ್ರಮಾಣ)

ಹಿತ್ತಾಳೆ ಹಾಗೂ ತಾಮ್ರ ಲೋಹಗಳು ಸಮಪ್ರಮಾಣವಾದರೆ ಸೂಕ್ತ.

ಹಂತ ಎರಡು – ಟೊಳ್ಳು ಕಲಾಕೃತಿಗಳು :

ಲೋಹ ಶಿಲ್ಪವನ್ನು ತಯಾರು ಮಾಡುವುದಕ್ಕೆ ಮೊದಲು ಆ ಶಿಲ್ಪದ ಮೂಲಕೃತಿಯನ್ನು ಜೇಡಿಮಣ್ಣು, ಪ್ಲಾಸ್ಟರ್ ಆಫ್ ಪ್ಯಾರೀಸ್ ಇವುಗಳ ಸಮಪ್ರಮಾಣದೊಂದಿಗೆ ಶಿಲ್ಪವನ್ನು ತಯಾರು ಮಾಡಿಕೊಳ್ಳಬೇಕು. ಸೂಕ್ಷ್ಮ ವಿವರಗಳನ್ನು ಬಿಡಿಸದೇ ಇದ್ದ ಪಕ್ಷದಲ್ಲಿ ಸ್ವಲ್ಪ ಹೆಚ್ಚುವರಿ ಲೋಹ ಆ ಭಾಗದಲ್ಲಿ ಕ್ರೋಢೀಕರಣವಾಗುಂತೆ ಅಂದಾಜು ಮಾಡಿ ಉಬ್ಬಿದ ಭಾಗಗಳು ಉಂಟಾಗುವಂತೆ ಮಾಡಿಕೊಳ್ಳಬೇಕು. ಕಲಾಕೃತಿಯ ಕಚ್ಚಾ ಪ್ರತಿ ಚಿತ್ರದಲ್ಲಿ ತೋರಿಸುವಂತೆ ತಯಾರುಮಾಡಿಕೊಂಡ ನಂತರ ಮರದ ಮೂಲದಿಂದ ತಯಾರುಗೊಂಡ ರಾಳ ಹಾಗೂ ಮೇಣವನ್ನು ಸಮಪ್ರಮಾಣದಲ್ಲಿ ಅಳತೆ(ತೂಕ) ಮಾಡಿ ಬಾಣಲಿಗೆ

ಹಾಕಬೇಕು. ಇಲ್ಲಿ ರಾಳ ಮೇಣದ ಅಳತೆ ಬಹಳ ಮುಖ್ಯ. ಯಾಕೆಂದರೆ ಇದರ ಆಧಾರದ ಮೇಲೆ ಲೋಹವನ್ನು ಎರಕಕ್ಕೆ ೧ : ೧೦ ರಂತೆ ಅಂದರೆ ೧ ಪ್ರಮಾಣ ರಾಳ-ಮೇಣವಾದರೆ ೧೦ ಪ್ರಮಾಣ ಲೋಹ ಬೇಕಾಗುತ್ತದೆ.

ರಾಳ ಮತ್ತು ಮೇಣವನ್ನು ಬಾಣಲಿಗೆ ಹಾಕಿದ ನಂತರ ಕಟ್ಟಿಗೆಯಿಂದ (ಸೌದೆ) ಒಲೆಯನ್ನು ಆರಂಭಿಸಿ, ಸುಮಾರು ಅರ್ಧತಾಸಿನ ಸಮಪ್ರಮಾಣದ ಬೆಂಕಿತಾಪಮಾನ ಮಾಡಿದಾಗ ರಾಳ ಮತ್ತು ಮೇಣ ಮಿಶ್ರಣಗೊಳ್ಳುತ್ತದೆ. ರಾಳ ಮತ್ತು ಮೇಣದ ಮಿಶ್ರಣ ನುಣುಪಾಗಿ ಇರಲು ಕಡಲೇಕಾಯಿ ಎಣ್ಣೆಯನ್ನು ಬಳಸಬಹುದಾಗಿದೆ. ಇವುಗಳ ಮಿಶ್ರಣದಿಂದ ತಯಾರಾದ ಮೇಣ ಮಿಶ್ರಣವನ್ನು ಶಾವಿಗೆ ಕರೆಯಲು ಬಲಸುವ ರೀತಿಯ ಒತ್ತಣಿಗೆಯಿಂದ ಮೇಣವು ಬಿಡಿ ಬಿಡಿ ದಾರಗಳಂತೆ ಅಥವಾ ಪಟ್ಟಿಕೆಗಳಂತೆಯ ಆಕಾರಕ್ಕೆ ಬರುವಂತೆ ಒತ್ತಣಿಗೆಯಿಂದ ಒತ್ತಿಕೊಂಡು ನಂತರ ಅದನ್ನು ಸ್ವಲ್ಪ ಒಣಗಿದ ನಂತರ ಬಳಸಲು ಅನುಕೂಲಕರವಾದ ರೀತಿಯಲ್ಲಿ ತಯಾರು ಮಾಡಿಕೊಳ್ಳುವುದು. ಕೆಲ ಸಂದರ್ಭದಲ್ಲಿ ಮೇಣ ಮಿಶ್ರಣವನ್ನು ಬಟ್ಟೆ ಅಥವಾ ಜರಡಿಯ ಸಹಾಯದಿಂದ ಶೋಧಿಸಿಕೊಳ್ಳವುವು ಸೂಕ್ತವಾಗುತ್ತದೆ. ಬಿಡಿ ಮೇಣವನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಪಟ್ಟಿಕೆಗಳಿಗೂ ಡುರಿದು ಅಗಲವಾದ ಸಮತಟ್ಟಾದ ತಗಡಿನ ಹಾಳೆಗಳ ರೂಪದಲ್ಲಿಯೂ ಶೇಖರಿಸಬಹುದು.

ಹೀಗೆ ಶೇಖರಿಸಿಕೊಂಡ ಮೇಣವನ್ನು ಕಚ್ಚಾ ಶಿಲ್ಪದ ಮೇಲೆ ಉದ್ದೇಶಿಸಿರುವ ಶಿಲ್ಪದ ಆಕೃತಿಯನ್ನು ಸ್ಪಷ್ಟವಾಗಿ ಮೂಡುವಂತೆ ರಚನೆಮಾಡುವುದು, ಮೇಣವು ಆಕಸ್ಮಿಕ ಗಟ್ಟಿಯಾಗುತ್ತಿದ್ದರೆ ಉರಿಯುವ ದೀಪದ ಸಹಾಯದಿಂದ ಕಾಯಿಸಿದಾಗ ಅದು ಮತ್ತೆ ನುಣುಪಾಗುವುದು. ಆಗ ಅಗತ್ಯಕ್ಕೆ ತಕ್ಕ ರೀತಿಯಲ್ಲಿ ಬಳಸುವುದು ಅತೀ ಸೂಕ್ಷ್ಮ ಅಥವಾ ಎರಕದಲ್ಲಿ ತೊಂದರೆಗೊಳಗಾಗುವಂತಹ ವಿವರಗಳನ್ನು ರಚನೆ ಮಾಡದೆ ಅಂತಿಮ ಹಂತದಲ್ಲಿ ಉಳಿಪೆಟ್ಟಿನಿಂದ ಪೂರ್ಣಗೊಳಿಸುವುದಕ್ಕೆ ಆಲೋಚಿಸಿಕೊಂಡೇ ಮುಂಜಾಗ್ರತೆ ವಹಿಸಬೇಕಾಗುತ್ತದೆ. ಉದಾ : ಆಭರಣಗಳ ಸೂಕ್ಷ್ಮ ರಚನೆಗಳು, ಕೈಬೆರಳುಗಳು ಮುಂತಾದೆಡೆಗಳಲ್ಲಿ ಎಚ್ಚರ ವಹಿಸುವುದು ಮುಖ್ಯ.

ಮೇಣದ ಪದರದ ಕೆಲಸ ಪೂರ್ಣಗೊಂಡ ನಂತರ ಮೇಣ ಮತ್ತು ಮೂಲ ಕಚ್ಚಾ ಕಲಾಕೃತಿಯ ಪದರಕ್ಕೆ ತಾಕುವಂತೆ ಮೊಳೆಗಳನ್ನು ಸುತ್ತಿಗೆಯಿಂದ ಹೊಡೆದು ಅಳವಡಿಸಿಕೊಳ್ಳಬೇಕು. ಆಗ ಮೇಣವನ್ನು ಹೊರತೆಗೆಯುವ ಸಂದರ್ಭದಲ್ಲಿ ಮೇಣ ಕರಗಿ ಮೇಣದ ಮೇಲೆ ಹಾಡುವ ಹೊರ ಪದರ ಮತ್ತು ಮೇಣದ ಒಳಗಿನ ಮೂಲ ಕಚ್ಚಾ ಶಿಲ್ಪದ ಪದರ ಮಧ್ಯೆ ಲೋಹ ರಸ ಶೇಖರಣೆಗೊಳ್ಳಲು ಅಂತರವನ್ನು ಕಾಯ್ದುಕೊಳ್ಳುವುದಕ್ಕೆ ಈ ಮೊಳೆಗಳು ಸಹಾಯ ಮಾಡುತ್ತದೆ. ಆದರೆ ಈ ಮೊಳೆಗಳು ಸಣ್ಣದಾಗಿರಬೇಕು. ಇಲ್ಲವೆ ತಂತಿಯ ತುಂಡುಗಳನ್ನು ಮೊಳೆಗಳಂತೆ ಬಳಸುತ್ತಾರೆ.

ಮೇಣದ ಕಲಾಕೃತಿಗೆ ಮೊಳೆಗಳನ್ನು ಅಳವಡಿಸಿದ ತರುವಾಯ ಮೇಣದ ಮೇಲೆ ಕೋರ್ ಅಂದರೆ ಸಗಣಿ, ಬೂದಿ ಅವಶ್ಯಕವಿದ್ದಲ್ಲಿ ಬಟೆಯಲ್ಲಿ ಸೋಸಿದ ಮಣ್ಣನ್ನು ಸೂಕ್ಷ್ಮ ಸ್ವಚ್ಚತೆಯ ನಂತರ ಸ್ವಲ್ಪ ನೀರಿನ ಮಿಶ್ರಣದೊಂದಿಗೆ ಮೇಣದ ಮೇಲೆ ಹದವಾಗಿ ಮೆತ್ತಬೇಕಾಗುತ್ತದೆ. ಈ ಒಂದು ಪದರವು ಇಡೀ ಕಲಾಕೃತಿಯ ಪೂರ್ಣ ಹೊರಮೈಗೆ ಮೆತ್ತದಂತೆ ಮುಂಚೆ ಕಲಾಕೃತಿಯ ಸೂಕ್ಷ್ಮ ರಚನೆಗಳಿಲ್ಲದ ಕಡೆ ಚಾನಲ್ (ಎರಕ ಹೊಯ್ಯುವ ಕೊಳವೆಗಳು) ಗಳನ್ನು ರಚಿಸಿಕೊಳ್ಳಬೇಕು. ಎರಡು ಚಾನಲ್‌ಗಳನ್ನು ಒಂದು ಒಳಹರಿವಿಗೆ ಮತ್ತೊಂದು ಹೊರಹರಿವಿಗೆ ತಕ್ಕಂತೆ ರಚನೆಮಾಡಿರಬೇಕು. ಆ ಚಾನೆಲ್‌ಗಳನ್ನು ಮೇಣದ ಮುಖಾಂತರ ಮಾಡಿ ನಂತರ ಕೋರ್‌ನ ಮೊದಲ ಪದರ ಮೆತ್ತಬೇಕಾಗುತ್ತದೆ. ಇದೇ ರೀತಿಯ ಕೋರ್‌ನ ಮಿಶ್ರಣವನ್ನು ಮೊದಲ ಪದರವು ನೆರಳಿನಲ್ಲಿ ಒಣಗಿದ ನಂತರ ಎರಡನೇ ಪದರವನ್ನು ಮೆತ್ತಬೇಕಾಗುತ್ತದೆ. ಎರಡನೇ ಪದರವು ಒಣಗಿದ ನಂತರ ಮೂರನೆಯ ಪದರವನ್ನು ಜೇಡಿಮಣ್ಣು, ಪ್ಲಾಸ್ಟರ್, ಹುತ್ತದಮಣ್ಣು ಅಥವಾ ಸೋಸಿದ ಹೆಂಚಿನ ಪುಡಿಯು ಅಥವಾ ಇಟ್ಟಿಗೆ ಪುಡಿಯನ್ನುಸಮಪ್ರಮಾಣದಲ್ಲಿ ಬೆರೆಸಿ ಕಡಿಮೆ ನೀರನ್ನು ಬಳಸಿ ಮೂರನೆಯ ಪದರವನ್ನು ಮೆತ್ತುತ್ತಾರೆ. ಮೂರನೆಯ ಪದರ ಒಣಗಿದ ನಂತರ ನಾಲ್ಕನೆಯ ಪದರವನ್ನು ಅದೇ ರೀತಿಯಾಗಿ ಹಾಕಿ ಒಣಗಲು ಬಿಟ್ಟು ನಂತರ ಕೋರ್ ಹೊರಮೈಮೇಲೆ ತಂತಿಯನ್ನು

ಸುತ್ತುವರೆದಂತೆ ಬಿಗಿದು ಕಲಾಕೃತಿಯ ಕೋರ್‌ನ್ನು ಚೆನ್ನಾಗಿ ಬಿಸಿಲಲ್ಲಿ ಸುಮಾರು ೪-೫ ದಿನಗಳ ಕಾಲ ಒಣಗಿಸಿದ ನಂತರ (ಕೆಲ ಸಂದರ್ಭಗಳಲ್ಲಿ ೧೦-೧೫ ದಿನಗಳ ಒಣಗಲು ಬೇಕಾಗುತ್ತದೆ.) ಜೋಪಾನವಾಗಿ ಅದನ್ನು 'ಬಿಸ್ಕೆಟಿಂಗ್' ಅಂದರೆ ಮೇಣ ಹೊರ ಹಾಕುವಂತೆ ಮಾಡಲು ಹೆಚ್ಚಿನ ತಾಪ ಬರುವಂತೆ ಮಾಡಿ ಉರುವಲು ಒಲೆಯ ಮೇಲೆ ಕಬ್ಬಿಣದ ಸರಳುಗಳನ್ನು ಜೋಡಿಸಿ ಅದರ ಮೇಲೆ ಕಲಾಕೃತಿಯ ಕೋರ್ ಉಂಡೆಯನ್ನು ಇರಿಸಿ ಸುತ್ತಲೂ ಬೆಂಕಿಯನ್ನು ಹಾಯಿಸಿದಾಗ, ಮೊದಲೇ ರಚಿಸಿದ್ದ ಕೊಳವೆಗಳಿಂದ ಮೇಣವು ಹೊರಬರುತ್ತದೆ ಮತ್ತು ಆವಿಯಾಗಿ ಹೋಗುತ್ತದೆ. ಆಗ ಮೂಲ ಕೋರ್ ಮತ್ತು ಮೇಲ್ಪದರದ ಕೋರ್‌ನ ಮಧ್ಯದಲ್ಲಿನ ಮೇಣವು ಕರಗಿ ಮೇಣದ ಸ್ಥಳವು ಲೋಹದ ರಸ ಅವಕಾಶ ಪಡೆಯಲು ಅಂತರ ಉಳಿದುಕೊಳ್ಳುತ್ತದೆ.

ಹೀಗೆ ಬಿಸಿಯಾಗಿ ಮೇಣ ರಹಿತ ಕೋರ್ ಉಂಡೆಗೆ ಅಳವಡಿಸಿ ಚಾನೆಲ್‌ಗಳನ್ನು ಸರಿಪಡಿಸಿಕೊಂಡು ಮಣ್ಣಿನ ಪ್ರದೇಶದಲ್ಲಿ ಕಾಲು ಭಾಗ ಹೂತುಹಾಕಿ ಲೋಹ ಸುರಿದಾಗ ಸಿಡಿಯದೇ ಅಥವಾ ಅಲುಗಾಡದೆ ಇರುವ ಹಾಗೆ ಭದ್ರವಾಗಿರಬೇಕು.

ಈ ಪ್ರಕ್ರಿಯೆಗಳು ಆರಂಭಗೊಳ್ಳುತ್ತಿದ್ದಂತೆ ಲೋಹಗಳ ಮಿಶ್ರಣ ಪಂಚಲೋಹಗಳನ್ನು, ಹಿತ್ತಾಳೆ, ತಾಮ್ರ, ತವರ, ಬೆಳ್ಳಿ, ಚಿನ್ನದ ಲೋಹಗಳನ್ನು ಪಂಚಲೋಹ ತಯಾರಿಕೆ ಮಾತ್ರ (ಇಲ್ಲಿ ಬೆಳ್ಳಿ, ಚಿನ್ನ, ಹೆಸರಿಗಷ್ಟೇ ಅತೀ ಸ್ವಲ್ಪ ಬೆರಸುತ್ತಾರೆ. ತವರ ೫% ಆಗಿರುತ್ತದೆ. ಹಿತ್ತಾಳೆ, ತಾಮ್ರ ೬೦%-೪೦% ಪ್ರಮಾಣದಲ್ಲಿದ್ದರೆ ಒಳಿತು) ಬಳಸುತ್ತಾರೆ. ಇಲ್ಲವಾದರೆ ತಾಮ್ರ, ಹಿತ್ತಾಳೆ, ಸೀಸವನ್ನು ಲೋಹದ ಶಿಲ್ಪಕ್ಕೆ ಬಳಸುತ್ತಾರೆ. ಇವುಗಳ ಮಿಶ್ರಣವನನ್ನು ಮೇಣದ ೧ : ೧೦ ಪ್ರಮಾಣಕ್ಕೆ ತಕ್ಕಂತೆ ದೊಡ್ಡ ಮೂಸೆಯಲ್ಲಿ ಕಲ್ಲಿದ್ದಲು ಒಲೆಯಿಂದ ಕಾಯಿಸಿ, ನಂತರ ಸಣ್ಣ ಮೂಸೆಗಳಿಂದ ಹಿಡಿಕೆಯ ಸಹಾಯದೊಂದಿಗೆ ಮೇಣ ಹೊರಹಾಕಿರುವ ಕೋರ್ ಉಂಡೆಗಳಿಗೆ ಮಾಡಿರುವ ಚಾನೆಲ್‌ಗಳಿಗೆ ಜಾಗರೂಕತೆಯಿಂದ ಸುರಿದಾಗ

ಒಂದರಿಂದ ಒಳಹೋದ ಲೋಹ ರಸ ಮತ್ತೊಂದು ಚಾನೆಲ್‌ನಲ್ಲಿ ಹೊರಬರುತ್ತದೆ. ಆಗ ಲೋಹದ ರಸ ಕೋರ್‌ಗಳ ಮಧ್ಯೆ ಉಂಟಾಗಿದ್ದ ಸ್ಥಳಾವಕಾಶವನ್ನು ತುಂಬಿ ಹೊರಬಂದಿರುತ್ತದೆ ಎಂಬುದನ್ನು ತಿಳಿಯುತ್ತಾರೆ.

ಕೋರ್ ಉಂಡೆ ಒಡೆಯುವುದು:

ಎರಕ ಹೋಯ್ದ ನಂತರ ಕೋರ್ ಉಂಡೆಗಳು ತಣ್ಣಗಾಗುವವರೆಗೆ ಕಾಯ್ದಯ ನಂತರ ಕೋರ್‌ಗೆ ಬಿಗಿದಿದ್ದ ತಂತಿಯನ್ನು ತೆಗೆದು ಕೋರ್‌ನ್ನು ಬಿಡಿಸಿದಾಗ ಲೋಹ ಶಿಲ್ಪವು ಅನಾವರಣಗೊಳ್ಳುತ್ತದೆ.

ಅನಾವರಣಗೊಂಡ ಲೋಹಶಿಲ್ಪದ ಮೇಲ್ಭಾಗದಲ್ಲಿ ಉಳಿಯುವ ಮೊಳೆಗಳನ್ನು ಉಳಿಗಳ ಸಹಾಯದಿಂದ ಸ್ವಚ್ಚಗೊಳಿಸಿ ನಂತರ ಅದರ ಮೇಲ್ಮೈಯನ್ನು ಸ್ಯಾಂಡ್ ಪೇಪರ್/ ಮರಳುಕಾಗದದಿಂದ ಬ್ಲಪ್ ಯಂತ್ರದಿಂದ ಶುಚಿಗೊಳಿಸಿ ಸೂಕ್ಷ್ಮ ವಿವರಗಳನ್ನು ಹಾಗೂ ಹೆಚ್ಚುವರಿ ಲೋಹದ ಭಾಗಗಳನ್ನು ತೆಗೆಯಲು ಮರದ ಹಲಗೆಯ ಮೇಲೆ ಅರಗನ್ನು ಹಾಕಿ ಅದರ ಮೇಲೆ ಮಾಡಿ ಉಳಿಯಿಂದ ಅವಶ್ಯಕ ಭಾಗಗಳನ್ನು ಅಳವಡಿಸುತ್ತಾರೆ. ಅನಾವಶ್ಯಕ ಭಾಗಗಳನ್ನು ಹೊರತೆಗೆಯುತ್ತಾರೆ.

ಹೀಗೆ ಹಂತಹಂತಗಳಲ್ಲಿ ರಚನೆಯಾದ ಲೋಹಶಿಲ್ಪವು ಮೂಲ ಶಲ್ಪಕ್ಕೆ ಅಥವಾ ಉದ್ಧೇಶಿತ ಶಿಲ್ಪಕ್ಕೆ ತಲುಪಬೇಕಾದರೆ ಇಲ್ಲಿ ಶಿಲ್ಪರಚನೆಯ ಮಹತ್ವದಷ್ಟೇ ಅಥವಾ ಅದಕ್ಕೂ ಹೆಚ್ಚು ಎರಕ ತಂತ್ರಗಾರಿಕೆ ಅವಶ್ಯಕ. ಈ ತಂತ್ರಗಾರಿಕೆಯು ಜನಪದರಲ್ಲಿ ಪರಂಪರಾಗನುಗತವಾಗಿ ಬಂದಿದ್ದರೂ ಇದರಿಂದ ಇವರ ಮೂಲ ಉದ್ಯೋಗ ದೂರವಾಗಿಯೇ ಇರುತ್ತದೆ. ಜನಪದ ಶಿಲ್ಪಕಾರರು ಅವಶ್ಯಕತೆ ಇದ್ದಾಗ ಮಾತ್ರ ಈ ತಂತ್ರಗಾರಿಕೆಯನ್ನು ಮಾಡುತ್ತಾರೆ. ಆದರೆ ಇತ್ತೀಚೆಗೆ ಈ ತಂತ್ರಗಾರಿಕೆಯು ತರಬೇತಿ ಪಡೆದ ಎಲ್ಲರೂ ಮಾಡುವುದನ್ನು ಕಾಣುತ್ತೇವೆ.

ಈ ಲೋಹ ಎರಕ ತಯಾರಿಕಾ ಮಾದರಿ ಒಂದಾದರೆ ಇನ್ನೊಂದು **ಲಾಸ್ಟ್ ವ್ಯಾಕ್ಸ್ ಪ್ರೊಸೆಸ್** ಅಂದರೆ (ಸಾಲಿಡ್ ಮೆಥೆಡ್) ಪೂರ್ಣಲೋಹಶಿಲ್ಪ. ಇದರಲ್ಲಿ ಟೊಳ್ಳು ಇರುವುದಿಲ್ಲ. ಈ ಮಾದರಿಯ ಲೋಹ ಎರಕದ ಸಂದರ್ಭದಲ್ಲಿ ಮೂಲ ಕಲಾಕೃತಿಯನ್ನು ಪೂರ್ಣವಾಗಿ ಮೇಣ ಮತ್ತು ರಾಳ

ಮಿಶ್ರಣದಲ್ಲಿಯೇ ರಚನೆಮಾಡಿಕೊಂಡು ಕೋರ್ ಕಟ್ಟುವಾಗ ಮೊಳೆಗಳನ್ನು ಒಡೆಯದೆಯೆ ಯೊದಲ ಪದರ ಎರಡನೆಯ ಪದರ, ಮೂರನೆಯ ಪದರ, ನಾಲ್ಕನೆಯ ಪದರಗಳನ್ನು ಹಂತಹಂತವಾಗಿ ಮೊದಲಿನ ಮಾದರಿಯಂತೆಯೆ ರಚನೆ ಮಾಡಿ ತಂತಿಯನ್ನು ಬಿಗಿದು, ಎರಡು ಚಾನೆಲ್‌ಗಳನ್ನು ಮಾಡಿ, ಮೇಣ ಹೊರಹಾಕಿದ ನಂತರ ಒಂದು ಚಾನೆಲ್ಲನ್ನು ಮುಚ್ಚಿ, ಒಂದನ್ನು ಉಳಿಸಿಕೊಂಡು ಮರಳು ತುಂಬಿದ ಪೆಟ್ಟಿಗೆಯಲ್ಲಿ ಮರಳಿನ ಮಧ್ಯದಲ್ಲಿ ಕೋರ್ ಉಂಡೆ ಇರಿಸಿ ಎರಕವನ್ನು ಮಾಡುತ್ತಾರೆ. ಉಳಿದಂತೆ ಟೊಳ್ಳು ಎರಕದ ಮಾದರಿಯಲ್ಲೇ ಮುಂದುವರೆಸಿ ಶಿಲ್ಪವನ್ನು ರಚಿಸುತ್ತಾರೆ. ನೈಟ್ರಿಕ್ ಆಮ್ಲವನ್ನು ಬಳಸಿ ಶಿಲ್ಪವನ್ನು ಬ್ರಷ್ ಮಾಡಿ(ಮೆಟಲ್ ಬ್ರಷ್) ಸ್ವಚ್ಛಗೊಳಿಸಿ ಸೂಕ್ಷ್ಮ ಆಭರಣ ಕೆತ್ತನೆಯನ್ನು ಮಾಡುತ್ತಾರೆ. ಅಂಗಾಂಗಗಳು ಶಿಲ್ಪದಿಂದ ಹೊರ ಚಾಚಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಎರಕ ಹೋಯ್ದು ನಂತರ ವೆಲ್ಡಿಂಗ್ ಮುಖಾಂತರ ಜೋಡಣೆ ಮಾಡುತ್ತಾರೆ. ಜನಪದ ಶಿಲ್ಪಗಳು ಕಿರಿವಾಗಿರುವುದರಿಂದ ವೆಲ್ಡಿಂಗ್ ಪ್ರಮೇಯ ಕಡಿಮೆ.

ಲೋಹ ಕಾಯಿಸುವಾಗ ಅಲ್ಯುಮಿನಿಯಂ ಬಳಸಿದರೆ ಲೋಹವು ಸ್ವಚ್ಛವಾಗಿರುತ್ತದೆ. ಅಥವಾ ಉಪ್ಪನ್ನು ಬೆರೆಸಿದರೆ ಲೋಹದಲ್ಲಿ ಕಲ್ಮಶವು ಕಾಯಿಸುವಾಗ ಹೊರ ಬರುತ್ತದೆ.

ಈ ಎರಡೂ ವಿಧಾನಗಳನ್ನು ಹೊರತುಪಡಿಸಿದ ಮತ್ತೊಂದು ವಿಧಾನ ಡೋಕ್ರಾ ಮಾದರಿ.

ಡೊಕ್ರಾ ಲೋಹದ ಎರಕ :

ಡೋಕ್ರಾ ಮಾದರಿಯು ಉತ್ತರ ಭಾರತದಲ್ಲಿ ಜನಪದರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕಾಲಾನಂತರದಲ್ಲಿ ವಲಸೆ ಬದುಕಿನ ಪ್ರಭಾವದಿಂದ ಅಲೆಮಾರಿಗಳ ಮುಖಾಂತರ ದಕ್ಷಿಣ ಕರ್ನಾಟಕದ ಹರಪನಹಳ್ಳಿ, ದಾವಣಗೆರೆ, ಬೆಂಗಳೂರು, ಕರ್ನಾಟಕದ ಆಂಧ್ರ ಗಡಿಭಾಗಗಳಲ್ಲಿಯೂ ಕಾಣಬಹುದಾಗಿದೆ.

ಈ ಡೋಕ್ರಾ ಮಾದರಿಯಲ್ಲಿಯೂ ಲೋಹದ ಬೆಂಕಿ ಪ್ರಮಾಣ ಅಷ್ಟೇ ಇದ್ದರೂ ಇಲ್ಲಿ ಚಿನ್ನ, ಬೆಳ್ಳಿಯನ್ನು ಬಳಸುವುದಿಲ್ಲ. ಸೂಕ್ಷ್ಮ ಕೆತ್ತನೆಯ ಕಡೆ ರಸ್ತೆಗೆ ಬಳಸುವ ಟಾರ್‌ನ್ನು ಬಳಸಿ ಡೋಕ್ರಾ ಶೈಲಿಯಲ್ಲಿ ಕಡಿಮೆ ಗಾತ್ರದ ಶಿಲ್ಪಗಳನ್ನು ತಯಾರಿಸುವುದರಿಂದ ಇವುಗಳ ಶೈಲಿಗಳು ಬಹಳ ವಿಶಿಷ್ಟವಾಗಿರುತ್ತವೆ. ನೈಜ ಜನಪದ ಲೋಹ ಶೈಲಿಯು ಈ ಮಾದರಿಯಿಂದಲೇ ಆರಂಭಗೊಂಡಿರುತ್ತದೆ.

ದ್ವಿಮಾನ ಶೈಲಿಯ ಏಕಲೋಹ ಎರಕ ಅಥವಾ (ಸ್ಯಾಂಡ್ ಕಾಸ್ಟಿಂಗ್) ಮರಳು ಲೋಹ ಎರಕ ಮಾದರಿ:

ಲೋಹವನ್ನು ನೇರವಾಗಿ ಮೂಸೆಗಳಲ್ಲಿ ಕರಗಿಸಿ, ಉದ್ದೇಶಿತ ಶಿಲ್ಪದ ತಯಾರಿಕೆಗೆ ಅದೇ ರೀತಿಯ ಶಿಲ್ಪದ ಮಾದರಿ ಲೋಹದಲ್ಲಿ ತಯಾರಿಸಿಕೊಂಡು ಅದರ ಪ್ರತಿಮಾಡುವಿಕೆಯಲ್ಲಿ ಅದರ ಅಚ್ಚನ್ನು ಬಳಸಿ ಮರಳಿನ ಮೇಲೆ ಮುದ್ರೆ ಮಾಡಿ ಲೋಹದ ರಸವನ್ನು ಜಾಣ್ಮೆಯಿಂದ ಸುರಿದು ದ್ವಿಮಾನ ಶಿಲ್ಪವನ್ನು ತಯಾರಿಸುವುದೇ ಅಚ್ಚುಲೋಹಶಿಲ್ಪ ಅಥವಾ ಮರಳಚ್ಚು ಲೋಹ ಎರಕದ ಶಿಲ್ಪ ಎಂದು ಕರೆಯುತ್ತಾರೆ.

ಈ ಮಾದರಿಯ ಎರಕಕ್ಕೆ ಒಂದೇ ಲೋಹವನ್ನು ಬಳಸುತ್ತಾರೆ. ಮಿಶ್ರಣದ ಅವಶ್ಯಕತೆ ಕಡಿಮೆ. ಇದನ್ನು ಹೆಚ್ಚಾಗಿ ಅಲೆಮಾರಿಗಳು ಈ ಕಸುಬನ್ನು ಹೆಚ್ಚಾಗಿ ತಮ್ಮ ಹೊಟ್ಟೆಪಾಡಿಗಾಗಿ ಹಳ್ಳಿ ಹಳ್ಳಿ, ಪಟ್ಟಣಗಳಲ್ಲಿ ಸುತ್ತಿ ಅಲೆದಾಡಿ ಮಾಡುತ್ತಿರುತ್ತಾರೆ. ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ ಇವುಗಳನ್ನೇ ಹೆಚ್ಚಾಗಿ ಇವರು ಎರಕ ಹುಯ್ಯಲು ಬಳಸುತ್ತಾರೆ.

ಎರಕ ಮಾಡಬೇಕಾದ ವಿಗ್ರಹ, ಬೊಂಬೆ, ಶಿಲ್ಪ ಅಥವಾ ಅಡುಗೆ ಮಾಡಲು ಬಳಸುವ ಸೌದೆಗಳ ಮೂಲ ಪ್ರತಿಗಳ ಸಹಾಯದಿಂದ ಅಗತ್ಯವಾದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಗ್ರಾಮೀಣರಿಗೆ ಕೈಗೆಟುಕು ರೀತಿಯಲ್ಲಿ ತಯಾರು ಮಾಡಿಕೊಡುತ್ತಾರೆ.

ಜನಪದ ಶೈಲಿಗಳ ಸೂರ್ಯ, ಚಂದ್ರ, ನಕ್ಷತ್ರ, ದೇವರ ಮುಖವಾಡಗಳು, ಪ್ರಾಣಿಗಳ ಶಿಲ್ಪಗಳು, ಪಕ್ಷಿಗಳ ಶಿಲ್ಪಗಳು, ಚಿತ್ತಾರದ ವಿನ್ಯಾಸಗಳು ಮುಂತಾದ ಮೂಲ ಜನಪದದ ಶಿಲ್ಪಗಳನ್ನು ಈ ವಿಧಾನದಲ್ಲಿ ಕಾಣಬಹುದಾಗಿದೆ.

ಗಾಳಿ ಒತ್ತುವ ಒಂದು (ಏರ್ ಬ್ಲೋಯರ್) ತಾಂತ್ರಿಕ ಒಲೆಯನ್ನು ಅಥವಾ ತಿರುಗಣಿಯ ಮುಖಾಂತರ ಗಾಳಿ ಬರಿಸುವ ಯಂತ್ರ ಇದ್ದಿಲು, ಮೂಸೆ, ಹಿಡಿಕೆ, ಉಳಿ, ಸುತ್ತಿಗೆ, ಕತ್ತರಿಣಿ, ಲೋಹದ ರಸ ರೆಕ ಹೊಯ್ಯಲು ಸೋಸಿದ ಮರಳಿನ ಪೆಟ್ಟಿಗೆ ಇವುಗಲನ್ನು ಮಾತ್ರ ತಮ್ಮ ಎರಕ ವಿಧಾನಕ್ಕೆ ಬಳಸುವ ಇವರ ಸಾಧನಗಲು ಬಹಳ ಕಡಿಮೆ. ಒಂದು ರೀತಿಯಲ್ಲಿ ಸಂಚಾರಿ ಎರಕ ಎನ್ನಲೂ ಅಡ್ಡಿಯಿಲ್ಲ.

ಅತೀ ಕಡಿಮೆ ಸಮಯದಲ್ಲಿ ಶಿಲ್ಪಗಳ ಪ್ರತಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿರುವ ಈ ಮಾದರಿಯ ವಿಧಾನ ವಿಸ್ಮಯವೇ ಹೌದು. ಇದರಿಂದ ಜನಪದರ ಸರಳ ವ್ಯವಸ್ಥೆಯು ಇದರಲ್ಲಿ ಅಡಗಿದ್ದು, ಉಳಿದ ಎರಕ ಮಾದರಿಗಳಿಗಿಂತ ವಿಭಿನ್ನವಾಗಿದೆ. ಜನಪ್ರೀಯವೂ ಆಗಿದೆ.

ಗಾಜರಕೋಟ್ ಲೋಹ ಎರಕದ ಶೈಲಿ –2

ಮೇಣ ತಯಾರಿಸುವ ವಿಧಾನ:

ಮೇಣದಲ್ಲಿ ಮೂರ್ತಿಯನ್ನು ತಯಾರಿಸಬೇಕಾದರೆ ನಮಗೆ ಶುದ್ಧವಾದ ಮೇಣ ಬೇಕಾಗುತ್ತದೆ. ಜೇನು ಮೇಣ ಮತ್ತು ರಾಳವನ್ನು ಒಟ್ಟಿಗೆ ಸೇರಿಸಿ ಶುದ್ಧವಾದ ಮೇಣ ತಯಾರಿಸಲ್ಪಡುತ್ತದೆ. ಜೇನು ಮೇಣ ಮತ್ತು ರಾಳವನ್ನು ತೆಗೆದುಕೊಂಡು ಎರಡು ಸಮಪ್ರಮಾಣದಲ್ಲಿ ತೂಕಮಾಡಿ ಒಂದು ಪಾತ್ರೆಯಲ್ಲಿ ಹಾಕಿ ಅದಕ್ಕೆ ಸ್ವಲ್ಪ ಪ್ರಮಾಣದಲ್ಲಿ ಕುಸುಬೆ ಎಣ್ಣೆ ಅಥವಾ (ಕಡಲೆ ಬೀಜದ ಎಣ್ಣೆ) ಶೇಂಗಾ ಎಣ್ಣೆ ಅದರಲ್ಲಿ ಮಿಶ್ರಣಮಾಡಲು ಬಳಸುತ್ತಾರೆ ಯಾಕೆಂದರೆ ಮೇಣ ನುಣುಪಾಗಿ ಮೆದುವಾಗಿ ಶಿಲ್ಪ ತಯಾರಿಕೆಗೆ ಅನುಕೂಲವಾಗಿರುತ್ತದೆ. ಈ ರೀತಿ ಮೇಣವನ್ನು ತಯಾರು ಮಾಡಿಕೊಳ್ಳಲು ರಾಳ ಮತ್ತು ಮೇಣ ಹಾಗೂ ತೂಕ ಮಾಡುವುದಕ್ಕೆ ಸಣ್ಣ ತಕ್ಕಡಿ, ಬಿಳಿರಾಳ, ಕುಸುಬೆ ಎಣ್ಣೆ ಅಥವಾ ಕಡಲೆ ಬೀಜದ ಎಣ್ಣೆ, ಸೋಸುವುದಕ್ಕೆ ತೆಳುವಾದ ಬಟ್ಟೆ ಅಥವಾ ಸಣ್ಣ ಜರಡಿ, ಶುದ್ಧ ಮೇಣ ಸಂಗ್ರಹಿಸುವುದಕೆ ಒಂದು ಪಾತ್ರೆ, ಕರಗಿಸುವುದಕ್ಕೆ ಒಂದು ಬಾಣಲಿಗೆ, ಹಾಗು ಒಂದು ಒಲೆ ಅದಕ್ಕೆ ಬೇಕಾದ ಉರುವಲು ಸಂಗ್ರಹಿಸಬೇಕಾಗಿರುತ್ತದೆ.

ಮೇಣ ಕರಗಿಸಿ ಶುದ್ಧೀಕರಿಸುವ ವಿಧಾನ:

ಒಂದು ಕೆ.ಜಿ ರಾಳ ತೆಗೆದುಕೊಂಡು ಅದನ್ನು ಹದಮಾಡಿಕೊಂಡು ಚೆನ್ನಾಗಿ ಕುಟ್ಟಿ, ಪುಡಿಯನ್ನಾಗಿಸಿಕೊಂಡು ರಾಳಕ್ಕೆ ಸಮತೂಕವಾಗಿ ಮೇಣವನ್ನು ಸೇರಿಸಬೇಕು ಹದಕ್ಕೆ ತಕ್ಕಂತೆ ಅರ್ಧ ಕೆ.ಜಿ. ಅಥವಾ ನೂರು ಗ್ರಾಂ ಎಣ್ಣೆಯನ್ನು ಸಂಗ್ರಹಿಸಿಟ್ಟುಕೊಳ್ಳಬೇಕು, ನಂತರ ಒಲೆಯನ್ನು ಸಿದ್ಧಪಡಿಸಿಕೊಳ್ಳಬೇಕು ಹಾಗೂ ಅದಕ್ಕೆ ಮರದ ಚೂರುಗಳಿಂದ ಬೆಂಕಿ ಒತ್ತಿಸಬೇಕಾಗಿರುತ್ತದೆ. ಒಲೆಯ ಉರಿಸಲು ಪ್ರಾರಂಭಿಸಿದಾಗ ಒಲೆಯ ಮೇಲೆ ಖಾಲಿ ಪಾತ್ರೆಯನ್ನು ಇಡಬೇಕು. ಈ ಪಾತ್ರೆಯಲ್ಲಿ ತೂಕ ಮಾಡಿಟ್ಟುಕೊಂಡ ಮೇಣವನ್ನು

ಹಾಕಿ ಕರಗಿಸಲು ಪ್ರಾರಂಭಿಸಬೇಕು. ಜೇನು ಮೇಣ ಸಂಪೂರ್ಣವಾಗಿ ಕರಗಿ ನೀರಿನಂತೆ ತಿಳುವಾಗಿ ಕುದಿಯುವಾಗ ಅದರಲ್ಲಿ ರಾಲದ ಪುಡಿಯನ್ನು ನಿಧಾನವಾಗಿ ಸ್ವಲ್ಪ-ಸ್ವಲ್ಪವಾಗಿ ಹಾಕುತ್ತಾ ಮಿಶ್ರಣ ಮಾಡುತ್ತಾ ಹೋಗಬೇಕು. ಕುದಿಯುತ್ತಿರುವ ರಾಳದ ಮೇಣವನ್ನು ಚಮಚದಿಂದ ತಿರುಗುಸುತ್ತಿರಬೇಕು.

ಕರಗಿಸಿದ ಸ್ವಲ್ಪ ಮೇಣವನ್ನು ಚಮಚದಿಂದ ಹೊರತೆಗೆದು ನೀರಿನಲ್ಲಿ ಹಾಕಿ ಹದ ಬಂದಿದೆಯೋ ಇಲ್ಲವೋ ಎಂಬುದನ್ನು ಕೈಯಿಂದ ಅದುಮ ಪರೀಕ್ಷಿಸಿಕೊಳ್ಳಬೇಕಕು. ಜಿಗುಟಾಗಿ ಹದ ಬಂದುದ್ದನ್ನು ತಿಳಿದುಕೊಂಡ ಮೇಲೆ ನೂರು ಗ್ರಾಂ ಎಣ್ಣೆಯನ್ನು ಬೆರೆಸಬೇಕು. ಸ್ವಲ್ಪ ಸಮಯದ ನಂತರ ರಾಳವನ್ನು ಸೋಸಲು ಇನ್ನೊಂದು ಖಾಲಿ ಇರುವ ಪಾತ್ರೆಯನ್ನು ತೆಗೆದುಕೊಂಡು ಕಾಟನ್ ಬಟ್ಟೆಯಿಂದ ಪಾತ್ರೆಯ ಮುಖವನ್ನು ಮುಚ್ಚಿಕೊಳ್ಳಬೇಕು. ಕರಗಿದ ಮೇಣವನ್ನು ಪಾತ್ರೆಯಿಂದ ಜಾಗ್ರತೆಯಿಂದ ತೆಗೆದು ಮತ್ತೊಂದು ಪಾತ್ರೆಗೆ ನಿಧಾನವಾಗಿ ಜರಡಿ ಅಥವಾ ಹತ್ತಿ ಬಟ್ಟೆಯಿಂದ ಸೋಸಿಕೊಳ್ಳಬೇಕು. ಆಗ 20ರಿಂದ 25ರಷ್ಟು ಭಾಗ ಕಸಕಡ್ಡಿಯನ್ನು ಬೇರ್ಪಡಿಸುವುದರಿಂದ ಪರಿಶುದ್ಧವಾದ ಮೇಣ ಸಿದ್ಧಗೊಳ್ಳುವುದು. ನಂತರ ಒಂದು ವಿಶಾಲವಾದ ಪಾತ್ರೆಯನ್ನು ತೆಗೆದುಕೊಂಡು ಅದಕ್ಕೆ ಕುಸುಬೆ ಎಣ್ಣೆಯನ್ನು ಲೇಪನ ಮಾಡಿ ಅದರಲ್ಲಿ ಪುಡಿ ದ್ರವರೂಪಕ್ಕೆ ಬಂದ ಶುದ್ಧವಾದ ಮೇಣವನ್ನು ತಟ್ಟೆಗೆ ಹಾಕಬೇಕು. ಸ್ವಲ್ಪ ಸಮಯದ ನಂತರ ಆ ಮೇಣವನ್ನು ಗಟ್ಟಿಯಾಗಿದ್ದನ್ನು ನೋಡಿ ಹೊರ ತೆಗೆಯಬೇಕು. ಆಗ ಮೂರ್ತಿ ಮಾಡಲು ಬೇಕಾದಂತಹ ಉತ್ತಮವಾದ ಮೇಣ ತಯಾರಿಸಿಕೊಂಡತಾಗುತ್ತದೆ.

ಟೊಳ್ಳು ಮೂರ್ತಿಯ ಎರಕದ ಕ್ರಮ:

ಆಂತರಿಕ ರೂಪಕ್ಕೆ ಬೇಕಾದ ಕೆಸರು:

ಜಿಗುಟು ರಹಿತ ಮಣ್ಣು, ಜೇಡಿಮಣ್ಣು, ಸಣ್ಣನೆಯ ಮರಳು ಮತ್ತು ನಾರಿನ ಗುಂಜು ಸಂಗ್ರಹಿಸಿಕೊಳ್ಳಬೇಕು. ಮೊದಲು ಜಿಗುಟು ರಹಿತ ಮಣ್ಣನ್ನು ಕುಟ್ಟಿ ಪುಡಿಮಾಡಿ ಸೋಸಿಕೊಂಡು ಅದರಲ್ಲಿ 25%ರಷ್ಟು ಭಾಗ ಮರಳನ್ನು ಸೇರಿಸಿಕೊಂಡು ಕೆಸರನ್ನು ತಯಾರಿಸಕೊಳ್ಳಬೇಕು. ಈ ಕೆಸರು ಸ್ವಲ್ಪ ಜಿಗುಟುತನದಿಂದ ಇರಬೇಕು ಒಂದು ವೇಳೆ ಸ್ವಲ್ಪ ಜಿಗುಟುತನ ಇರದಿದ್ದರೆ, ಇದರಲ್ಲಿ 25%ರಷ್ಟು ಜೇಡಿಮಣ್ಣನ್ನು ಬೆರೆಸಿಕೊಂಡು ಕೆಸರನ್ನು ಗಟ್ಟಿಯಾಗಿ ಹದಗೊಳಿಸಿಕೊಳ್ಳಬೇಕು. ಈ ರೀತಿಯಾಗಿ ಹದಗೊಂಡ ಕೆಸರಿನಲ್ಲಿ ಆಂತರಿಕ ರೂಪದ ಮೂರ್ತಿಯನ್ನು ನಿರ್ಮಿಸಿಕೊಂಡು ಒಣಗಿಸಿದಾಗ ಯಾವುದೇ ಭಾಗದಲ್ಲಿ ಬಿರುಕು ಬಿಡುವುದಿಲ್ಲ. ಒಂದು ವೇಳೆ ಕೆಸರಿನಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ ಅಥವಾ ನಾರಿನ ಗುಂಜನ್ನು ಕೆಸರಿನಲ್ಲಿ ಬೆರಸದೇ ಇದ್ದಾಗ ಬಿರುಕುಗಳು ಕಾಣಿಸಿಕೊಳ್ಳುತ್ತವೆ.

ಕೆಸರಿನಲ್ಲಿ ಆಂತರಿಕ ರೂಪ ರಚನಾ ಕ್ರಮ:

ಚಿಕ್ಕ. ಅಥವಾ ದೊಡ್ಡ ಪ್ರಮಾಣದ ಮೂರ್ತಿ ರಚಿಸಬೇಕಾದರೆ, ಆಯಾ ಮೂರ್ತಿಯ ಚಿತ್ರಕ್ಕನುಗುಣವಾಗಿ ಆಂತರಿಕ ರೂಪದ ಮೂರ್ತಿಯನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. ಸಿದ್ಧಗೊಳಿಸಿಕೊಂಡಿದ್ದ ಕೆಸರನ್ನು ತೆಗೆದುಕೊಂಡು ಚಿತ್ರದ ಅಳತೆಗಿಂತ 2 ಅಥವಾ 3 ಮಿಲಿಮೀಟರ್ ಕಡಿಮೆ ಪ್ರಮಾಣದಲ್ಲಿ ಆಂತರಿಕ ರೂಪವನ್ನು ರಚಿಸಿಕೊಳ್ಳಬೇಕು. ಚಿಕ್ಕ ಅಂದರೆ, 1ಅಡಿ ಅಳತೆಗಿಂತ ಕಡಿಮೆ ಇರುವ ಚಿತ್ರದ ಮೂಲ ಮೂರ್ತಿಯ ಗಾತ್ರಕ್ಕಿಂತ ಒಂದರಿಂದ 3 ಮಿಲಿಮೀಟರ್ ಕಡಿಮೆ ಪ್ರಮಾಣದಲ್ಲಿ ಆಂತರಿಕ ರೂಪ ಕರಡು ಶಿಲ್ಪವನ್ನು ತಯಾರಿಸಿಕೊಳ್ಳಬೇಕು. ದೊಡ್ಡ ಅಂದರೆ 1ಅಡಿ ಅಳತೆಗಿಂತ ಹೆಚ್ಚಿನ ಪ್ರಮಾಣದ ಮೂಲ ಚಿತ್ರದ

ಅಳತೆಗಿಂತ ಮೂರರಿಂದ 5 ಮಿಲಮೀಟರ್‌ದಷ್ಟು ಕಡಿಮೆ ಪ್ರಮಾಣದಲ್ಲಿ ಆಂತರಿಕ ರೂಪವನ್ನು ತಯಾರಿಸಿಕೊಳ್ಳಬೇಕು. ದೊಡ್ಡ ಮೂರ್ತಿಗೆ ಸಂಬಂಧಿಸಿದ ಆಂತರಿಕ ರೂಪ ರಚಿಸಿಕೊಳ್ಳುವಾಗ ಮೊದಲು ಸಣ್ಣ ಗಾತ್ರದಲ್ಲಿ ರಚಿಸಿ ಒಣಗಿಸಬೇಕು. ಒಣಗಿದ ಸಣ್ಣನೆಯ ಮೂರ್ತಿಯ ಮೇಲೆ ಎರಡನೆಯ ಬಾರಿ ಕೆಸರನ್ನು ಲೇಪನಮಾಡಿ ಒಣಗಿಸಬೇಕು. ಈ ಕ್ರಮವನ್ನು ಮೂಲ ಮೂರ್ತಿಯ ಅಳತೆಗಿಂತ 2ರಿಂದ 5 ಮಿಲಿಮೀಟರ್ ಕಡಿಮೆ ಪ್ರಮಾಣದ ಅಳತೆ ಬರುವವರೆಗೂ ಮಾಡಿಕೊಳ್ಳಬೇಕು. ಅತೀ ಚಿಕ್ಕಮೂರ್ತಿ ರಚನೆಗೆ ಈ ಆಂತರಿಕ ರೂಪದ ಕ್ರಮ ಅವಶ್ಯಕ ಇರುವುದಿಲ್ಲ.

ಕೆಸರಿನಲ್ಲಿ ರಚನೆಗೊಂಡ ಆಂತರಿಕ ರೂಪದ ಮೂರ್ತಿಯನ್ನು ಪರಿಪೂರ್ಣ ತೇವಾಂಶ ಇರದ ಹಾಗೆ ಒಣಗಿಸಬೇಕು. ಚಿಕ್ಕ ಮೂರ್ತಿಗಳನ್ನು ಒಣಗಿಸಲು ಸ್ವಲ್ಪ ಸಮಯ ಬೇಕಾಗುತ್ತದೆ. ದೊಡ್ಡ, ಅತಿದೊಡ್ಡ ಮೂರ್ತಿಯನ್ನು ಒಣಗಿಸಬೇಕಾದಾಗ ಕೆಲವು ದಿನಗಳ ಸಮಯ ಬೇಕಾಗುತ್ತದೆ.

ಪರಿಪೂರ್ಣ ಒಣಗಿದ ಕಚ್ಚಾಕೃತಿಯನ್ನು ಪೈಲಿನಿಂದ ನುಣುಪಾಗುವವರೆಗೂ ಉಜ್ಜಿಕೊಳ್ಳಬೇಕು. ಉಜ್ಜಿಕೊಂಡ ಮೂರ್ತಿಯ ಮೇಲೆ ಲೇಪನ ಮಾಡಿಕೊಳ್ಳಲು ಮತ್ತೊಂದು ರೀತಿಯ ಮಣ್ಣನ್ನು ಸಿದ್ಧಪಡಿಸಿಕೊಳ್ಳಬೇಕು. ಜಿಗುಟು ರಹಿತ ಮಣ್ಣಿನಲ್ಲಿ 25%ರಷ್ಟು ಜೇಡಿಯ ಮಣ್ಣನ್ನು ಬೆರೆಸಿ ನೀರು ಹಾಕಿಕೊಂಡು ಗಂಧದಂತೆ ತೆವೆದು ಸಿದ್ಧಮಾಡಿಕೊಳ್ಳಬೇಕು. ಗಂಧದ ರೂಪದಲ್ಲಿರುವ ಮಣ್ಣಿನ ತಿರುಳನ್ನು ಆಂತರಿಕ ರೂಪದ ಮೇಲೆ ತೆಳುವಾಗಿ ಲೇಪನ ಮಾಡಬೇಕು. ಗಂಧದಂತಹ ತಿರುಳನ್ನು ಲೇಪನ ಮಾಡಿದ ಮೇಲೆ ಪರಿಪೂರ್ಣವಾಗಿ ಒಣಗಿಸಬೇಕು. ಅದನ್ನು ಸ್ಯಾಂಡ್(ಮರಳು ಕಾಗದ)ಪೇಪರ್‌ನಿಂದ ನುಣುಪಾಗುವವರೆಗೆ ಉಜ್ಜಬೇಕು. ಉಜ್ಜಿದ ಆಂತರಿಕ ರೂಪದ ಮೂರ್ತಿಯ ಮೇಣದ ಲೇಪನಕ್ಕಾಗಿ ಸಿದ್ಧಗೊಳ್ಳುವುದು.

ಕುಲುಮೆ ಮತ್ತು ಬ್ಲೊ ಲ್ಯಾಂಪ್ ಸಿದ್ಧಪಡಿಸಬೇಕು:

ಈ ಮೇಣದಿಂದ ಎರಡು ಅಥವಾ ಮೂರು ಮಿ.ಮೀಟರ್ ದಪ್ಪದ ಹಾಳೆಯ ಹಾಗೆ ಸಿದ್ಧಪಡಿಸಿಕೊಳ್ಳಬೇಕು. ಕುಲುಮೆಯಿಂದ ಬೆಂಕಿಯನ್ನು ಹೊತ್ತಿಸಿ ಹೊರಬರುವ ಜ್ವಾಲೆ ಮೇಲೆ ಮಣ್ಣಿನಿಂದ ರಚಿಸಿದ ಆಂತರಿಕ ರೂಪವನ್ನು ಇಡಬೇಕು. ಸ್ವಲ್ಪ ಬಿಸಿಯಾದ ನಂತರ ಹೊರತೆಗೆದು ಅದರ ಮೇಲೆ ಮೇಣದಿಂದ ತೆಳುವಾಗಿ ಮೇಣ ಲೇಪನಗೊಂಡ ಆಕಾರವನ್ನು ತಣ್ಣಗಾಗುವವರೆಗೂ ಬಿಡಬೇಕು. ಹಾಳೆಯಂತೆ ಸಿದ್ಧಮಾಡಿಕೊಂಡು ಮೇಣವನ್ನು ಸಣ್ಣ-ಸಣ್ಣ ಪಟ್ಟಿಗಳಾಗಿ ಕತ್ತರಿಸಿಕೊಂಡು ಒಂದೊಂದು ಪಟ್ಟಿಗಳನ್ನು ತೆಗೆದುಕೊಂಡು ಬೆಂಕಿ ತುಂಬಿದ ಇಲಿಕಿಯ ಮೇಲೆ ಹಿಡಿದು ಮೃದುಗೊಳಿಸಿಕೊಂಡು ತಣ್ಣಗಾದ ಮೂರ್ತಿಯ ಮೇಲೆ ಲೇಪಿಸಬೇಕು. ಮತ್ತೊಂದು ಮೇಣದ ಪಟ್ಟಿಯನ್ನು ತೆಗೆದುಕೊಂಡು ಸ್ವಲ್ಪ ಬಿಸಿ ಮಾಡಿಕೊಂಡು ಈಗಾಗಲೇ ಅಂಟಿಸಿದ ಪಟ್ಟಿಯ ಪಕ್ಕದಲ್ಲಿ ಅಂಟಿಸುತ್ತಾ ಹೋಗಬೇಕು.

ಇದೇ ಕ್ರಮದಲ್ಲಿ ಮೂರ್ತಿಯ ಎಲ್ಲಾ ಭಾಗದಲ್ಲಿ ಮೇಣದ ಪಟ್ಟಿಗಳನ್ನು ಹಚ್ಚಬೇಕು. ಒಂದು ಅಥವಾ ಎರಡು ಮಿಲಿ ಮೀಟರ್ ದಪ್ಪ ಮೇಣ ಲೇಪನ ಮಾಡಿದಂತಾಯಿತು. ಕಚ್ಚಾ ಲೇಪನಗೊಂಡ ಮೇಲಾದ ಮೂರ್ತಿಯನ್ನು ತೆಗೆದುಕೊಂಡ ಕೊಳವೆ ಆಕಾರದ ಸಲಕರಣೆಗಳಿಂದ ಕಚ್ಚಾಕಾರದಲ್ಲಿ ಮೆತ್ತಿದ ಮೆಣವನ್ನು ಸಮತಲವಾಗುವರೆಗೆ ತಿದ್ದಬೇಕು. ಟೊಳ್ಳಾದ ಮೇಣದ ಮೂರ್ತಿ ಸಿದ್ಧವಾಯಿತು.

ಸಂಪೂರ್ಣ ಮೂರ್ತಿಯ ಎರಕದ ಕ್ರಮ:

ತುಳಜಾಪುರದ ಅಂಭಾಭವಾನಿ ಮೂರ್ತಿ:

ಈ ಮೂರ್ತಿಗೆ ತಲೆಯಿಂದ ಮೊಣಕಾಲದವರೆಗೂ ಮತ್ತು ಎಡಭುಜದಿಂದ ಬಲಭುಜದವರೆಗೂ ಟೊಳ್ಳಾಗಿರುವಂತೆ ಮಣ್ಣಿನ ಆಂತರಿಕ ರೂಪವನ್ನು ಅಳವಡಿಸಿಕೊಳ್ಳಲಾಗಿದೆ ಮತ್ತು ಅಳವಡಿಸಿಕೊಂಡಂತಹ ಮೇಣ ಮೂರ್ತಿ ಸಿದ್ಧಗೊಂಡಿದೆ.

ಈ ಮೇಣದ ಮೂರ್ತಿಯ ಮೆಲ್ಭಾಗದಲ್ಲಿರುವ ಕಿರೀಟ ಶಿಖರವನ್ನು ಮೇಣದಿಂದ ದುಂಡಾಗಿ ಮತ್ತು ಚೂಪಾಗಿ ರಚಿಸಿಕೊಂಡು ಸ್ವಲ್ಪ ಬಿಸಿ ಮಾಡಿ ಕಿರೀಟ ಶಿಖರ ಭಾಗಕ್ಕೆ ಅಂಟಿಸಬೇಕು ಮತ್ತು ಸಣ್ಣಗಾತ್ರದ ಪಟ್ಟಿಗಳನ್ನು ಮೇಣದಲ್ಲಿ ಮಾಡಿಕೊಂಡು ಕಿರೀಟದ ಸುತ್ತಲೂ ಒಂದರ ಕೆಳಗೆ ಒಂದರಂತೆ ಅಂಟಿಸಿಕೊಳ್ಳುತ್ತಾ ಬರಬೇಕು. ಈ ಕಿರೀಟದ ತಳಭಾಗದಲ್ಲಿ ಅಂಟಿಸಲು ಮೂರು ಮುಕುಟಗಳು ಮತ್ತು ಒಂದು ಕೀರ್ತಿಮುಖ ಮುಂಬದಿಗೆ ಇರುವಾಗ್ಗೆ ನಾಲ್ಕು ಬದಿಗೆ ಅಂಟಿಸಿದಾಗ ಕಿರೀಟದ ತಳಭಾಗದಲ್ಲಿ ನೇತಾಡುವ ಮುತ್ತುಗಳನ್ನು ಮೇಣದಿಂದ ಸಿದ್ಧಪಡಿಸಿಕೊಂಡು ಒಂದರ ಪಕ್ಕದಲ್ಲಿ ಒಂದು ಜೋಡಿಸುತ್ತಾ ಅಂಟಿಸಿದಾಗ ಕಿರೀಟದ ಅಲಂಕಾರ ಮುಗಿದಂತಾಯಿತು. ಕಿರೀಟದ ಕೆಳಭಾಗದಲ್ಲಿ ತಲೆ ಕೂದಲುಗಳು ಮತ್ತು ಉಂಗುರ ಕೂದಲುಗಳನ್ನು ತೋರಿಸುವುದಕ್ಕಾಗಿ ಮೇಣದಿಂದ ಸಣ್ಣನೆಯ ಶಾವಿಗೆ ಮಾಡಿಕೊಂಡು ಕೊನೆಯ ಭಾಗದಲ್ಲಿ ಉಂಗುರದಂತೆ ಸುತ್ತಿ ತಲೆಗೆ ಒಂದರ ಪಕ್ಕದಲ್ಲಿ ಒಂದರಂತೆ ಸೇರಿಸಿ ಅಂಟಿಸುತ್ತಾ ಹೋಗಬೇಕು ಮತ್ತು ಹಿಂಭಾಗದ ಕೂದಲು ಲೇಪನ ಮುಗಿದ ನಂತರ ಮುಂಗುರುಳು ಅಂಟಿಸಬೇಕು.

ಕಣ್ಣಿನ ಉಬ್ಬುಗಳಿಗೆ ಬೇಕಾದ ಅಳತೆಯ ಶಾವಿಗೆಗಳನ್ನು ಸಿದ್ಧಪಡಿಸಿಕೊಂಡು ಕಣ್ಣು ಉಬ್ಬುಗಳನ್ನು ಅಂಟಿಸಿ ಮತ್ತು ಎರಡು ಕಣ್ಣುಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಸ್ವಲ್ಪ ಮೇಣವನ್ನು ತೆಗೆದುಕೊಂಡು ಎರಡು

ಮಿಲಿಮೀಟರ್ ದಪ್ಪದ ಎರಡು ಕಿವಿಗಳನ್ನು ಸಿದ್ಧಪಡಿಸಿಕೊಂಡು ಮುಖದ ಎಡ ಮತ್ತು ಬಲಕ್ಕೆ ಸರಿಯಾದ ಜಾಗವನ್ನು ಗುರುತಿಸಿಕೊಂಡು ಅಂಟಿಸಬೇಕಾಗುತ್ತದೆ.

ನೂಪುರ:

ನೂಪುರ ಜಾಗದಲ್ಲಿ(ಪಾದದ ಮೇಲ್ಭಾಗದ ಗೆಜ್ಜೆ) ಅಂದರೆ ಪಾದದ ಮೆಲ್ಭಾಗದಲ್ಲಿ ಮೇಣದಿಂದ ಸ್ವಲ್ಪ ದಪ್ಪನೆಯ ಶಾವಿಗೆಯನ್ನು ಮಾಡಿಕೊಂಡು ಸುತ್ತಬೇಕು. ಸಣ್ಣನೆಯ ಮೇಣದ ಶಾವಿಗೆಯನ್ನು ಈ ಮೊದಲು ಸುತ್ತಿದ ದಪ್ಪನೆಯ ಶಾವಿಗೆಯ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಸುತ್ತಿದಾಗ ಪಾದವಲಯ ಸಿದ್ಧವಾಗುತ್ತದೆ. ಇದೇ ರೀತಿಯ ಪಾದ ಜಾಲ ಸಿದ್ಧಮಾಡಿ ಎಡ ಮತ್ತು ಬಲ ಪಾದಗಳ ಬೆರಳುಗಳನ್ನು ಸಮೀಪದಿಂದ ಪ್ರಾರಂಭಿಸಿ ಮೇಲಿಂದ ಸುತ್ತಿ ಬರುವಂತೆ ಅಂಟಿಸಿಕೊಳ್ಳಬೇಕು ಮತ್ತು ಮೊಣಕಾಲವರೆಗೂ ಟೊಳ್ಳಾದ ಮೇಣದ ಮೂರ್ತಿಗೆ ಮೊಣಕಾಲದಿಂದ ಪಾದದವರೆಗೂ ಎಡ ಮತ್ತು ಬಲ ಪಾದಗಳ ಬೆರಳುಗಳನ್ನು ಒಳಗೊಂಡ ಕಾಲುಗಳನ್ನು ಸಂಪೂರ್ಣ ಮೇಣದಿಂದ ಸಿದ್ಧಪಡಿಸಿಕೊಂಡು ಎರಡು ತೊಡೆಯ ಕೆಳಭಾಗಕ್ಕೆ ಸ್ವಲ್ಪ ಬಿಸಿ ಮಾಡಿ ಅಂಟಿಸಿಕೊಂಡು ಅಂಟಿಸಿದ ಭಾಗವನ್ನು ತಿದ್ದಿಕೊಂಡು ಸಂಪೂರ್ಣ ಎರಡು ಕಾಲುಗಳ ನಡುವಿನಿಂದ ಪಾದದವರೆಗೂ ಪ್ರಮಾಣ ಬದ್ಧತೆಯಿಂದ ಅಂದ ಕಾಣುವಂತೆ ಸಿದ್ಧಪಡಿಸಿಕೊಳ್ಳಬೇಕು.

ಸ್ಕಂದ ಮೂಲ:

ಮೇಣದಲ್ಲಿ ನಾಜುಕಿನ ಶಾವಿಗೆಯನ್ನು ಒಸೆದುಕೊಂಡು ಸ್ವಲ್ಪ ಅದುಮಿ ಚಪ್ಪಟೆ ಮಾಡಿಕೊಂಡು ಪಟ್ಟಿಯನ್ನು ಎಡಭುಜದಿಂದ ಶಾವಿಗೆ ಎದೆಯ ಮಧ್ಯದಿಂದ ಅಂಕು–ಡೊಂಕಾಗಿ ಬಲ ಸೊಂಟದ ಮೇಲೆ ಹಾಯ್ದು ಬೆನ್ನಿನ ಮೇಲಿಂದ ಬಂದು ಎಡಭುಜಕ್ಕೆ ಸೇರಿಸಿದಾಗ ಚನ್ನವೀರವಾಗುವುದು. ಎಡ ಮತ್ತು ಬಲ ತೋಳುಗಳು ಮೇಣದಿಂದ ಅಳತೆ ಬದ್ಧವಾಗಿ ತಯಾರಿಸಿಕೊಂಡು ಆ ಭುಜಗಳಿಗೆ ಸಂಬಂಧಿಸಿದ ಅಳತೆಯ

ಬದ್ಧತೆಯಲ್ಲಿ ಮುಂಗೈಗಳನ್ನು ಸಿದ್ಧಪಡಿಸಿಕೊಂಡು ತೋಳುಗಳಿಗೆ ಸ್ವಲ್ಪ ಬಿಸಿ ಮಾಡಿ ಅಂಟಿಸಿಬೇಕು. ಅಂಟಿಸಿದ ಜಾಗವನ್ನು ನುಣುಪಾಗುವಂತೆ ದುಂಡನೆಯ ಸಲಕರಣೆಯಿಂದ ಸರಿಪಡಿಸಬೇಕು. ಅಷ್ಟಭುಜದ ಈ ದೇವಿಯ ಎಂಟು ಹಸ್ತಗಳನ್ನು ಪ್ರಮಾಣಬದ್ಧತೆಯಲ್ಲಿ ಸಿದ್ಧಪಡಿಸಿಕೊಂಡು ಅದೇ ಪ್ರಮಾಣತೆಗನುಗುಣವಾಗಿ ಬಿಡಿ–ಬಿಡಿಯಾಗಿ ಬೆರಳುಗಳನ್ನು ಮೇಣದಿಂದ ತಯಾರಿಸಿಕೊಂಡು ಹಸ್ತ ಹದಡವನ್ನು ತಯಾರಿಸಿಕೊಂಡು ಬೆರಳುಗಳನ್ನು ಹೆಬ್ಬರಳಿನಿಂದ ಕಿರುಬೆರಳಿನವರೆಗೂ ಬಿಸಿಮಾಡಿ ಅಂಟಿಸಬೇಕು. ಬೆರಳಿನಿಂದ ಕೀಡಿದ ಹದಡವನ್ನು ಎಂಟು ಮುಂಗೈಗಳು ಕೊನೆಯ ಭಾಗಗಳಿಗೆ ವಿವಿಧ ವಿನ್ಯಾಸಗಳಿಗೆ ಅಂಟಿಸುತ್ತಾ ಹೋಗಬೇಕು.

ಕಣ್ಣಿನ ಮೇಲಿನ ಆಭರಣ:

ಮೇಣದ ಶಾವಿಗೆಯಿಂದ ಕಂಠಿಹಾರವನ್ನು ಮಾಡಿಕೊಂಡು ಕೊರಳಿಗೆ ಸುತ್ತಬೇಕು. ಅದರ ಕೆಳಭಾಗದಲ್ಲಿ ಹಾರವನ್ನು ಸಿದ್ಧಪಡಿಸಿಕೊಂಡು ಅಂಟಿಸಬೇಕು. ಸಣ್ಣ–ಸಣ್ಣ ಮುತ್ತುಗಳಿಗೆ ಮೇಣದಿಂದ ಗುಂಡುಗಳನ್ನು ಸಿದ್ಧಮಾಡಿಕೊಂಡು ಮುತ್ತಿನ ಹಾರದಂತೆ ಅಂಟಿಸಬೇಕು.

ಸೊಂಟದ ಅಲಂಕಾರದ ಕ್ರಮ:

ಸಣ್ಣ ಶಾವಿಗೆಯನ್ನು ಮಾಡಿಕೊಂಡು ಕೆಳಭಾಗದ ಸುತ್ತಲೂ ಅಂಟಿಸಿ ಶಾವಿಗೆಯ ಕೆಳಭಾಗವನ್ನು ಮೂರ್ತಿಯ ದೇಹಕ್ಕೆ ಸವರಿಕೊಂಡಾಗ ಮೇಕಲ ಸಿದ್ಧವಾಗುತ್ತದೆ. ಅದರ ಒಳಭಾಗದಲ್ಲಿ ಒಂದು ಪಟ್ಟಿಯನ್ನು ಹಚ್ಚಿ ಪಟ್ಟಿಯ ಕೆಳಭಾಗದಲ್ಲಿ ಗೋಲಾಕಾರದ ಗೆಜ್ಜೆಯನ್ನು ಒಂದರ ಪಕ್ಕದಲ್ಲಿ ಒಂದರಂತೆ ಸುತ್ತಲೂ ಅಂಟಿಸಬೇಕು. ಈ ಪಟ್ಟಿಗೆ ಒಂದು ಕೀರ್ತಿಮುಖ ತಯಾರಿಸಿ ಮಧ್ಯಭಾಗದಲ್ಲಿ ಅಂಟಿಸಬೇಕು. ಅದರ ಬಾಯಿಯಿಂದ ಪಟ್ಟಿಕೆಯನ್ನು ತಯಾರಿಸಿ ಜೋತಾಡುವಂತೆ ಅಂಟಿಸಿಕೊಳ್ಳಬೇಕು. ಈ ಪಟ್ಟಿಕೆಯ ಕೊಎಯಲ್ಲಿ ಮುತಿನ ಹಾಗೆ ಗುಂಡುಳನ್ನು ಜೋಡಿಸಬೇಕು. ಈ ಪಟ್ಟಿಕೆಗಳನ್ನು ಪದದವರೆಗೂ ಜೋತಾಡುಂತೆ ಎರಡು ಅಥವಾ ಮೂರು ಮಾಡಿಕೊಂಡು ಹಚ್ಚಬೇಕು. ಎರಡು ಕಾಲುಗಳ ಹೊದಿಕಯಾಗಿರುವಂತೆ ಅಂತಹ

ವಸ್ತುಗಳನ್ನು ತಯಾರಿಸಬೇಕು. ಸಣ್ಣನೆಯ ಶಾವಿಗೆ ತೆಗೆದುಕೊಂಡು ಸೊಂಟದಿಂದ ಪಾದದವರೆಗೆ ಬಲಗಾಲಿಗೆ ಸ್ವಲ್ಪ ಅಂತರವಿಟ್ಟುಕೊಂಡು ಒಂದರ ಕೆಳಗೆ ಒಂದರಂತೆ ಆರೇಳು ಸಲ ಸುತ್ತಬೇಕು. ಸುತ್ತಿದ ಶಾವಿಗೆ ಮೇಲ್ಭಾಗವನ್ನು ದುಂಡನೆಯ ಸಲಕರಣೆಗಳಿಂದ ಕಾಲಿನ ಸಮಪಾದದವರೆಗೂ ಒರೆಸಬೇಕು. ಇದೇ ರೀತಿ ಎಡಗಾಲಿಗೆ ಕೂಡ ಮಾಡಿಕೊಳ್ಳಬೇಕು. ಎಡ ಮತ್ತು ಬಲ ಭಾಗದಲ್ಲಿ ಕಟ್ಟಿ ಸೂತ್ರವನ್ನು ನಿರ್ಮಿಸಿ ಪಾದದವರೆಗೂ ಜೋತಾಡುವಂತೆ ನಿರ್ಮಿಸಿಕೊಳ್ಳಬೇಕು.

ಕೇಯೂರ:

ಮೇಣದ ಶಾವಿಗೆಯನ್ನು ಮಾಡಿ ಸ್ವಲ್ಪ ಅದುಮಿ ಚಪ್ಪಟೆ ಪಟ್ಟಿಯನ್ನು ಮಾಡಿ ಎಡ ಮತ್ತು ಬಲ ಭುಜಕ್ಕೆ ಸುತ್ತಬೇಕು. ಈ ಪಟ್ಟಿಯ ಮೇಲೆ ಮತ್ತು ಕೆಳಗೆ ಮುತ್ತಿನ ಆಕಾರದ ಮೇಣದ ಗುಂಡುಗಳನ್ನು ಅಂಟಿಸುತ್ತಾ ಹೋಗಬೇಕು. ಅದರ ಮೇಲ್ಭಾಗದಲ್ಲಿ ಮೇಣದಲ್ಲಿ ಪ್ರತಿ ಪೂರಿಮವನ್ನು ನಿರ್ಮಿಸಿಕೊಂಡು ಅಂಟಿಸಿದಾಗ ಕೇಯೂರ ಸಿದ್ಧಗೊಳ್ಳುತ್ತದೆ.

ಕಂಕಣ:

ಮೇಣದ ಶಾವಿಗೆಯನ್ನು ಒಸೆದು ಸ್ವಲ್ಪ ಅದುಮಿ ಕಂಕಣ ಭಾಗದಲ್ಲಿ ಸುತ್ತಬೇಕು ಮತ್ತು ಒಂದು ಶಾವಿಗೆಯನ್ನು ಸಿದ್ಧಪಡಿಸಿಕೊಂಡು ಕಂಕಣಕ್ಕೆ ಅಂಟಿಸಿದ ಪಟ್ಟಿಯ ಮಧ್ಯಭಾಗದಲ್ಲಿ ಶಾವಿಗೆಯನ್ನು ಅಂಟಿಸಬೇಕು. ಇದೇ ರೀತಿ ಎಂಟು ಕೈಗಳಿಗೆ ಕಂಕಣಗಳನ್ನು ಅಂಟಿಸಬೇಕು. ಮುಂದಿನ ಬಲ ಹಸ್ತದಲ್ಲಿ ಮಹಿಷಾಸುರನನ್ನು ಕೊಲ್ಲುವ ರೀತಿಯಲ್ಲಿ ಮೇಣದಿಂದ ತಯಾರಿಸಿಕೊಂಡು ತ್ರಿಶೂಲವನ್ನು ಕೊಡಬೇಕು. ಎರಡನೆಯ ಬಲಹಸ್ತದಲ್ಲಿ ಕೋಣದ ಬಾಲವನ್ನು ಹಿಡಿದಿರುವಂತೆ ಬೆರಳನ್ನು ಹೊಂದಿಸಬೇಕು ಮೇಲಿನ ಮೂರನೆಯ ಹಸ್ತದಲ್ಲಿ ಮೇಣದಿಂದ ತಯಾರಿಸಿದ ಗುಪ್ತವನ್ನು ಕೊಟ್ಟು ಬೆರಳುಗಳಿಂದ ಬಂಧಿಸಬೇಕು. ಮೇಲಿನ ನಾಲ್ಕನೆಯ ಹಸ್ತದಲ್ಲಿ ವಿನ್ಯಾಸದ ಬೆರಳುಗಳೂ ಹಿಡಿದಂತೆ ಬಾಣ ಹೊಂದಿಸಬೇಕು.

ಆಯುಧಗಳನ್ನೊಳಗೊಂಡ ನಾಲ್ಕು ಕೈಗಳನ್ನು ಹೊಂದಿದ್ದ ಬಲಭುಜವು ಸಂಪೂರ್ಣ ಮೇಣದಿಂದ ಸಿದ್ಧಪಡಿಸಿದಂತಾಯಿತು. ಇದೇ ರೀತಿಯಾಗಿ ಎಡ ಭುಜದಲ್ಲಿರುವ ಮೊದನೆಯ ಹಸ್ತದಲ್ಲಿ ಮಹಿಷಾಸುರನ ತಲೆ ಹಿಡಿದ ಹಾಗೆ ಹೊಂದಿಸಬೇಕು. ಎರಡನೆಯ ಹಸ್ತದಲ್ಲಿ ಮೇಣದಿಂದ ಘಂಟೆಯನ್ನು ತಯಾರಿಸಿ ವಿರಳವಾದ ಬೆರಳುಗಳಿಂದ ಬಂಧಿಸಬೇಕು. ಮೂರನೆಯ ಹಸ್ತದಲ್ಲಿ ಗುರಾಣಿ ಸಿದ್ಧಪಡಿಸಿ ಹೊಂದಿಸಬೇಕು. ಮೇಲಿನ ಹಸ್ತದಲ್ಲಿ ವಿನ್ಯಾಸ ಬೆರಳಿನಿಂದ ಹಿಡಿದಿರುವಂತೆ ಮೇಣದ ಬಿಲ್ಲು ಹೊಂದಿಸಬೇಕು.

ಜೋಡಿಸುವ ಕ್ರಮ:

ಸಂಪೂರ್ಣ ಸಿದ್ಧಗೊಂಡ ಚರ್ತುಭುಜವನ್ನೊಳಗೊಂಡ ಬಲಬಾಹುಗಳನ್ನು ತೆಗೆದುಕೊಂಡು ಮೇಲ್ಭಾಗದಲ್ಲಿ ಸ್ವಲ್ಪ ಬಿಡಿಮಾಡಿ ಅದೇ ರೀತಿ ಮೂರ್ತಿಯ ಬಲಭುಜವನ್ನು ಬಿಸಿಮಾಡಿ ಒಂದನ್ನೊಂದು ನಾಜೂಕಿನಿಂದ ಅಂಟಿಸಿಕೊಳ್ಳಬೇಕು. ಅಂಟಿಸಿದ ಜಾಗದಲ್ಲಿ ಗೋಲಾಕಾರದ ಸಲಕೆಣೆಯಿಂದ ಉಜ್ಜಿಕೊಂಡ ಸಮತಲ ಮಾಡಿಕೊಳ್ಳಬೇಕು. ಅದೇ ಕ್ರಮದಲ್ಲಿ ಎಡ ಚರ್ತುಭುವನು ಅಂಟಿಸಿಕೊಳ್ಳಬೇಕು. ನಂತರ ಸ್ಕಂದ ಮಾಲೆಯನ್ನು ಸಿದ್ಧಮಾಡಿಕೊಂಡ ಬಲ ಮತ್ತು ಎಡ ಭುಜಗಳ ಮೆಲೆ ಜೋಡಿಸುತ್ತಾ ಅಂಟಿಸಬೇಕು.

ಭದ್ರಪೀಠ ರಚನೆ:

ಭದ್ರಪೀಠ ಗಾತ್ರಕ್ಕಿಂತ ಸ್ವಲ್ಪ ಆಕಾರದಲ್ಲಿ ದೊಡ್ಡದಾಗಿರುವಂತೆ ಮಣ್ಣಿನಿಂದ ಆಂತರಿಕ ರೂಪವನ್ನು ಕ್ರಮಬದ್ಧವಾಗಿ ರಚನೆ ಮಾಡಿಕೊಂಡು ಅದರ ಮೇಲೆ ಮೇಣದ ಎರಡು ಅಥವಾ ಮೂರು ಮಿಲಿ.ಮೀಟರ್ ದಪ್ಪನೆಯ ಮೇಣದ ಪಟ್ಟಿಯಿಂದ ಸಂಪೂರ್ಣ ಅಂಟಿಸಬೇಕು. ಪೀಠದ ಮೇಲ್ಭಾಗದಲ್ಲಿ ಕಂಪ ರಚನೆ ಮಾಡಿ ಅದರ ಕೆಳಭಾಗ ವಾಜ್ಜಿನ ಪಟ್ಟಿಯನ್ನು ಸಿದ್ಧಮಾಡಿ ಅಂಟಿಸಬೇಕು. ಇದರ ಕೆಳಭಾದಲ್ಲಿ ಕಂಪನ ಪಟ್ಟಿಯನ್ನು ಹಚ್ಚಬೇಕು. ತಳಭಾಗದಲ್ಲಿ ಉಪಾನ ಪಟ್ಟಿಯನ್ನು ಸಿದ್ಧಮಾಡಿ ಜೋಡಿಸಿಕೊಂಡು ಅದರ ಮೇಲಿನ ಭಾಗ ಕಂಪ ಪಟ್ಟಿಯನ್ನು ಮಾಡಿಕೊಂಡು ಅಂಟಿಸಬೇಕು. ಈ ಕ್ರಮವನ್ನು ಸಿದ್ಧವಾದ ಭದ್ರಪೀಠಕ್ಕೆ ಅಂಭಾಭವಾನಿ

ಪದ್ಮಾಪೀಠ ಕೆಳಭಾಗವನ್ನು ಲಾಕ್ ಆಗುವಂತೆ ಹೊಂದಿಸಬೇಕು. ಭದ್ರಪೀಠ ಹಿಂಭಾಗದಲ್ಲಿ ಪ್ರಭಾವಳಿಯನ್ನು ಇಡಲು ರಂಧ್ರಗಳನ್ನು ಮಾಡಿಕೊಳ್ಳಬೇಕು.

ಪದ್ಮಾಪೀಠ ರಚನೆ:

ಪದ್ಮಾಪೀಠ ಒಳರೂಪವನ್ನು ಸಿದ್ಧಪಡಿಸಿಕೊಳ್ಳಲಾಗುವಾಗ ಕೇಸರಿಯಿಂದ ಪದ್ಮಾಪೀಠ ಆಕಾರಕ್ಕಿಂತ ಕಡಿಮೆ ಆಕಾರದಲ್ಲಿ ರಚಿಸಬೇಕು. ಇದು ಒಣಗಿದ ನಂತರ ಫೈಲಿನಿಂದ ನುಣುಪಾಗಿ ಉಜ್ಜಿಕೊಂಡು ಗಂಧದಂತೆ ಇರುವ ಮಣ್ಣಿನ ತಿರುಳಿನಿಂದ ಸವರಿ ಒಣಗಿಸಬೇಕು. ಒಣಗಿಸಿದ ಮೇಲೆ ಸ್ಯಾಂಡಲ್ ಪೇಪರ್‌ನಿಂದ ನುಣುಪಾತಿರುವವರಿಗೂ ಉಜ್ಜಬೇಕು. ಇದನ್ನು ಬಿಸಿಮಾಡಿ ಮೇಣದಿಂದ ಸವರಬೇಕು. ಒಂದು ಅಥವಾ ಎರಡು ಮಿ.ಮಿ ದಪ್ಪನೆಯ ಹಾಳೆಯಂತಿರುವ ಮೇಣವನ್ನು ತೆಗೆದುಕೊಂಡು ಈ ಪದ್ಮಾಪೀಠದ ಮೇಲೆ ಸ್ವಲ್ಪ ಬಿಸಿಮಾಡಿ ಲೇಪನ ಮಾಡುತ್ತಾ ಪೂರ್ಣಗೊಳಿಸಬೇಕು. ಈ ಪದ್ಮಾಪೀಠದ ದಳಗಳನ್ನು ನಿರ್ಮಿಸಿ ಸುತ್ತಲೂ ಒಂದೊಂದಾಗಿ ಅಂಟಿಸಬೇಕು. ಈ ರೀತಿಯಾಗಿ ಸಿದ್ಧಪಡಿಸಿಕೊಂಡ ಪದ್ಮಾಪೀಠದ ಮೇಲ್ಭಾಗವನ್ನು ಅಗ್ಗಿಷ್ಟಿಕೆಯಿಂದ ಬಿಸಿ ಮಾಡಿಕೊಂಡು ಮತ್ತು ಅಂಭಾಭವಾನಿ ಮೂರ್ತಿ ಪಾದಗಳ ಅಂಗಾಲುಗಳನ್ನು ಬಿಸಿ ಮಾಡಿಕೊಂಡು ಪದ್ಮಾಪೀಠ ಮೇಲೆ ಮಧ್ಯರೇಖೆಯಲ್ಲಿ ಬರುವ ಹಾಗೆ ನೋಡುತ್ತಾ ಅಂಟಿಸಬೇಕು.

ಮಹಿಷ(ಕೋಣ) ರಚನೆ:

ಮೇಣದಿಂದ ಚಿಕ್ಕಗಾತ್ರದಲ್ಲಿ ಅಂದರೆ ಪದ್ಮಾಪೀಠದ ಎತ್ತರದವರೆಗೂ ಕೋಣ ಆಕಾರವನ್ನು ರಚನೆ ಮಾಡಬೇಕು. ಕೋಣದ ಮುಖದ ಸಮೇತ ತಲೆಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿಕೊಳ್ಳಬೇಕು. ನಂತರ ಚಿಕ್ಕದಾದ ಮಹಿಷನ ದ್ವಿಬಾಹು ಮೂರ್ತಿಯನ್ನು ರಚನೆ ಮಾಡಿ ಬಲಗೈನಲ್ಲಿ ಖಡ್ಗ ಮತ್ತು ಎಡಗೈನಲ್ಲಿ ಗುರಾಣಿ ಲಗತ್ತಿಸಬೇಕು. ಈ ಮಹಿಷಾಸುರನ ಮೊಣಕಾಲದಿಂದ ತಲೆಯವರೆಗೂ ಸಂಪೂರ್ಣ ಮೇಣದಿಂದ

ರಚಿಸಿಕೊಳ್ಳಬೇಕು. ಈ ಮೂರ್ತಿಯ ಮೊಣಕಾಲ ಭಾಗವನ್ನು ಕೋಣದ ಕತ್ತನ್ನು ಕತ್ತರಿಸಿದ ಸ್ಥಳಕ್ಕೆ ಅಂಟಿಸಬೇಕು. ಈ ಕೋಣದಿಂದ ಹೊರಬಂದಂತೆ ಕಾಣುವ ಮಹಿಷನ ತಲೆಯ ಮೇಲಿನ ಜಟವನ್ನು ಅಂಭಾಭವಾನಿ ಎರಡನೇ ಎಡಗೈನಲ್ಲಿ ಹಿಡಿದಂತೆ ಹೊಂದಿಸಬೇಕು. ಕೋಣದ ಉದ್ದನೆಯ ಬಾಲವನ್ನು ಬಲದ ಎರಡನೇ ಕೈನಲ್ಲಿ ಹಿಡಿದು ಎಳೆಯುವಂತೆ ಹೊಂದಿಸಬೇಕು. ಕೋಣವು ಪದ್ಮಾಪೀಠಕ್ಕೆ ಅಂಟಿಕೊಂಡು ನಿಂತಿರಬೇಕು.

ಸಿಂಹದ ರಚನೆ:

ಅಂಭಾಭವಾನಿಯ ವಾಹನದಿಂದ ಸಿಂಹವನ್ನು ಚಿಕ್ಕಗಾತ್ರದಲ್ಲಿ ಸಂಪೂರ್ಣ ಮೇಣದಿಂದ ರಚಿಸಬೇಕು. ಸಿಂಹದ ದೇಹವನ್ನು ಸೊಂಟದ ಭಾಗವನ್ನು ಸಣ್ಣಗೆ ಕತ್ತಿನ ಭಾಗದಲ್ಲಿ ದಪ್ಪ ಇರುವ ಹಾಗೆ ರಚನೆ ಮಾಡಿಕೊಳ್ಳಬೇಕು. ಬಾಯಿ ತೆರೆದು ಘರ್ಜಿಸುವ ರೀತಿಯಲ್ಲಿ ಸಿಂಹದ ಮುಖವನ್ನು ನಿರ್ಮಿಸಿ ಸಿಂಹದ ದೇಹದ ಕತ್ತಿಗೆ ಅಂಟಿಸಬೇಕು. ಕತ್ತಿನ ಮೇಲೆ ಉಂಗುರುಕೂದಲುಗಳನ್ನು ಸಿದ್ಧಪಡಿಸಿ ಸುತ್ತಲೂ ಅಂಟಿಸಬೇಕು. ಈ ರೀತಿ ಸಿದ್ಧಗೊಂಡ ಸಿಂಹವನ್ನು ಹಿಂದಿನ ಎರಡು ಕಾಲುಗಳ ಹಿಂದಕ್ಕೆ ರಭಸವಾಗಿ ಜಿಗಿಯುವ ಹಾಗೆ ನಿಲ್ಲಿಸಿ ಮುಂದಿನ ಎರಡು ಕಾಲುಗಳ ಉಗುರುನಿಂದ ಕೋಣದ ಬೆನ್ನಿಗೆ ಹೊಡೆಯುವಂತೆ ಹೊಂದಿಸಬೇಕು.

ಪ್ರಭಾವಳಿ:

ಕಿರೀಟದ ಶಿಖರಮಣಿಯ ಮೇಲ್ಭಾಗದಲ್ಲಿ ಕಾಣುವ ಹಾಗೆ ಎತ್ತರದ ಅಳತೆಯಲ್ಲಿ ಪ್ರಭಾವಳಿಯನ್ನು ನಿರ್ಮಿಸಿಕೊಳ್ಳಬೇಕು. ಮೊದಲು ಪ್ರಭಾವಳಿಯ ತಳಭಾಗದ ಎಡ ಮತ್ತು ಬಲಕ್ಕೆ ಗಟ್ಟಿಗೆ ಆಕಾರ ನಿರ್ಮಿಸಿಕೊಂಡು ಅದರ ಮೇಲೆ ಮೂರ್ತಿಯ ಪಾದದಿಂದ ಮೊಳಕೈವರೆಗೆ ಇರುವ ಎತ್ತರದ ಅಳತೆಯಲ್ಲಿ ಕಂಬ ನಿರ್ಮಿಸಿ ಅದರ ಮೇಲೆ ಗಡಿಗೆಗಳನ್ನು ನಿರ್ಮಿಸಿಕೊಳ್ಳಬೇಕು. ಅವುಗಳ ಮೇಲೆ ಮಕರಗಳನ್ನು ಮಾಡಿ

ಕೂಡಿಸಬೇಕು. ಬಲಮಕರದ ಬಾಯಿಂದ ವೃತ್ತಾಕಾರದಲ್ಲಿ ಹೊರಟ ಎಡ ಮಕರದ ಬಾಯಿಯೊಳಕ್ಕೆ ಪ್ರವೇಶವಾಗುವಂತೆ ಒಂದು ಮೇಲೆ ಪಟ್ಟಿಯನ್ನು ಜೋಡಿಸಿಕೊಳ್ಳಬೇಕು. ಈ ಅರ್ಧಭಾಗದಲ್ಲಲಿ ಕೀರ್ತಿಯ ಮುಖ ನಿರ್ಮಿಸಿ ಅಂಟಿಸಬೇಕು. ಅದರ ಬಾಯಿಯಿಂದ ಎಡ ಮತ್ತು ಬಲ ಹೊರ ಬಂದ ಹಾಗೆ ಸುಳುವುಗಳನ್ನು ನಿರ್ಮಿಸಬೇಕು. ಕೀರ್ತಿಯ ಬಾಯಿಂದ ಕೆಳಕ್ಕೆ ಹೊರಟು ಮಕರದ ಬಾಯಿಯೊಳಕ್ಕೆ ಪ್ರವೇಶವಾಗುವಂತೆ ಮುತ್ತಿನ ಆಕಾರದ ಗುಂಡುಗಳನ್ನು ಅಂಟಿಸಬೇಕು ಮತ್ತು ಸುಳುವುಗಳನ್ನು ನಿರ್ಮಿಸುತ್ತಾ ಹೋಗಬೇಕು. ಈ ರೀತಿಯಾಗಿ ಸಂಪೂರ್ಣ ಮೇಣದಲ್ಲಿ ಪ್ರಭಾವಳಿಯನ್ನು ಸಿದ್ಧಪಡಿಸಿ ಮೂರ್ತಿಯ ಹಿಂಭಾಗದಲ್ಲಿ ಭದ್ರಪೀಠದ ಎರಡು ರಂಧ್ರಗಳಿಗೆ ಸೇರುವಂತೆ ಎರಡು ಪಟ್ಟಿಗಳನ್ನು ಅಂಟಿಸಿಕೊಳ್ಳಬೇಕು. ಪ್ರಭಾವಳಿಯನ್ನು ಭದ್ರಪೀಠದ ಎರಡು ರಂಧ್ರಗಳಿಗೆ ಸರಳವಾಗಿ ಸೇರಿಸಲು ಮತ್ತು ತೆಗೆಯಲು ಬರುವ ಹಾಗೆ ಸಿದ್ಧಪಡಿಸಿಕೊಳ್ಳಲಾಗುವುದು.

ಜೋಡಿಸುವ ಕ್ರಮ:

ಸಂಪೂರ್ಣ ಸಿದ್ಧಗೊಂಡ ಚತುರ್ಭುಜವನ್ನೊಳಗೊಂಡ ಬಲ ಬಾಹುವನ್ನು ತೆಗೆದುಕೊಂಡು ಮೇಲ್ಭಾಗವನ್ನು ಸ್ವಲ್ಪ ಬಿಸಿ ಮಾಡಿ ಅದೇ ರೀತಿ ಮೂರ್ತಿ ಬಲಭುಜವನ್ನು ಬಿಸಿಮಾಡಿ ಒಂದನ್ನೊಂದು ನಾಜೂಕಿನಿಂದ ಅಂಟಿಸಿಕೊಳ್ಳತ್ತಾ ಹೋಗಬೇಕು. ಅಂಟಿಸಿದ ಜಾಗದಲ್ಲಿ ಗೋಲಾಕಾರದ ಸಲಕರಣೆಯಿಮದ ಉಜ್ಜಿಕೊಂಡು ಸಮತಲ ಮಾಡಿಕೊಳ್ಳಬೇಕು. ಇದೇ ಕ್ರಮದಲ್ಲಿ ಎಡ ಚತುರ್ಭುಜವನ್ನು ಅಂಟಿಸಿಕೊಳ್ಳಬೇಕು. ನಂತರ ಸ್ಕಂದ ಮಾಲೆಯನ್ನು ಸಿದ್ಧಮಾಡಿಕೊಂಡು ಬಲ ಮತ್ತು ಎಡ ಭುಜಗಳ ಮೇಲೆ ಜೋತಾಡುವಂತೆ ಅಂಟಿಸಬೇಕು.

ಮೇಣದ ಮೂರ್ತಿಗೆ ಚಾನೆಲ್‌ಗಳನ್ನು ಕಟ್ಟುವ ವಿಧಾನ:

ಮೇಣದಲ್ಲಿ ತಯಾರಿಸಿದ ವಿಗ್ರಹಕ್ಕೆ ಯಾಕೆ ಚಾನೆಲ್‌ಗಳನ್ನು ಕಟ್ಟಬೇಕು ಎಂದರೆ, ನಾವು ಸಿದ್ಧಪಡಿಸಿಕೊಂಡ ಮೂರ್ತಿಗೆ ನೇರವಾಗಿ ಮಣ್ಣಿನಿಂದ ಮೋಲ್ಡ್ ಕಟ್ಟಿ ಆ ಮೋಲ್ಡ್‌ನ್ನು ಸುಟ್ಟು ಮೋಲ್ಡ್‌ನಲ್ಲಿರುವ ಮೇಣವನ್ನು ಖಾಲಿ ಮಾಡಿ ಕಂಚನ್ನು ಕರಗಿಸಿ ಎರಕ ಹೋಯ್ದರೆ ಆ ಮೂರ್ತಿಯು ಸಂಪೂರ್ಣವಾಗಿ ಬರುವುದಿಲ್ಲ ಆದ ಕಾರಣ ನಾವು ಮೇಣದಲ್ಲಿ ಸಿದ್ಧಪಡಿಸಿಕೊಂಡು ಮೂರ್ತಿಗೆ ಚಾನೆಲ್‌ಗಳನ್ನು ಯಾವ ರೀತಿಯಾಗಿ ಕಟ್ಟಬೇಕು ಎಂದರೆ, ಎರಕ ಹುಯ್ಯುವ ದ್ರವರೂಪದ ಕಂಚು ಮತ್ತು ಮೊಲ್ಡ್‌ನಲ್ಲಿರುವಂತಹ ಗಾಳಿ ಅಭಿಮುಖವಾಗಿ ಘರ್ಷಣೆಯಾಗದಂತೆ ಜಾಗ್ರತೆವಹಿಸಿಕೊಂಡು ಅವಶ್ಯವಿರುವ ಸ್ಥಳಗಳಲ್ಲಿ ಮೇಣದಿಂದ ತಯಾರಿಸಿಕೊಂಡ ಶಾವಿಗೆ ರೂಪದ ಚಾನೆಲ್‌ಗಳನನು ಕೆಲವು ಏರು ಚಾನೆಲ್‌ಗಳ ಮತ್ತು ಎರಕದ ಚಾನೆಲ್‌ಗಳಾಗಿ ಆಯಾಯ ಸ್ಥಳದಲ್ಲಿ ಅಂಟಿಸಿ ಮಣ್ಣಿನಿಂದ ಮೊಲ್ಡ್ ಕಟ್ಟಿಕೊಳ್ಳಬೇಕು. ಆ ಮೊಲ್ಡ್‌ನ್ನು ಸುಟ್ಟು ಮೇಣ ಹೊರತೆಗೆದು ಎರಕ ಹುಯ್ಯುವ ಚಾನೆಲ್ ಮುಖಾಂತರ ದ್ರವರೂಪದಲ್ಲಿರುವ ಕಂಚನ್ನು ಎರಕ ಹುಯ್ಯುದಾಗ ಪರಿಪೂರ್ಣವಾದ ಕಂಚಿನ ಶಿಲ್ಪ ಸಿದ್ಧಗೊಳ್ಳುತ್ತದೆ. ಈ ಶಿಲ್ಪಕ್ಕೆ ಯಾವುದೇ ಚಾಣ ಸುತ್ತಿಗೆಗಳು ಪಟ್ಟಿಗೆ ಅಥವಾ ಹೊಡೆತಕ್ಕೆ ಒಳಪಡುವುದಿಲ್ಲ.

ಬಲಭಾಗ:

ಮೂರ್ತಿಯ ಎಡ ಮತ್ತು ಬಲಕ್ಕೆ ಇರುವ ಕೈಯಿಗಳಿಗೆ ಸಣ್ಣ ಶಾವಿಗೆ ಆಕಾರದ ಚಿಕ್ಕ ಚಾನೆಲ್‌ಗಳನ್ನು(ಕಾಲುವೆಗಳ) ತಯಾರಿಸಿಕೊಂಡ ತಲೆಯ ಶಿಖರದ ಕೊನೆಯಿಂದ ನಾಲ್ಕು ಕೈಯಿಗಳು ಕೊನೆಯ ಭಾಗಕ್ಕೆ ಮೇಲಿಂದ ಕೆಳಕ್ಕೆ ಪ್ರತಿಯೊಂದು ಹಸ್ತಗಳಿಗೆ ಅಂಟಿಸಿಕೊಳ್ಳುತ್ತಾ ಬರಬೇಕು. ಕೆಳಗಿನ

ಹಸ್ತದಲ್ಲಿ ಹಿಡಿದಿರುವ ಕೋಣದ ಬಾಲವು ಚಿಕ್ಕ ಕಾಲುವೆಯ ಕೆಲಸ ಮಾಡುತ್ತದೆ. ಇದು ಬಲಭಾಗದ ಕಾಲುವೆ (ಚಾನೆಲ್) ಕೆಲಸ ನಿರ್ಮಿಸಿಕೊಂಡಂತಾಗುತ್ತದೆ.

ಎಡಭಾಗ:

ತಲೆಯ ಶಿಖರ ಕೊನೆಯಿಂದ ಮೇಲಿಂದ ಕೆಳಕ್ಕೆ ಪ್ರತಿಯೊಂದು ಹಸ್ತಗಳು ಕೊನೆಯ ಭಾಗಕ್ಕೆ ಅಂಟಿಸಿಕೊಳ್ಳುತ್ತಾ ಬರಬೇಕು. ಕೆಳಗಿನ ಹಸ್ತದಲ್ಲಿ ಹಿಡಿದಿರುವ ಮಹಿಷಾಸುರನ ಮೂರ್ತಿಯು ಚಾನೆಲ್ ಕೆಲಸ ಮಾಡುತ್ತದೆ. ಹೀಗೆಯೇ ಮುಖ್ಯಮೂರ್ತಿಯ ಎರಡು ಪಾದಗಳು ಪದ್ಮಾ ಪೀಠಕ್ಕೆ ಅಂಟಿಕೊಂಡಿರುವುದರಿಂದ ಆ ಎರಡು ಕಾಲುಗಳು ಮುಖ್ಯಮೂರ್ತಿಯ ಕಾಲುವೆಗಳಾಗಿ ಕೆಲಸ ಮಾಡುತ್ತದೆ.

ಏರು ಚಾನೆಲ್:

ಗಾಳಿ ಹೊರ ಹಾಕುವ ಕಾಲುವೆ ಅಥವಾ ಚಾನೆಲ್

ಚಿಕ್ಕ ಅಥವಾ ದೊಡ್ಡ ಚಾನೆಲ್‌ಗಳ(ಕಾಲುವೆಗಳ) ಪೀಠಿಕೆ ಸೇರಿರುವದರಿಂದ ಆ ಪೀಠದ ತಲಭಾಗದಲ್ಲಿ ಸ್ವಲ್ಪ ದಪ್ಪನೆ ಶಾವಿಗೆಯ ಆಕಾರದ ಚಾನೆಲ್‌ಗಳನ್ನು ನಿರ್ಮಿಸಿಕೊಮಡು ಎರಡು ಅಥವಾ ಮೂರು ಅಂಟಿಸಿಕೊಳ್ಳಬೇಕು. ಈ ಮೂರ್ತಿಯ ಮೇಣವು ಸಂಪೂರ್ಣ ಹೊರಹಾಕುವ ಮತ್ತು ದ್ರವರೂಪದಲ್ಲಿಯ ಲೋಹದ ಎರಕ ಹುಯ್ಯುವಾಗ ಖಾಲಿ ಜಾಗದಲ್ಲಿ ಆವರಿಸಿಕೊಂಡು ಮೂರ್ತಿರೂಪದಲ್ಲಿರುವ ಹಾವೆಯ ಹೊರಗಡೆ ಹೋಗುವ ಕೆಲಸ ಮುಖ್ಯ ಕಾಲುವೆಗಳಾಗಿರುತ್ತದೆ. ಇವಕ್ಕೆ ಗಾಳಿ ಹೊರಹಾಕುವ ಚಾನೆಲ್‌ಗಳು ಎಂದು ಹೇಳಲಾಗುವುದು.

ಎರಕ ಹುಯ್ಯುವ ಮುಖ್ಯ ಕಾಲುವೆ:

ಮೂರ್ತಿಯ ಪದ್ಮಾಪೀಠಕ್ಕೆ ಅಳವಡಿಸಿದ ಏರ್ ಚಾನೆಲ್‌ಗಳ ಕೊನೆಯ ಅಳತೆಯಿಂದ ಮೂರ್ತಿಯ ಶಿಖರದ ಕೊನೆಯವರೆಗೂ ಆಗುವಂತೆ ಅಳತೆಯ ದಪ್ಪನೆಯ ಶಾವಿಗೆ ಚಾನೆಲ್‌ಗಳನ್ನು ಸಿದ್ಧಪಡಿಸಿಕೊಂಡು ಮೂರ್ತಿಯ ಹಿಂಭಾಗದ ತಲೆಗೆ ಅಂಟಿಸಿ ತಳದ ಏರ್ ಚಾನಲ್‌ನ ಕೊನೆಯವರೆಗೆ ಯಾವ ಭಾಗದಲ್ಲಿಯೂ ಅಂಟಿಕೊಳ್ಳದ ಹಾಗೆ ನಿಲ್ಲಿಸಬೇಕು. ಎರಕದ ಚಾನಲ್‌ಗೆ ಆಸರೆ ಇಲ್ಲದೆ ನಿಲ್ಲಿಸಿಕೊಂಡು ಸಹಾಯಕ ಚಾನೆಲ್‌ಗಳನ್ನು ಏರ್ ಚಾನಲ್‌ಗಳ ಕಡೆ ಮುಖಮಾಡಿ ಅಂಟಿಸಿಕೊಳ್ಳಬೇಕು.

ಎರಕದ ಸಹಾಯಕ ಕಾಲುವೆ:

ಎರಕದ ಮುಖ್ಯ ಚಾನಲ್‌ಗೆ ಆಸರೆಯಾಗಿ ಸಹಾಯಕ ಚಾನಲ್‌ಗಳನ್ನು ಏರ್ ಚಾನಲ್‌ಗಳ ಕಡೆಗೆ ಮುಖಮಾಡಿ ಮೂರು ಅಥವಾ ನಾಲ್ಕು ಅಂಟಿಸಿಕೊಂಡಿರುವ ಎರಕದ ಸಹಾಯಕ ಚಾನೆಲ್‌ಗಳಾಗಿರುತ್ತದೆ. ಮುಖ್ಯ ಎರಕದ ಚಾನಲ್‌ನಿಂದ ದ್ರವರೂಪದ ಲೋಹವು ಎರಕ ಹುಯ್ಯುವಾಗ ಪ್ರಥಮವಾಗಿ ಮೂರ್ತಿ ಶಿಖರದಿಂದ ಮುಖಾಂತರ ಹೋಗುತ್ತಿರುತ್ತದೆ ಮತ್ತು ಒಂದೊಂದು ಸಹಾಯಕ ಎರಕದ ಚಾನಲ್‌ವರೆಗೆ ಲೋಹ ಬಂದಾಗ ಆ ಲೋಹವು ಒಂದು ಸಹಾಯಕ ಚಾನಲ್‌ದಿಂದ ಮೂರ್ತಿ ಕಡೆಗೆಲೋಹ ಹರಿದು ಹೋಗಲು ಪಾರಂಭಿಸುತ್ತದೆ. ಹೀಗೆಯೇ, ಮುಂದೆ ಎರಡು, ಮೂರು, ನಾಲ್ಕು ಸಹಾಯಕ ಚಾನಲ್‌ಗಳು ಕಾರ್ಯ ನಿರ್ವಹಿಸುತ್ತವೆ. ಆಗ ಸಂಪೂರ್ಣ ಲೋಹ ತುಂಬಿ ಏರ್ ಚಾನಲ್‌ದವರೆಗೂ ಲೋಹ ಬರುತ್ತದೆ. ಈ ಕಲ್ಪನೆಯಿಂದ ನಾವು ಪ್ರತಿಯೊಂದು ಚಾನಲ್‌ಗಳನ್ನು ಅಂಟಿಸಿಕೊಳ್ಳಲಾಗುವುದು.

ವಿವಿಧ ರೀತಿಯ ಚಾನಲ್‌ಗಳು ಬಳಕೆಯ ಉದ್ದೇಶ:

ಟೊಳ್ಳಾದ ಮೇಣದ ಮೂರ್ತಿಯ ಕೀರೀಟದ ಸಂಪೂರ್ಣ ನಕ್ಷೆ ಕೆಲಸ ವಿರಳವಾದ ಉಂಗುರಗಳು, ಕೂದಲುಗಳು, ಕಿವಿ ಮತ್ತು ಕಿವಿಯಲ್ಲಿನ ಆಭರಣಗಳು ಕಣ್ಣು ಮತ್ತು ಕಣ್ಣಿನ ಉಬ್ಬು, ಕತ್ತಿನಲ್ಲಿರುವ ವಿವಿಧ ರೀತಿಯ ಆಭರಣಗಳು ಕುಸುರಿನ ಕೆಲಸ ಪ್ರತಿಯೊಂದು ಕೈ ಮತ್ತು ಕೈ ಬೆರಳು ಕೊನೆಯಲ್ಲಿ ಇರುವ ಉಂಗುರ ಕೈಯಲ್ಲಿ ಹಿಡಿದಿರುವ ಆಯುಧಗಳು ಸೊಂಟಕ್ಕೆ ಕಟ್ಟಿರುವ ಎಡ ಮತ್ತು ಬಲ ಬದಿಯ ಬಟ್ಟೆಯ ನಿಲ್ಲುಗೆಗಳು ಇನ್ನು ಅನೇಕ ಅಲಂಕಾರಿಕ ನಕ್ಷೆಗಳನ್ನು ಪರಿಪೂರ್ಣವಾಗಿ ಸುಂದರವಾಗಿ ಮೇಣದಲ್ಲಿ ನಿರ್ಮಿಸಲಾಗುತ್ತದೆ. ಇಂತಹ ಮೂರ್ತಿಯನ್ನು ತಯಾರಿಸಲು ಇಪ್ಪತ್ತೈದರಿಂದ ಮೂವತ್ತು ದಿನಗಳ ಸಮಯ ತೆಗೆದುಕೊಂಡು ನಿರ್ಮಿಸಿದ ಮೇಣದ ಮೂರ್ತಿಯು ಯಾವ ಭಾಗದಲ್ಲಿಯೂ ಹಾಳಾಗದಂತೆ, ಕಂಚಿನ ಎರಕದ ಮೂರ್ತಿ ನಿರ್ಮಿಸಬೇಕಾದರೆ ಈ ಎಲ್ಲಾ ರೀತಿಯ ಚಾನಲ್‌ಗಳು ಬಹಳ ಮಹತ್ವದ್ದಾಗಿದೆ.

ಈ ರೀತಿಯ ಎರಕದ ಶಿಲ್ಪಗಳಿಗೆ ಚಾಣ, ಸುತ್ತಿಗೆ ಬಳಕೆ ಇರುವುದಿಲ್ಲ. ಇಂತಹ ಪರಿಪೂರ್ಣ ಮೂರ್ತಿಯ ರಚನೆಯ ತಂತ್ರಗಾರಿಕೆ ಇರುವುದರಿಂದ ಈ ಮೇಲಿನ ಎಲ್ಲಾ ಚಾನಲ್‌ಗಳು ಮಹತ್ವ ಪಡೆಯುತ್ತವೆ. ಇಂತಹ ಎಲ್ಲಾ ರೀತಿಯ ಚಾನಲ್‌ಗಳು ಹೊಂದಿದ ಆ ಮೇಣದ ಮೂರ್ತಿಗೆ ಬಳಕೆಯಾದ ಮೇಣದ ತೂಕವನ್ನು ತಿಳಿಯಲು ಈ ಕೆಳಗಿನಂತೆ ಲೆಕ್ಕಾಚಾರ ಮಾಡಬೇಕು. ಟೊಳ್ಳಾದ ಮೂರ್ತಿ ಮಾಡಲು ತೆಗೆದುಕೊಂಡ ಮೇಣದ ತೂಕದಲ್ಲಿ ಚಾನಲ್‌ನೊಂದಿಗೆ ಮೇಣದ ಮೂರ್ತಿ ಸಿದ್ಧಪಡಿಸಿಕೊಂಡ ನಂತರ ಉಳಿದ ಮೇಣದ ತೂಕವನ್ನು ಕಳೆದಾಗ ಚಾನಲ್‌ನೊಂದಿಗೆ ಸಿದ್ಧಗೊಂಡ ಟೊಳ್ಳಾದ ಮೂರ್ತಿಯ ಮೇಣದ ತೂಕ ಸಿಗುವುದು.

ಟೊಳ್ಳಾದ ಮೂರ್ತಿಗೆ ಬಳಸಿದ ಮೇಣದ ತೂಕದ ಲೆಕ್ಕ:

ಪಡೆದ ಮೇಣ 2000ಗ್ರಾಂ

ಉಳಿದ ಮೇಣ 1300ಗ್ರಾಂ

ಬಳಕೆಯಾದ ಮೇಣ 700ಗ್ರಾಂ

ಗಟ್ಟಿಯಾದ ಪೂರ್ಣ ಶಿಲ್ಪ ಮೂರ್ತಿ ರಚಿಸಲು ಬೇಕಾದ ಮೇಣವನ್ನು ತೂಕ ಮಾಡದೇ ಹಾಗೇ ಬಳಸಬಹುದು ಅಥವಾ ಮೇಲಿನ ಲೆಕ್ಕಾಚಾರದಲ್ಲಿ ಬಳಸಬಹುದು. ಚಾನಲ್‌ನೊಂದಿಗೆ ಗಟ್ಟಿಯಾಗಿ ಸಿದ್ಧಪಡಿಸಿದ ಮೇಣದ ಮೂರ್ತಿಯನ್ನು ನೇರವಾಗಿ ತೂಕ ಮಾಡಿಕೊಂಡಾಗ ಬಳಕೆಯಾದ ಮೇಣದ ತೂಕ ಸಿಗುವುದು.

ಚಾನಲ್ ಹೊಂದಿದ ಮೇಣದ ಮೂರ್ತಿಗೆ ಮೋಲ್ಡ್ ಕಟ್ಟುವ ವಿಧಾನ

ಇದು ಪ್ರೆಂಚ್ ಪ್ರೊಸೆಸ್ ಮೋಲ್ಡ್ ಕಟ್ಟುವ ವಿಧಾನ

1. ಇಟ್ಟಿಗೆ,
2. ಪ್ಲಾಸ್ಟರ್ ಆಫ್ ಪ್ಯಾರೀಸ್,
3. ತಂತಿ ಜಾಲಿ,
4. ಮೊಳೆಗಳು

ಇಟ್ಟಿಗೆ: ಇಟ್ಟಿಗೆಯನ್ನು ಸಣ್ಣದಾಗಿ ಕುಟ್ಟಿ ಪುಡಿಯನ್ನಾಗಿಸಿಕೊಂಡು ಅದನ್ನು ಹತ್ತಿ ಬಟ್ಟೆಯ ಮುಖಾಂತರ ಸೋಸಿ ಗಂಧದಂತ ಪುಡಿಯನ್ನು ಸಿದ್ಧಪಡಿಸಿಕೊಳ್ಳಬೇಕು. ಕಚ್ಚಾ ಪುಡಿಯನನು ಕೂಡ ಸಂಗಹಿಸಿಕೊಳ್ಳಬೇಕು.

ಟೊಳ್ಳು ಮೇಣದ ಮೂರ್ತಿಗೆ ಮೊಳೆಗಳನ್ನು ಬಲಸುವ ವಿಧಾನ:

ಮೇಣದಲ್ಲಿ ರಚನೆಗೊಂಡ ಮೂರ್ತಿಯ ಒಳಭಾಗದಲ್ಲಿ ಇರುವ ಮಣ್ಣಿನ ಆಂತರಿಕ ರೂಪವು ಸಮಾನಾಂತರವಾಗಿ ನಿಲ್ಲುವಾಗ್ಗೆ ಮೂರ್ತಿಯ ಹಿಂಭಾಗ ಮತ್ತು ಮುಂಭಾಗ ಮೊಳೆಗಳನ್ನು ನಾಡಿಸಿಕೊಳ್ಳಬೇಕು. ನಾಟಿಸಿಕೊಂಡಿರುವ ಮಳಿಗೆಗಳು ಮೇಣದಲ್ಲಿ ಪ್ರವೇಶವಾಗಿ ಆಂತರಿಕ ಮಣ್ಣಿನ ರೂಪದಲ್ಲಿ ಪ್ರವೇಶವಾಗಬೇಕು ಮತ್ತು ಮೇಣದ ಮೂರ್ತಿಯ ಹೊರಭಾಗದಲ್ಲಿ ಮೊಳೆ ಉಳಿದಿರಬೇಕು. ಈ ರೀತಿಯಾಗಿ ಐದಾರು ಮೊಳೆಗಳನ್ನು ಅವಶ್ಯಕತೆ ಇದ್ದ ಸ್ಥಳಗಳಲ್ಲಿ ನಾಟಿಸಿಕೊಳ್ಳಬೇಕು. ಮೊಳೆಗಳನ್ನು ನಾಟಿಸಿಕೊಂಡು ಮೂರ್ತಿಯ ಮೇಲೆ ಮೋಲ್ಡ್ ಕಟ್ಟಿ ಸುಟ್ಟು ಒಳಗಿನ ಮೇಣವನ್ನು ಸಂಪೂರ್ಣ ಖಾಲಿ ಮಾಡಿದಾಗ ಮೊಲ್ಡ್‌ನಲ್ಲಿ ನಾಟಿಕೊಂಡ ಮೊಳೆಗಳು ಆಂತರಿಕ ಮಣ್ಣಿನ ರೂಪವನ್ನು ಸಮತಲವಾಗಿ ಹಿಡಿದುಕೊಂಡು ನಿಂತಿರುತ್ತವೆ. ಈ ರೀತಿಯಾಗಿ ಎರಕಕ್ಕೆ ಸಿದ್ಧಗೊಂಡ ಮೊಲ್ಡ್‌ಗೆ ದ್ರವ ರೂಪದ ಲೋಹವನ್ನು ಎರಕ ಹೊಯ್ದಾಗ ಪರಿಪೂರ್ಣ ಲೋಹದ ಮೂರ್ತಿ ಸಿದ್ಧಗೊಂಡಿದೆ. ಸಿದ್ಧಗೊಂಡ ಲೋಹದ ಮೂರ್ತಿ ಒಳಭಾಗದಲ್ಲಿ ಮಣ್ಣು ಉಳಿದುಕೊಂಡಿರುತ್ತದೆ. ಇಂತಹ ಮೇಣದ ಮೂರ್ತಿಗೆ ಮೊಳೆಗಳನ್ನು ನಾಟಿಸದೇ ನೇರವಾಗಿ ಮೊಲ್ಡ್ ಕಟ್ಟಿ ಸುಡುವುದರ ಮೂಖಾಂತರ ಒಳಗಿರುವ ಮೇಣ ಸಂಪೂರ್ಣ ಖಾಲಿ ಮಾಡಿದಾಗ ಮೇಣದ ಒಳಗಿರುವ ಆಂತರಿಕ ಮಣ್ಣಿನ ರೂಪವು ಸಮತಲವಾಗಿ ನಿಲ್ಲದೆ ಮೊಲ್ಡ್‌ನ ಒಂದು ಭಾಗಕ್ಕೆ ವಾಲಿರುತ್ತದೆ. ಈ ಮೊಲ್ಡ್‌ಗೆ ದ್ರವರೂಪದ ಎರಕ ಹೊಯ್ದಾಗ ಮೂರ್ತಿ ಹಾಳಾಗುತ್ತದೆ. ಟೊಳ್ಳು ಮೂರ್ತಿಉ ರಚನಾ ಕ್ರಮದಲ್ಲಿ ಮೊಳೆಗಳ ಪಾತ್ರ ಬಹಳ ಮುಖ್ಯವಾಗಿದೆ. ಮೊಲ್ಡ್‌ನ ತಳಭಾಗದಲ್ಲಿ ಕಾಣಿಸಿಕೊಳ್ಳುತ್ತಿರುವ ಆ ಎರಕದ ಚಾನಲ್ ಮತ್ತೆ ಏರ್ ಚಾನಲ್‌ಗಳ ಅರ್ಧ ಇಂಚು ತಗ್ಗು ಆಗುವಂತೆ ಆ ಚಾನಲ್‌ಗಳ ಮುಖಗಳನ್ನು ಸಿದ್ಧಪಡಿಸಿಕೊಳ್ಳಬೇಕು. ಈ ರೀತಿಯಾಗಿ ಸಿದ್ಧಪಡಿಸಿಕೊಂಡ ಮೂರ್ತಿಯನ್ನು ಸಂಪೂರ್ಣ ತೇವಾಂಶ ಹೋಗುವವರೆಗೆ ಒಣಗಿಸಲು ಒಂದು ಅಥವಾ ಎರಡು ದಿನಗಳ ಸಮಯ ತೆಗೆದುಕೊಳ್ಳಬಹುದು. ಈ ರೀತಿಯಾಗಿ ಮೊಲ್ಡ್ ಸಿದ್ಧಪಡಿಸಿಕೊಳ್ಳಬೇಕು.

ಮೊಳೆಯನ್ನು ನಾಟಿಸಿಕೊಂಡ ಮೇಣದ ಮೂರ್ತಿಗೆ ಮೊಲ್ಡ್ ಕಟ್ಟುವ ವಿಧಾನ:

ಚಾನಲ್‌ಗಳು ಮತ್ತು ಮೊಳೆಗಳನ್ನು ಹೊಂದಿರುವ ಮೇಣದ ಮೂರ್ತಿಯ ತಲೆ ಭಾಗವನ್ನು ಮೇಲಕ್ಕೆ ಮಾಡಿ ಪೀಠ ಭಾಗದಿಂದ ಎರಡು ಇಂಚು ಉದ್ದನೆಯ ಚಾನಲ್‌ಗಳನ್ನು ಹೊಂದಿರುವ ಎಲ್ಲಾ ಚಾನಲ್‌ಗಳನ್ನು ಭೂಸ್ಪರ್ಷವಾಗುವಂತೆ ನಿಲ್ಲಿಸಿಕೊಳ್ಳಬೇಕು. ಮೊಲ್ಡ್‌ಕಟ್ಟಲು ಸಿದ್ಧಪಡಿಸಿಕೊಂಡ ಗಂಧದಂತೆ ಇರುವ ಇಟ್ಟಿಗೆ ಪುಡಿಯನ್ನು ಅರ್ಧ ಅಂಶ ಭಾಗದಷ್ಟು ತೆಗೆದುಕೊಳ್ಳಬೇಕು. ಇದೇ ರೀತಿಯ ಅರ್ಧ ಅಂಶ ಭಾಗದಷ್ಟು ಪ್ಲಾಸ್ಟರ್ ಆಫ್ ಪ್ಯಾರಿಸ್ ತೆಗೆದುಕೊಳ್ಳಬೇಕು. ಈ ಎರಡು ಪುಡಿಗಳನ್ನು ಒಂದು ಪ್ಲಾಸ್ಟಿಕ್ ಬುಟ್ಟಿಗೆ ಹಾಕಿಕೊಂಡು ಮಿಶ್ರಣ ಮಾಡಬೇಕು. ಮಿಶ್ರಣ ಮಾಡಿದ ಪುಡಿಗೆ ನೀರನ್ನು ಕೈಯಿಂದ ಕಲಕಿಸುತ್ತಾ ದ್ರವರೂಪಕ್ಕೆ ಬರುವವರೆಗೆ ಸಿದ್ಧಪಡಿಸಿಕೊಳ್ಳಬೇಕು. ಮಿಶ್ರಣಗೊಂಡ ಈ ರಾಡಿಯನ್ನು ಮೊಲ್ಡ್‌ಕಟ್ಟಲು ನಿಲ್ಲಿಸಿಕೊಂಡ ಮೂರ್ತಿಗೆ ಎಲ್ಲ ಕಡೆಯಿಂದ ನಿಧಾನವಾಗಿ ಹಾಕುತ್ತಾ ಲೇಪನ ಮಾಡುತ್ತಾ ಹೋಗಬೇಕು. ಮೂರ್ತಿಯ ಎಲ್ಲಾ ಸಂಧಿಗಳಿಗೆ ಸೇರಿಕೊಳ್ಳುವ ಹಾಗೆ ಜಾಗ್ರತೆಯಿಂದ ಪ್ರಥಮ ಹಂತ ಲೇಪನ ಮಾಡಿಕೊಳ್ಳಬೇಕು.

ಎರಡನೆಯ ಹಂತ:

ಇಟ್ಟಿಗೆಯ ಕಚ್ಚಾ ಪುಡಿ ಮತ್ತು ಪ್ಲಾಸ್ಟರ್ ಆಫ್ ಪ್ಯಾರೀಸ್ ಇವೆರಡನ್ನು 50:50 ಪ್ರಮಾಣದಲ್ಲಿ ಮಿಶ್ರಣ ಮಾಡಿಕೊಂಡು ಅದಕ್ಕೆ ನೀರನ್ನು ಬೆರೆಸುತ್ತಾ ತಿರುಳಿನ ರೂಪದಲ್ಲಿ ಬರುವಂತೆ ಕಲಿಸಿಕೊಳ್ಳಬೇಕು. ಇಂತಹ ತಿರುಳನ್ನು ಪ್ರಥಮ ಲೇಪನದ ಮೇಲೆ ಸುತ್ತಲೂ ಸಮತಲವಾಗಿ ಲೇಪಿಸಬೇಕು. ಎರಡನೆಯ ಹಂತ ಮುಗಿದ ಮೇಲೆ ಮೊಲ್ಡ್‌ನ ತಳ ಭಾಗ ಬಿಟ್ಟು ಇನ್ನುಳಿದ ಎಲ್ಲಾ ಭಾಗವನ್ನು ತಂತಿ ಜರಡಿಯಿಂದ ಭದ್ರವಾಗಿ

ಒದಿಕೆ ಮಾಡಬೇಕು. ಈ ರೀತಿ ಒದಿಕೆ ಮಾಡಿದ ಮೊಲ್ಡ್‌ನಲ್ಲಿ ಎರಡನೆಯ ಹಂತದ ಲೇಪನದ ವಿಧಾನದ ಹಾಗೆ ಮೂರನೆಯ ಹಂತದಲ್ಲಿ ಲೇಪನ ಮಾಡಿಕೊಳ್ಳಬೇಕು. ಈ ಮೂರನೆಯ ಹಂತದ ಲೇಪನ ಮಾಡಿಕೊಳ್ಳಬೇಕು. ಈ ಮೂರನೆಯ ಹಂತದ ಲೇಪನ ಮುಗಿದ ನಂತರ ಒಟ್ಟು ಲೇಪನ ದಪ್ಪದ ಮೂಲ ಮೂರ್ತಿಯಿಂದ ಒಂದು ಇಂಚಿನವರೆಗೆ ಸುತ್ತಲೂ ಸಮತಲವಾಗಿ ಆವರಿಸಿಕೊಂಡಿರಬೇಕು. ಮೊಲ್ಡ್‌ನ ತಳಭಾಗದಲ್ಲಿ ಕಾಣಿಸಿಕೊಳ್ಳುತ್ತಿರುವ ಆ ಎರಕದ ಚಾನಲ್ ಮತ್ತು ಎರ್ ಚಾನಲ್‌ಗಳ ಅರ್ಧ ಇಂಚು ತಗ್ಗು ಆಗುವಂತೆ ಆ ಚಾನಲ್‌ಗಳ ಮುಖಗಳನ್ನು ಸಂಪೂರ್ಣ ತೇವಾಂಶ ಹೋಗುವವರೆಗೂ ಒಣಗಿಸಲು ಒಂದು ಅಥವಾ ಎರಡು ದಿನಗಳ ಸಮಯ ತೆಗೆದುಕೊಳ್ಳಬಹುದು ಈ ರೀತಿಯಾಗಿ ಮೊಲ್ಡ್‌ನ್ನು ಸಿದ್ಧಪಡಿಸಿಕೊಳ್ಳಬೇಕು.

ಮೊಲ್ಡ್ ಸುಡುವ ವಿಧಾನ:

ಒಂದು ಭಟ್ಟಿಯನ್ನು (ಕಟ್ಟಿಕೊಂಡು)ಸಜ್ಜುಗೊಳಿಸಿಕೊಂಡು/ತಯಾರಿಸಿಕೊಂಡು ಅದರ ಒಳಗಡೆ ಕಬ್ಬಿಣ ಸಲಾಖೆಗಳನ್ನು ಇಟ್ಟು ಅದರ ಮೇಲ್ಗಡೆ ಸಂಪೂರ್ಣ ಒಣಗಿದ ಮೊಲ್ಡ್‌ನ್ನು ಇಡಬೇಕು. ಅಂದರೆ ಮೊಲ್ಡ್‌ನ ಕೆಳಭಾಗದಲ್ಲಿ ರಂಧ್ರದಂತೆ ಇರುವ ಭಾಗವನ್ನು ಕೆಳಮುಖವಾಗಿ ಇಡಬೇಕು. ಯಾಕೆಂದರೆ, ನಾವು ಮೊಲ್ಡ್‌ನ್ನು ಭಟ್ಟಿಯಲ್ಲಿ ಇಟ್ಟು ಸುಡುವಾಗ ಮೇಣ ಸಂಪೂರ್ಣ ಕರಗಿ ಒಲೆಯ ಕೆಳಗಡೆ ಅಥವಾ ಆವಿಯಾಗಿ ಖಾಲಿಯಾಗುತ್ತದೆ. ಈ ಭಟ್ಟಿಯ ಸಲಾಕಿಯ ಭಾಗದಿಂದ ಗೋಲಾಕಾರವಾಗಿ ಮೊಲ್ಡ್‌ನ ಸುತ್ತುವರಿದು ಇಟ್ಟಿಗೆಯಿಂದ ಕಟ್ಟಿಕೊಳ್ಳುತ್ತಾ ಮೇಲಕ್ಕೆ ಹೋಗಬೇಕು. ಮೇಲೆ ಹೋದಂತೆಲ್ಲಾ ಭಟ್ಟಿಯ ಸುತ್ತ ಅಳತೆ ಭಾಗ ಕಡಿಮೆ ಮಾಡುತ್ತಾ ಹೋಗಬೇಕು. ಭಟ್ಟಿಯ ಮೇಲೆ ಭಾಗದಲ್ಲಿ ಒಂದು ಇಟ್ಟಿಗೆಯ ಅಳತೆ ಪ್ರಮಾಣದಲ್ಲಿ ಒಂದು ಕಿಂಡಿಯನ್ನು ಬಿಡಬೇಕು. ಈ ಕಿಂಡಿಯು ಮೊಲ್ಡ್‌ನ ಕೊನೆಯ ಭಾಗದಿಂದ ಹತ್ತು ಹನ್ನೊಂದು ಇಂಚು ಅಂತರದಲ್ಲಿ ಇರಬೇಕು. ಈ ಭಟ್ಟಿ ಕಟ್ಟುವ ಕೆಲಸ ಮುಗಿದ ನಂತರ ತಳಭಾಗದಲ್ಲಿ ಕಟ್ಟಿಗೆ

ಉರಿಯಲು ಬಿಟ್ಟಿರುವ ಸ್ಥಳದಲ್ಲಿ (ಸಲಾಕೆ ಕೆಳಭಾಗ)ಕಟ್ಟಿಗೆಗಳನ್ನು ಹಾಕಿ ಬೆಂಕಿ ಹಚ್ಚಿ ನಿಧಾನವಾಗಿ ಉರಿಯಲು ಪ್ರಾರಂಭಿಸಬೇಕು. ಸ್ವಲ್ಪ ಸಮಯದ ನಂತರ ಭಟ್ಟಿ ಬಿಸಿಯಾದಂತೆ ಉರಿಯುವ ಪ್ರಮಾಣ ಹೆಚ್ಚಿಸುತ್ತಾ ಹೋಗಬೇಕು. ಇದರಿಂದ ಮೊಲ್ಡ್ ಬಿಸಿಯಾಗುತ್ತಾ ಹೋಗುತ್ತದೆ. ನಂತರ ಮೊಲ್ಡ್‌ನಲ್ಲಿ ಇರುವಂತಹ ಮೇಣವು ಸಂಪೂರ್ಣವಾಗಿ ಕರಗಿ ಒಲೆಯಲ್ಲಿ ಸೋರಲು ಪ್ರಾರಂಭಿಸುತ್ತದೆ. ಹೀಗೆಯೇ ಸಂಪೂರ್ಣ ಮೇಣ ಖಾಲಿಯಾಗುವವರೆಗೂ ಭಟ್ಟಿಯಲ್ಲಿ ಉರಿಯುತ್ತಾ ಇರಬೇಕು. ಈ ಮೂರ್ತಿಯ ಮೊಲ್ಡ್‌ನ್ನು ಸುಡಲು 3 ರಿಂದ 4 ಗಂಟೆಗಳ ಸಮಯ ಬೇಕಾಗುತ್ತದೆ. ವಿವಿಧ ಅಳತೆಯ ಮೊಲ್ಡ್‌ಗಳನ್ನು ಸುಡಲು ಸಮಯ ಹೆಚ್ಚು ಅಥವಾ ಕಡಿಮೆ ಆಗಬಹುದು. ಈ ರೀತಿಯಾಗಿ ಮೊಲ್ಡ್‌ನಲ್ಲಿರುವ ಮೇಣ ಪರಿಪೂರ್ಣ ಖಾಲಿಯಾಗುವವರೆಗೂ ಸುಟ್ಟು ಮೇಲೆ ಹೊಗೆ ಹೋಗಲು ಬಿಟ್ಟಿರುವ ಕಿಂಡಿಯನ್ನು ಇಟ್ಟಿಗೆಯಿಂದ ಮುಚ್ಚಬೇಕು. ನಂತರ ಕೆಳಗಡೆ ಉರಿಯಲು ಅವಕಾಶವಿದ್ದ ಸ್ಥಳವನ್ನು ಮತ್ತೆ ಇಟ್ಟಿಗೆಯಿಂದ ಕಟ್ಟಿ ಮುಚ್ಚಬೇಕು.

ಲೋಹ ಕರಗಿಸುವ ವಿಧಾನ:

ಟೊಳ್ಳಾದ ಅಥವಾ ಗಟ್ಟಿಯಾದ ಮೇಣದ ಮೂರ್ತಿ ತಯಾರಿಸಲು ಉಪಯೋಗಿಸಿದ ಮೇಣದ ತೂಕದ 11ರಷ್ಟು ಲೋಹವನ್ನು ಬಳಸಬೇಕು. ಇಲ್ಲಿ ಅಂಭಾಭವಾನಿ ಮೂರ್ತಿಗೆ ಮೇಣದ ತೂಕದ 350ಗ್ರಾಂ × 11 = 3.85 ಕೆ.ಜಿಯಷ್ಟು ತೂಕದ ಲೋಹವನ್ನು ಸಂಗ್ರಹಿಸಿ ಚಿಕ್ಕ-ಚಿಕ್ಕ ತುಕಡಿಗಳಾಗಿ ಮಾಡಿಟ್ಟುಕೊಂಡಿರುತ್ತಾರೆ. ಹಾಗೆಯೇ ಲೋಹ ಕರಗಿಸಲು ಬಳಸುವ ಲೋಹದ ತೂಕದ ಪ್ರಮಾಣಕ್ಕನುಗುಣವಾಗಿ ನಂಬರಿನ ಮೂಸೆ (ಕಂಚು ಕರಗಿಸುವುದಕ್ಕಾಗಿ ತಯಾರಿಸಿದ ಮಣ್ಣಿನ ಪಾತ್ರೆ)ಯನ್ನು 3.85 ಕೆ.ಜಿಯ ಕಂಚನ್ನು ಚಿಕ್ಕ-ಚಿಕ್ಕ ತುಕಡಿಗಳನ್ನಾಗಿ ಮಾಡಿ 5ನೇ ನಂಬರಿನ ಮೂಸೆಯಲ್ಲಿ ತುಂಬಿಟ್ಟುಕೊಳ್ಳಬೇಕು. ಆಗ ಪೌಂಡರಿಯನ್ನು ಸಿದ್ಧಮಾಡಿಕೊಂಡು ಅದರಲ್ಲಿ ಕಲ್ಲದ್ದಲು ಜೊತೆಗೆ ಬೆಂಕಿಯನ್ನು ಸೇರಿಸಿ ಹಾಕಬೇಕು. ಕಲ್ಲಿದ್ದಲನ್ನು ಹೊತ್ತಿಸಲು

ನಿಧಾನವಾಗಿ ಬ್ಲೋಯರ್ ಮುಖಾಂತರ ಗಾಳಿಯನ್ನು ಹಾಯಿಸಿ ಪೌಂಡರಿಯಲ್ಲಿ ಕಂಚು ತುಂಬಿದ ಮೂಸೆಯನ್ನು ಇಟ್ಟು ಸುತ್ತಲೂ ಇದ್ದಿಲು ಹಾಕಿ ಬ್ಲೋಯರ್ ಮುಖಾಂತರ ರಭಸವಾಗಿ ಗಾಳಿ ಒದಗಿಸುವ ಕ್ರಿಯೆ ಐದು ಹತ್ತು ನಿಮಿಷ ನಡೆದಾಗ ಜ್ವಾಲೆಯು ಮೇಲೆ ಬರಲು ಪ್ರಾರಂಭಿಸುತ್ತದೆ. ಆ ಜ್ವಾಲೆಯ ಉರಿಯ ಉಷ್ಣಾಂಶತೆಯನ್ನು ಹೊರಗೆ ಬಿಡದೆ ಹಾಗೆ ಕಬ್ಬಿಣದ ಭಟ್ಟಿಯಿಂದ ಪೌಂಡರಿಯ ಬಾಯಿಯನ್ನು ಮುಚ್ಚಬೇಕು. 15, 20 ನಿಮಿಷ ನಂತರ ಕೆಂಪಾಗಿ ಕಾಯ್ದಿರುವ ಕಬ್ಬಿಣದ ಭಟ್ಟಿಯನ್ನು ಪೌಂಡರಿಯ ಬಾಯಿಯಿಂದ ತೆಗೆದು ಮೂಸೆಯ ಒಳಗೆ ಇರುವ ಮೆಟಲ್‌ನ ಚೂರುಗಳು ಕರಗಿ ದ್ರವರೂಪಕ್ಕೆ ಬಂದಿರುವುದನ್ನು ಗಮನಿಸಿ ಅದರಲ್ಲಿರುವ ಮಣ್ಣಿನಂತಹ ಕಸ ಕಂಡು ಬರುತ್ತದೆ. ಅದನ್ನು ಕಬ್ಬಿಣದ ರಂಧ್ರಗಳ ಚಮಚೆಯಿಂದ ದ್ರವದಲ್ಲಿಯ ಕಸವನ್ನು ಹೊರಗೆ ತೆಗೆದು ಸ್ವಚ್ಛಗೊಳಿಸಬೇಕು. ಇನ್ನು ಉಳಿದ ಮೆಟಲ್ ಚೂರುಗಳನ್ನು ಮೂಸೆಗೆ ಸೇರಿಸಿ ಪೌಂಡರಿಯ ಬಾಯಿಯನ್ನು ಮತ್ತೇ ಭಟ್ಟಿಯಿಂದ ಮುಚ್ಚಬೇಕು. ಕರಗಿಸುವ ಕ್ರಿಯೆ ಹೀಗೆ ಮುಂದುವರೆಸಬೇಕು.

ಈ ಸಂದರ್ಭದಲ್ಲಿ ಮುಚ್ಚಿದ ಮೊಲ್ಡ್ ಇರುವ ಭಟ್ಟಿಯನ್ನು ನಿಧಾನವಾಗಿ ಬಿಚ್ಚಬೇಕು. ಬಿಚ್ಚುವಾಗ ಭಟ್ಟಿಯಲ್ಲಿರುವ ಮೊಲ್ಡ್ ಮೇಲೆ ಬೀಳದ ಹಾಗೆ ಜಾಗ್ರತೆಯಿಂದ ಪ್ರತಿಯೊಂದು ಇಟ್ಟಿಗೆಗಳನ್ನು ಹೊರ ತೆಗೆಯಬೇಕುಲ ಸಂಪೂರ್ಣ ತೆರೆದ ಭಟ್ಟಿಯಿಂದ ಬಿಸಿಯಾದ ಮೊಲ್ಡ್‌ನ್ನು ಚೀಲದ ತಟ್ಟೆಗಳ ಸಹಾಯದಿಂದ ಹಿಡಿದು ನಾಜೂಕಿನಿಂದ ಹೊರತೆಗೆದು ಯಾವುದೇ ರೀತಿಯಿಂದ ಧಕ್ಕೆಯಾದಂತೆ, ಮೊಲ್ಡ್‌ನ ತಲೆಯ ಭಾಗವನ್ನು ಕೆಳಗೆ ಮಾಡಿ ತಳದಲ್ಲಿರುವ ಚಾನಲ್ ಬಾಯಿಗಳು ಮೇಲೆ ಮುಖಮಾಡಿ ಒಂದು ಬುಟ್ಟಿಯ ಮಧ್ಯದಲ್ಲಿ ಸ್ವಲ್ಪ ಮರಳನ್ನು ಹಾಕಿ ಆ ಮರಳಿನ ಮೇಲೆ ಮೊಲ್ಡ್‌ನ್ನು ತಲೆಯ ಭಾಗವನ್ನು ಇಡಬೇಕು. ಲಂಭಾಕಾರದಲ್ಲಿ ನಿಲ್ಲಿಸಿಕೊಂಡ ಮೊಲ್ಡ್‌ನ ಸುತ್ತಲೂ ಭಟ್ಟಿಯಲ್ಲಿ ಮರಳನ್ನು ಹಾಕುತ್ತಾ ಮೊಲ್ಡ್‌ನ ಚಾನಲ್‌ನ ಬಾಯಿ ಸಮೀಪದವರೆಗೂ ಪೂರ್ತಿ ಭರ್ತಿಮಾಡಿಕೊಳ್ಳಬೇಕು. ಪೌಂಡರಿಯ ಮೇಲೆ ಕಬ್ಬಿಣದ ಭಟ್ಟಿಯನ್ನು ತೆಗೆದು ಲೋಹವು ಕರಗಿ ನಿಗಿ-ನಿಗಿಯಾಗಿ ಹಳದಿ ಬಣ್ಣ ಹೊರ ಹೊಮ್ಮತ್ತಿರುತ್ತದೆ. ಆಗ ನಾವು ಲೋಹ

ಪರಿಪೂರ್ಣವಾಗಿ ದ್ರವರೂಪದಲ್ಲಿ ಇರುವುದನ್ನು ಖಚಿತ ಪಡಿಸಿಕೊಳ್ಳುತ್ತೇವೆ. ದ್ರವರೂಪದ ಲೋಹದಲ್ಲಿರುವ ಅಲ್ಪ-ಸ್ವಲ್ಪ ಕಸವನ್ನು ಪುನಃ ಸ್ವಚ್ಛಗೊಳಿಸಿಕೊಂಡು ಬ್ಲೋಯರ್‌ನಿಂದ ಒದಗಿಸುತ್ತಿರುವ ಗಾಳಿಯನ್ನು ನಿಲ್ಲಿಸಬೇಕು. ಉದ್ದನೆಯ ಇಕ್ಕಳಗಳ ಸಹಾಯದಿಂದ ಮೂಸೆಯನ್ನು ಭದ್ರವಾಗಿ ಹಿಡಿದು ಪೌಂಡರಿಯಿಂದ ಹೊರತೆಗೆದು ಮೂಸೆಗೆ ತಕ್ಕಂತಹ ಕಬ್ಬಿಣ ರಿಂಗ್‌ನ ಹಿಡಿಕೆಯಲ್ಲಿ ಇಟ್ಟು ಇಕ್ಕಳದ ಕೆಲಸಕ್ಕೆ ವಿರಾಮ ಕೊಡಬೇಕು. ಆ ಕಬ್ಬಿಣದ ರಿಂಗ್‌ನ ಹಿಡಿಕೆಯ ಎರಡು ಕೊನೆಗಳಿಗೆ ಒಬ್ಬರಾಗಿ ಹಿಡಿದು ಮೇಲಕ್ಕೆ ಎತ್ತಿಕೊಂಡು ಬಂದು ಮೊಲ್ಡ್‌ನ ಎರಕದ ಚಾನಲ್‌ಗೆ ನಿಧಾನವಾಗಿ ಲೋಹವನ್ನು ಸುರಿಯಲು ಪ್ರಾರಂಭಿಸಬೇಕು. ಲೋಹ ಸುರಿಯುವಾಗ ತಂಪಾದ ಗಾಳಿ ಪ್ರಭಾವದಿಂದ ಸುರಿವ ಭಾಗದಲ್ಲಿ ಮತ್ತು ಮೂಸೆಯ ಒಳಗಿರುವ ದ್ರವದ ಮೇಲೆ ಕೆನೆಯಂತೆ ಗಟ್ಟಿಯಾಗಿ ನಿಲ್ಲುವ ಸಾಧ್ಯತೆಗಳು ಇರುತ್ತದೆ. ಇದನ್ನು ನಿವಾರಿಸಲು ಹರಲೇ ಬಟ್ಟೆಯಿಂದ ಸಿಂಬಿಯನ್ನು ಮತ್ತು ಸಣ್ಣ ಚಂಡನ್ನು ಮಾಡಿಕೊಂಡು ಎರಕದ ಚಾನಲ್‌ನ ಬಾಯಿಗೆ ಸಿಂಬಿಯನ್ನು ಇಟ್ಟು ಮೂಸೆಯ ಒಳಗೆ ಆ ಚಂಡನ್ನು ಹಾಕಿದಾಗ ಇವೆರಡು ಎರಕ ಹುಯ್ಯುವಾಗ ಬೆಂಕಿ ಹತ್ತಿ ಉರಿಯುತ್ತದೆ. ಇದರಿಂದಾಗಿ ತಂಪಾದ ಗಾಳಿಯ ಪ್ರಭಾವ ಬರುವುದಿಲ್ಲ. ಈ ರೀತಿ ನಿಧಾನವಾಗಿ ಸುರಿಯುತ್ತಿರುವಾಗ ದ್ರವರೂಪದ ಲೋಹವು ಎರಕದ ಮುಖ್ಯ ಚಾನೆಲ್ ಮುಖಾಂತರ ಮೂರ್ತಿಯ ಶಿಖರದ ಭಾಗಕ್ಕೆ ಸಾಗಿ ಅಲ್ಲಿಂದ ನಿಧಾನವಾಗಿ ಮುಖ, ಕತ್ತು, ಎಡ, ಬಲ, ಕೈಗಳ ಭಾಗದಲ್ಲಿ ದ್ರವ ಮೂರ್ತಿ ಆಕಾರವು ತುಂಬುತ್ತಾ ಮೇಲೆ ಸಾಗಿ ಗಾಳಿ ಆವಿಯಾಗಿ ಚಾನಲ್‌ನಿಂದ ಮೂರ್ತಿಯ ಎಲ್ಲಾ ಭಾಗಕ್ಕೆ ಸಾಗಿಸುತ್ತದೆ. ಹೀಗೆಯೇ ಮುಂದುವರಿದು ಎರಡು, ಮೂರು, ನಾಲ್ಕನೆಯ ಉಪ ಎರಕದ ಚಾನಲ್‌ಗಳು ಕಾರ್ಯನಿರ್ವಹಿಸುತ್ತಿರುತ್ತದೆ. ಮೂರ್ತಿಯ ಎಲ್ಲಾ ಎರಕದ ಉಪಚಾನಲ್‌ಗಳು ಲೆವೆಲ್ ದಾಟಿ ಬಂದಾಗ ಪೀಠಿಕೆ ಅಳವಡಿಸಿದ ಏರ್‌ಚಾನಲ್ ಮುಖಾಂತರ ಹಾಯ್ದು ಹೊರಗೆ ಹರಿದು ಬಂದಾಗ ಮೂರ್ತಿಯ ಎಲ್ಲಾ ಭಾಗದಲ್ಲಿ ಮೂರ್ತಿಯ ಎಲ್ಲಾ ಭಾಗದಲ್ಲಿ ಲೋಹ ಆವರಿಸಿಕೊಂಡಿದೆ ಎಂದು ಗೊತ್ತಾಗುತ್ತದೆ. ಆಗ ಎರಕ ಹೊಯ್ಯುವ ಕಾರ್ಯ ಮುಕ್ತಾಯಗೊಳ್ಳುತ್ತದೆ.

ಮೊಲ್ಡ್ ಹೊಡೆದು ಮೂರ್ತಿಗೆ ಅಂತಿಮ ರೂಪ ಕೊಡುವ ವಿಧಾನ:

ಎರಕ ಹೊಯ್ದ ಮೊಲ್ಡ್‌ನ್ನು ತಣ್ಣಗಾಗುವವರೆಗೂ ಬಿಟ್ಟು ನಂತರ ಮೊಲ್ಡನ್ನು ಚೂಪಾದ ಉದ್ದನೆಯ ಮೊಳೆ ಮತ್ತು ಚಿಕ್ಕ ಸುತ್ತಿಗೆಯನ್ನು ತೆಗೆದುಕೊಂಡು ಮೊಲ್ಡನ್ನು ಹೊಡೆಯಲು ಪ್ರಾರಂಭಿಸಬೇಕು.

ಮೊಲ್ಡನ್ನು ಹೊಡೆಯುವಾಗ ಮೊಲ್ಡಿನ ಒಳಗಿರುವ ಮೂರ್ತಿಗೆ ತಾಗದಂತೆ ಅತಿ ಜಾಗ್ರತೆಯಿಂದ ಮಣ್ಣನ್ನು ಲೋಹದ ಮೂರ್ತಿಯಿಂದ ನಿಧಾನವಾಗಿ ಬೇರ್ಪಡಿಸಿದಾಗ ಪ್ರತ್ಯೇಕ ಮೂರ್ತಿಯಾಗೇ ನಮ್ಮ ಕೈಗೆ ಸೇರುವುದು. ಈ ಮೂರ್ತಿಯ ಜೊತೆಯಲ್ಲಿ ವಿವಿಧ ರೀತಿಯ ಚಾನಲ್‌ಗಳನ್ನು ಮೆಟಲ್ ಬ್ಲೇಡ್ ಮತ್ತು ಚಿಕ್ಕ ಚಿಕ್ಕ ಉಳಿಗಳ ಸಹಾಯದಿಂದ ಮೂರ್ತಿಗೆ ಧಕ್ಕೆಯಾಗದ ಹಾಗೆ ಎಲ್ಲಾ ಚಾನಲ್‌ಗಳನ್ನು ಬೇರ್ಪಡಿಸಬೇಕು. ಮೂರ್ತಿಯ ಕೆಲವು ಭಾಗದಲ್ಲಿ ಮೊಲ್ಡ್‌ನ ಬಿರುಕುಗಳ ಮುಖಾಂತರ ಹೊರಬಂದ ಲೋಹದ ಹೆಚ್ಚಾದ ಭಾಗಗಳನ್ನು ಚೂಪಾದ ಉಳಿಯ ಸಹಾಯದಿಂದ ನಿಧಾನವಾಗಿ ಕತ್ತರಿಸಿ ತೆಗೆಯಬೇಕು. ಈ ರೀತಿಯಾಗಿ ಚಾನಲ್ ಮತ್ತು ಹೆಚ್ಚಾದ ಭಾಗಗಳನ್ನು ಕತ್ತರಿಸಿ ತೆಗೆದ ಭಾಗದಲ್ಲಿ ವಿವಿಧ ಫೈಲ್‌ಗಳನ್ನು ಬಳಸಿ ಮೂಲ ಮೂರ್ತಿಯ ಆಕಾರದವರೆಗೂ ಬರುವ ಹಾಗೆ ಉಜ್ಜಬೇಕು. ಆಗ ಈ ಎಲ್ಲಾ ತಂತ್ರಗಾರಿಕೆಯ ವಿಧಿವಿಧಾನಗಳ ಪ್ರಯೋಗದಿಂದ ಪರಿಪೂರ್ಣವಾದ ಲೋಹದ ಮೂರ್ತಿಯು ಸಿದ್ಧಗೊಳ್ಳುತ್ತದೆ.

ಹೀಗೆ ಸಿದ್ಧಗೊಂಡ ಮೂರ್ತಿಯು ಭಕ್ತರ ಆರಾಧನೆಗೆ ಒಳಗಾಗುತ್ತದೆ.

ವೆಂಕಟೇಶ್ವರ ಮೂರ್ತಿ:

ಸಂಪ್ರದಾಯಿಕ ಕುಟುಂಬಗಳಲ್ಲಿ ಮನೆಯ ಹೆಬ್ಬಾಗಿಲುಗಳಲ್ಲಿ ಸೌದರ್ಯಾತ್ಮಕತೆಯನ್ನು ಸೊಗಸಾಗಿ ಕೆತ್ತಿಸುತ್ತಾರೆ. ಮರ ಮತ್ತು ಲೋಹಗಳ ಮೂಲಕ ಮಿಶ್ರ ಮಾಧ್ಯಮದಲ್ಲಿ ಕಲಾಕೃತಿಗಳಂತೆಯೇ

ಕಂಡುಬರುತ್ತವೆ. ಬಾಗಿಲಿನ ಮೇಲಿನ ಮಧ್ಯ ಭಾಗದಲ್ಲಿ ಮನೆದೇವರ ಮೂತಿಯನ್ನು ಹೆಚ್ಚಾಗಿ ಮಾಡಿಸುತ್ತಾರೆ. ಸಾಮಾನ್ಯವಾಗಿ ಲೋಹ ಶಿಲ್ಪದಿಂದ ಕೂಡಿದ ಮೂರ್ತಿಯನ್ನು ಅಲ್ಲಿ ಅಳವಡಿಸುತ್ತಾರೆ. ಉದಾಹರಣೆಗೆ: ವೆಂಕಟೇಶ್ವರ ಮೂರ್ತಿ

ಮೈಸೂರು ಲೋಹ ಎರಕದ ಮೂರ್ತಿ ಶಿಲ್ಪ ಶೈಲಿ:

ಕರ್ನಾಟಕದಲ್ಲಿ ಲೋಹ ಎರಕದ ಮೂರ್ತಿ ರಚನೆಯಲ್ಲಿ ಹಲವಾರು ಕುಟುಂಬಗಳು ವೃತ್ತಿನಿರತವಾಗಿವೆ ಅವುಗಳಲ್ಲಿ ಕೋಲಾರದ ಶಿವಾರಪಟ್ಟಣದ ಸುತ್ತ ಮುತ್ತಲಿನ ಗ್ರಾಮಗಳು, ಮೈಸೂರಿನ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳ ಗುರುಕುಲ, ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಹಲವು ಕುಟುಂಬಗಳು. ಇವುಗಳ ಮೂಲಸ್ಥಳಗಳು ಇವೇ ಆದರೂ ವ್ಯವಹಾರಿಕ ದೃಷ್ಟಿಯಿಂದ ನಾಡಿನಾದ್ಯಾಂತ ಹರಡಿಕೊಂಡಿರುತ್ತಾರೆ.

ಹೊಯ್ಸಳ ಶೈಲಿಯ ಶಿಲ್ಪಗಳು ಮೈಸೂರು ಶೈಲಿ ಲೋಹ ಶಿಲ್ಪಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಿರುವಂತಹುದು ವಾಸ್ತವಾಗಿದೆ. ಮೈಸೂರು ಪ್ರಾಂತ್ಯದಲ್ಲಿ ಹಳೇಬೀಡು, ಬೇಲೂರು ಶಿಲ್ಪಗಳು ಹೆಚ್ಚು ಆಕರ್ಷಣೀಯತೆಯನ್ನು ಹೊಂದಿವೆ. ಅವುಗಳನ್ನು ಜನರಿಗೆ ತಲುಪಿಸುವ ಕೆಲಸವನ್ನು ಅಂದಿನ ಶಿಲ್ಪರಚನಾಕಾರರು ಬಹಳ ಉತ್ಸುಕತೆಯಿಂದ ನಿರ್ವಹಿಸಿರುವುದು ಕಂಡುಬರುತ್ತದೆ.

ಮೈಸೂರಿಗೆ ಹಾಸನ ಮತ್ತು ಮಂಡ್ಯ ಜಿಲ್ಲೆಗಳು ಹತ್ತಿರವಿರುವ ಕಾರಣ ಸಾಕಷ್ಟು ದೇವಾಲಯಗಳು ಹೊಯ್ಸಳ ಶೈಲಿಯನ್ನು ಹೋಲುವಂತಹ ದೇವಾಲಯಗಳೇ ಹೆಚ್ಚು ನಿರ್ಮಾಣಗೊಂಡಿರುವುದು ವಾಸ್ತವಾಗಿದೆ. ಶಿಲ್ಪ ಬ್ರಹ್ಮ ಎಂದೇ ಹೆಸರುವಾಸಿಯಾದ ಮೈಸೂರಿನ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರ ಪರಿಶ್ರಮವನ್ನು ಇಂದು ಲೋಹ ಶಿಲ್ಪಗಳ ಅಧ್ಯಯನಕ್ಕೆ ಕಾರಣವಾಗಿದೆ.

ಮೈಸೂರು ಶೈಲಿ ಲೋಹ ಶಿಲ್ಪಗಳನ್ನು ರಚಿಸಬೇಕಾದರೆ ಅತ್ಯಂತ ನಿಖರವಾದ ತಾಳಮಾನ ಪ್ರಮಾಣ ಬದ್ಧತೆಗಳ ಅವಶ್ಯಕತೆಯು ಇರುತ್ತದೆ. ಅದರಲ್ಲೂ ವಿಗ್ರಹಗಳನ್ನು ರಚನೆ ಮಾಡುವಾಗ ಹಲವು ಗುಣಲಕ್ಷಣಗಳನ್ನು ಖಡ್ಡಾಯವಾಗಿ ಅರಿತುಕೊಂಡಿರುವಂತಹುದು ಬಹಳ ಮುಖ್ಯ. ಪ್ರತಿಯೊಬ್ಬರು ಈ ಲೋಹ ಶಿಲ್ಪಗಳನ್ನು ತಯಾರು ಮಾಡಬೇಕಾದರೆ ಅವರದ್ದೇ ಒಂದೊಂದು ನಿಯಮ ಪ್ರಾಕರಗಳು ಇರುತ್ತವೆ. ಒಂದೊಂದು ಶಿಲ್ಪ ಮಾಡಬೇಕಾದರೆ ಒಂದೊಂದು ವಿಶೇಷ ಅನುಭವವನ್ನು ಶಿಲ್ಪಿಯಾದವನು ಪಡೆಯುತ್ತಾನೆ.

ತಾಳಮಾನಗಳು:

ಶಿಲ್ಪಶಾಸ್ತ್ರದ ಪ್ರಕಾರ ರಚಿಸಲ್ಪಡುವ ಪ್ರತಿಯೊಂದು ವಿಗ್ರಹವನ್ನು ಅಳತೆ ಮಾಡಿಕೊಳ್ಳಲೇಬೇಕಾಗುತ್ತದೆ. ಪ್ರತಿಯೊಂದು ಭಾಗವು ಮುಖದಿಂದ ಪಾದದವರೆಗೆ ಹಾಗೂ ಕಾಲುಗಳ ಅಂತರ, ಮೂಗಿನ ಎತ್ತರ, ಬಾಯಿಯ ಅಗಲ, ಹಣೆಯ ಉದ್ದಗಳು, ಕೇಶ, ಕಪೋಲ, ಶಾಸ್ತ್ರದ ಪ್ರಕಾರ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ರಚಿಸಬೇಕಾದ ಶಿಲ್ಪದ ಚಿತ್ರವನ್ನು ಹಾಳೆಯ ಮೇಲೆ ಬಿಡಿಸಿಕೊಂಡು ಅದರಲ್ಲಿ ದೇಹ ರಚನೆಯನ್ನು ಮುಖ, ಕತ್ತು, ಎದೆಯ ಸುತ್ತಳತೆ, ನಾಭಿ, ತೊಡೆ, ಮಂಡಿ, ಕಾಲು, ಕೈ, ತೋಳು, ಭುಜ ಇವುಗಳನ್ನು ಪ್ರಮಾನಬದ್ಧವಾಗಿರುವಂತೆ ಚಿತ್ರಿಸಿಕೊಳ್ಳಬೇಕು. ಆನಂತರ ಚಿತ್ರಕ್ಕೆ ತಕ್ಕ ಶಿಲ್ಪವನ್ನು ಮೇಣದಲ್ಲಿ ರಚಿಸಿಕೊಂಡು, ಕೋರ್ ಕಟ್ಟಿ ಹಂತ ಹಂತದ ಪ್ರಯೋಗಗಳ ಮೂಲಕ ಎರಕವನ್ನು ಹುಯ್ಯಲಾಗುತ್ತದೆ.

ಪಂಚಲೋಹ ಶಿಲ್ಪ:

ಪೂಜಾರ್ಹ ವಿಗ್ರಹಗಳನ್ನು ಸಾಮಾನ್ಯವಾಗಿ ಪಂಚಲೋಹಗಳಿಂದ ರಚಿಸುತ್ತಾರೆ. ಪಂಚಲೋಹ ಎಂದರೆ ಐದು ಲೋಹಗಳ ಮಿಶ್ರಣ ಚಿನ್ನ, ಬೆಳ್ಳಿ, ಕಂಚು(ಹಿತ್ತಾಳೆ), ತಾಮ್ರ, ಸೀಸ ಇವುಗಳನ್ನು ಕರಗಿಸಿ ಎರಕ ಮಾಡಿ ಪಡೆಯುವ ಶಿಲ್ಪವೇ ಪಂಚಲೋಹ ಶಿಲ್ಪ ಆಗಿರುತ್ತದೆ. ಚಿನ್ನದ ಬೆಲೆ ಮೀತಿ ಮೀರಿ ಬೆಳೆದಿರುವದರಿಂದ ಅದನ್ನು ನೆಪ ಮಾತ್ರಕ್ಕೆ ಹಾಕುತ್ತಾರೆ. ಸ್ವರ್ಣ ಶಿಲ್ಪಿ ಸಿಂಗಣ್ಣಾಚಾರ್ಯರಿ ಚಿನ್ನದ ಕೆಲಸಕ್ಕೆ

ಹೆಸರುವಾಸಿಯಾಗಿದ್ದರು, ಇವರು ನಿರ್ಮಿಸಿದ ಅಂಭಾರಿ, ಚಾಮುಂಡೇಶ್ವರಿ ಮೂರ್ತಿ ವಿಶ್ವಖ್ಯಾತಿಯನ್ನು ಹೊಂದಿದೆ.

ಮೇಣದ ಮೂರ್ತಿ:

ಮೈಸೂರು ಶೈಲಿಯಲ್ಲಿಯೂ ಕೂಡ ಮೇಣದ ಮೂರ್ತಿಯನ್ನು ಈ ಮೊದಲು ಹೇಳಿದಂತೆ ಚಿತ್ರವನ್ನು ರಚಿಸಿಕೊಂಡು ಅದರ ತಾಳಮಾನಗಳಿಗೆ ತಕ್ಕಂತೆ ಮೇಣದ ಮೂರ್ತಿಯನ್ನು ರಚಿಸಿಕೊಳ್ಳುತ್ತಾರೆ. ಮೇಣದಲ್ಲಿ ವಿಗ್ರಹವನ್ನು ತಯಾರಿಸಿಬೇಕಾದರೆ ಅದಕ್ಕೆ ಪೂರಕವಾದ ಹಲವಾರು ಉಪಕರಣಗಳನ್ನು ಸಿದ್ಧಪಡಿಸಕೊಳ್ಳಬೇಕಾಗುತ್ತದೆ. ಈ ಉಪಕರಣಗಳನ್ನು ಕಬ್ಬಿಣ ಅಥವಾ ಬೇರಾವುದೇ ಲೋಹಗಳಲ್ಲಿ ತಯಾರಿಸಿಕೊಂಡರೆ ಅವು ಮೇಣದ ಜೊತೆಗೆ ಅಂಟಿಕೊಳ್ಳುವ ಅವಕಾಶಗಳೇ ಹೆಚ್ಚು, ಆದ್ದರಿಂದ ಇಂತಹ ಉಪಕರಣಗಳನ್ನು ಬಿದಿರು, ಪೈಬರ್, ಗಟ್ಟಿ ಮರದಲ್ಲಿ ಮಾಡಿಕೊಳ್ಳಬೇಕಾಗುತ್ತದೆ. ಆಗ ಇವುಗಳ ಸಹಾಯದಿಂದ ಮೇಣದ ಶಿಲ್ಪದಲ್ಲಿನ ಅಂಕು ಡೊಂಕು, ಹೆಚ್ಚು ಕಡಿಮೆ ಇವುಗಳನ್ನು ಸರಿಪಡಿಸಿಕೊಂಡು ಉದ್ದೇಶಿತ ಶಿಲ್ಪವನ್ನು ಪೂರ್ಣಗೊಳಿಸಬೇಕಾಗುತ್ತದೆ. ಮೇಣದಲ್ಲಿ ವಿಗ್ರಹ ತಯಾರಿಸಿಕೊಂಡ ನಂತರ ಶಿಲ್ಪದಲ್ಲಿ ಇರಬೇಕಾದ ಆಯುಧಗಳನ್ನು ಪ್ರತ್ಯೇಕವಾಗಿ ರಚಿಸಿಕೊಂಡು ಅವುಗಳ ತಾಳಮಾನ ಸರಿಹೊಂದಾಣಿಕೆಗಳನ್ನು ನೋಡಬೇಕಾಗುತ್ತದೆ. ನಿಂತ ಭಂಗಿ, ಕುಳಿತ ಭಂಗಿ, ಮಲಗಿದ ಭಂಗಿ ಹೀಗೆ ಉದ್ದೇಶಿತ ಶಿಲ್ಪದ ಎಲ್ಲಾ ಭಂಗಿಗಳನ್ನು ಮೇಣದ ಹಂತದಲ್ಲಿಯೇ ಪರೀಕ್ಷಿಸಿಕೊಂಡು ಆನಂತರ ಮೇಣದಲ್ಲಿ ಚಾನಲ್ ಹಾಗೂ ಕೋರ್‌ನ್ನು ಕಟ್ಟಿ, ಒಣಗಿಸಿ, ಎರಕಕ್ಕೆ ಸಿದ್ಧಪಡಿಸಿಕೊಳ್ಳುತ್ತಾರೆ.

ಚಾನಲ್ ಕಟ್ಟುವ ವಿಧಾನ:

ಮೇಣದ ವಿಗ್ರಹಕ್ಕೆ ಕೋರ್ ಅಂದರೆ ಹುಸಿಮಣ್ಣು ಮೆತ್ತವ ಮೊದಲು ಚಾನೆಲ್‌ಗಳನ್ನು ಕಟ್ಟಬೇಕಾಗುತ್ತದೆ. ಮುಖ್ಯವಾಗಿ ಎರಡು ಚಾನಲ್‌ಗಳನ್ನು ಈ ಶೈಲಿಯಲ್ಲಿ ಅಳವಡಿಸುತ್ತಾರೆ ಒಂದು

ಲೋಹವನ್ನು ಎರಕ ಹಾಕುವುದಕ್ಕೆ ಮತ್ತೊಂದು ಗಾಳಿಯನ್ನು ಹೊರ ಹೊಮ್ಮಿಸುವುದಕ್ಕೆ. ಇಲ್ಲಿ ಶಿಲ್ಪದ ಪೂರ್ಣಪ್ರಮಾಣವನ್ನು ಒಂದೇ ಎರಕದಲ್ಲಿ ರಚಿಸುವುದಿಲ್ಲ. ಆಯುಧಗಳು, ವಾಹನಗಳು, ಸೂಕ್ಷ್ಮ ರಚನೆಗಳು ಮುಖ್ಯ ಶಿಲ್ಪ ಎರಕವಾದ ಮೇಲೆ ಹಂತ ಹಂತವಾಗಿ ಉಳಿದ ಭಾಗಗಳನ್ನು ಪ್ರತ್ಯೇಕವಾಗಿ ಎರಕ ಹೊಯ್ದು ತೆಗೆದು ಅವುಗಳಿಗೆ ಜೋಡಿಸುತ್ತಾರೆ. ಆದರೆ ಗಾಜರಕೋಟ್ ಶೈಲಿಯಲ್ಲಿ ಎಲ್ಲಾ ಭಾಗಗಳು ಸೇರಿಕೊಂಡಂತೆ ಒಟ್ಟು ಶಿಲ್ಪವನ್ನು ಒಮ್ಮೆಲೆ ಎರಕ ಹೊಯ್ಯುತ್ತಾರೆ. ಆಯ್ದ ಶಿಲ್ಪಗಳನ್ನು ಮಾತ್ರ ವಿಂಗಡಿಸಿಕೊಂಡು ಎರಕ ಹೊಯ್ಯುತ್ತಾರೆ.

ಮೈಸೂರಿನ ಈ ಶೈಲಿಯಲ್ಲಿ ಲೋಹ ಶಿಲ್ಪ ರಚನೆಗೆ ಹೆಚ್ಚು ಸಮಯ ಬೇಕಾಗುತ್ತದೆ. ಇದರಿಂದ ಗ್ರಾಹಕರನ್ನು ಹೆಚ್ಚು ಆಕರ್ಷಿಸಲು ಕಷ್ಟಕರವಾಗಿರುವುದರಿಂದ ಈಗಿನ ಕಾಲದಲ್ಲಿ ಮೇಣದಲ್ಲಿ ರಚನೆಯಾದ ಪರಿಪೂರ್ಣಮೂರ್ತಿಯನ್ನು, ಅದರ ಬಿಡಿ ಭಾಗಗಳಿಗೆ ತಕ್ಕಂತೆ ಬಿಂಬ ಮಾಡಿಕೊಂಡು ಬಾಕ್ಸ್‌ಮೋಲ್ಡ್ ಮೂಲಕ ಎರಕ ಹಾಕಿಕೊಳ್ಳುತ್ತಾರೆ. ಹೆಚ್ಚು ಪ್ರತಿಗಳು ಬೇಕಾದರೆ ಈ ತಂತ್ರಗಾರಿಕೆಗೆ ಮಾರು ಹೋಗಿದ್ದಾರೆ. ಅಂತಯೇ ಎರಕವಾದ ಮೇಲೆ ಗ್ಯಾಸ್ ವೆಲ್ಡಿಂಗ್ ಮಾಡಿ ಅದರ ವಿನ್ಯಾಸಗಳನ್ನು ಶಿಲ್ಪಿಸಿ, ಪಾಲಿಷ್ ಮಾಡಿ ಪೂರ್ಣಗೊಳಿಸುತ್ತಾರೆ. ಇದರಿಂದ ಕೆಲಸ ಬೇಗ ಆಗುತ್ತದೆ ಎಂಬುದನ್ನು ಶಿಲ್ಪಿಗಳು ಅರಿತಿದ್ದಾರೆ.

ಮಣ್ಣು ಕಟ್ಟುವ ವಿಧಾನ:

ಮೇಣದಲ್ಲಿ ಸಿದ್ಧವಾದ ವಿಗ್ರಹಕ್ಕೆ ಮಣ್ಣು ಮೆತ್ತುವ ವಿಧಾನವು ಬಹಲ ಮುಖ್ಯವಾದ ತಾಂತ್ರಿಕ ಅಂಶಗಳನ್ನು ಹೊಂದಿದೆ.

ಪ್ರಥಮವಾಗಿ, ಪರಿಪೂರ್ಣವಾದ ಬಿಂಬಕ್ಕೆ ಮಣ್ಣು ಮೆತ್ತಬೇಕಾದರೆ ನಾವು ದೂಳುಮಣ್ಣು, ಜೇಡಿಮಣ್ಣನ್ನು ತೆಗೆದುಕೊಂಡು ಅವುಗಳನ್ನು ಮಿಶ್ರಮಾಡಿ ಪುಡಿಪುಡಿಯಾಗುವ ತನಕ ಚೆನ್ನಾಗಿ ಕುಟ್ಟಿ ಒಂದು ಜರಡಿಯಲ್ಲಿ ಸೋಸಬೇಕು. ನಂತರ ಅವೆರಡನ್ನು ಚೆನ್ನಾಗಿ ಕಲಸಿ ನೀರಿನಿಂದ ಹದಮಾಡಿಕೊಂಡು ಮಣ್ಣನ್ನು

ಮೇಣದ ಆಕೃತಿಯ ಮೇಲೆ ತಿಳಿಯಾಗಿ ನಾಣ್ಯದ ದಪ್ಪ ಇರುವ ರೀತಿಯಲ್ಲಿ ಮೆತ್ತ ಬೇಕು, ಈ ಪದರ ಒಣಗಿದ ಮೇಲೆ ಮತ್ತೆ ಅದೇ ರೀತಿಯಾಗಿ ಪುನಾರಾವರ್ತನೆಯನ್ನು ಮುಂದುವರೆಸಬೇಕು.

ಆನಂತರ, ಜೇಡಿಮಣ್ಣನ್ನು ಜೊತೆಗೆ ಗೋಣಿತಾಟನ್ನು ತೆಗೆದುಕೊಂಡು ಅದನ್ನು ಸಣ್ಣದಾಗಿ ಪುಡಿ ಮಾಡಿ ಅದರಲ್ಲಿ ಬೆರಸಿ ಮತ್ತು ನೀರಿನಿಂದ ಮಣ್ಣನ್ನು ಚೆನ್ನಾಗಿ ಹದ ಮಾಡಿಕೊಂಡು ಸುಮಾರು ಕಾಲು ಅಂಗುಲದಿಂದ ಅರ್ಧ ಅಂಗುಲದವರೆಗೆ ಮೆತ್ತುತ್ತಾ ಹೋಗಬೇಕು. ಗೋಣಿತಾಟನ್ನು ಪಡಿಯನ್ನು ಮಣ್ಣಿನಿಂದ ಕಲಿಸುವುದರಿಂದ ಮಣ್ಣು ಬಿರುಕು ಬಿಡುವುದನ್ನು ಬಹುತೇಕ ತಡೆಗಟ್ಟುತ್ತದೆ.

ತದನಂತರ, ಮುಂದಿನ ಹಂತದಲ್ಲಿ ಮೆತ್ತಿದ ಸ್ವಲ್ಪ ಮಣ್ಣು ಸ್ವಲ್ಪ ಒಣಗಿದ ನಂತರ ಮತ್ತಷ್ಟು ದಪ್ಪನಾಗಿ ಅಂದರೆ ಸುಮಾರು ಒಂದಂಗುಲ ದಪ್ಪಕ್ಕೆ ಮೆತ್ತಿದ ನಂತರದಲ್ಲಿ ವಿಗ್ರಹ ಒಡೆದುಕೊಳ್ಳುವ ಅಥವಾ ಮುರಿದು ಬೀಳುಸ ಅವಕಾಶಗಳಿರುವುದರಿಂದ ಅದನ್ನು ತಡೆಗಟ್ಟಲು ಕಬ್ಬಿಣದ ಸರಳುಗಳನ್ನಾಗಿ ಪಟ್ಟಿಗಳನ್ನಾಗಲೀ ಸುತ್ತಲು ಸೇರಿಸಿ ತಂತಿಯಿಂದ ಕಟ್ಟಬೇಕಾಗುತ್ತದೆ. ಈ ಸಮಯಕ್ಕೆ ಮೇಣದ ಶಿಲ್ಪ ಬಹುತೇಕ ಮಣ್ಣಿನಿಂದ ಮುಚ್ಚಿದಂತೆ ಆಗಿರುತ್ತದೆ. ಈ ರೀತಿಯಾಗಿ ಮಾಡುವುದರಿಂದ ಮೇಣದ ವಿಗ್ರಹ ಯಾವ ಆಕಾರವು ಕಾಣದೇ ಮಣ್ಣು ಮುದ್ದೆಯಂತಾಗಿರುತ್ತದೆ. ಮೇಣದ ವಿಗ್ರಹದಲ್ಲಿ ಎರಡು ಕೊಳವೆ ಆಕಾರದ ರಂಧ್ರಗಳನ್ನು ಮಾಡಿರಬೇಕಾಗುತ್ತದೆ. ಇದರ ಮುಖ್ಯ ಉದ್ದೇಶ ಕೋರ್ ಕಟ್ಟಿದ ಆಕೃತಿಯನ್ನು ಬೆಂಕಿಯಲ್ಲಿ ಕಾಯಿಸಿದಾಗ ಮೇಣ ಹೊರಬರಲು ಸಾಧ್ಯವಾಗುತ್ತದೆ.

ಕೋರ್ ಕಟ್ಟಿದ ಆಕೃತಿಯನ್ನು ಒಣಗಿದ ಮೇಲೆ ಬೆಂಕಿ ಒಲೆಯಲ್ಲಿ ಕಾಯಿಸಿದಾಗ ಕೋರ್ ಒಳಗಿನ ಮೇಣ ಕರಗಿ ರಂಧ್ರದ ಮೂಲಕ ಹೊರಬರುತ್ತದೆ. ಹೀಗೆ ಮೇಣ ಪೂರ್ತಿಯಾಗಿ ಹೊರಗಡೆ ಬಂದ ಮೇಲೆ ಅದರ ಒಳಗಡೆ ವಿಗ್ರಹದ ಟೊಳ್ಳಾದ ಆಕಾರ ಉಳಿದುಕೊಳ್ಳುತ್ತದೆ. ಹೀಗೆ ಉಳಿದುಕೊಂಡ ಟೊಳ್ಳಿನ ಕೋರ್ ಉಂಡೆಗೆ ಲೋಹದ ಮಿಶ್ರಣವನ್ನು ಎರಡ ಹುಯ್ಯಬೇಕಾಗುತ್ತದೆ.

ಲೋಹ ಎರಕ ಹುಯ್ಯುವುದು:

ಕೋರ್‌ನ ಟೊಳ್ಳಿನಾಕಾರದ ಉಂಡೆಯನ್ನು ಭೂಮಿಯಲ್ಲಿ ಮುಕ್ಕಾಲು ಭಾಗದಷ್ಟು ಕಾಣದಂತೆ ಹೂತು ಹಾಕಬೇಕು ನಂತರ ಅದರ ರಂಧ್ರದ ಒಳಗೆ ಕುದಿಯುತ್ತಿರುವ ಲೋಹದ ದ್ರವವನ್ನು ಸುರಿಯಬೇಕಾಗುತ್ತದೆ. ಯಾಕೆಂದರೆ ಬಿಸಿ ಲೋಹದ ರಸ ಸುರಿಯುತ್ತಿದ್ದ ಹಾಗೆ ಕೋರ್ ಗಟ್ಟಿಯು ಸಿಡಿಯಬಾರದೆಂಬ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ನಂತರ ಲೋಹದ ರಸ ಒಂದು ರಂಧ್ರದ ಮೂಲಕ ಮತ್ತೊಂದು ರಂಧ್ರದ ಮೂಲಕ ಅಂದರೆ ಇನ್ನೊಂದು ಚಾನಲ್‌ನ ಮೂಲದ ಹೊರಬರುತ್ತದೆ. ಈ ಲೋಹದ ರಸ ಮತ್ತೊಂದರಿಂದ ಬರುವ ಮುಂಚೆ ಬಿಸಿಗಾಳಿಯು ಹೊರಬರುತ್ತದೆ. ಸ್ವಲ್ಪ ಸಮಯದ ನಂತರ ಕೋರ್ ಗಟ್ಟಿಯು ತಣ್ಣಗಾದ ನಂತರ ಸುತ್ತಿಗೆಯಿಂದ ಅದನ್ನು ಒಡೆದು ಒಳಗಡೆ ಎರಕ ಹೋಯ್ದ ಆಕಾರವನ್ನು ನಿಧಾನವಾಗಿ ಬಿಡಿಸಿಕೊಳ್ಳಬೇಕು. ಆಕೃತಿಯನ್ನು ಬಿಡಿಸಿಕೊಂಡ ಮೇಲೆ ಅದರಲ್ಲಿ ಅನಾವಶ್ಯಕ ಹೆಚ್ಚಿನ ಅಂಶಗಳನ್ನು ಚಾಣದಿಂದ, ಫೈಲ್‌ನಿಂದ ಉಜ್ಜಿ ತೆಗೆಯಬೇಕು.

ಎರಕದ ಮೂರ್ತಿಗೆ ಇತರೆ ಭಾಗಗಳನ್ನು ಜೋಡಿಸುವ ಕ್ರಮ:

ಎರಕದ ನಂತರ ಪೂರ್ಣಗೊಂಡು ಉಜ್ಜಿ ಸರಿಪಡಿಸಿದ ವಿಗ್ರಹಕ್ಕೆ ಹಸ್ತಗಳು, ಆಯುಧಗಳು, ಬಟ್ಟೆ ವಿನ್ಯಾಸ, ಕಿರೀಟ, ನಡುಕಟ್ಟು, ಬಳೆಗಳು, ವೈಜಯಂತಿ ಮಾಲೆ ಮುಂತಾದ ಕುಸುರಿ ಕೆಲಸವನ್ನು ಸಣ್ಣ-ಸಣ್ಣ ಚಾಣಗಳಿಂದ ಕೆತ್ತಿ ಜೋಡಿಸುತ್ತಾರೆ. ಲೋಹ ಶಿಲ್ಪಕ್ಕೆ ಕುಸುರಿ ಕೆಲಸದಿಂದ ಘನತೆ ಮತ್ತು ಆಕರ್ಷಣೆ ಹಾಗೂ ಸೌಂಧರ್ಯ ಹೆಚ್ಚುತ್ತದೆ. ಈ ವಿನ್ಯಾಸಗಳು ಆಯಾಯಾ ವಿಗ್ರಹಗಳಿಗೆ ವಿಶೇಷವಾದ ಅಲಂಕಾರಗಳಿಂದ ಕೂಡಿರುತ್ತವೆ. ಶಿಲಾ ಶಿಲ್ಪದಲ್ಲಿ ಒಂದೇ ಶಿಲೆಯಲ್ಲಿ ಮೂರ್ತಿಯನ್ನು ಪೂರ್ಣಗೊಳಿಸಿದಂತೆ, ಲೋಹ ಶಿಲ್ಪದಲ್ಲಿ ಅದು ಸಾಧ್ಯವಾಗುವುದಿಲ್ಲ ಯಾಕೆಂದರೆ ವಿಗ್ರಹ ದೊಡ್ಡದಿದ್ದಾಗ ಅದರ ಗಾತ್ರಕ್ಕೆ ತಂಕ್ಕಂತೆ ಎಲ್ಲಾ ಭಾಗಗಳನ್ನು ಒಂದೇ ಶಿಲೆಯಲ್ಲಿ ಮಾಡಲು ಕಷ್ಟಕರವಾಗುತ್ತದೆ. ಒಳ್ಳೆಯ ರೀತಿಯಲ್ಲಿ ಮೂಡಿಬರುವ ಉದ್ದೇಶದಿಂದ ಬಿಡಿ

ಬಿಡಿಯಾಗಿ ಮೇಣದಲ್ಲಿ ನಿರ್ಮಾಣ ಮಾಡಿಕೊಂಡು ಕೋರ್ ಕಟ್ಟಿ, ಎರಕದ ನಂತರ ಗ್ಯಾಸ್ ವೆಲ್ಡಿಂಗ್‌ನ ಸಹಾಯದಿಂದ ಜೋಡಿಸುತ್ತಾರೆ. ಇದರಿಂದ ಆಯಾದ ಭಾಗಗಳಿಗೆ ಪ್ರತ್ಯೇಕವಾಗಿ ಗಮನ ಹರಿಸಿ ಉತ್ತಮ ವಿಗ್ರಹ ರಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಆನಂತರ ವಿನ್ಯಾಸಗಳಿಗೆ ಒತ್ತು ನೀಡಿ ಪೂರ್ಣಗೊಳಿಸಬೇಕಾಗುತ್ತದೆ.

ಶಿಲಾಟಂಕ:

ಲೋಹದ ಎರಕದ ಮೂಲಕ ಮೂಡಿಬಂದ ವಿಗ್ರಹಗಳ ಬಿಡಿ ಭಾಗಗಳನ್ನು ಬೆಸೆಯುವುದಕ್ಕೆ ಶಿಲಾಟಂಕ ವಿಧಾನ ಎಂದು ಕರೆಯುತ್ತಾರೆ. ಶಿಲಾಟಂಕಕ್ಕೆ ಶುದ್ಧವಾದ ಅರಗನ್ನು ಕರಗಿಸಿ ಜೊತೆಗೆ ಸೀಸವನ್ನು ಪ್ರತ್ಯೇಕವಾಗಿ ಕರಗಿಸಿ ಮಿಶ್ರಣ ಮಾಡಿ ತಯಾರಿ ಮಾಡಿಕೊಳ್ಳಬೇಕು, ಇದು ಹದವಾದ ನಂತರ ಸೀಸದ ದ್ರಾವಣವನ್ನು ಅಳತೆಗೆ ತಕ್ಕಂತೆ ನೋಡಿ ಅರಗಿನ ಜೊತೆ ಕರಗಿಸಬೇಕು ಇದರ ಸಹಾಯದಿಂದ ವಿಗ್ರಹಗಳ ಬಿಡಿ ಭಾಗಗಳ ಬೆಸುಗೆಯನ್ನು ಮಾಡಬಹುದಾಗಿದೆ.

ಬೆಸುಗೆ ಮಾಡುವ ಕ್ರಮ:

ಕಂಚು ಲೋಹದ ವಿಗ್ರಹ ಮಾಡಬೇಕಾದರೆ ಅದು ಪೂರ್ಣ ಪ್ರಮಾಣದಲ್ಲಿ ರಚಿಸಲಾಗುವುದಿಲ್ಲ. ಪೂರ್ಣ ವಿಗ್ರಹ ತಯಾರಾಗಬೇಕಾದರೆ ಅದರ ಎಲ್ಲಾ ಬಿಡಿ ಭಾಗಗಳನ್ನು ಕೂಡ ಸಿದ್ಧಪಡಿಸಿಕೊಂಡು ಎರಕಕ್ಕೆ ಹುಯ್ಯುವ ಮೂಲಕ ಅವುಗಳನ್ನು ಜೋಡಿಸಿ ಬೆಸುಗೆ ಮಾಡಲಾಗುತ್ತದೆ. ಯಾವುದೇ ವಿಗ್ರಹ ಮಾಡಿದರು ಅದರ ಮುಖ, ಕಿರೀಟ, ಕತ್ತಿನಿಂದ ಮೊಣಕಾಲಿನವರೆಗೆ ಮತ್ತು ಕೈಗಳು, ಆಯುಧಗಳು ಹಾಗು ಎದೆಯ ಆಭರಣ ಮತ್ತು ವಸ್ತ್ರಗಳು ಇವುಗಳನ್ನು ಪ್ರತ್ಯೇಕವಾಗಿ ಮೇಣದಲ್ಲಿ ತಯಾರಿಸಿ, ಎರಕ ಹುಯ್ದ ಮೇಲೆ ಮೂಲ ಶಿಲ್ಪಕ್ಕೆ ಜೋಡಿಸಿ ಬೆಸುಗೆ ಮಾಡುತ್ತಾರೆ.

ಬೆಸುಗೆ ವಿಧಾನಗಳು:

ವಿಗ್ರಹಗಳನ್ನು ಬೆಸುಗೆ ಮಾಡುವಾಗ ಎರಡು ರೀತಿಯ ಕ್ರಮಗಳನ್ನು ಅನುಸರಿಸುತ್ತಾರೆ. ಒಂದು ಕಂಚು ಮತ್ತು ಬೆಳ್ಳಿಯ ಮಿಶ್ರಣವನ್ನು ಉಪಯೋಗಿಸಿ ಮಾಡುವ ವಿಧಾನ. ಮತ್ತೊಂದು ಸತು ಮತ್ತು ಬೆಳ್ಳಿಯ ಮಿಶ್ರಣವನ್ನು ಉಪಯೋಗಿಸಿ ಮಾಡುವ ವಿಧಾನ. ಮೊದಲನೆ ಕ್ರಮವಾದ ಕಂಚು ಮತ್ತು ಬೆಳ್ಳಿಯ ಮಿಶ್ರಣದಲ್ಲಿ ಬೆಸುಗೆ ಮಾಡುವಾಗ ಕಂಚಿನ ಬಣ್ಣ ಎದ್ದು ಕಾಣುತ್ತದೆ. ಸತು ಮತು ಬೆಳ್ಳಿಯ ಮಿಶ್ರಣದಲ್ಲಿ ಬೆಸುಗೆ ಮಾಡುವಾಗ ಸತು ಆವಿಯಾಗಿ ಹೋಗುವುದರಿಂದ ಬೆಳ್ಳಿ ಮಾತ್ರ ಪ್ರಧಾನವಾಗಿ ಎದ್ದು ಕಾಣುತ್ತದೆ. ಆಗ ಬೆಸುಗೆ ಹಾಕಿದ ಭಾಗದಲ್ಲಿ ಬೆಸುಗೆಯ ಮಾಹಿತಿ ಕಾಣಸಿಗುವುದಿಲ್ಲ. ಇಲ್ಲಿ ಯಾವುದೇ ಕ್ರಮ ಅನುಸರಿಸುವಾಗ ಯಾವ ಯಾವ ಲೋಹದಲ್ಲಿ ಮಾಡಿದರೂ ಕೂಡಾ ಅದರ ಬಣ್ಣಕ್ಕೆ ಅನುಗುಣವಾಗಿ ಬೆಸುಗೆಯ ಪದಾರ್ಥಗಳನ್ನು ಕಂಚು, ಎರಡು ಭಾಗ ಬೆಳ್ಳಿ ತೆಗೆದುಕೊಂಡು ಅದನ್ನು ಕರಗಿಸಿ ಗಟ್ಟಿ ಮಾಡಿಕೊಳ್ಳುತ್ತಾರೆ. ಯಾವುದು ಹೆಚ್ಚಾದರೂ ಹೊಂದಾಣಿಕೆಯಿಂದ ಕೂಡಿ ಬರುವುದಿಲ್ಲ. ಅಂತಹ ಬೆಸುಗೆ ಕ್ರಮ ಯೋಗ್ಯವಾಗಿರುವುದಿಲ್ಲ. ಮಿಶ್ರಣವನ್ನು ಕರಗಿಸಿ ಗಟ್ಟಿಯಾಗಿ ಮಾಡಿದ ನಂತರ ಅದನ್ನು ಪಟ್ಟಿಯಂತೆ ಅಥವಾ ಸರಳಿನಂತೆ ಮಾಡಿಕೊಂಡು ಬೆಸೆಯುವುದರಿಂದ ಉತ್ತಮ ಫಲಿತಾಂಶ ದೊರಕುತ್ತದೆ.

ಈಗಿನ ಸಂದರ್ಭದಲ್ಲಿ ಅತ್ಯಂತ ಸುಲಭದ ವಿಧಾನಗಳಿವೆ. ಬೆಳ್ಳಿ ಮತ್ತು ಕಂಚನ್ನು ಕರಗಿಸಿದ ಗಟ್ಟಿಯನ್ನು ಕೊಟ್ಟರೆ ಯಂತ್ರದ ಮೂಲದ ಸಣ್ಣ-ಸಣ್ಣ ರೇಖೆಗಳನ್ನಾಗಿ ಮಾಡಿಕೊಂಡು ಅದನ್ನು ಸಂದರ್ಭದ ಅನುಕೂಲಕ್ಕೆ ತಕ್ಕಂತೆ ಕತ್ತರಿಸಿಕೊಂಡು ಬೆಸುಗೆ ಹಾಕಲು ಉಪಯೋಗಿಸಲು ಬಳಸುತ್ತಾರೆ.

ಪಾಲಿಶ್ ಮಾಡುವ ವಿಧಾನ:

ಕಂಚು ಮತ್ತು ತಾಮ್ರ, ಚಿನ್ನ, ಬೆಳ್ಳಿ ಯಾವುದೇ ವಿಗ್ರಹ ರಚಿಸಿದರೂ ನಯಗಾರಿಕೆ ಅತ್ಯಾವಶ್ಯಕ. ಅದನ್ನು ನಾವು ಕೈಯಿಂದಲೇ ಮಾಡಬೇಕು. ಮರಳಿನ ಕಾಗದಿಂದ ಉಜ್ಜುವುದರಿಂದ ಮಾತ್ರ ಅದು

ಸಾಧ್ಯವಿಲ್ಲ. ಲೋಹದ ಮೂರ್ತಿಗೆ ಪಾಲಿಶ್ ಮಾಡಬೇಕಾದರೆ ಅರದಿಂದ ಉಜ್ಜಿ ಅದಕ್ಕೆ ನಯವನ್ನು ತರಬೇಕು. ಅರಗಳಲ್ಲಿಯೂ ನಾನಾ ನಮೂನೆಗಳುಂಟು ಒರಟು ಹಲ್ಲು ಮತ್ತು ನಯವಾದ ಹಲ್ಲು ಎಂದು ಎರಡು ಭಾಗಗಳುಂಟು ಅದರಲ್ಲಿಲ ತುಂಬಾ ಅವಶ್ಯಕವಾದಂತಹ ಚಪ್ಪಟೆ, ವೃತ್ತಾಕಾರ, ಅರೆ ವೃತ್ತಾಕಾರ ಮತ್ತು ತ್ರಿಕೋನಾಕಾರ ಹೀಗೆ ನಾನಾ ನಮೂನೆಗಳುಂಟು. ಈ ವಿವಿಧ ನಮೂನೆಗಳುಳ್ಳ ಅರಗಳನ್ನು ಸಂದರ್ಭಾನುಸಾರ ಆಯಾಯ ವಿಗ್ರಹಕ್ಕನುಸಾರವಾಗಿ ಉಪಯೋಗಿಸಬೇಕಾಗುತ್ತದೆ.

ಅದರಂತೆ ಯಾವುದೇ ಲೋಹದ ವಿಗ್ರಹವನ್ನು ಬಹಳ ಸುಂದರವಾಗಿ ಸ್ವಚ್ಛವಾಗಿರಸಬೇಕಾದರೆ ಅದರ ಮೇಲೆ ನೈಟ್ರಿಕ್ ಆಸಿಡ್‌ನ್ನು ಹಾಕಬೇಕು. ಅದು ಮೈ-ಕೈಗೆ ತಗುಲಿದರೆ ಸುಡುವ ಸಂದರ್ಭವುಂಟು ಆದ್ದರಿಂದ ಮರದ ಕಡ್ಡಿಗೊಂದು ಬಟ್ಟೆ ಸುತ್ತಿಕೊಂಡು ಅದರ ಮೂಲಕ ಹಚ್ಚಬೇಕು. ಕೆಲ ನಿಮಿಷದ ನಂತರ ಹುಣಸೇ ಹುಳಿಯನ್ನು ಅದರ ಮೇಲೆ ಹುಯ್ಯಬೇಕು ತಡಮಾಡಬಾರದು. ಆಸಿಡ್‌ನ್ನು ಗಂಟೆಗಟ್ಟಲೇ ಹಚ್ಚಿ ಬಿಟ್ಟರೆ ಅದು ಕಪ್ಪಾಗುವ ಸಾಧ್ಯತೆ ಹೆಚ್ಚು. ಅದಕ್ಕಾಗಿಯೇ ಅದರ ಮೇಲ್ಗಡೆ ಹುಣಸೇ ಹಣ್ಣಿನ ರಸವನ್ನು ಸಿದ್ಧಮಾಡಿಟ್ಟುಕೊಂಡು ವಿಗ್ರಹದ ಮೇಲೆ ಹಾಕುವುದರಿಂದ ಮೂರ್ತಿಗೆ ಹೊಳಪು ಬರಲು ಆರಂಭಿಸುತ್ತದೆ. ಕ್ರಮೇಣ ಶುದ್ಧವಾದ ನೀರಿನಿಂದ ತೊಳೆದ ನಂತರ ಅಂಟುವಾಳ ಕಾಯಿ ಕುಟ್ಟಿ ಪುಡಿ ಮಾಡಿಕೊಂಡು ವಿಗ್ರಹದ ಮೇಲೆ ಹಿತ್ತಾಳೆಯ ತಂತಿಗೊಂಚಲಿನಿಂದ ಚೆನ್ನಾಗಿ ತೊಳೆಯಬೇಕು. ಹೀಗೆ ಅನೇಕ ಬಾರಿ ಮಾಡುವುದರಿಂದ ಮೇಲಿಂದ ಮೇಲೆ ಶುದ್ಧನೀರಿನಿಂದ ತೊಳೆಯುವುದರಿಂದ ವಿಗ್ರಹಕ್ಕೆ ಹೊಳಪು ಬರುತ್ತಾ ಹೋಗುತ್ತದೆ. ಈ ರೀತಿ ಮಾಡುವುದರಿಂದ ಮೂರ್ತಿಯು ಬಹಳ ಸುಂದರವಾಗಿ ಕಾಣುತ್ತದೆ. ಇದು ಮೈಸೂರು ಶೈಲಿ ಲೋಹ ಶಿಲ್ಪಗಳ ವಿಶೇಷವಾದರೆ ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಹೊಳಪು ಅಗತ್ಯವಿದ್ದರೆ ಮಾತ್ರ ಮಾಡುತ್ತಾರೆ. ಆದರೆ ಈ ಲೋಹಶಿಲ್ಪಗಳು ಪುರಾತನ ಮೂರ್ತಿಗಳ ರೂಪದಲ್ಲಿದ್ದರೆ ಗ್ರಾಹಕರು ಹೆಚ್ಚು ಇಷ್ಟಪಡುತ್ತಾರೆ. ಇದರಿಂದ ಇದರ ನಿರ್ಮಾಣವು ಅತ್ಯಂತ ಸರಳವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ಜನರಿಗೆ ತಲುಪುತ್ತವೆ.

ಪ್ರಭಾವಳಿ ರಚಿಸುವ ವಿಧಾನ:

ದೇವತಾ ವಿಗ್ರಹಗಳಿಗೆ ಪ್ರಭಾವಳಿಯಿಂದ ಹೆಚ್ಚು ಪ್ರಾಮುಖ್ಯತೆಯು ದೊರೆಯುತ್ತದೆ. ಮೈಸೂರು ಮತ್ತು ಗಾಜರಕೋಟ್ ಎರಡು ಶೈಲಿಗಳಲ್ಲಿಯೂ ಪ್ರಭಾವಳಿ ರಚಿಸುವ ಕ್ರಮ ಬೇರೆ ಬೇರೆಯಾಗಿರುತ್ತದೆ. ವಿಗ್ರಹಗಳನ್ನು ಶಿಲೆಯಲ್ಲಿ ನಿರ್ಮಿಸಿ ಅದರ ಹಿಂಭಾಗದಲ್ಲಿರುವಂತೆ ಪ್ರಭಾವಳಿಯನ್ನು ರಚಿಸುತ್ತಾರೆ. ಅದೇ ರೀತಿಯಾಗಿ ಲೋಹದಲ್ಲಿ ರಚಿತವಾದ ವಿಗ್ರಹಕ್ಕೆ ಪ್ರಭಾವಳಿಯನ್ನು ಪ್ರತ್ಯೇಕವಾಗಿಯೇ ನಿರ್ಮಾಣ ಮಾಡುತ್ತಾರೆ. ಮೈಸೂರು ಶೈಲಿಯಲ್ಲಿ ಪ್ರಭಾವಳಿಯು ಅಳತೆ ಪ್ರಕಾರ ಸಮತಟ್ಟಾಗಿರುವಂತೆ ರಚಿಸಿಕೊಂಡು ಅದರ ಮೇಲ್ಭಾಗದಲ್ಲಿ ಕೀರ್ತಿ ಮುಖ ಮತ್ತು ಯಾಳಿ ಮುಖವನ್ನು ಅಥವಾ ಹಂಸತರಹ ಮೇಣದಲ್ಲಿ ತಯಾರಿಸಿ, ಎರಕ ಹುಯ್ದು ನಂತರ ಅವುಗಳನ್ನು ಜೋಡಿಸಿ, ಬೆಸುಗೆ ಮಾಡಿ ಉಳಿದ ಖಾಲಿ ಜಾಗದಲ್ಲಿ ಮೊಳೆಗಳಿಂದ ಹೂಬಳ್ಳಿಗಳನ್ನು ಕೂಡಿಸುತ್ತಾರೆ. ನಂತರ ಅದು ಪೂರ್ಣಗೊಂಡಾಗ ಪಾಲಿಶ್ ಮಾಡಿ ವಿಗ್ರಹದ ಹಿಂಭಾಗದಲ್ಲಿ ಬೆಸುಗೆ ಮಾಡಿ ನಿಲ್ಲಿಸುತ್ತಾರೆ ಇಲ್ಲವೆ ಲಾಕ್ ಆಗುವ ರೀತಿಯಲ್ಲಿ ರಚಿಸುತ್ತಾರೆ.

ಆದರೆ ಗಾಜರಕೋಟ್ ಶೈಲಿಯಲ್ಲಿ ಮಾಡುವ ಕ್ರಮವೇ ಬೇರೆ ಅಂದರೆ ಪೀಠದ ಕೆಳಗಡೆ ಎರಡು ರಂಧ್ರಗಳನ್ನು ಬಿಟ್ಟು ಮೇಲ್ಗಡೆ ಅಂದರೆ ಪ್ರಭಾವಳಿಯು ಮೂರ್ತಿಗೆ ಅನುಗುಣವಾಗಿ ಮೇಲ್ಗಡೆ ಕೀರ್ತಿಮುಖ, ಅದರ ಬಾಯಿಂದ ಮೇಣದಂತಹ ಹೂಬಳ್ಳಿ, ಮುತ್ತುಗಳು ಮತ್ತು ಎಡ-ಬಲಕ್ಕೆ ಯಾಳಿ ಮುಖವಾಗಲಿ ಅಥವಾ ಹಂಸವನ್ನಾಗಲಿ ಮಾಡಿ ಅದರ ಬಾಯಿಂದ ಮೇಲ್ಗಡೆ ಇರುವ ರೀತಿಯಲ್ಲಿ ಮುಖಕ್ಕೆ ಜೋಡಿಸುತ್ತಾರೆ. ಅಂದರೆ ಎಲ್ಲವನ್ನು ಮೇಣದಲ್ಲಿ ಸಂಪೂರ್ಣವಾಗಿ ತಯಾರಿಸಿಕೊಂಡು ಎರಕಕ್ಕೆ ಸಿದ್ಧಗೊಂಡ ನಂತರ ಪ್ರಭಾವಳಿ ಇರುವಂತಹ ಎಲ್ಲಾ ಹೂಬಳ್ಳಿ ಮತ್ತು ಕೀರ್ತಿಮುಖ ಮತ್ತು ಹಂಸಗಳ ಸಂಪೂರ್ಣ ದೇಹವನ್ನು ಮಾಡುತ್ತಾರೆ. ಬೆಸುಗೆ ಮುಖಾಂತರ ಜೋಡಿಸುವ ಕ್ರಮ ಇಲ್ಲಿ ಇರುವುದಿಲ್ಲ, ಆದರೆ

ಕೆಲವು ಲೋಹದ (ತಗಡು)ಹಾಳೆಗಳನ್ನು ಬಳಸಿ ಅವುಗಳ ಮೇಲೆ ಸೀಸದ ಕಡ್ಡಿಯಿಂದ ರೇಖಾಚಿತ್ರವನ್ನು ನಕಲು ಮಾಡಿ ಉಳಿದ ಭಾಗವನ್ನು ಪ್ರಭಾವಳಿಗೆ ಅನುಗುಣವಾಗಿ ಕತ್ತರಿಸಿ ರೇಖೆ ಹಾಕಿದ ಭಾಗದಿಂದ ಚಾಣ ಅಥವಾ ಉಳಿಗಳನ್ನು ಉಪಯೋಗಿಸಿ ಉಬ್ಬುಗೆತ್ತನೆ, ಇಳಿಗೆತ್ತನೆ ಮೂಲಕ ಚಿತ್ರವನ್ನು ಆಕಾರಕ್ಕೆ ತಕ್ಕಂತೆ ಸುತ್ತಿಗೆಯಿಂದ ಮೊಳೆಗಳಿಂದ ಕಟ್ಟುತ್ತಾ ಉಬ್ಬುಗೆತ್ತನೆಯನ್ನು ಮಾಡಿ ರಚಿಸುತ್ತಾರೆ.

ಲೋಹದ ತಗಡು ಮೃದು ಮತ್ತು ಅತಿ ತೆಳುವಾದಾಗ ಕಬ್ಬಿಣದ ಸುತ್ತಿಗೆಯಿಂದ ಅಥವಾ ಮರದ ಕೋಲನ್ನು ಉಪಯೋಗಿಸಿ ನಿರ್ಧಿಷ್ಟ ಆಕಾರ, ವಿನ್ಯಾಸ ಪಡೆಯಬಹುದು. ಪ್ರಭಾವಳಿಯ ಎತ್ತರ ಮತ್ತು ಅಗಲಗಳು ಜಾಸ್ತಿ ಆಗದಂತೆ ಅದನ್ನು 3 ಅಥವಾ 5 ಭಾಗಗಳನ್ನಾಗಿ ಮಾಡಬಹುದು.

ಮೈಸೂರು ಮತ್ತು ಗಾಜರಕೋಟ್ ಶೈಲಿಗಳಲ್ಲಿ ತಂತ್ರಗಾರಿಕೆ ವಿಶೇಷ ಮತ್ತು ಪರಿಪೂರ್ಣ ಎರಕದ ಮೂರ್ತಿ ಮತ್ತು ತಂತ್ರಗಾರಿಕೆಯನ್ನು ಪ್ರಮುಖ್ಯತೆಯನ್ನು ಸರಳವಾಗಿ ಪಡೆದು ಲೋಹಶಿಲ್ಪಗಳು ನಿರ್ಮಾಣವಾಗುತ್ತವೆ.

ಗಾಜರಕೋಟ್ ಶೈಲಿಯಲ್ಲಿ ಪ್ರಥಮ ಹಂತದಲ್ಲಿ ಪರಿಪೂರ್ಣವಾದ ಮೂರ್ತಿ ಅಂದರೆ ವಿರಳವಾದ ಆಭರಣಗಳು ಮತ್ತು ಗೆಜ್ಜೆ, ಕರ್ಣಕುಂಡಲ, ಹೀಗೆ ಎಲ್ಲಾ ರೀತಿಯಲ್ಲಿ ದೇಹದ ಎಲ್ಲಾ ಭಾಗಗಳು ಪರಿಪೂರ್ಣವಾಗಿ ಮಾಡಿರುವುದು ಕಾಣಬಹುದು. ಅದಕ್ಕೆ ತಕ್ಕಂತಹ ಪ್ರಭಾವಳಿ ಕೂಡ ಅಲಂಕಾರಿಕ ನಕ್ಷೆಗಳನ್ನು ಸುಂದರವಾಗಿ ಮಾಡಿಕೊಂಡಿರುತ್ತಾರೆ. ಮೂರ್ತಿಯನ್ನು ಮಾಡಲು ಹೊರಟಾಗ ಯಾವುದೇ ಒಂದು ಶೈಲಿಯನ್ನು ಅನುಕರಿಸಿ ಅದರ ಹಾಗೆ ಮಾಡುವುದಿಲ್ಲ. ಹಲವರು ತಮ್ಮದೇ ಆದ ಒಂದು ಶೈಲಿ ಅಂದರೆ ಜನಪದ ಶೈಲಿಯನ್ನು ಉಪಯೋಗಿಸಿಕೊಂಡು ಮೂರ್ತಿಗಳನ್ನು ನಿರ್ಮಿಸುತ್ತಾರೆ. ಈ ರೀತಿ ಮೇಣದ ಮೂರ್ತಿ ತಯಾರಿಸಲು ಹೆಚ್ಚು ಕಾಲಾವಕಾಶಗಳನ್ನು ಪಡೆದುಕೊಂಡು ಇಂತಹ ಪರಿಪೂರ್ಣ ಮೇಣದ ಮೂರ್ತಿಕೆಲಸನ್ನು ಮಾಡಲು ಮೂರು–ನಾಲ್ಕು ಪರಿಗಳನ್ನು ಬಳಸಿಕೊಂಡಿದ್ದು ಕಾಣುತ್ತೇವೆ.

ಇಂತಹ ಮೇಣದ ಮೂರ್ತಿಯನ್ನು ಆಯಾ ಎರಕದ ತಂತ್ರಗಾರಿಕೆಯ ಕ್ರಮದಲ್ಲಿ ಲೋಹವನ್ನು ಎರಕ ಹುಯ್ಯುವಾಗ ಮೊಲ್ಡಿನಿಂದ ಹೊರಬಂದ ಮೂರ್ತಿಯ ಮೇಣದ ಆಕೃತಿಯಂತೆ ಲೋಹದ ಪರಿಪೂರ್ಣ ಮೂರ್ತಿ ನಿರ್ಮಾಣಗೊಳ್ಳುತ್ತದೆ. ಈ ಹಂತದಲ್ಲಿ ಮೊಲ್ಡಿನಿಂದ ಹೊರತೆಗೆದ ಮೂರ್ತಿಗಲ್ಲಿ ಕಂಡುಬರುವ ಚಾನಲ್, ರನ್ನರ್‌ಗಳನ್ನು ಮೂಲ ಲೋಹದ ಮೂರ್ತಿಗೆ ಧಕ್ಕೆಯಾಗದ ಹಾಗೆ ಚಾಣ, ಸುತ್ತಿಗೆ, ಗರಗಸ ವಿವಿಧ ಫೈಲ್‌ಗಳನ್ನು ಬಳಸಿ, ಬ್ರಶ್‌ಗಳಿಂದ ಉಜ್ಜಿ ಸ್ವಚ್ಚಗೊಳಿಸಿದಾಗ ಎರಕದ ಚಾಪು ಮೂರ್ತಿಯಲ್ಲಿ ಕಂಡುಬರುತ್ತದೆ. ಈ ತಂತ್ರಗಾರಿಕೆಯಲ್ಲಿ ನಿರ್ಮಾಣಗೊಂಡ ಶಿಲ್ಪಿಗಳಿಗೆ ಎರಕದ ಪ್ರಾಮುಖ್ಯತೆ ಹೊಂದಿದ ಶಿಲ್ಪಿಗಳು ಎಂದು ಹೇಳಬಹುದು. ಈ ವಿಧಾನದಲ್ಲಿ ಟೊಳ್ಳಾದ ಮೂರ್ತಿಗಳು ಕೂಡ ನಿರ್ಮಾಣಗೊಳ್ಳುತ್ತವೆ.

ಮೈಸೂರು ಶೈಲಿಯಲ್ಲಿ ರಚಿಸಬೇಕಾದ ನಿರ್ಧಿಷ್ಟ ಮೂರ್ತಿ ರೂಪವನ್ನು ಸಾಮಾನ್ಯ ರೂಪದಲ್ಲಿ ಮೇಣದಲ್ಲಿ ರಚಿಸಿಕೊಂಡು, ಹೆಚ್ಚು ಸಮಯ ತೆಗೆದುಕೊಳ್ಳದೆ ಮೂಡಿಬಂದ ಮೇಣದ ಮೂರ್ತಿಯನ್ನು ಲೋಹದಿಂದ ಎರಕ ಮಾಡಿದಾಗ ಗಟ್ಟಿಯಾಕಾರದ ಸಾಧಾರಣ ಲೋಹಮೂರ್ತಿಯನ್ನು ಸಿದ್ಧಪಡಿಸಿಕೊಂಡು ಅದರ ಮೇಲೆ ಅಲಂಕಾರಿಕ ನಕ್ಷೆ, ಆಭರಣ, ವಸ್ತ್ರ, ಪ್ರಭಾವಳಿ, ಪೀಠ ಮುಂತಾದವುಗಳನ್ನು ವಿಭಿನ್ನ ವಿನ್ಯಾಸಗಳನ್ನು ಅನೇಕ ರೀತಿಯ ವಿಶೇಷ ಉಪಕರಣಗಳನ್ನು ಬಹಳಷ್ಟು ಬಳಸಿಕೊಂಡು ಸಮಯ ತೆಗೆದುಕೊಂಡು ಹೊಡೆತದ ಲೋಹ ಮೂರ್ತಿಯನ್ನು ನಿರ್ಮಿಸುತ್ತಾರೆ.

ಆದರೆ ಇಲ್ಲಿ ಕಂಡುಬರುವುದೇನೆಂದರೆ ಎರಕದ ಅಂಶಗಳು ಲೋಹದ ಮೂರ್ತಿಯ ಯಾವುದೇ ಭಾಗದಲ್ಲಿ ಕಾಣಸಿಗುವುದಿಲ್ಲ ಅಂದರೆ ಎರಕದ ಪ್ರಾಧನ್ಯತೆ ಪಡೆಯದೆ ಹೊಡೆತದ ಲೋಹಶಿಲ್ಪಗಳೆಂದು ಹೇಳಬಹುದು. ಈ ತಂತ್ರಗಾರಿಕೆಯಲ್ಲಿ ನಿರ್ಮಾಣಗೊಂಡ ಮೂರ್ತಿಗಳು ಗಟ್ಟಿ ಆಕಾರದಲ್ಲಿ ಇರುವುದನ್ನು ಗಮನಿಸಬಹುದಾಗಿರುತ್ತದೆ.

ಮೈಸೂರು ಮತ್ತು ಗಾಜರಕೋಟ್ ಎರಡೂ ಶೈಲಿಗಳಲ್ಲಿ ಅವುಗಳ ವಿಧಾನಗಳನ್ನು ಗಮನಿಸಿದಾಗ ತಂತ್ರಗಾರಿಕೆಯ ಆಧಾರದಲ್ಲಿ ತುಲನಾತ್ಮಕವಾಗಿ ನೋಡಿದಾಗ ಮೈಸೂರು ಶೈಲಿಯಲ್ಲಿ ಮೂಡಿಬರುವ ಶಿಲ್ಪಗಳ ಪ್ರಾಮುಖ್ಯತೆಯು ಗಾಜರಕೋಟ್ ಶೈಲಿಯ ಲೋಹಶಿಲ್ಪಗಳ ಪ್ರಾಮುಖ್ಯತೆಗೆ ವಿಭಿನ್ನವಾಗಿ ಕಂಡು ಬರುತ್ತವೆ. ಗಾಜರಕೋಟ್‌ನ ಏಕ ಎರಕದ ಮೂರ್ತಿಗಳು ಮೈಸೂರು ಶೈಲಿಯ ಜೋಡಿಕೆ ಎರಕದ ಶಿಲ್ಪಗಳಿಗಿಂತ ವಿಶೇಷ ವೆನಿಸುತ್ತವೆ. ಗಾಜರಕೋಟ್‌ನ ಟೊಳ್ಳಾಕಾರದ ಮೂರ್ತಿಗಳನ್ನು ಅದೇ ರೀತಿಯಲ್ಲಿ ಮರುಪ್ರತಿ ಮಾಡಲು ಸಾಧ್ಯವಿಲ್ಲ. ಆದರೆ ಮೈಸೂರು ಶೈಲಿಯ ಗಟ್ಟಿಯಾಕಾರದಲ್ಲಿ ಮೂಡಿಬರುವ ಲೋಹ ಶಿಲ್ಪಗಳನ್ನು ಮರುಪ್ರತಿ ಮಾಡಲು ಸಾಧ್ಯವಿದೆ. ಮರು ಪ್ರತಿಗೆ ಈ ಶೈಲಿಯನ್ನು ಹೆಚ್ಚಾಗಿ ವ್ಯಾಪಾರದ ದೃಷ್ಟಿಯಿಂದ ಎಲ್ಲಾ ಭಾಗಗಳಲ್ಲಿಯೂ ಬಳಸುತ್ತಾರೆ.

ಸಂಪ್ರದಾಯಿಕ ಅನೇಕ ಶಿಲ್ಪಕಲಾ ರಚನಾ ವಿಧಾನಗಳಿಂದ ಹಿಡಿದು ಅದರ ಪೂಜಾ ಪದ್ಧತಿಯವರೆಗೆ ಹತ್ತು ಹಲವು ಆಚಾರ, ವಿಧಿ ವಿಧಾನಗಳು, ನಿಯಮಗಳು ವಿಶೇಷವಾದ ಮಹತ್ವವನ್ನು ಪಡೆದುಕೊಂಡಿದೆ. ಹಾಗಾಗಿ ಪಾರಂಪರಿಕ ಶಿಲ್ಪಕಲೆಯ ಆಧುನಿಕ ಶಿಲ್ಪಕಲೆಗಳಿಗಿಂತ ಭಿನ್ನ ದಾರಿಯಲ್ಲಿ ಸಾಗುತ್ತವೆ. ಶಿಲ್ಪಕಲಾ ಕ್ಷೇತ್ರದಲ್ಲಿ ವಿವಿಧ ಮಾಧ್ಯಮಗಳಿಂದ ಶಿಲ್ಪಕಲಾಕೃತಿಗಳನ್ನು ರಚನೆ ಮಾಡುವುದನ್ನು ನೋಡುತ್ತೇವೆ. ಇಲ್ಲಿ ಆಯಾ ಮಾಧ್ಯಮದಲ್ಲಿ ಶಿಲ್ಪರಚನೆಯ ವಿಧಾನಗಳು, ಬೇರೆ-ಬೇರೆ ಕ್ರಮದಲ್ಲಿಯೇ ಇರುತ್ತವೆ. ಶಿಲೆ ಮತ್ತು ಮರದಿಂದ ಮೂರ್ತಿಗಳನ್ನು ತಯಾರಿಸುವಾಗ ಶಿಲ್ಪ ಕೆತ್ತನೆಯ ಕ್ರಿಯೆ ಪ್ರಧಾನವಾದರೆ, ಲೋಹದಿಂದ ಶಿಲ್ಪ ರಚಿಸುವಾಗ ಎರಕ ಹುಯ್ಯುವುದು ಮತ್ತು ಲೋಹದ ಹಾಳೆಯಿಂದ ಉಬ್ಬೆತ್ತು, ತಗ್ಗಿತ್ತುಗಳಿಂದ ಹಿಡಿದು ಮೂರ್ತಿ ತಯಾರಿಸುವಾಗ ಹಲವಾರು ವಿಧಾನಗಳಿವೆ. ಅದೇ ರೀತಿಯಾಗಿ ಮಣ್ಣಿನಲ್ಲಿ ಶಿಲ್ಪ ರಚನೆಯಲ್ಲಿ ಮೆತ್ತುವ ಕ್ರಿಯೆ ಪ್ರಧಾನವಾದರೆ, ಗಾಜಿನ ಶಿಲ್ಪರಚನೆಯಲ್ಲಿ ಅಂಟಿಸುವ ವಿಧಾನ ಅನುಸರಿಸಲಾಗುತ್ತದೆ.

ಪರಾಂಪರಿಕವಾದ ಈ ಸಂಪ್ರದಾಯಿಕ ಶಿಲ್ಪಕಲೆಯ ವಿಶಿಷ್ಟ ಗುಣ-ಧರ್ಮಗಳನ್ನು ಮೈಗೂಡಿಸಿಕೊಂಡಿರುವ ಅನೇಕ ಶಿಲ್ಪಕಲಾವಿದರುಗಳ ಜೀವನ ಮತ್ತು ಕಲಾಕೃತಿಗಲ ಅಧ್ಯಯನದಿಂದ ಪರೋಕ್ಷವಾಗಿ ಸಂಸ್ಕೃತಿಯ ರಕ್ಷಣೆಯ ಜೊತೆಗೆ ಮರೆಯಾಗುತ್ತಿರುವ ಈ ಕಲಾ ಪ್ರಕಾರವನ್ನು ಮತ್ತು ಆ ಶೈಲಿಗಳನ್ನು ಅವುಗಳ ಪ್ರಭಾವ ಪರಿಣಾಮಗಳ ಜೊತೆಯಲ್ಲಿ ಉಪಯುಕ್ತತೆಗಳನ್ನು ಪ್ರಪಂಚಕ್ಕೆ ಪರಿಚಯಿಸಿದಂತಾಗುತ್ತದೆ.

ಬರಗೇರಮ್ಮ :

ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯ ಬದಿಯಲ್ಲಿ ನಗರದ ಹೊರಭಾಗಕ್ಕೆ ಹೊಂದಿಕೊಂಡಿರುವ ಬರಗೇರಮ್ಮ ದೇವತೆಯು ಪ್ರಸಿದ್ಧವಾದ ದೇವತೆಯಾಗಿದ್ದಾಳೆ. ಮಾರ್ಚ್-ಎಪ್ರಿಲ್ ತಿಂಗಳಿನಲ್ಲಿ ಬರಗೇರಮ್ಮ ತಂಗಿ ಅಂತರಗಟ್ಟಮ್ಮನ ಜೊತೆಯಲ್ಲಿ ವೃಹತ್ ಜಾತ್ರೆಯಾಗುತ್ತದೆ. ಬರಗೇರಮ್ಮ ಮತ್ತು ಅಂತರಗಟ್ಟಮ್ಮನು ಅಕ್ಕತಂಗಿಯರಕ್ಕಿಂತಲೂ ಅಂತರಗಟ್ಟಮ್ಮನಿಗೆ ಮಕ್ಕಳಾಗಿದ್ದು ಅಕ್ಕ ಬರಗೇರಮ್ಮ ಬಂಜೆಯಾಗಿದ್ದಳು. ತನ್ನ ಮಕ್ಕಳನ್ನು ಅತೀ ಮುದ್ದು ಮಾಡಿ ತನ್ನತ್ತ ಸೆಳೆದುಕೊಳ್ಳುತ್ತಾಳೆ ಎಂಬ ಭಯ ಆತಂಕಗಳಿಂದ ತನ್ನ ಬಗ್ಗೆ ಅಕ್ಕನು ಅಸೂಯೆಗೊಂಡು ಮಕ್ಕಳನ್ನು ತನ್ನಿಂದ ದೂರ ಮಾಡುತ್ತಾಳೆಂದು ಭ್ರಮಿಸಿ ಅಕ್ಕನು ಮನೆಗೆ ಬಂದಾಗ ಮಕ್ಕಳನ್ನು ಬಚ್ಚಿಟ್ಟು ಮಕ್ಕಳು ಇಲ್ಲವೆಂದು ಹೇಳಿದಾಗ ಬರಗೇರಮ್ಮ ಅಪಮಾನ ಹಾಗೂ ಸಿಟ್ಟಿನಿಂದ ತಂಗಿಗೆ ಮತ್ತು ಮಕ್ಕಳಿಗೆ ಶಾಪವಿಟ್ಟಾಗ ಮಕ್ಕಳು ಬಚ್ಚಿಟ್ಟಿದ್ದ ಸ್ಥಳದಲ್ಲಿ ಕಲ್ಲಾಗಿರುವುದನ್ನು ಕಂಡು ದುಃಖದಿಂದ ಅಕ್ಕನ ಬಳಿ ಬಂದು ಗೋಳು ತೋಡಿಕೊಂಡಾಗ ಬರಗೇರಮ್ಮನು ವರ್ಷಕ್ಕೊಮ್ಮೆ ಜಾತ್ರೆಯ ಸಮಯದಲ್ಲಿ ಬೇಟೆಗೆ ಅವಕಾಶವಿತ್ತಳೆಂದೂ ಅದರಂತೆ ಇಂದಿಗೂ ಜಾತ್ರೆಯ ಸಮಯದಲ್ಲಿ ಮಾತ್ರ ಅಂತರಗಟ್ಟಮ್ಮನ ದೇವಸ್ಥಾನದ ಬಾಗಿಲು ತೆರೆಯುತ್ತದೆ. ಬರಗೇರಮ್ಮನ ದೇವಾಲಯ ನಿತ್ಯ ಪೂಜೆಯಲ್ಲಿರುತ್ತದೆ. ಈ ರೀತಿ ಹೊಂದಾಣಿಕೆಯ ಶಕ್ತ ದೇವತೆಗಳು ಬೇಲೂರು ಅಂತರಗಟ್ಟಮ್ಮ, ಕಬ್ಬಾಳುವಿನ ಕಬ್ಬಾಳಮ್ಮ, ಕೋಡಂಬಳಿ ಬಿಸಿಲಮ್ಮ ಇವರ

ಜನಪದೀಯ ಕಥೆಗಳು ಒಂದೇ ತೆರನಾಗಿ ಇದ್ದು, ಕೆಲವು ದೇವತೆಗಳು ಶಿಷ್ಟಪರಂಪರೆಯಿಂದ ವೈದಿಕ ಸಂಪ್ರದಾಯದ ಕಡೆಗೆ ಪರಿವರ್ತನೆಗೊಂಡಿರುತ್ತವೆ.

ಬರಗೇರಮ್ಮನ ಶಿಲ್ಪವು ಮೂಲವಾಗಿ ಉದ್ಭವವಾಗಿದೆ ಎಂದು ಹೇಳುವ ಇಲ್ಲಿನ ಪೂಜಾರಿಗಳು (ನಾಯಕ ಜನಾಂಗದವರು) ಮೂಲ ಶಿಲ್ಪಕ್ಕೆ ಸಿಮೆಂಟ್ ಮತ್ತು ಗಾರೆಯಿಂದ ಯಾಳೀ ಶಿಲ್ಪವನ್ನು ಹೋಲು ಸಿಂಹ ಮುಖದ ಮುಖವಾಡವನ್ನು ಹಾಗೂ ಪ್ರಭಾವಳಿಯ ಮಾದರಿಯ ಹೂವಿನ ಹಾರ ಮತ್ತು ನವಿಲಿನ ಗರಿಗಳ ಆಕೃತಿಗಳನ್ನು ಇತ್ತೀಚೆಗೆ ರಚನೆ ಮಾಡಿಸಿದ್ದು, ಎನಾಮಲ್ ಬಣ್ಣದಿಂದ ಹಳದಿ, ಹಸಿರು, ಕೆಂಪು ಮತ್ತು ಬಿಳಿ ಬಣ್ಣವನ್ನೂ ಲೇಪಿಸಿರುತ್ತಾರೆ. ಈ ಅಲಂಕಾರಗಳ ಮಧ್ಯಭಾಗದಲ್ಲಿ ಬರಗೇರಮ್ಮನ ದ್ವಿಮಾನ ಶೈಲಿಯ ಕೆತ್ತನೆಯಂತೆ ಕಂಡುಬರುವ ಆಕೃತಿಯಿಂದ ಕೂಡಿದ ಶಿಲೆಯು ಅಸ್ಪಷ್ಟವಾಗಿ ಮುಖಭಾವವನ್ನು ಹೊಂದಿದ್ದು, ಅದಕ್ಕೆ ಕಣ್ಣಿನ ಭಾಗದಲ್ಲಿ, ಮೂಗಿನ ಭಾಗದಲ್ಲಿ ಹಾಗೂ ಕೋರೆಹಲ್ಲುಗಳ ಭಾಗದಲ್ಲಿ ಬೆಳ್ಳಿ/ಪಂಚಲೋಹದಿಂದ ತಯಾರಿಸಿರುವ ಕಣ್ಣುಗಳ, ಮೂಗು ಹಾಗೂ ಕೋರೆಹಲ್ಲುಗಳನ್ನು ಕ್ರಮಬದ್ಧವಾಗಿ ಅಳವಡಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ಶಿಲಾಮೂರ್ತಿಗೆ ಬೆಳ್ಳಿಲೋಹದ (ಹೆಚ್ಚುವರಿ ಭಾಗಗಳನ್ನು) ಅಳವಡಿಕೆಗಳು ಹಾಗೂ ಬೆಳ್ಳಿಯ ಮೂಗಿನ ನತ್ತುಗಲು ಸ್ತ್ರೀದೇವತೆಯ ಅಲಂಕಾರಕ್ಕೆ ಒಪ್ಪುವ ಹಣೆಯ ಕುಂಕುಮ ಹಾಗೂ ಮುಖಭಾಗಕ್ಕೆ ಲೇಪಿಸಿರುವ ಅರಿಶಿಣವು ಪ್ರಖರತೆಯ ಬಣ್ಣದಿಂದ ಕೂಡಿರುತ್ತದೆ. ದೇವತೆಯ ಮುಖದ ಹಿಂಬದಿಯಲ್ಲಿ ಎಲೆಗಳ ಆಕಾರದಲ್ಲಿ ಕೂಡಿರುವ ಚಿತ್ತಾರವು ಸಿಮೆಂಟಿನಿಂದ ರಚಿಸಿದ್ದು, ಅದರ ಮೇಲೆ ರಚಿಸಿರುವ ಸಿಂಹಮುಖದ ಶಿಲ್ಪದ ಮೇಲೆ ಬೆಳ್ಳಿಯ ಛತ್ತಿಯು ಹಾಗೂ ತ್ರಿಶೂಲವು ಇದ್ದು, ಮೂಲ ಶಿಲ್ಪದಲ್ಲಿಯೇ ಮೂಡಿರುವ ಖಡ್ಗಧಾರಿ ಕಾಳೀರೂಪದ ಕುಳಿತ ಭಂಗಿಯ ಶಿಲ್ಪವು ಬಹಳ ಸೊಗಸಾಗಿ ಕೆತ್ತಲ್ಪಟ್ಟಿದ್ದು, ಭಂಡಾರದ ಲೇಪನದಿಂದ ಸೂಕ್ಷ್ಮ ವಿವರಗಳು ಮಂಕಾಗಿವೆ. ಈ ಬರಗೇರಮ್ಮ ದೇವಿಯಮೂರ್ತಿಯ ಎಡಭಾಗದಲ್ಲಿ ಆಕರ್ಷಕ ವೀರಗಲ್ಲಿನ ಮಾದರಿಯ ಶಿಲ್ಪವಿದ್ದು ಕುದುರೆ ಸವಾರಿಯಲ್ಲಿ ಖಡ್ಗಹಿಡಿದು ಲಗಾಮು ಎಳೆಯುತ್ತಿರುವ ವೀರನ ಜೊತೆಯಲ್ಲಿ ಆತನ ಸತಿಯು ಹಿಂದೆ ಕುಳಿತಿದ್ದು,

ಎಡಗಾಲನ್ನು ಎತ್ತಿ ಹೂಂಕರಿಸುತ್ತಿರುವ ಕುದುರೆಯ ಭಂಗಿಯು ಲಕ್ಷಣವಾಗಿದೆ. ಕುದುರೆಯ ಹಿಂದೆ ಮುಂದುಗಡೆ ಸ್ತ್ರೀಯರು ಚಾಮರಗಳಿಂದ ಬೀಸುತ್ತಿದ್ದಾರೆ. ಸುಮಾರು ಒಂದೂವರೆ ಅಡಿ ಎತ್ತರ ಹಾಗೂ ಅಷ್ಟೇ ಅಗಲವಿರುವ ಈ ಶಿಲ್ಪವು ಚಿತ್ರದುರ್ಗದ ಪಾಳೇಗಾರರ ಬಗ್ಗೆ ಮಾಹಿತಿ ನೀಡುವ ಶಿಲ್ಪವಾಗಿದ್ದರೂ ಆಶ್ಚರ್ಯವಿಲ್ಲ. ದೇವಾಲಯದ ಪೂಜಾರಿಗಳು ಈ ಶಿಲ್ಪವನ್ನು ದೇವಿಯ ಸಹಾಯಕ ವೀರಗಾರರು ಎಂದಷ್ಟೇ ವಿವರ ನೀಡಿರುತ್ತಾರೆ.

ಸ್ಪಷ್ಟ ಆಕೃತಿಯ ಹೊರತಾಗಿರುವ ಈ ದೇವಾಲಯದ ಮೂಲ ಮೂರ್ತಿಯು ಕೆತ್ತನೆಯ ಶೈಲಿಯಲ್ಲಿ ಜನಪದ ಶೈಲಿಯೇ ಪ್ರಾಮುಖ್ಯತೆಯನ್ನು ಹೊಂದಿದ್ದು, ಪುರಾತನ ಶಿಲ್ಪವಾಗಿದೆ. ಸಿಮೆಂಟ್ ಮತ್ತು ಗಾರೆಯು ಇತ್ತೀಚೆಗೆ (ಇಪ್ಪತ್ತು ವರ್ಷಗಳು) ರಚನೆಮಾಡಿದ್ದರೂ ಜನಪದವಾಗಿಯೇ ಮೂಡಿಬಂದಿದೆ. ಲೋಹ ಅಳವಡಿಕೆಗಳು ಕೂಡ ಜನಪದ ಶೈಲಿಯಲ್ಲಿಯೇ ಇದ್ದು ಮೂಗು, ಕಣ್ಣುಗಳು, ಕೋರೆಹಲ್ಲುಗಳು ಬಿಡಿ ಬಿಡಿಯಾಗಿ ರಚನೆಯಾಗಿವೆ. ಕುಳಿತ ಭಂಗಿಯ ಶಿಲೆ ಮತ್ತು ಸಿಮೆಂಟಿನ ಮಾಧ್ಯಮದ ಸಿಂಹಗಳು, ನಾಗರ ಕಲ್ಲುಗಳು ಮುಂತಾದ ಶಿಲ್ಪಗಳ ಜೊತೆಯಲ್ಲಿ ಗಾರೆಯಲ್ಲಿನ ಆದಿಶೇಷನ ಹೆಡೆಯಲ್ಲಿನ ಅಮ್ಮನ ಮೂರ್ತಿಯು ಇದೆ. ವಾರ್ಷಿಕ ಜಾತ್ರೆಯ ಅಲ್ಲದೆ ಹಬ್ಬ ಹುಣ್ಣಿಮೆ, ಅಮವಾಸ್ಯೆಗಳಲ್ಲಿ ವಿಶೇಷ ಪೂಜೆಯು ಈ ಜನಪದ ಶಕ್ತಿದೇವತೆಗೆ ಸಲ್ಲುತ್ತದೆ. ಬಲಿಯಾಚರಣೆಯೂ ದೇವಾಲಯದ ಹೊರಭಾಗದಲ್ಲಿ ಜರುಗುತ್ತದೆ. ಇಲ್ಲಿನ ಜನಪದ ಶೈಲಿಯ ಶಿಲ್ಪಕ್ಕಿಂತ ಬರಗೇರಮ್ಮ ದೇವತೆಯ ಶಕ್ತಿ ಮತ್ತು ಪವಾಡವೇ ಪ್ರಮುಖ. ಮಕ್ಕಳಿಲ್ಲದವರು ಮಕ್ಕಳಾಗಲೀ ಎಂದು, ಮದುವೆಯಾಗದೇ ಇರುವವರು ಶೀಘ್ರ ಮದುವೆಗಾಗಿ, ಕೆಟ್ಟ ಕಾಯಿಲೆಗಳ ನಿವಾರಣೆಗಾಗಿ, ಹರಕೆ, ಪ್ರಮಾಣ ಇತ್ಯಾದಿ ಪವಾಡಗಳು ದೇವತೆಯಲ್ಲಿ ಜರುಗುತ್ತವೆ ಎಂಬ ಗಟ್ಟಿಯಾದ ನಂಬಿಕೆಯೂ ಜನರಲ್ಲಿ ಇದ್ದು, ಈ ಜನಪದ ದೇವತೆಯು ಎಲ್ಲಾ ಜಾತಿಯವರಿಗೆ ಸಲ್ಲುವಳಂತೆ ಇಲ್ಲಿನ ಜನತೆಯ ನಂಬಿಕೆಯಾಗಿದೆ.

ಬರಗೇರಮ್ಮ ದೇವಾಲಯದ ಲೋಹಹಾಳೆಯ ಶಿಲ್ಪಗಳು :

ಶಿಲಾ ಶಿಲ್ಪ ಜನಪದ ಶೈಲಿಯ ಬರಗೇರಮ್ಮ ದೇವಾಲಯದಲ್ಲಿ ಜನಪದ ವೈಶಿಷ್ಟ್ಯತೆಯ ಬಾಗಿಲುಪಟ್ಟಿ ಮತ್ತು ಕಂಬಗಳ ಪಟ್ಟಿಗಳು ಲೋಹ ಹಾಳೆ (ಹಿತ್ತಾಳೆಯ ಹಾಳೆ) ಪಂಚಲೋಹದಲ್ಲಿ ತಯಾರಾದ ಈ ಹಾಳೆಗಳಲ್ಲಿ ಜನಪದ ರೇಖಾ ವಿನ್ಯಾಸದ ಸುಂದರ ಚಿತ್ತಾರಗಳ ಆಕರ್ಷಕ ಉಬ್ಬುಶಿಲ್ಪಗಳು ಧಾರ್ಮಿಕವಾಗಿಯೂ ಮೂಡಿಬಂದಿವೆ.

ಮೂಲತಹಃ ಶಕ್ತಿದೇವತೆಯಾಗಿರುವ ಇಲ್ಲಿನ ಬರಗೇರಮ್ಮನು ಗರ್ಭಗುಡಿಯನ್ನು ಹೊಂದಿದ್ದು, ಗರ್ಭಗುಡಿಯ ಬಾಗಿಲಿನ ಮೇಲೆ ವಿನಾಯಕ ಮೂರ್ತಿಯೂ ಉಬ್ಬುಶಿಲ್ಪ ಶೈಲಿಯಲ್ಲಿ ಉಬ್ಬುಕೆತ್ತನೆಯಿಂದ ಕೆತ್ತಲ್ಪಟ್ಟಿದ್ದು ಸಂಪ್ರದಾಯಿಕ ಶೈಲಿಯಲ್ಲಿದೆ. ಅಕ್ಕ ಪಕ್ಕದಲ್ಲಿ ಅದೇ ಉಬ್ಬುಕೆತ್ತನೆಯ ಬಳ ಮತ್ತು ಹೂವಿನ ದಳಗಳು ಅಚ್ಚುಕಟ್ಟಾಗಿ ಮೂಡಿಬಂದಿವೆ. ಬರ್ಘಗುಡಿಯ ಎಡ ಮತ್ತು ಬಲಭಾಗದ ಬಾಗಿಲು ಪಟ್ಟಿಗೆಗಳಲ್ಲಿ ದ್ವಾರಪಾಲಕರಿಂದ ಕೂಡಿದ್ದು, ವಿಷ್ಣುವಿನ ಬಾಗಿಲು ಕಾಯುವ ಜಯ–ವಿಜಯರಂತೆ ಅದೇ ರೂಪಗಳಲ್ಲಿ ಜನಪದೀಯ ಶೈಲಿಯಲ್ಲಿ ಆಕಾರಗಳನ್ನು ಉಬ್ಬುಕೆತ್ತನೆ ಮಾಡಿರುತ್ತಾರೆ. ಜಯವಿಜಯರ ಶಿಲ್ಪಗಳಿಗೆ ಪಟ್ಟಿಕೆ–ಆಯತಗಳನ್ನು ಮಾಡಿದ್ದು ಇದರ ಮೇಲ್ಭಾಗದಲ್ಲಿ ನವಿಲಿನ ಚಿತ್ತಾಕರ್ಷಕವಾದ ಸರಳ ವಿಜೃಂಭಣೆಯ ಉಬ್ಬುಕೆತ್ತನೆಯನ್ನು ಮಾಡಿರುತ್ತಾರೆ. ಈ ಬಾಗಿಲಿನ ಪಟ್ಟಿಕೆಗಳನ್ನು ಶಿಲಾ ಬಾಗಿಲಿಗೆ ಅಚ್ಚುಕಟ್ಟಾಗಿ ಅಳವಡಿಸಿದ್ದಾರೆ. ಅದರಂತೆಯೇ ಇತರೆ ಎಂಟು ಕಂಬಗಳಿಗೆ ಏರುಮುಖವಾಗಿ ಗಜ(ಕಮಲಹಿಡಿದ ಆನೆ), ಬಳ್ಳಿಯ ಎಲೆ, ನವಿಲು ಹಾಗೂ ಐದು ಹೆಡೆಯ ಹಾವಿನ ಪಟ್ಟಿಕೆಗಳ ಅಂಕಣಗಳನ್ನು ಹಂತ–ಹಂತವಾಗಿ ಮೂಡಿಸಿ ನಾಲ್ಕು ಬದಿಯಲ್ಲಿಯೂ ಪ್ರತಿಕಂಬಕ್ಕೆ ಉಬ್ಬುಕೆತ್ತನೆಯ ಪಂಚಲೋಹದ ಹಾಳೆಗಳನ್ನು (Sheet Metal) ಕಂಬಗಳ ಆಕಾರಕ್ಕೆ ತಕ್ಕುದಾಗಿ ಅಳವಡಿಸಿರುತ್ತಾರೆ.

ಈ ರೀತಿಯ ಉಬ್ಬುಕೆತ್ತನೆ ಲೋಹ ಹಾಳೆಗಳನ್ನು ಸೌಂದರ್ಯಾತ್ಮಕ ದೃಷ್ಟಿಯಿಂದ ದೇವಾಲಯದ ಆವರಣಗಳಲ್ಲಿ ರಚಿಸಿರುವುದನ್ನು ಜನಪದದಿಂದ ಶಿಷ್ಟಕ್ಕೆ ವರ್ಗಾವಣೆಗೊಂಡಿರುವ ಮತ್ತು

ಪರಿವರ್ತನೆಗೊಳ್ಳುತ್ತಿರುವ ಜನಪದರ ದೇವಾಲಯಗಳಲ್ಲಿ ಕಂಡುಬರುವ ಸಾಮಾನ್ಯ ದೃಶ್ಯವಾಗಿವೆ. ಈ ಉಬ್ಬುಕೆತ್ತನೆಗಳನು ಮರ ಮಾಧ್ಯಮದ ಶಿಲ್ಪಗಳು ಹಾಗೂ ಶಿಲಾ ಮಾಧ್ಯಮದ ಶಿಲ್ಪಗಳ ಮೇಲೆ ಕವಚಗಳ ಮಾದರಿಗಳಲ್ಲಿ ಅಳವಡಿಸಿರುತ್ತಾರೆ. ಈ ರೀತಿಯ ಅಳವಡಿಕೆಗೆ ಭಕ್ತರೇ ಹರಕೆ ಹೊತ್ತು ತಮಗೆ ಸಮಾಧಾನ ಸಂತೋಷವಾದ ಸಂದರ್ಭದಲ್ಲಿ ಹರಕೆ ತೀರಿಸಿಕೊಳ್ಳುತ್ತಾರೆ.

ನೇರವಾಗಿ ಮೇಣದಲ್ಲಿ ಮೂರ್ತಿಯನ್ನು ತಯಾರಿಸಬೇಕಾದರೆ ಕಲಾವಿದರು ಒಂದು ಬಿಳಿಯ ಹಾಳೆಯ ಮೆಲೆ ರೇಖಾ ಚಿತ್ರವನ್ನು ರಚಿಸಿಕೊಳ್ಳುತ್ತಾರೆ. ಈ ರೇಖಾ ಚಿತ್ರವು ತಾಳಮಾನ ಮತ್ತು ಅಳತೆಗಳಲ್ಲಿ ಪ್ರಮಾಣ ಬದ್ಧತೆಗಳುಸಾರವಾಗಿ ಯಥಾರೀತಿಯಲ್ಲಿ ಲೊಹದಲ್ಲಿ ಶಿಲ್ಪವು ಮೂಡಿಬರಬೇಕಾಗಿರುತ್ತದೆ.

ಆರಂಭದಲ್ಲಿ ರೇಖಾ ಚಿತ್ರವನ್ನು ರಚಿಸಿಕೊಳ್ಳುವುದರ ಉದ್ದೇಶವು ಆ ಮೂರ್ತಿ ಶಿಲ್ಪದ ರಚನೆ ಮತ್ತು ಪ್ರಮಾಣಬದ್ಧತೆಗಳಿಗನುಗುಣವಾಗಿ ಮೂಡಿಬರಬೇಕಾಗಿರುತ್ತದೆ. ರೇಖಾ ಚಿತ್ರದ ಸಹಾಯವಿಲ್ಲದೆ ಹೋದರೆ ಮೂರ್ತಿ ಶಿಲ್ಪದ ಪ್ರಮಾಣ ಬದ್ಧತೆಗಳು ಹಾಗೂ ಆಕಾರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಮೂರ್ತಿಗಳನ್ನು ಬೇಡಿಕೆಗೆ ಅನುಗುಣವಾಗಿ ತಯಾರು ಮಾಡುವುದರಿಂದ ಅದು ಮಾಡಿಸಲು ಬಂದವರ ಮೇಲೆ ಮೂರ್ತಿಯ ಅಳತೆಯು ಅವಲಂಬನೆಯಾಗಿರುತ್ತದೆ.

....

ಅಧ್ಯಾಯ –4:

ಗಾಜರಕೋಟ್ ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳು

ಜನಪದ ಪ್ರಕಾರಗಳನ್ನು ತಲಸ್ಪರ್ಶಿಯಾದ ಅಧ್ಯಯನ ನಡೆಸಬೇಕಾದ ಹಲವು ಕ್ಷೇತ್ರಗಳಲ್ಲಿ ಜನಪದ ಕಲಾಕ್ಷೇತ್ರವೂ ಒಂದು. ಹೊಸಕ್ಷೇತ್ರವೊಂದರ ಅಧ್ಯಯನದ ಪ್ರಾರಂಭದ ಹಂತದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಂಥವುಗಳಲ್ಲಿ ವರ್ಗೀಕರಣದ ಸಮಸ್ಯೆಯೂ ಒಂದು. ಕರ್ನಾಟಕದಲ್ಲಿ ಜಾನಪದ ಅಧ್ಯಯನವನ್ನು ವ್ಯಾಪಕವಾಗಿ ನಡೆಸಿದ್ದರೂ ಇವುಗಳಲ್ಲಿ 'ಜನಪದ ಶಿಲ್ಪಕಲೆ' ಅತ್ಯಂತ ಪ್ರಮುಖವಾದುದಾಗಿದೆ.

ಜನಪದ ಕಲೆಗಳ, ಸಾಹಿತ್ಯ ವರ್ಗೀಕರಣ ಮಾಡಿದ ವಿದ್ವಾಂಸರು ಜನಪದ ಶಿಲ್ಪಕಲೆಯ ವ್ಯವಸ್ಥಿತವಾದ ವರ್ಗೀಕರಣ ಮಾಡಿರುವುದಿಲ್ಲ. ಆದುದರಿಂದ ಜನಪದ ಶಿಲ್ಪಕಲೆಯ ಸ್ವರೂಪ, ವ್ಯಾಪ್ತಿ, ಸಂಗ್ರಹಿತ ಸಾಮಾಗ್ರಿಯಲ್ಲಿ ಗಮನಿಸಿಕೊಂಡು ಅಧ್ಯಯನದ ಅನುಕೂಲತೆಗಾಗಿ ಹೀಗೆ ವರ್ಗೀಕರಿಸಬಹುದು.

1) ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳು

2) ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಶಿಲ್ಪಗಳು

ಪ್ರಸ್ತುತ ಈ ಅಧ್ಯಾಯದಲ್ಲಿ ಗಾಜರಕೋಟ್ ಲೋಹ ಶಿಲ್ಪಗಳಲ್ಲಿ **ಧಾರ್ಮಿಕ ಶಿಲ್ಪಗಳನ್ನು** ಕುರಿತು ಅಧ್ಯಯನ ಮಾಡಲಾಗಿರುತ್ತದೆ.

ಸೃಷ್ಟಿಯು ಮೊದಲಿಗೆ ಯಾರನ್ನು ಸೃಷ್ಟಿಸಿತು ಎನ್ನುವುದಕ್ಕೆ ಆಧಾರಗಳನ್ನು ಇನ್ನು ಹುಡುಕತ್ತಲೇ ಇರುವ ಮಾನವನು ತನಗೆ ತೋಚಿದ್ದನ್ನು ನಂಬಿಸುತ್ತಲೇ, ನಂಬುತ್ತಲೇ ಸಾಗುತ್ತಿರುವುದು ವಾಸ್ತವ ಸತ್ಯವಾಗಿದೆ.

ಭಾರತೀಯರ ಜೀವನ ಕ್ರಮವು ವಿಕಾಶಗೊಂಡಂತೆ ಕಲೆಗಳೂ ವಿಕಾಸಗೊಂಡವು ನಮ್ಮ ಸಂಸ್ಕೃತಿಯ ಬೆಳವಣಿಗೆಯನ್ನು ಅವಲೋಕಿಸಿದಾಗ, ನಮ್ಮ ಪೂರ್ವಜರು ಹುಟ್ಟಿನಿಂದ ಸಾವಿನವರೆಗೆ ಹಲವಾರು ವಿಧದ ಕಲೆಗಳನ್ನು ರೂಪಿಸುತ್ತ, ರಕ್ಷಿಸುತ್ತ ಬಂದಿದ್ದಾರೆಂಬುದು ಗೊತ್ತಾಗುತ್ತದೆ. ಹೀಗಾಗಿ ಜೀವನ ವಿಕಾಸವೆಂದರೆ

ಕಲೆಯ ವಿಕಾಸ, ಕಲೆಯ ವಿಕಾಸವೆಂದರೆ ಜೀವನವೆಂದೇ ಅರ್ಥ. ಈ ಕಲೆಗಳನ್ನು ಲಲಿತಕಲೆ ಮತ್ತು ಕುಶಲಕಲೆ ಎಂದು ವಿಭಾಗಿಸುತ್ತಾರೆ. ಸಾಮಾನ್ಯವಾಗಿ ಲಲಿತಕಲೆಯನ್ನು ಶುದ್ಧಕಲೆಯೆಂದೂ ಕುಶಲ ಕಲೆಯನ್ನು ಪ್ರಯೋಜಕ ಕಲೆಯೆಂದೂ ಕರೆಯುವುದು ರೂಢಿಯಲ್ಲಿದೆ. ಕಾವ್ಯ, ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆಗಳಿಗೆ ಲಲಿತಕಲೆಗಳೆಂದೂ ಶಿಲ್ಪ, ಮೂರ್ತಿಶಿಲ್ಪ, ಕಟ್ಟಿಗೆ ಕೆತ್ತನೆ ಮುಂತಾದ ಕಲೆಗಳಿಗೆ ಕುಶಲ ಕಲೆಗಳೆಂದೂ ಕರೆಯುತ್ತಾರೆ.

ಮಾನವನ ಭಾವನಿಷ್ಠರವಾದ ಮನಸ್ಸಿಗೆ ಉಲ್ಲಸ ನೀಡುವ ಕಲೆಗಳು ಲಲಿತಕಲೆಗಳೆನಿಸಿದರೆ, ವೃತ್ತಿಗೆ ಬೆನ್ನೆಲುಬಾಗಿ ಪ್ರತಿಭೆ ಮತ್ತು ಕೌಶಲನಿಷ್ಠವಾಗಿರುವ ವೃತ್ತಿಮೂಲ ಕಸಬುದಾರರ ಕಲೆಗಳು ಕುಶಲಕಲೆಗಳಾಗಿವೆ. ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ ಮುಂತಾದವುಗಳ ಪ್ರಮುಖ ಉದ್ದೇಶ ಆನಂದ ನೀಡುವುದಾದ್ದರಿಂದ ಇವು ಲಲಿತಕಲೆಗಳೆನಿಸುತ್ತವೆ. ಶಿಲ್ಪಿ, ಕುಂಬಾರ, ಕಮ್ಮಾರ, ಬಡಿಗ, ಅಕ್ಕಸಾಲಿ, ಚಮ್ಮಾರ ಮುಂತಾದವರ ವೃತ್ತಿಗಳು ಕಲಾತ್ಮಕವಾಗಿಯೂ ಪ್ರಯೋಜನಾತ್ಮಕವಾಗಿಯೂ ಇರುವುದರಿಂದ ಇವು ಕುಶಲ ಕಲೆಗಳಾಗಿವೆ.

ಪ್ರಪಂಚದ ಇತಿಹಾಸದಲ್ಲಿ ಮಾನವನ ಪ್ರಾಚೀನತೆಯನ್ನು 'ಆದಿ ಮಾನವ ಹಂತ'ದ್ದೆಂದು ಗಣಿಸಿದಾಗ, ಅವನ ಬದುಕಿನ ಊಹಾ ಶಿಲ್ಪವನ್ನು ಕಲ್ಪಿಸಿದಾಗ ಅವನ ಭಯ, ಆತಂಕ, ರೋಗ–ರುಜಿನ ಭೂಕಂಪನ, ಪ್ರವಾಹಗಳಿಗೆ ಅವನು ತೋರುತ್ತಿದ್ದ ಪ್ರತಿಕ್ರಿಯೆ ಹೇಗಿರಬಹುದಿತ್ತು? ಬುದ್ಧಿ ಬೆಳೆದ ನಂತರ ಅವನ ಪ್ರತಿಕ್ರಿಯೆ ದೇವ–ದೈವದೊಡನೆ ಆಚಾರ–ವಿಚಾರದೊಡನೆ ಹೇಗಿರಬಹುದಿತ್ತು? ಇಂಥ ಪ್ರಶ್ನೆ ಹಾಕಿಕೊಂಡಾಗ ಚಟುವಟಿಕೆಗಳೇ ಕಲೆಗಳಾದವು.(ಪುಟ–16, ಕರ್ನಾಟಕ ಜನಪದ ಚಿತ್ರಕಲೆ, ಡಾ. ಎಸ್. ಸಿ. ಪಾಟೀಲ)

ಭಾರತೀಯರು ಧರ್ಮದ ಚೌಕಟ್ಟನ್ನು ಹಾಕಿಕೊಂಡಾಗ, ಧಾರ್ಮಿಕ ಆಚರಣೆಗಳು ಕಲೆಯ ರೂಪ ತಾಳುವುದುನ್ನು ನೋಡುತ್ತೇವೆ. ಎಷ್ಟೋ ಸಲ ಹಿಂದಿನಿಂದ ಬಂದಿದೆ: ಅದನ್ನು ಬಿಡಬಾರದೆಂದು ಆಚರಿಸುವ ಅನೇಕ ಆಚರಣೆಗಳು ನಮ್ಮ ಕಣ್ಣು ಮುಂದಿವೆ. ಈ ಧರ್ಮದ ಸಂಪ್ರದಾಯಗಳ ಪ್ರಭಾವಕ್ಕೆ ಸಿಲುಕಿ, ದೇವರ

ಆರಾಧನೆಗೆ ತೊಡಗಿ, ದೇವರನ್ನು ಸ್ತುತಿಸಲು, ನಲಿಸಲು, ದೇವರ ಕಣ್ಣಿಗೆ ಹಬ್ಬ ಮಾಡಲು, ಸಾಹಿತ್ಯ, ನೃತ್ಯ, ಅಲಂಕಾರದಂತಹ ಕಲೆಗಳು, ಹುಟ್ಟಿ ಬಂದವು. ಒಟ್ಟಾರೆ ಕಲೆಯ ಉಗಮವನ್ನು ಧಾರ್ಮಿಕ ಆಚರಣೆಯ ಹಿನ್ನಲೆಯಲ್ಲಿ, ದೈವದ ಆರಾಧನೆಯ ಹಿನ್ನಲೆಯಲ್ಲಿ ಪರಿಗಣಿಸಬೇಕಾಗುತ್ತದೆ.ಇದು ಮನುಷ್ಯನ ಬದುಕಿನ ಅಂತರಂಗವಾದರೆ, ಬಾಹ್ಯರಂಗದಲ್ಲಿ ಸೌಂದರ್ಯದ ದೃಷ್ಟಿಕೋನ ಮುಖ್ಯ ಪಾತ್ರವಹಿಸುತ್ತದೆ. ಅನ್ನ, ವಸ್ತ್ರ, ವಸತಿ, ಬಳಕೆಯ ವಸ್ತು, ಉಪಕರಣಾದಿಗಳೆಲ್ಲ ಸೌಂದರ್ಯವನ್ನು ಕಾಣುವ ಪ್ರವೃತ್ತಿಯಿಂದಾಗಿ ಕಲೆ ಹುಟ್ಟಿ, ಪ್ರವೇಶ ಪಡೆದು, ವಿಕಾಸಗೊಳ್ಳುವಂತಾಯಿತು.

ಹೀಗೆ ಧಾರ್ಮಿಕ ಹಿನ್ನಲೆಯಲ್ಲಿ ದೈವೀ ಪರಿಕಲ್ಪನೆ ಮತು ಆರಾಧನಾ ಸಂದರ್ಭಗಳು ಕಲೆಗಳ ಹುಟ್ಟಿಗೆ ಮೂಲವಾದಂತೆ, ಜನಪದ ಶಿಲ್ಪಕಲೆಯ ಹುಟ್ಟಿಗೂ ಕಾರಣವಾಗಿರುತ್ತವೆ. ಜನಪದರು ದೇವರ ಬಗೆಗೆ ಕುರಿತು ಮಾಡಿದ ಚಿಂತನ ಮಂಥನಗಳು ಜನಪದ ಸಾಹಿತ್ಯಕ್ಕೆ ಮೂಲವಾಗಿರುವಂತೆ ದೈವದ ಮುಂದೆ ಹಾಡಿದ ಹಾಡು, ಕುಣಿತಗಳು, ಜನಪದ ನೃತ್ಯ ಸಂಗೀತಗಳಿಗೆ ಮೂಲವಾಗಿವೆ. ಹಾಗೆಯೇ ಈ ದೇವರುಗಳ ಪ್ರತಿಮೆಗಳು, ಅಲಂಕಾರಗಳು, ಆಭರಣಗಳು, ಆಯುಧಗಳು, ವಾಹನಗಳು ಜನಪದ ಶಿಲ್ಪಗಳಿ ವೈಶಿಷ್ಯಗಳಾಗಿವೆ.

ಲೋಹ ಶಿಲ್ಪಗಳನ್ನು ಎಲ್ಲಾ ಜನಪದರು ಆರಾಧಿಸುವುದಿಲ್ಲ. ಆರ್ಥಿಕ ಮಟ್ಟ ಸುಧಾರಿಸಿದ ಕುಟುಂಬಗಳಲ್ಲಿ ನಾವು ಲೋಹಶಿಲ್ಪಗಳ ಮೂರ್ತಿಗಳನ್ನು ಕಾಣಬಹುದಾಗಿದೆ.

ಗಾಜರಕೋಟ್ ಶಿಲ್ಪಗಳು ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರಗಳಲ್ಲಿ ಹೆಚ್ಚಾಗಿ ಸಂಗ್ರಹಣೆಗಳಲ್ಲಿ ಕಂಡುಬರುತ್ತವೆ.

ಕರ್ನಾಟಕದ ಬಹುತೇಕ ಜಿಲ್ಲೆಗಳು ಅಂದರೆ, ಬೀದರ, ಕಲಬುರಗಿ, ವಿಜಯಪುರ, ಯಾದಗಿರಿ, ಗದಗ, ಬಳ್ಳಾರಿ, ಹಾವೇರಿ, ದಾವಣಗೆರೆ, ಹಾಸನ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು,

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕ ಬಳ್ಳಾಪುರ, ರಾಮನಗರ (ಜಾನಪದ ಲೋಕ)ಜಿಲ್ಲೆಗಳಲ್ಲಿ ಕಂಡುಬರುತ್ತವೆ.

ಶಿವನ ನಾನಾ ಅವತಾರಗಳಲ್ಲಿ, ವಿನಾಯಕ, ಸುಬ್ರಮಣ್ಯ, ಪಾರ್ವತಿ ಪರಮೇಶ್ವರ, ಕುಬೇರ, ಲಕ್ಷ್ಮೀ, ಸರಸ್ವತಿ, ವಿಷ್ಣು, ಮಲ್ಲಿಕಾರ್ಜುನ, ಗವಿಸಿದ್ದೇಶ್ವರ ಲಿಂಗೇಶ್ವರ, ಕಾಲಭೈರವ, ವೀರಭದ್ರ, ಮೈಲಾರಲಿಂಗ, ಹನುಮಂತ, ಮೌನೇಶ, ತಿಂತಿಣಿ ಮೌನೇಶ್ವರ, ದ್ಯಾಮವ್ವ, ಮಾರಮ್ಮ, ಗಂಗಮ್ಮ, ಶರಣ ಬಸವೇಶ್ವರ, ಬಸವಣ್ಣ, ಬಸವ, ಆನೆ ವಾಹನಗಳು, ಕುದುರೆ ವಾಹನಗಳು, ಸಿಂಹ, ಹುಲಿ, ಒಂಟೆ, ಕುದುರೆ, ನವಿಲು, ಹಂಸ, ಆಯುಧಗಳು, ಗಂಟೆಗಳು, ದೇವರು–ದೇವತೆಗಳ ಮುಖವಾಡಗಳು, ಪ್ರಭಾವಳಿಗಳು, ಪೀಠಗಳು, ವೀರಭದ್ರ ಕುಣಿತದ ಧಿರಿಸು ತೊಡುಗೆಗಳು, ನಂದಿಕಂಬದಕ್ಕೆ ಬಳಸುವ ಕಳಸ, ಬಳೆಗಳು, ದೃಷ್ಟಿ ಬೊಂಬೆಗಳು, ಹಾಗೇಯೇ ಸಿದ್ಧಿ ಪುರುಷರ ಆಕೃತಿಗಳಲ್ಲಿ ಹಲವಾರು ಶರಣರ, ಸಾಧ್ವಿಗಳು, ಮುಸಲ್ಮಾನರ ಪೀರ್ ಹಬ್ಬದ ಆಚರಣೆಗಳ ಶಿಲ್ಪಗಳು, ತಾಂತ್ರಿಕ ಆಚರಣೆಯ ಶಿಲ್ಪಗಳು, ಧಾರ್ಮಿಕ ಆಚರಣೆಗಳಲ್ಲಿ ಬಳಸುವ ವಸ್ತುಗಳು, ಎತ್ತುಗಳ ಶೃಂಗಾರಕ್ಕೆ ಬಳಸುವ ಹಣೆ ಪದಕಗಳು, ಗಂಟೆಗಳು, ಗೆಜ್ಜೆಗಳು ಒಟ್ಟಾರೆಯಾಗಿ ಧಾರ್ಮಿಕವಾಗಿ ಬಳಸಲ್ಪಡುವ ಎಲ್ಲಾ ರೀತಿಯ ಉಪಕರಣ, ಸಲಕರಣೆಗಳನ್ನು ಬಹಳ ವಿಶೇಷವಾಗಿ ಎರಕದಲ್ಲಿ ರಚನೆಗೊಳ್ಳುತ್ತವೆ.

ಜೈನ ಧರ್ಮದ ತೀರ್ಥಂಕರರು, ಮುನಿಗಳು, ಅವರ ಆಚರಣೆಗೆ ಬಳಸುವಂತಹ ಉಪಕರಣಗಳು, ಚಾಮರಗಳ ಹಿಡಿಕೆಗಳು, ಗಂಟೆಗಳು, ದೇವಾಲಯದ ಮುಂಭಾಗದ ಕಂಬಗಳ ಕವಚಗಳು, ಪಲ್ಲಕ್ಕಿಗಳು, ಅಡ್ಡಪಲ್ಲಕ್ಕಿಗಳು ಹೀಗೆ ಬೇಡಿಕೆಯಲ್ಲಿರುವ ಎಲ್ಲಾ ಬಗೆಯ ಲೋಹ ಶಿಲ್ಪಗಳನ್ನು ಗಾಜರಕೋಟ್ ಶೈಲಿಯಲ್ಲಿ ಸ್ಥಳೀಯ ಶಿಲ್ಪಕಲಾವಿದರು ತಮ್ಮ ಪಾರಂಪರಿಕವಾಗಿ ಸಾಗಿಸಿಕೊಂಡು ಬಂದಿರುವ ಕಲಾತ್ಮಕ ಕೃತಿಗಳನ್ನು ಧಾರ್ಮಿಕ ಸಂಸ್ಕೃತಿಗೆ ಬೇಕಾಗುವ ಶಿಲ್ಪಗಳನ್ನು, ಮೂರ್ತಿಗಳನ್ನು ರಚಿಸಿರುತ್ತಾರೆ.

ಅಧ್ಯಾಯ –5:

ಗಾಜರಕೋಟ್ ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಶಿಲ್ಪಗಳು

ಮಾನವನ ಮನಸ್ಸಿನ ವಿಕಾಸವೇ ಬದುಕಿನ ವಿಕಾಸ, ಸುಖ–ದುಃಖ, ಧ್ಯಾನ, ಸಂತೋಷ ಇವುಗಳ ಸಮ್ಮಿಶ್ರವಾದ ಬದುಕನ್ನು ಸಹ್ಯವಾಗಿಸಿಕೊಳ್ಳಲು, ಮನುಷ್ಯ ಕಲೆಯ ಮಾಧ್ಯಮವನ್ನು ಹುಡುಕಿಕೊಂಡು ಕಾಲಕ್ರಮದಲ್ಲಿ ತನ್ನ ಅವಶ್ಯಕತೆಗೆ ಅನಿವಾರ್ಯವಾದ ಉಪಜೀವನವನ್ನು ನಡೆಸಿಕೊಂಡು ಹೋಗುವಾಗ, ತನ್ನ ಬೇಸರವನ್ನು ಕಳೆಯಲು ಕಲೆಯಲ್ಲಿ ವಿವಿಧ ಪ್ರಕಾರಗಳನ್ನು ಸೃಷ್ಟಿಸಿಕೊಂಡ ಅಂತಹ ಸೃಷ್ಟಿಯಲ್ಲಿ ದೃಶ್ಯಕಲೆಯು ಪ್ರಮುಖವಾದುದು.

ದೃಶ್ಯಕಲೆಯು ಮಾನವನಿಗೆ ಆಕರ್ಷಣೀಯವಾದ ನೋಟವನ್ನು ನೀಡಬಲ್ಲುದುದಾಗಿದೆ. ಅಂದರೆ ನೋಡುವ ಕಣ್ಣುಗಳಿಗೆ ಆನಂದ, ಆಶ್ಚರ್ಯ, ಭಯ, ಬೇಸರ, ಅಸಹ್ಯ, ಆಸೆ, ವಾಂಛೆ ಇನ್ನ್ಯಾವುದೇ ಭಾವನೆಗಳನ್ನು ಪ್ರಾಯೋಗಿಕ ಕ್ರಿಯೆಗಳಿಲ್ಲದೆಯೇ ನೋಟದಲ್ಲಿ ಉಂಟು ಮಾಡುವಷ್ಟು ಪರಿಣಾಮಕಾರಿಯಾದ ಪ್ರಭಾವವನ್ನು ಹೊಂದಿದೆ.

ಸೌಂದರ್ಯದ ಕಲಾ ವಿಶೇಷಗಳು :

ಸೌಂದರ್ಯವೆಂದರೆ ಮನಸೆಳೆಯುವ ಸ್ವರೂಪದ ಚೆಲುವಿನ ಅನುಭವ. ಅದು ಪ್ರೀತಿಯನ್ನು ಸೂಚಿಸಬಹುದು. ಸೂಚಿಸದೆಯೇ ಮನಸೆಳೆಯಬಹುದು. ಅದು ಅಲಂಕಾರಿಕವಾಗಿರಬಹುದು. ಹಾಗಿಲ್ಲದಿರಲೂಬಹುದು. ಆದರೆ ಮನೋಹರತೆಯನ್ನು ಆಕರ್ಷಣೀಯತೆಯನ್ನು ಗ್ರಹಿಸಿ ಆಸ್ವದಿಸುವುದರಿಂದ ಆನಂದವು ಸಿಗುತ್ತದೆ. ಇಂತಹ ಸಂತೋಷದ ಮತ್ತು ಉತ್ತಮ ಸಾಧನೆಯ ಲೋಕದ ಎಲ್ಲ ಜೀವಿಗಳಿಗಿಂತಲೂ ಹೆಚ್ಚಾಗಿ ಮಾನವರಿಗಿರುತ್ತದೆ.

ಸುಂದರತೆಯ ಪ್ರಕೃತಿಯ ಒಡಲುಗಳಲ್ಲಿರಲಿ ಇಲ್ಲವೆ ಕೃತಕವಾಗಿ ಸೃಷ್ಟಿಸುವ ಶಿಲ್ಪಗಳ ಕೃತಿಯಲ್ಲಿ ಕಂಗೊಳಿಸಿರಲಿ, ಸಂಗೀತ, ಸಾಹಿತ್ಯ ಮುಂತಾದ ಕಲೆಗಳಲ್ಲಿ ಸ್ಫುರಿಸಿರಲಿ ಅಥವಾ ಮೆಚ್ಚುಗೆ ಗಳಿಸುವ ಯಾವುದೇ ಯೋಚನೆ ಮಾತು ಕೃತಿಯಲ್ಲಾಗಲಿ ಸೂಕ್ಷ್ಮವಾದ ಅವರ್ಣನೀಯ ವಿಷಯಗಳಲ್ಲಾಗಲಿ ಇರಲಿ,

ಅದು ತನ್ನ ಶೃಂಗಾರ ಸೊಬಗಿನಿಂದ ಜನಸಾಮಾನ್ಯರ ಮನವನ್ನು ಮರಳುಗೊಳಿಸುತ್ತದೆ. ಮತ್ತು ಪಂಡಿತರನ್ನು ಮುಗ್ಧರನ್ನಾಗಿ ಮಾಡುತ್ತದೆ. ಸ್ವಾನುಭವದಿಂದ ಅದು ಆನಂದವುಂಟುಮಾಡುವುದಲ್ಲದೆ ಸತ್ವಾವೃತ್ತಿಯೂ ಸ್ಪರ್ಶಮಾರ್ದವವೂ ಅದರಿಂದ ಮೂಡುಬರುತ್ತದೆ. ಇಂತಹ ರಮಣೀಯತೆಯ ಮೋಹಕತೆಯು ಎಲ್ಲ ರಸಗಳ ತಾಯಿಬೇರು.

ಶಿಲ್ಪಕಲೆ ಈ ಶಬ್ದವೇ ಸೂಚಿಸುವ ಹಾಗೆ ಕಣ್ಣಿಗೆ ಹಬ್ಬವನ್ನುಂಟು ಮಾಡುವಂತೆ, ಕಂಡ ನೋಟವೆಲ್ಲ ಶೃಂಗಾರಮಯವಾಗಿರುವುದಕ್ಕೆ, ಮನಸ್ಸು ಸೌಂದರ್ಯದಿಂದ ಮುದಗೊಳ್ಳುವಂತೆ, ವಿವಿಧ ರೀತಿಯ ವಿನ್ಯಾಸಗಳನ್ನು ಬದುಕೆಂಬ ಜೀವನ ಕಲೆಗೆ ನಮ್ಮ ಜನಪದರು ಅಳವಡಿಸಿಕೊಂಡರು. ಹೀಗಾಗಿ ಜನಪದ ಶಿಲ್ಪಕಲೆಯನ್ನು ಗಾಜರಕೋಟ್ ಶೈಲಿಯಲ್ಲಿ ರಚಿತಗೊಂಡಂತಹುಗಳಲ್ಲಿ ಪ್ರಮುಖವಾಗಿ ಸೌಂದರ್ಯ ಪ್ರಜ್ಞೆಯಿಂದ ಪರಿಗಣಿಸಬೇಕಾಗುತ್ತದೆ.

ಸೌಂದರ್ಯವನ್ನೇ ಮೂಲ ಘಟಕವಾಗಿ ಇಟ್ಟುಕೊಂಡು ಗಾಜರಕೋಟ್ ಶೈಲಿ ಶಿಲ್ಪಗಳನ್ನು ಗಮನಿಸಬಹುದಾಗಿದೆ.

ಗೃಹ ಅಲಂಕಾರಿಕ ವಸ್ತುಗಳಲ್ಲಿನ ಸೌಂದರ್ಯ:

ಪ್ರಾಚೀನ ಕರ್ನಾಟಕದ ಗೃಹ ಮತ್ತು ಗೃಹಲಂಕಾರಣಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮಾಹಿತಿಗಳು ದೊರಕುವುದಿಲ್ಲ. ಸದ್ಯದ ಗೃಹರಚನೆ ಮತ್ತು ಗೃಹಲಂಕಾರಗಳಲ್ಲಿ ಪ್ರಾದೇಶಿಕ ಭಿನ್ನತೆಗಳಿರುವುದನ್ನು ಗುರುತಿಸಬಹುದು. ಇವು ಮುಖ್ಯವಾಗಿ ಆಯಾ ಪ್ರದೇಶಗಳ ಹವಾಮಾನಕ್ಕನುಗುಣವಾಗಿ, ದೊರೆಯುವ ಮೂಲ ವಸ್ತುಗಳು ಹಾಗೂ ಬಳಕೆಯ ವಿಧಾನಗಳಿಗನುವಾಗಿ ರಚನೆಗೊಳ್ಳುವ ಪರಿಕರಗಳಲ್ಲಿ ಸ್ಥಳೀಯ ವೈವಿಧ್ಯತೆಗಳಿಗನುಗುಣವಾಗಿ ಈ ಸೌದರ್ಯಾತ್ಮಕತೆಯನ್ನು ನಾವು ನೋಡಬಹುದಾಗಿದೆ.

ಕರ್ನಾಟಕ ಕರಾವಳಿಯ ಪ್ರದೇಶ ಮತ್ತು ಮಲೆನಾಡು ಪ್ರದೇಶಗಳಲ್ಲಿ ಹೆಚ್ಚು ಮಳೆ ಬೀಳುವುದರಿಂದ ಇಲ್ಲಿ ಜನಪದರ ನಿವಾಸಗಳಲ್ಲಿ ಗೋಡೆಗಳ ವಿನ್ಯಾಸ ಕುಳ್ಳಾಗಿದ್ದು, ಛಾವಣಿ ಇಳಿಜಾರಾಗಿರುತ್ತದೆ. ಇಲ್ಲಿಯ ಮನೆಗಳಲ್ಲಿ ಇದ್ದಿಲು ಸಾಮಗ್ರಿಗಳನ್ನು ಬಳಸಿ ಅರೆದು ಮಾಡಿದ ನಯಗಾರಿಕೆಯನ್ನು ನೆಲ ಮತ್ತು ಗೋಡೆಯ ಕೆಳಮಟ್ಟುಗಳಿಗೆ ಹಚ್ಚುವ ರೂಢಿ ಇದೆಯಲ್ಲದೆ ಕೆಂಪು ಕಾರಣಿಯ ಸರಳ ಅಲಂಕರಣವೂ ಕಂಡುಬರುತ್ತದೆ. ಮನೆಯ ಮುಂದೆ, ಹೆಬ್ಬಾಗಿಲಿನ ಇಕ್ಕೆಲಗಳಲ್ಲಿ ಜಗಲಿ, ಒಳಗೆ ಹಜಾರ ಮತ್ತು ವಿವಿಧ ಗೃಹ ಬಳಕೆಗಾಗಿ ಕೋಣೆಗಳಿರುತ್ತವೆ.

ಅದೇ ಉತ್ತರಕರ್ನಾಟಕದ ಇನ್ನುಳಿದ ಬಯಲು ಪ್ರದೇಶಗಲಲ್ಲಿ ಮಳೆ ಕಡಿಮೆ ಇರುವುದರಿಂದ ಆಯತಾಕಾರದ ಮಾಳಿಗೆ ಮನೆಗಳು, ಒಳಗಡೆ ಮಳಿಗೆಗಳು, ವಿಶಾಲವಾದ ಪಡಶಾಲೆಗಳು ಮುಂತಾದ ಕೋಣೆಗಳೆಲ್ಲ ವಿವಿಧ ವಿನ್ಯಾಸದಿಂದ ಕೂಡಿದ ಲೋಹದ ಶಿಲ್ಪಗಳನ್ನು ಅಳವಡಿಸಿಕೊಂಡಿರುತ್ತಾರೆ.

ಅನುಕೂಲವಂತರ ಮನೆಗಳಲ್ಲಿ ಹೆಬ್ಬಾಗಿಲುಗಳಿಗೆ ಲೋಹದಿಂದ ಎರಕ ಮಾಡಿದ ಮುಖವಾಡಗಳು ಪ್ರಾಣಿಗಳ ತಲೆಗಳು, ಕೀರ್ತಿ ಮುಖಗಳು, ಪಕ್ಷಿಗಳ ಜೋಡಿಗಳು ಮುಂತಾದ ವಿನ್ಯಾಸಗಳಿಂದ ಕೂಡಿದಂತಹುಗಳನ್ನು ಗೃಹಲಕ್ಷಣಗಳಿಗಾಗಿ ಮಾಡಿಸಿಕೊಂಡಿರುತಾರೆ. ಒಂದು ರೀತಿಯಲ್ಲಿ ಹೆಚ್ಚುಗಾರಿಕೆಯೆಂದರೂ ಅದರಲ್ಲಿ ತಪ್ಪೇನಿಲ್ಲ ಆದರೆ ಅವರ ಮನೆತನಗಳ ಗೌರವಕ್ಕೆ ತಕ್ಕುದಾದ ರೀತಿಯಲ್ಲಿ ಮನೆಗಳನು ಕಟ್ಟಿಸಿಕೊಂಡಿರುತ್ತಾರೆ.

ಆಯಾ ಪ್ರದೇಶಗಳಿಗೆ ಅನುಗುಣವಾಗಿ ಅರಮನೆ ಹಾಗೂ ಶ್ರೀಮಂತರ ಮನೆಗಳ ಗೃಹಾಲಂಕರಣ ಬಗೆಗೆ ದೇಪರಾಜನ 'ಸೊಬಗಿನ ಸೊನೆ' ಕೃತಿ ಕೆಲವು ವಿವರಗಳನ್ನು ನೀಡುತ್ತದೆ. ಈ ಕೃತಿಯಲ್ಲಿ ಬರುವ ಚದುರದೇಶವು ಸಸಿವೋಳಲೆಂಬ ಪಟ್ಟಣದ ವರ್ಣನೆ ಹೀಗಿದೆ: "ಅಲ್ಲನ ರಾಜಬೀದಿ ಮುತ್ತಿನ ರಂಗವಲ್ಲಿಯಿಂದಲೂ ಹೊನ್ನಿನ ತೋರನದಿಂದಲೂ ಶೋಭಾಯಾಮಾನವಾಗಿತ್ತು. ಆ ಪೊಳಲ ಬೀದಿ

ಬೀದಿಗಳಲ್ಲಿಯೂ ರನ್ನದ ಉಪ್ಪರಿಗೆಗಳು, ರೇಷ್ಮೆಯ ಬಾವುಟಗಳು, ಚಿನ್ನದ ನವಿಲುಗಳು, ಉಯ್ಯಾಲೆಗಳು, ಕನ್ನಡಿ ಬಿಗಿದ ತೋರಣಗಳು ಕಂಗೊಳಿಸುತ್ತಿದ್ದವು. ಶೃಂಗಾರ ಪೇಟೆ, ಸೂಳಿಗೇರಿ ಮಾತುಳನ ಅರಮನೆಯ ಹೆಬ್ಬಾಗಿಲು ತನಗೆ ಸರಿಸಾಗಿ ಮತ್ತೊಂದಿಲ್ಲವೆಂಬಂತೆ ಮೆರೆಯುತ್ತಿದ್ದವು. ಬಣ್ಣ ಬಣ್ಣದ ಉಪ್ಪರಿಗೆ ಮನೆಗಳು, ಮಣಿಮಯವಾದ ಬಾಗಿಲುಗಳು, ಗಜಶಾಲೆ, ಹಯಶಾಲೆಗಳು ಅಂದಿನ ವೈಶಿಷ್ಟ್ಯಗಳಾಗಿದ್ದವು. ಅಲ್ಲಿ ಗೋಡೆಗಳನ್ನು ಕೊರೆದು ಹಲವು ಹಕ್ಕಿಗಳ ಗೂಡುಗಳು, ಬಾಗಿಲ ಸಹಿತವಾದ ಹಲವಾರು ಪಂಜರಗಳೂ ಸವಡಿದಂತಹ ಬಳೆಗಳು, ಹೊಸ ಮಾಣಿಕ್ಯದ ಪಾದ ಪೀಠಗಳಲ್ಲಿ ಸೇರಿಸಿದ್ದ ಇಂದ್ರ ನೀಲದ ಪತ್ರಿಕೆ, ಮುತ್ತಿನ ಮೈದೊಡವು, ಹೊನ್ನರನ್ನದ ಬಟ್ಟಲುಗಳು ಲತೆ ವನಗಳು, ರನ್ನದ ಜಗಲಿಗಳು, ತಳಿರು ಉಯ್ಯಾಲೆಗಳು, ರನ್ನದಿಂದ ಕಂಡರಿಸಿದ ದಾರಿಗಳು, ಮುತ್ತಿನಗೊಂಡೆಯಗಳು, ಚಿತ್ತಾರದ ಶಿಲ್ಪಗಳ ಮೆಲ್ಕಟ್ಟು, ಮಕರಂದ, ಮಾಲೆಗಳಿಂದ ಅಲಂಕೃತವಾಗಿತ್ತು". ಈ ವರ್ಣನೆಯಲ್ಲಿರುವ ಸೌಂದರ್ಯದ ಸೊಬಗನ್ನು ಗಮನಿಸಿದರೆ ಕಲಾವಂತಿಗೆಯನ್ನು ಗಮನಿಸಬಹುದಾಗಿದೆ.

ಬದುಕಿನ ಉದ್ದಕ್ಕೂ ಹೊಟ್ಟೆ, ಬಟ್ಟೆ, ವಸತಿ– ಈ ಮೂರು ಮಾನವ ಬದುಕಿಗೆ ಮೊದಲ ಪ್ರಶಸ್ತ್ಯದ ಅಂಶಗಳು. ಇವುಗಳ ನಿರಂತರ ಹೋರಾಟವೇ ಜೀವನ. ಇಂತಹ ಜೀವನವನ್ನು ಬದುಕುವುದರೊಡನೆ ಅದು ಸಹ್ಯವಾಗುವಂತೆ ಕಲಾತ್ಮಕ ಅಂಶಗಳನ್ನು ಅದರೊಡನೆ ಸಂಯೋಜನೆಗೊಳಿಸಿಕೊಳ್ಳಲಾಗಿದೆ. ತಮ್ಮ ನಿತ್ಯದ ಚಟುವಟಿಕೆಗಳನ್ನು ಕಲಾತ್ಮಕವಾಗಿ ಕಂಡ ಜನಪದರು ಹಾಸು, ಹೊದಿಕೆ, ಮನೆ, ಗೋಡೆ, ಬಾಗಿಲು, ಕಿಟಕಿ, ವಾಹನಗಳು, ಬಳಸುವ ಕೃಷಿವಸ್ತುಗಳು, ನಿತ್ಯ ದರ್ಶಿಸುವ ದೇವಾಲಯಗಳಲ್ಲಿ ಮನ ಸೂರೆಗೊಳ್ಳುವಂತಹ ಸೌಂದರ್ಯಯುತವಾದ ವಿನ್ಯಾಸಗಳನ್ನು ರೂಪಿಸಿಕೊಂಡು ಅವುಗಳ ಮೂಲಕ ತಮ್ಮ ಸಂತೋಷ, ಉಲ್ಲಾಸಗಳನ್ನು ಪ್ರಕಟಿಸುತ್ತಿರುವರು.

ಮನೆಗಳಲ್ಲಿ ಉಪಯೋಗಿಸುವ ಹೂದಾನಿ, ಮೇಜು, ಬಾಚಣಿಗೆ ಹೀಗೆ ಅವರ ಹಿತಾಸಕ್ತಿಗೆ ತಕ್ಕಂತಹ ವಸ್ತುಗಳು ನೇರವಾಗಿ ವಸ್ತುಗಳ ರೂಪಗಳನ್ನು ಮಾತ್ರ ಹೊಂದಿರದೆ ಅವುಗಳಲ್ಲಿ ಆಕರ್ಷಣೀಯ ಚಿತ್ತಾಕರ್ಷಕ ವಿನ್ಯಾಸಗಳಿದ್ದರೆ ಅವುಗಳ ಮೂಲಕ ಅವರು ಅದನ್ನು ಗುರುತಿಸುವುದರೊಂದಿಗೆ, ಉಪಯೋಗಿಸುವಾಗ ಅನುಭವವನ್ನು ಪಡೆಯುತ್ತಾರೆ.

ಅಡಿಕೆ ಕತ್ತರಿಸುವ ಸಾಧನ, ಗಂಧ ತೇಯುವ ಸಾಧನ, ಪೂಜಾ ಸಾಮಾಗ್ರಿಗಳು, ಮಕ್ಕಳ ಆಟಿಕೆಗಳು ಇತ್ಯಾದಿಗಳಲ್ಲಿ ಕಂಡುಬರುವ ವಿನ್ಯಾಸಗಳು ಉಪಯುಕ್ತತೆ ಜೊತೆಗೆ ಸೌಂದರ್ಯವನ್ನು ಪ್ರಕಟಿಸುತ್ತವೆ.

ಅಧ್ಯಾಯ –6:

ಸಮಾರೋಪ

ಜಾನಪದ ಶಿಲ್ಪವು ಸಮಾಜ-ಸಂಸ್ಕೃತಿಗೆ ಸೇರಿದ ಎಲ್ಲರಿಗೂ ಯಾವ ರೀತಿಯ ಕಲ್ಪನೆಯಲ್ಲಿ, ಆಲೋಚನೆಯಲ್ಲಿ ಸ್ಥಾನವನ್ನು ಪಡೆದಿದೆ ಎಂಬುದನ್ನು ಸಮಗ್ರ ಅಭ್ಯಾಸ ಮಾರ್ಗವನ್ನು ಅನುಸರಿಸಿ, ಮಾನವ, ತನ್ನ ದೈಹಿಕ ಮತ್ತು ಬೌದ್ಧಿಕ, ಪ್ರಾಕೃತಿಕದ ವಿಕಾಸ ಆದಂದಿನಿಂದ ತನ್ನದೆನ್ನುವ ಸಂಸ್ಕೃತಿಯನ್ನು ಹಂತ ಹಂತವಾಗಿ ಭಿನ್ನವಾದ ಅಭಿವೃದ್ಧಿಯನ್ನು ತಲುಪಿದ್ದಾನೆ. ತನ್ನಲ್ಲಿಯ ಬುದ್ದಿವಂತಕೆಯನ್ನು ಕುಶಲಗಾರಿಕೆಯನ್ನು ಕಲೆಯ ಮುಖಾಂತರ ಮುಂದಿನ ಪೀಳಿಗೆಗೆ, ಸಮಾಜಕ್ಕೆ ನೀಡಿರುವ ಸಂಪನ್ಮೂಲಗಳನ್ನು ವರ್ಣನಾತ್ಮಕ ದೃಷ್ಟಿಯಲ್ಲಿ ಅಭ್ಯಸಿಸಿ, ತುಲನಾತ್ಮಕ ವಿಶ್ಲೇಷಣೆಯನ್ನು ಗುರುತಿಸುವುದು ಅವಶ್ಯವಾಗಿದೆ. ಜನಪದ ಸಂಸ್ಕೃತಿಯನ್ನು ಒಳಗೊಂಡ ಉಪಸಂಸ್ಕೃತಿಗಳ ಅಧ್ಯಯನವು ತೀರಾ ಪ್ರಸ್ತುತವಾದದ್ದಾಗಿದೆ.

ಕರ್ನಾಟಕದಲ್ಲಿ ಕಲಾಪ್ರಕಾರಗಳು ಶ್ರೀಮಂತಿಕೆಯ ಕಾರಣದಿಂದ ಅವು ಇಂದಿಗೂ ಜನಮಾನಸಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ.

ಜಾನಪದ ಶಿಲ್ಪಗಳು ಃ

ಗ್ರಾಮದೇವತೆಗಳ (ಶಿಲ್ಪಗಳನ್ನು) ವಿಗ್ರಹಗಳನ್ನು ಮಾಡುವಾಗ, ಶಿಲ್ಪಿಯು ಸ್ನಾನಮಾಡಿ ಮಡಿಯಿಂದ ರಚಿಸುತ್ತಿರುವಾಗ ದೇವತೆಯ ಹೆಸರನ್ನು ಜಪಿಸುತ್ತ ವಿಗ್ರಹವನ್ನು ಏಕಾಂಗಿಯಾಗಿ ಏಕಾಂತ ಸ್ಥಳದಲ್ಲಿ ಕುಳಿತು ರಚಿಸುತ್ತಿದ್ದರೆಂದೂ, ಆ ದೇವತೆಯ ವಿಗ್ರಹಪೂರ್ತಿಗೊಳ್ಳುವವರೆಗೂ ವಿಗ್ರಹದ ಮುಖವನ್ನು ಬಟ್ಟೆಯಿಂದ ಮುಚ್ಚಿಡುತ್ತಿದ್ದು, ಪೂರ್ತಿಗೊಂಡ ವಿಗ್ರಹವನ್ನು ಗರ್ಭಗುಡಿಯಲ್ಲಿ ಕೂಡ್ರಿಸಿದ ನಂತರ ಮುಖಕ್ಕೆ ಇದ್ದ ಬಟ್ಟೆಯನ್ನು ಬಿಚ್ಚಿ, ಪೂರ್ತಿಗೊಂಡ ವಿಗ್ರಹವನ್ನು ತೋರಿಸುತ್ತಿದ್ದರೆಂದು ತಿಳಿದುಬರುತ್ತದೆ. ಒಂದು ವೇಳೆ ಶಿಲ್ಪಿಯು ಮೈಲಿಗೆಯಾದರೆ, ಏಕಾಂತ ಸ್ಥಳದಲ್ಲಿ ಗುಪ್ತವಾಗಿ ರಚಿಸದೇ ಇದ್ದ ವಿಗ್ರಹಗಳು ಎಷ್ಟು ಸುಂದರವಾಗಿದ್ರೂ ಪೂಜ್ಯಯೋಗ್ಯವಲ್ಲವೆಂದೂ ಹಾಗೆ ರಚನೆಗೊಂಡ ವಿಗ್ರಹದಿಂದ ಶಿಲ್ಪಿಗೆ ಇಲ್ಲವೇ ಗ್ರಾಮ ಜನರಿಗೆ ಅಪಾಯವೆಂಬ ನಂಬಿಕೆಗಳೂ ಇದ್ದುವೆಂದು ತಿಳಿದುಬರುತ್ತದೆ.

ದೇವಾಲಯಗಳಲ್ಲಿ ಮೂಲ (ಶಿಲ್ಪ) ವಿಗ್ರಹಗಳಿಗೆ ಜನರ ಕೆಟ್ಟ ದೃಷ್ಟಿ ತಾಗಬಾರದೆಂದು ಹಲವಾರು ಶಿಲ್ಪಗಳನ್ನು ರಚಿಸುತ್ತಿದ್ದರು. ಇವುಗಳಲ್ಲಿ ಪ್ರಾಣಿ, ಪಕ್ಷಿ, ಹೂವು, ಎಲೆ, ಬಳ್ಳಿ, ಮಿಥುನ ಮುಂತಾದವುಗಳನ್ನು ಕೊರೆಯುತ್ತಿದ್ದರು. ಮಗುವಿಗೆ ದೃಷ್ಟಿತಾಗಬಾರದೆಂದು ಕೆನ್ನೆಗೆ ಕಪ್ಪು ಚುಕ್ಕೆಯನ್ನು ಇಡುವಂತೆ ಶಿಲ್ಪಿಯು ಇಂತಹ ವಿಧಾನವನ್ನು ಅನುಸರಿಸಬೇಕೆಂಬ ನಂಬಿಕೆಗಳಿವೆ.

ಹಳೆಯ ದೈವಗಳ:ನ್ನು ಶಿಲ್ಪಗಳಲ್ಲಿ ಮೂಡಿಸುವಾಗ ವಿಚಿತ್ರವಾದ ಕಲ್ಪನೆಗಳು ಕಂಡುಬರುತ್ತವೆ. ತಾಯ್ತನದ ಹಿರಿಮೆಯನ್ನು ಹೇಳುವಾಗ ಹೆಣ್ಣು ಮೂರ್ತಿಗೆ ವಿಶಾಲವಾದ ವಕ್ಷಸ್ಥಲ, ಉತ್ಪ್ರೇಕ್ಷಿತ ಸ್ತನಗಳು, ದೊಡ್ಡದಾದ ನಡು, ಕಣ್ಣಿಗೆ ಕಾಣುವಂತಹ ಯೋನಿ ಪ್ರದೇಶ ಇವನ್ನು ಅಳವಡಿಸುತ್ತಿದ್ದರು.

ಪ್ರತಿಮೆಗಿಂತಲೂ ಮುಖ್ಯವಾದುದು ಧ್ಯಾನ ಶ್ಲೋಕವೆಂದು ಶಿಲ್ಪ ಶಾಸ್ತ್ರದಲ್ಲಿದೆ. ದೇವತೆಗಳಿಗೆ ಸಂಬಂದಿಸಿದಂತೆ ಶ್ಲೋಕಗಳು ಇರುವವು. ಇವುಗಳಲ್ಲಿ ದೇವತೆಯ ರೂಪದ ನಿರ್ದೇಶನವಿರುತ್ತದೆ. ಭಂಗಿಯ ಆಯುಧಗಳ ವಿವರವೂ ಇರುತ್ತದೆ. ಈ ಧ್ಯಾನ ಶ್ಲೋಕ ಶಿಲ್ಪಗಳು ಮುಖ್ಯ ಭಕ್ತನಿಗೂ ಮುಖ್ಯ. ಶಿಲ್ಪಿಗೆ ಪ್ರತಿಮಾಲಕ್ಷಣದ ಶಿಕ್ಷಣವೂ ಅಗತ್ಯವೆಂದು ಪರಿಗಣಿಸುತ್ತಾರೆ. ಆದರೆ ಕೆಲವೊಂದು ಶಿಲ್ಪಿಗಳಿಗೆ ಮಾಡಿಸುತ್ತಾರೆ. ಶಿಲ್ಪಿಗೆ ಇವು ನಿರ್ದೇಶಕ ಸೂತ್ರಗಳಿದ್ದಂತೆ. ಧ್ಯಾನಶ್ಲೋಕದಲ್ಲಿ ಬರುವ ಮೂರ್ತಿಯ ವರ್ಣನೆ, ಪೂಜೆಯಿಂದ ಒದಗುವ ತಾತ್ವಿಕ ಪ್ರಯೋಜನ, ಫಲ, ಇವೆಲ್ಲವನ್ನು ಶಿಲ್ಪಿ ನೆನಪಿನಲ್ಲಿರಿಸಿಕೊಳ್ಳಬೇಕು.

ಶಿಲ್ಪಿಯು ತಾನು ನಿರ್ಮಿಸುತ್ತಿರುವ ಮೂರ್ತಿಗೆ ಸಂಭಂಧಿಸಿದ ಧ್ಯಾನಶ್ಲೋಕವನ್ನು ಪಠಿಸುತ್ತಿದ್ದಂತೆಯೇ ಅವನ ಮನಸ್ಸಿನಲ್ಲಿ ದೇವತಾಮೂರ್ತಿ ಕ್ರಮ ಕ್ರಮವಾಗಿ ಮೈದಳೆಯುತ್ತದೆ. ಧ್ಯಾನದಿಂದಲೇ ಈ ರೂಪವನ್ನು ಶಿಲ್ಪಿಗಳು ಕಾಣುತ್ತಾರೆ. (ಧ್ಯಾನೇನೈವ-ಪಶ್ಯಂತಿ ತದ್ರುಪಂ) ಹೀಗೆ ಶಿಲ್ಪಿಯು ತನ್ನಲ್ಲಿ ಸ್ಪುಟವಾಗಿ ಕಂಡ ಆಕಾರವನ್ನೇ ಮರದಲ್ಲೋ ಶಿಲೆಯಲ್ಲೊ ಕಡಿಯುತ್ತಾನೆ. ಮನಸ್ಸಿನಲ್ಲಿ ಧ್ಯಾನದಿಂದಾಗಿ ಮೈದಳೆದ ಪ್ರತಿಮೆಯನ್ನು ಹೊರ ಹೊಮ್ಮಿಸುವುದಷ್ಟೇ ಶಿಲ್ಪಿಯ ಕೆಲಸವಾಗಿದೆ. "ಸ್ಕಂದಪುರಾಣ" ಪ್ರತಿಷ್ಠಾ ಖಂಡದಲ್ಲಿ ಶಿವನು ಪಾರ್ವತಿಗೆ ಹೀಗೆ ಹೇಳುವನು.

'ಶಿಲ್ಪಿಯೊಲಗೆ ಲಿಂಗ ಅಡಗಿದೆ, ಲಿಂಗದೊಳಗೆ ಶಿಲ್ಪ ಅಡಗಿದ್ದಾನೆ. ಇಬ್ಬರಿಗು ಯಾವ ಭೇಧವೂ ಇರದು, ಶಿಲ್ಪಿತಾನೇ ದೇವತಾಮೂರ್ತಿಯಾದರೆ, ಮಾತ್ರ ದೇವತಾ ಮೂರ್ತಿಯನ್ನು ಮಾಡುವುದು ಸಾಧ್ಯ'.

"ಕಶ್ಯಪ" ಶಿಲ್ಪದಲ್ಲಿ ಹೀಗೆ ಹೇಳಿರುವನು,

"ಮೂರ್ತಿಶಿಲ್ಪಕ್ಕೆ ಪೂರ್ವಸಿದ್ಧತೆಯಾಗಿ ದೇವಶಿಲ್ಪ ಮತ್ತು ಭಾವಶಿಲ್ಪಗಳಿರಬೇಕು, ಹೀಗಿಲ್ಲವಾದರೆ ಶಿಲ್ಪಿಯು ಕೈಗೊಂಡ ಕೆಲಸ ಊರ್ಜಿತವಾಗದು, ಅನುಭವದಿಂದಲೂ ಪರಿಶ್ರಮದಿಂದಲೂ ಜಾಣತನದಿಂದಲೂ ಪ್ರತಿಮೆ ಲಕ್ಷಣವಾಗಿ ಮುಗಿದರೂ ಅದರಲ್ಲಿ ಕಳೆಕೊಡಲಾರದು".

ಶಿಲ್ಪ ಮತ್ತು ಶೈಲಿ :

ಶಿಲೆಯಲ್ಲಿ ಆಕಾರವನ್ನು ಕಂಡರಿಸುವಾಗ ಮಾಡುವುದಕ್ಕಿಂತ ಬಿಡಿಸುವುದು, ಕಡೆಯುವುದು ಮುಖ್ಯವಾಗಿರುತ್ತದೆ. ಶಿಲ್ಪಿಯು ಶಿಲೆಯಲ್ಲಿ ಆಕಾರವೊಂದನ್ನು ಕಂಡು ಆಕಾರವನ್ನು ಸೆರೆಯಿಂದ ಬಿಡಿಸುವನು. ಅಂದರೆ ಅನಗತ್ಯ ಭಾಗಗಳನ್ನು ತೆಗೆದು ಹಾಕಿದರೆ ಶಿಲ್ಪಕೃತಿ ಆಯಿತು ಎಂದರ್ಥ.

ಕಲೆಯು ಇತಿಹಾಸವನ್ನು ಅವಲೋಕಿಸಿದಾಗ "ಶೈಲಿ ಪ್ರಮುಖ ಪಾತ್ರ ವಹಿಸುತ್ತದೆ. ಶಿಲ್ಪಿಯು ಆಂತರಿಕ ಭಾವಾವೇಶ ಹಾಗೂ ಆಕಾಲದ ಆ ಪ್ರಾಂತದ ಪ್ರವೃತ್ತಿಯನ್ನು ಸಹ ಇದರಿಂದ ಗುರುತಿಸಬಹುದಾಗಿದೆ.

ಅನೇಕ ಜನಪದ ಕಲಾಪ್ರಕಾರಗಳಲ್ಲಿ ಈ ಗಾಜರಕೋಟ್ ಲೋಹ ಶಿಲ್ಪಗಳು ಸೀಮಿತ ವ್ಯಾಪ್ತಿಯಿಂದ ಕೂಡಿದುದಾಗಿದೆ ಎಂದೆನಿಸಿತ್ತು. ಆಳವಾಗಿ ಅಧ್ಯಯನ ಮಾಡುತ್ತಾ ಸಾಗಿದಂತೆ ಕಂಡು ಅದರ ವಿಶಾಲತೆಯು ಅಚ್ಚರಿಯನ್ನುಂಟುಮಾಡಿತು.

ನಾಡಿನ ಶಿಲ್ಪ ಸಂಸ್ಕೃತಿಗೆ ನೀಡಿದ ಅಪಾರ ಕೊಡುಗೆಗಳಲ್ಲಿ ಜನಪದರ ಪಾತ್ರ ಸಣ್ಣದಿಲ್ಲ. ನಮ್ಮ ಸಂಸ್ಕೃತಿಯ ಸೌರಭಕ್ಕೆ ಮೂಲ, ಜನಪದ ಶಿಲ್ಪಿಗಳೆಂಬ ಆಶಯದ ಹಿನ್ನಲೆ ಅವರುಗಳ ಕೃತಿ ಮೌಲ್ಯಗಳನ್ನು ಪ್ರಪಂಚಕ್ಕೆ ತಿಳಿಯಪಡಿಸುವ ಆಶಯದಲ್ಲಿ ಕರ್ನಾಟಕ ಶಿಲ್ಪಕಲ ಅಕಾಡೆಮಿಯ ಫೆಲೋಷಿಪ್ ಯೋಜನೆಗೆ ಈ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಶಿಲ್ಪಕಲಾ ಸಾಂಸ್ಕೃತಿಕ ಲೋಕದ ಕಲಾ ಬದುಕಿನ ಮೊದಲ ಹೆಜ್ಜೆಯ ಗುರುತುಗಳಲ್ಲಿ ಜನಪದ ಶಿಲ್ಪಕಾರರ ಹಾದಿಯು ಕೂಡ ಮುಖ್ಯವಾಗಿದೆಯೆಂಬುದನ್ನು ಸಮರ್ಥಿಸುತ್ತ, ಗಾಜರಕೋಟ್ ಲೋಹ ಶಿಲ್ಪಕಲಾವಿದರ ವಯಕ್ತಿಕ, ವ್ಯಕ್ತಿಗತ ಅಧ್ಯಯನಕ್ಕೆ ಅವಕಾಶ ನೀಡದೆ ಅಲ್ಲಿಯ ಸಾಂಸ್ಕೃತಿಕ, ಧಾರ್ಮಿಕ ಪರಿಸ್ಥಿತಿಗಳ ಆಧಾರದಲ್ಲಿ ಪ್ರಸ್ತುತ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಕ್ಷೇತ್ರಕಾರ್ಯದುದ್ದಕ್ಕೂ ಸಾವಿರಾರು ಛಾಯಚಿತ್ರಗಳನ್ನು ಸಂಗ್ರಹಿಸಲಾಗಿದ್ದರೂ, ಅಕಾಡೆಮಿಯ ನಿಯಮಾನುಸಾರ ಪುಟಗಳ ಸೀಮಿತಕ್ಕೆ ಒಳಪಟ್ಟು ಇಲ್ಲ ನೀಡಲಾಗಿದೆ. ಮುದ್ರಣ ಸಂದರ್ಭದಲ್ಲಿ ಸೂಚಿಸಿದಲ್ಲಿ ಅವುಗಳ ಮುದ್ರಣಕ್ಕೂ ಸಹಕರಿಸಲಾಗುವುದು.

ಈ ವಿಶಾಲ ಕ್ಷೇತ್ರಕಾರ್ಯವನ್ನು ಅನುಸರಿಸಿಕೊಂಡು ರಚಿಸಿರುವ ಪ್ರಸ್ತುತ ಪ್ರಬಂಧವನ್ನು ಆರು ಅಧ್ಯಾಯಗಳನ್ನಾಗಿ ವಿಂಗಡಿಕೊಂಡು ನಿರೂಪಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಕೆಲವು ಜನಪದ ಶಿಲ್ಪಗಳು ಸಾಮಾನ್ಯವಾಗಿ ಆಯಾ ಪ್ರದೇಶಕ್ಕೆ ಸೀಮಿತ ಹಾಗೂ ವಿಶಿಷ್ಟವೆನಿಸುವಂತೆ ಕಂಡುಬರುತ್ತವೆ. ಅವು ಆಯಾ ಪ್ರದೇಶದ ಜನಾಂಗಿಕ ಧಾರ್ಮಿಕ ಹಿನ್ನೆಲೆಯನ್ನು,

ಭೌಗೋಳಿಕ ಪರಿಸರವನ್ನು ಅವಲಂಬಿಸಿ ರೂಪು ಪಡೆದಂತೆ ತೋರುತ್ತದೆ. ಹೀಗೆ ಗಾಜರಕೋಟ್ ಶಿಲ್ಪಕಲೆಯ ಅಧ್ಯಯನದ ವಿಧಾನ, ಸ್ವರೂಪ, ವ್ಯಾಪ್ತಿ ಮತ್ತು ಉದ್ದೇಶಗಳನ್ನು ಸಾಂಸ್ಕೃತಿಕ ಪರಿಚಯದೊಂದಿಗೆ ಈ ಮೊದಲನೆಯ ಅಧ್ಯಾಯ ಒಳಗೊಂಡಿದೆ.

ಜನಪದ ಶಿಲ್ಪಕಲೆಗಳ 'ಉಗಮ ಮತ್ತು ವಿಕಾಸಗಳನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸ್ಥೂಲವಾಗಿ ಚರ್ಚಿಸಲಾಗಿದೆ. ಕಲೆಯ ರೂಪನಿಷ್ಪತ್ತಿ, ಕಲೆಯನ್ನು ಅರ್ಥೈಸುವಿಕೆ. ಪಾಚೀನ ಕಾಲದಲ್ಲಿ ಕಲೆ ಮತ್ತು ವಿದ್ಯೆಗಳು ಸಮಾನಾರ್ಥದಲ್ಲಿ ಬಳಕೆಗೊಂಡ ಬಗೆ, ಅರವತ್ನಾಲ್ಕು ಕಲೆಗಳು, ಅವುಗಳಲ್ಲಿ ಚಿತ್ರಕಲೆ, ಶಿಲ್ಪಕಲೆ, ಲಲಿತಕಲೆ ಮತ್ತು ಕುಶಲ ಕಲೆಗಳ ಅರ್ಥ ಸ್ವರೂಪ, ಲಲಿತ ಕಲೆಗಳಲ್ಲಿ ಒಂದಾದ ಶಿಲ್ಪಕಲೆ – ಅದು ಸರ್ವ ಕಲೆಗಳಿಗೆ ಆಧಾರಭೂತವಾದ ಮತ್ತು ಶ್ರೇಷ್ಠವಾದ ಕಲೆ ಎಂಬುದರ ಕುರಿತಾಗಿರುವ ಪ್ರಾಚೀನ ಉಲ್ಲೇಖಗಳ ವಿವೇಚನೆಯನ್ನು' ಮಾಡಿ ಅಧ್ಯಯನ ಮಾಡಲಾಗಿದೆ. ಶಿಷ್ಟಪದ ಶಿಲ್ಪಕಲೆ ಮತ್ತು ಜನಪದ ಶಿಲ್ಪಕಲೆಯ ಸ್ವರೂಪ, ಲಕ್ಷಣ, ಇವುಗಳ ಪರಿಸ್ಪರ ಸಂಬಂಧ ವಿವರಣೆಯೊಂದಿಗೆ ಗಾಜರಕೋಟ್ ಶಿಲ್ಪಕಲೆಯ ಮುಂದುವರೆದ ರೂಪವಾಗಿ ಶಿಷ್ಟಪದ ಶಿಲ್ಪಕಲೆಯ ಬೆಳವಣಿಗೆ ಹಾಗೂ ಶಿಷ್ಟ ಶಿಲ್ಪಕಲೆಯ ಸುಧಾರಿತ, ನೂತನ ಶೈಲಿಗಳಿಗೆ ಹೇಗೆ ಸಂಪ್ರದಾಯಿಕ ಶೈಲಿ ಶಿಲ್ಪ ಮೂಲವೋ ಹಾಗೆಯೇ ಜನಪದ ಶಿಲ್ಪಕಲೆಗೆ ಗಾಜರಕೋಟ್ ಶಿಲ್ಪ ಶೈಲಿಯೂ ಮೂಲವೆಂಬುದನ್ನು ಮೊದಲನೆ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಗಾಜರಕೋಟ್ ಲೋಹ ಮಾಧ್ಯಮದ ಶಿಲ್ಪಗಳ ವರ್ಗೀಕರಣದ ಅವಶ್ಯಕತೆಯನ್ನು ಹೇಳುತ್ತ, ಪ್ರಸ್ತುತ ಅಧ್ಯಯನದಲ್ಲಿ ಮಾಡಿಕೊಂಡ ವರ್ಗೀಕರಣವನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಗಾಜರಕೋಟ್ ಶಿಲ್ಪಗಳ ನಿರ್ಮಾಣದ ಶೈಲಿ ಮತ್ತು ಅವುಗಳ ಎರಕದ ವಿಧಾನ, ಹಂತ ಹಂತದ ವಿವರಣೆಗಳೊಂದಿಗೆ ಮಾಧ್ಯಮದ ವೈಶಿಷ್ಟ್ಯ ಹಾಗೂ ಸಂಪ್ರದಾಯಿಕ ಎರಕ ಮತ್ತು ಇತರೆ ಎರಕದ ಶೈಲಿಗಳ ಬಗ್ಗೆ ಮೂರ್ತಿ ನಿರ್ಮಾಣದ ವೈವಿಧ್ಯತೆಗಳ ಚರ್ಚಿಸಲಾಗಿದೆ.

ಈ ಅಧ್ಯಾಯವು ಗಾಜರಕೋಟ್ ಲೋಹ ಶೈಲಿ ಶಿಲ್ಪಗಳ ಒಟ್ಟಾರೆ ಅಧ್ಯಯನದಲ್ಲಿ ಪ್ರಮುಖ ಅಧ್ಯಾಯವಾಗಿದ್ದು, ಗಾಜರಕೋಟ್ ಕೇಂದ್ರಿತವಾದ ಶಿಲ್ಪಕಲಾವಿದರ ಪ್ರಾಮುಖ್ಯತೆಗೆ ಒತ್ತನ್ನು ಇಲ್ಲಿ ನೀಡಲಾಗಿದೆ.

ನಾಲ್ಕನೆಯ ಅಧ್ಯಾಯವು ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಧಾರ್ಮಿಕ ಶಿಲ್ಪಗಳನ್ನು ಕುರಿತಾದುದಾಗಿದ್ದು, ಧಾರ್ಮಿಕ ಹಿನ್ನೆಲೆಯ ದೈವೀ ಪರಿಕಲ್ಪನೆಯಲ್ಲಿ ಮತ್ತು ಆರಾಧನಾ ಸಂದರ್ಭಗಳಲ್ಲಿ ಜನಪದ ಗಾಜರಕೋಟ್ ಲೋಹ ಶಿಲ್ಪಕಲೆ ಬೆಳೆದು ಬಂದಂತಹುದರ ಬಗೆಗೆ ವಿವೇಚನೆ ಇಲ್ಲಿದೆ. ಜನಪದರು ದೇವರ ಬಗೆಗೆ ಮಾಡಿದ ಆಚರಣೆಗಳು, ಆರಾಧನೆಗಳು, ಸಂಪ್ರದಾಯಗಳು ಲೋಹ ಶಿಲ್ಪಗಳಿಗೆ ಪ್ರೇರಕವಾಗಿವೆ. ಒಂದು ರೀತಿಯಲ್ಲಿ ಶರಣ ಸಂಸ್ಕಾರಕ್ಕೆ ಮೂಲ ಸ್ವರೂಪಗಳನ್ನು ಈ ಲೋಹ ಶಿಲ್ಪಗಳು ಕೊಡುಗೆಯಾಗಿ ನೀಡಿರುವುದಕ್ಕೆ ಸಾಕ್ಷಿಗಳು ಇಲ್ಲಿವೆ. ದೇವರ ವಿಗ್ರಹಗಳು, ಮೂರ್ತಿಗಳು, ಪ್ರಭಾವಳಿಗಳು, ದೇವಾಲಯ, ಮಠ–ಮಾನ್ಯಗಳು, ಅರಮನೆ, ಗುರುಮನೆಗಳಲ್ಲಿ ಬಳಕೆಯಾದಂತಹ ಪೂಜಾ ಸಾಮಗ್ರಿಗಳು, ನಂದಿಕೋಲುಗಳು, ನಂದಿಕುಣಿತ ಪರಿಕರಗಳು, ಅಲಂಕಾರಿಕ ಆಭರಣಗಳು, ಶಿವಶರಣರ ವಿಗ್ರಹಗಳು, ಗಾಜರಕೋಟ್ ಶೈಲಿಯಲ್ಲಿ ಧರ್ಮ ಮೂಲವಾಗಿ ರಚನೆಗೊಂಡಿರುವಂತಹುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಐದನೆಯ ಅಧ್ಯಾಯವು ಗಾಜರಕೋಟ್ ಲೋಹ ಶಿಲ್ಪಗಳಲ್ಲಿ ಸೌಂದರ್ಯಾತ್ಮಕ ಶಿಲ್ಪಗಳು ಮೂಲಕ ಜನಪದರ ಸೌಂದರ್ಯಮೂಲ ಅಭಿವ್ಯಕ್ತಿಯ ಸಾಧನವಾಗಿ ಜಾನಪದ ಶಿಲ್ಪ ಶೈಲಿಯಾದ ಈ ಗಾಜರಕೋಟ್

ಲೋಹ ಶಿಲ್ಪಕಲೆ ಬಂದುದನ್ನು ವಿವರಿಸುತ್ತಾ, ಇದರಲ್ಲಿ ಪ್ರಯೋಜನಮೂಲ ಮತ್ತು ಮನರಂಜನಮೂಲ ಶಿಲ್ಪಗಳೆಂಬ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಪ್ರಯೋಜನಮೂಲ ಲೋಹ ಶಿಲ್ಪಗಳು ಗೋಡೆಯ ಮೇಲೆ ತೂಗು ಹಾಕುವ ಶಿಲ್ಪಗಳು, ಗೃಹಾಲಂಕರಣದ ಶಿಲ್ಪವಿನ್ಯಾಸಗಳು, ಗೊಂಬೆಗಳು, ಅಡಿಕೆ ಕತ್ತರಿಗಳು, ಕಪಾಟುಗಳ ವಿನ್ಯಾಸಗಳು ಇತ್ಯಾದಿಗಳನ್ನು ಇಲ್ಲಿ ಐದನೆ ಅಧ್ಯಾಯಕ್ಕೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ವೃತ್ತಿಯಾಗಿ ಬೆಳೆದುಬಂದಂತಹ ಈ ಗಾಜರಕೋಟ್ ಲೋಹ ಶಿಲ್ಪಕಲೆಯನ್ನು ವೃತ್ತಿಮೂಲ ಜನಪದ ಶಿಲ್ಪಕಲೆಯ ಪ್ರಕಾರದಲ್ಲಿ ಮತ್ತು ಇವುಗಳಿಂದ ಪ್ರೇರಣೆಗೊಂಡು ಸುಧಾರಿತ ಲೋಹ ಶಿಲ್ಪ ಶೈಲಿಗಳ ಉಗಮಕ್ಕೆ ಗಾಜರಕೋಟ್ ಶೈಲಿಯ ಕೊಡುಗೆ ಹಾಗೂ ಸಮಕಾಲೀನ ಶಿಲ್ಪಕಲಾವಿದರು ಬೆಳೆಸುತ್ತಿರುವ ಪರಿಯನ್ನು, ಇಂದಿನ ಯುವ ಪೀಳಿಗೆಯವರು ಇದರ ಪ್ರಭಾವಕ್ಕೆ ಒಳಗಾಗಿರುವ ಬಗೆಯನ್ನು ವೃತ್ತಿನಿರತರ ಸಾಧಕ ಭಾಧಕಗಳನ್ನು, ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಲಾಗಿದ್ದು, ಸಂಕ್ಷಿಪ್ತ ಸಮಾಲೋಚನೆ ಹಾಗೂ ಪ್ರಸ್ತು ಅಧ್ಯಯನದಿಂದ ಹೊರಬಂದ ಪ್ರಮುಖ ಸಂಗತಿಗಳ ಸಮೀಕ್ಷೆಯೂ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಪ್ರಸ್ತುತ ಪ್ರಬಂಧದ ಅಧ್ಯಯನಕ್ಕಾಗಿ, ಕರ್ನಾಟಕದ ಯಾದಗಿರಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಗಾಜರಕೋಟ್ ಗ್ರಾಮದಲ್ಲಿ, ಹಲವಾರು ಗ್ರಾಮಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಲಾಗಿದೆ.್ಲ ಗಾಜರಕೋಟ್ ಲೋಹ ಶಿಲ್ಪಗಳ ಸಂಗ್ರಹ ಮತ್ತು ಸಂಪ್ರದಾಯಿಕ ಲೋಹ ಎರಕದ ಇತರೆ ಶೈಲಿ ಶಿಲ್ಪಗಳ ತಯಾರಿಕೆಯ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಅಧ್ಯಯನಕ್ಕೆ ಬಳಸಿಕೊಂಡ ಛಾಯಾಚಿತ್ರಗಳು, ಪ್ರಶ್ನಾವಳಿಗಳು, ನಕ್ಷೆಗಳು, ಗ್ರಂಥಋಣವನ್ನು ಲಗತ್ತಿಸಿಲಾಗಿದೆ.

ಅನುಬಂಧಗಳು:

ಅ. ಪ್ರಶ್ನಾವಳಿ

ಲೋಹಮಾಧ್ಯಮದ ಜನಪದ ಶೈಲಿ ಶಿಲ್ಪಕಲಾವಿದರಿಗೆ ಪ್ರಶ್ನಾವಳಿ :-

1. ಲೋಹ ಶಿಲ್ಪಗಳನ್ನು ತಯಾರು ಮಾಡುವುದನ್ನು ಪ್ರಾರಂಭಿಸಿದ್ದು ಯಾವಾಗ ?

2. ಲೋಹ ಶಿಲ್ಪಗಳನ್ನು ತಯಾರಿಸುವ ವಿಧಾನವನ್ನು ಯಾರಿಂದ ಕಲಿತಿರಿ ?

3. ಲೋಹದ ಯಾವ ಯಾವ ಮಾಧ್ಯಮಗಳಲ್ಲಿ ಶಿಲ್ಪಗಳನ್ನು ತಯಾರಿಸುತ್ತೀರಿ ?

4. ಇದುವರೆವಿಗೆ ತಯಾರಿಸಿದ ಜನಪದ ಶಿಲ್ಪಗಳೆಷ್ಟು ಅಥವಾ ಸಂಪ್ರದಾಯಿಕ ಶಿಲ್ಪಗಳೆಷ್ಟು ?

5. ಬೇಡಿಕೆಯಿಂದ ತಯಾರಿಸಿದ ಶಿಲ್ಪಗಳೆಷ್ಟು? ನಿಮ್ಮದೇ ಅಭಿಪ್ರಾಯದಿಂದ ರಚಿಸಿದ ಶಿಲ್ಪಗಳೆಷ್ಟು?

6. ಲೋಹ ಶಿಲ್ಪ ತಯಾರಿಸಲು ಕಚ್ಚಾ ಸಾಮಗ್ರಿಗಳನ್ನು ಎಲ್ಲಿಂದ ಪಡೆಯುತ್ತೀರಿ ?

7. ಲೋಹ ಶಿಲ್ಪಗಳ ತಯಾರಿಕೆಯನ್ನು ಆಯಾ ವಿವಿಧ ಮಾಧ್ಯಮದಂತೆ ವಿವರಿಸಿ ?

8. ಲೋಹ ಶಿಲ್ಪದ ಕಚ್ಚಾ ಸಾಮಗ್ರಿಗೆ ತಗಲುವ ಅಂದಾಜು ವೆಚ್ಚ ಎಷ್ಟು ? ಒಂದ ಶಿಲ್ಪಕ್ಕೆ ಆಧರಿಸಿ?

9. ಒಂದು ಲೋಹ ಶಿಲ್ಪವನ್ನು ಮಾರಾಟ ಮಾಡಿದಲ್ಲಿ ಗಳಿಸುವ ನಿವ್ವಳ ಲಾಭವೆಷ್ಟು ?

10. ಈ ಜನಪದ ಲೋಹ ಶಿಲ್ಪಗಳನ್ನು ತಯಾರಿಸಲು ಯಾವ ಯಾವ ರೀತಿ ಶೈಲಿಗಳನ್ನು ಜನರು ಅಪೇಕ್ಷಿಸುತ್ತಾರೆ.

11. ಲೋಹ ಶಿಲ್ಪಗಳನ್ನು ತಯಾರಿಸಲು ನೀವೇ ಸ್ವಂತ ಕುಲುಮೆ ಹೊಂದಿರಿಯೇ? ಇಲ್ಲವಾದಲ್ಲಿ ಎಲ್ಲಿಂದ ಎರಕ ಹೊರಕ ಹೊಯ್ಯಿಸುವಿರಿ ?

12. ಲೋಹ ಶಿಲ್ಪಗಳನ್ನು ಅವುಗಳಿಗೆ ತಕ್ಕಂತೆ ವಾಸ್ತು ಧರ್ಮವನ್ನು ಪಾಲಿಸುತ್ತೀರಿಯೇ ? ಇದು ಅವಶ್ಯಕವೇ ?

13. ಧಾರ್ಮಿಕತೆಯ ಲೋಹ ಶಿಲ್ಪಗಳಿಗೆ ಸೌಂದರ್ಯದ ಪ್ರಾಮುಖ್ಯತೆ ಎಷ್ಟರ ಮಟ್ಟಿಗೆ ಪ್ರಾಮುಖ್ಯತೆ ನೀಡುತ್ತೀರಿ ?

14. ಲೋಹ ಶಿಲ್ಪಗಳನ್ನು ತಯಾರಿಸಿರುವ ನಿಮಗೆ ಇದುವರೆವಿಗೂ ಸಂದಿರುವ ಪ್ರಾಶಸ್ತಿಗಳು ಮತ್ತು ಬಹುಮಾನಗಳಾವುವು ? ಅವುಗಳಿಂದ ನಿಮಗೆ ತೃಪ್ತಿ ಇದೆಯೇ ?

15. ಇದುವರೆಗೂ ನೀವು ತಯಾರಿಸಿರುವ ಶಿಲ್ಪಗಳು ಎಲ್ಲೆಲ್ಲಿ ಸಂಗ್ರಹಗೊಂಡಿವೆ ?

16. ಎಷ್ಟು ದೂರದಿಂದ ಬೇಡಿಕೆಯ ಜನ ಬರುತ್ತಾರೆ ?

17. ಶಿಲ್ಪಗಳ ತಯಾರಿಕೆಯ ಮೂಲಗಳಿಂದ ಸಿಗುವ ವಾರ್ಷಿಕ ಆದಾಯವೇನು ?

18. ಶಿಲ್ಪಗಳ ತಯಾರಿಕೆ ಹೊರತುಪಟಿಸಿ ಬೇರೆ ಉದ್ಯೋಗಗಳನ್ನು ಮಾಡುತ್ತೀರಿಯೆ ?

19. ಶಿಲ್ಪಗಳ ತಯಾರಿಕೆಯಲ್ಲಿ ಮಹಿಳೆಯರ ಪಾತ್ರವೇನು ?

20. ಲೋಹ ಶಿಲ್ಪ ತಯಾರಿಕೆಯಲ್ಲಿ ತೊಡಗಿರುವ ಕುಟುಂಬ ಸದಸ್ಯರೆಷ್ಟು ?

21. ಲೋಹ ಶಿಲ್ಪಗಳಲ್ಲಿ ತಯಾರಿಸಿರುವ ಸಣ್ಣ ಮತ್ತು ದೊಡ್ಡ ಶಿಲ್ಪಗಳ ಪರಿಮಾಣವೇನು ?

22. ಶಿಲ್ಪ ತಯಾರಿಕೆಯ ಬಗೆಗೆ ನೀವು ಅಭ್ಯಸಿಸಿರುವ ಪುಸ್ತಕಗಳು, ಗ್ರಂಥಗಳು ಯಾವುವು ? ನೀವು ಯಾವ ರೀತಿಯ ಪುಸ್ತಕಗಳನ್ನು ರಚಿಸಿರುವಿರಿ ?

23. ಮುಖ್ಯ ಶಿಲ್ಪಿಯ ಹೆಸರು ಇತರೆ ಶಿಲ್ಪಿಗಳು ಜೊತೆಯಲ್ಲಿ ಕೆಸಲ ಮಾಡುವವರು.

24. ನಿಮ್ಮ ಹೆಸರಿಗೆ ವಿಶೇಷ ಅರ್ಥವೇನಾದರೂ ಇದೆಯೇ ? ಅಡ್ಡ ಹೆಸರು.

25. ನಿಮಗೆ ಕುಲದೇವರ ಹೆಸರಿಡಲಾಗಿದೆಯೇ ? ನಿಮ್ಮ ಕುಲದೇವರು ಯಾರು ?

26. ನೀವು ಹುಟ್ಟಿದ ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯದ ಹೆಸರೇನು ? ನಿಮ್ಮ ಹುಟ್ಟಿದ ತಾರೀಖು ಯಾವುದು

27. ನಿಮಗೆ ಆ ತಾರೀಖು ಗೊತ್ತಿಲ್ಲದಿದ್ದರೆ, ನಿಮ್ಮ ವಯಸ್ಸೆಷ್ಟು ?

28. ಈಗ ನೀವು ವಾಸಿಸುತ್ತಿರುವ ಗ್ರಾಮದ ಹೆಸರೇನು ? ಅದು ನಿಮ್ಮ ಹುಟ್ಟಿದೂರಾಗದಿದ್ದರೆ, ನೀವು ಯಾವ ತಾಲ್ಲೂಕು, ಜಿಲ್ಲೆ, ಅಥವಾ ರಾಜ್ಯಕ್ಕೆ ಸೇರಿದವರು ?

29. ನಿಮ್ಮ ವಿದ್ಯಾಭ್ಯಾಸವೇನು ? ನೀವು ಓದಿದ ಕೊನೆಯ ತರಗತಿ ಯಾವುದು ?

30. ನೀವು ಮನೆಯಲ್ಲಿ ಯಾವ ಭಾಷೆ ಮಾತಾಡುವಿರಿ?

31. ನಿಮ್ಮ ಧರ್ಮ ಯಾವುದು ?

32. ನಿಮ್ಮ ಕುಟುಂಬದಲ್ಲಿ ನಿಮ್ಮನ್ನೇ ಅವಲಂಬಿಸಿರುವವರು ಎಷ್ಟು ಜನ ?

ಅ) ಮಕ್ಕಳು ?

ಆ) ಗಂಡಸರು ?

ಇ) ಹೆಂಗಸರು ?

ಈ) ವಯಸ್ಕರು ?

33. ನಿಮ್ಮ ಕುಟುಂಬದ ಮಾಮೂಲಿ ಕಸುಬು ಯಾವುದು ? ಶಿಲ್ಪಕೆತ್ತುವುದೇ ನಿಮ್ಮ ಕಸುಬಾಗಿದ್ದರೆ, ಅದು ಎಷ್ಟು ತಲೆಮಾರುಗಳಿಂದ ಬಂದಿದೆ. ಮತ್ತು ಅದೇ ನಿಮ್ಮ ಕುಟುಂಬ್ಕೆ ಅಧಾರವಾಗಿರುವ ಏಕೈಕ ಮೂಲವಾಗಿರುವುದೇ ?

34. ಈಗ ನೀವು ಶಿಲ್ಪ ಕೆತ್ತನೆ ಮಾಡುತ್ತಿಲ್ಲವಾದರೆ ಕೊನೆಯ ಬಾರಿ ಕೆತ್ತನೆ ಮಾಡಿದುದು ಯಾವಾಗ ? ಕೆತ್ತನೆ ನಿಲ್ಲಿಸಿದ್ದು ಯಾಕೆ ?

35. ನೀವು ನಿರತರಾಗಿರುವ ಇತರ ವೃತ್ತಿಗಳಿವೆಯೇ ? ಶಿಲ್ಪಕಲಾವಿದರಾಗಿ ನಿಮ್ಮ ಆದಾಯಕ್ಕೆ ಇವು ಪೂರಕವಾಗಿರುವುದು ಅಗತ್ಯವೇ ?

36. ನಿಮ್ಮ ಕುಟುಂಬದ ಇತರರಿಗೆ ಶಿಲ್ಪಕೆತ್ತನೆಯ ತರಬೇತಿ ನೀಡುತ್ತಿರುವಿರಾ ? ನೀವು ತರಬೇತಿ ನೀಡುತ್ತಿರುವವರಲ್ಲಿ ಅತ್ಯಂತ ಕಿರಿಯರ ವಯಸ್ಸೆಷ್ಟು ? ತರಬೇತಿ ನೀಡುತ್ತಿಲ್ಲವಾದರೆ ಯಾಕೆ ? ಕಾರಣವೇನು?

37. ನಿಮ್ಮ ಶಿಲ್ಪ ಕೇಂದ್ರದಲ್ಲಿ ಎಷ್ಟು ಜನ ಶಿಲ್ಪಕಾರರಿದ್ದಾರೆ ?

38. ಮಹಿಳೆಯರು ಎಷ್ಟು ಮಂದಿ ?

39. ಎಷ್ಟು ಜನ ಸಂಪ್ರದಾಯಿಕ ಶಿಲ್ಪಕೆತ್ತನೆಯ ಪರಿಣಿತಿ ಪಡೆದಿದ್ದಾರೆ ?

40. ಎಷ್ಟು ಜನ ಸ್ವತಂತ್ರವಾಗಿ ಶಿಲ್ಪವನ್ನು ಪೂರ್ಣವಾಗಿ ಕೆತ್ತುತ್ತಾರೆ ?

41. ಎಷ್ಟು ಜನ ಸ್ವತಂತ್ರವಾಗಿ ರೇಖಾ ಚಿತ್ರವನ್ನು ಬಿಡಿಸುತ್ತಾರೆ ?

42. ಕಲಾಕೃತಿಯ ರೇಖಾ ಚಿತ್ರವನ್ನು ಹೇಗೆ ಆಯ್ಕೆ ಮಾಡುತ್ತೀರಿ ?

43. ರೇಖಾ ಚಿತ್ರವನ್ನು ಸೂತ್ರ ಅಥವಾ ಶ್ಲೋಕಗಳನ್ನು ವಿಶ್ವಕರ್ಮ ಪೂರ್ವಿಕರು ಸೃಷ್ಟಿಸಿರುವ ಅಥವಾ

44. ಕೆತ್ತಿರುವ ಶಿಲ್ಪಗಳೆಷ್ಟು ? ಯಾವ ಯಾವ ಮಾಧ್ಯಮಗಳು ? ಸಂಪ್ರದಾಯಿಕ ಶಿಲ್ಪಗಳೆಷ್ಟು ? ಅಳತೆ / ಮಾಧ್ಯಮ / ಸಂಗ್ರಹ / ಬೆಲೆ / ಸಮಯ ಪಡೆದದು ಯಾವಾಗ ? ಜನಪದ ಶಿಲ್ಪಗಳೆಷ್ಟು ? ರಥಗಳೆಷ್ಟು ? ಗುಡಿ / ದೇವಾಲಯಗಳೆಷ್ಟು ?

45. ನೀವು ಸೃಷ್ಟಿಸಿರುವ ಅಥವಾ ಕೆತ್ತಿರುವ ಶಿಲ್ಪಗಳೆಷ್ಟು ? ಸಂಪ್ರದಾಯಿಕ ಶಿಲ್ಪಗಳೆಷ್ಟು ? ಜನಪದ ಶಿಲ್ಪಗಳೆಷ್ಟು ? ರಥಗಳೆಷ್ಟು ? ಗುಡಿ/ ದೇವಾಲಯಗಳೆಷ್ಟು ?

46. ನಿಮಗೆ ಶಿಲ್ಪ ಕೆತ್ತನೆಯೇ ಪ್ರಮುಖ ಉದ್ಯೋಗವೇ ? ಬೇರೆ ಉಪ ಉದ್ಯೋಗಗಳಿವೆಯೇ ? ವಾರ್ಷಿಕ ಒಟ್ಟು ಆದಾಯವೆಷ್ಟು ?

47. ನಿಮ್ಮ ಮುಂದಿನ ಪೀಳಿಗೆ ಈ ಶಿಲ್ಪ ಕೆತ್ತನೆಯಲ್ಲಿ ತೊಡಗಿರುವರೇ ? ಇಲ್ಲವಾದರೆ ಯಾಕೆ ? ತರಬೇತಿ ಕೊರತೆಯೇ ? ಆದಾಯ ಕೊರತೆಯೇ ? ಬೇಡಿಕೆ ಇಲ್ಲವೇ ? ಕಚ್ಚಾ ಸಾಮಗ್ರಿ ಕೊರತೆಯೇ ?

48. ನಿಮ್ಮ ಮುಂದಿನ ಪೀಳಿಗೆ ಯಾವ ಶಿಲ್ಪ ಕೆತ್ತನೆಯಲ್ಲಿ ತೊಡಗಿದ್ದಾನೆ ? ಜನಪದ ಶಿಲ್ಪ ತಯಾರಿಸುವರೇ ? ಸಂಪ್ರದಾಯ ಶಿಲ್ಪ ತಯಾರಿಸುವರೇ ? ಸಮಕಾಲೀನ ಶಿಲ್ಪ ತಯಾರಿಸುವರೇ ?

49. ಶಿಲ್ಪ ಕೆತ್ತನೆಯಲ್ಲಿಯೇ ತೊಡಗಿರಲು ಕಾರಣವೇನು ? ಬೇರೆ ಕಸಬು ತಿಳಿದಿಲ್ಲವೆ ? ಶಿಕ್ಷಣದ ಕೊರತೆಯೇ ಪರಂಪರೆಯನ್ನು ಉಳಿಸಿಕೊಳ್ಳುವ ವಿಶ್ವಾಸವೇ ?

50. ಪ್ರಸ್ತುತ ಸಂದರ್ಭದಲ್ಲಿ ಯಾವ ಮಾದ್ಯಮದ / ಶೈಲಿ ಶಿಲ್ಪಗಳಿಗೆ ಬೇಡಿಕೆ ಇದೆ ?

51. ಕೊಳ್ಳುಗರ ವ್ಯಾಪಾರೀತನಕ್ಕೆ ಹೊಂದಿಕೊಂಡಿದ್ದೀರಿಯೇ ?

52. ಕರಕುಶಲ / ಯಂತ್ರ ಸಿದ್ಧಿ ಶಿಲ್ಪಗಳು ನಿಮ್ಮ ಮೇಲೆ ಯಾವ ರೀತಿ ಪ್ರಭಾವ ಬೀರಿವೆ ?

53. ನೀವು ತಯಾರಿಸು ಸಂಪ್ರದಾಯಿಕ ಶಿಲ್ಪಗಳ ಮೇಲೆ ಜನಪದ ಶೈಲಿಯ ಪ್ರಭಾವವಿದೆಯೇ ? ಅದು ಹೇಗೆ ? ಏಕೆ ? ಅವಶ್ಯಕತೆಯಿದೆಯೇ ?

54. ನೀವು ತಯಾರಿಸು ಜನಪದ ಶೈಲಿಯ ಶಿಲ್ಪಗಳ ಮೇಲೆ ಸಂಪ್ರದಾಯಿಕ ಶಿಲ್ಪಗಳ ಶೈಲಿ ಪ್ರಭಾವವಿದೆಯೇ ? ಅದು ಹೇಗೆ ? ಯಾಕೆ ? ಅವಶ್ಯಕತೆ ಇದೆಯೇ ?

55. ಶೈಲಿಗಳ ಮಿಶ್ರಣ ಅಥವಾ ಬಳಕೆ ನಿಮ್ಮ ಇಚ್ಚೆಯೇ ? ಏಕೆ ? ಅಥವಾ ಗ್ರಾಹಕೆಖು ಬೇಡಿಕೆಯೇ ? ಕಾಲಕ್ರಮೇಣ ಬೆಳವಣಿಗೆಯ ಕ್ರಮವೇ ವಸ್ತು ವಿಷಯದ ಮೇಲಿನ ಒಡಂಬಡಿಕೆಯೇ ?

56. ಪುನಾರಾವರ್ತನೆಯ ಕೆತ್ತನೆಯ ಶಿಲ್ಪಗಳು ಯಾವ ಶೈಲಿಗಳಲ್ಲಿ ಸಾಧ್ಯ ? ಸಂಪ್ರದಾಯ ಶೈಲಿ ಅನುಕೂಲವೇ ? ಜನಪದ ಶಿಲ್ಪ ಶೈಲಿಗಳಲ್ಲಿ ಅನುಕೂಲವೇ ? ಯಾವ ಯಾವ ಮಾಧ್ಯಮಗಳಲ್ಲಿ ಸಾಧ್ಯ ?

57. ಸಂಪ್ರದಾಯ ಶೈಲಿ ಶಿಲ್ಪಗಳನ್ನು ಹೊತರುಪಡಿಸಿ ಬೇರೆ ಶೈಲಿಯ ಶಿಲ್ಪಗಳನ್ನು ತಯಾರಿಸುವಿರಿ ? ಇಲ್ಲವಾದರೆ ಯಾಕೆ ? ಕಟ್ಟುಪಾಡುಗಳಿವೆಯೇ ? ಅಥವಾ ತರಬೇತಿ ಕೊರತೆಯೇ ?

58. ಧಾರ್ಮಿಕ ಶೈಲಿ ಶಿಲ್ಪಗಳನ್ನು ರಚಿಸುತ್ತೀರಿಯೇ ? ದೇವರ ಮೂರ್ತಿ ಯಾವುವು ? ದೇವತಾ ಮೂರ್ತಿಗಳಾವುವು ? ವಾಹನಗಳು ಯಾವುವು ? ಇತರೆ ಪ್ರಾಣಿ ಪಕ್ಷಿಗಳು ?

59. ಸೌಂದರ್ಯ ಮೂಲದ ಶೈಲಿ ಶಿಲ್ಪಗಳನ್ನು ರಚಿಸುತ್ತೀರಿಯೇ ? ಪುರುಷ ಮೂರ್ತಿಗಳಾವುವು ? ಸ್ತ್ರೀ ಮೂರ್ತಿಗಳಾವುವು ? ಪ್ರಾಣಿ ಪಕ್ಷಿ ಇತರೆ ಗಳಾವುವು ? ಇವುಗಳನ್ನು ಪ್ರತಿಷ್ಠಾಪಿಸುವುದಕ್ಕೆ ಸೂಚಿತ ಯೋಗ್ಯ ಸ್ಥಳಗಳಾವುವು ?

60. ಜನಪದ ಶೈಲಿ ಶಿಲ್ಪಗಳನ್ನು ಹೊರತುಪಡಿಸಿ ಬೇರೆ ಶೈಲಿಯ ಶಿಲ್ಪಗಳನ್ನು ತಯಾರಿಸುವಿರೇ ? ಇಲ್ಲವಾದರೆ ಏಕೆ ? ಕಟ್ಟುಪಾಡು, ನಿಯಮಗಳಿವಿಯೇ ? ಅಥವಾ ನಿಷೀದ್ದವೇ ? ತರಬೇತಿ ಕೊರತೆಯೇ ? ಬೇಡಿಕೆಯಿಲ್ಲವೇ ? * ಧಾರ್ಮಿಕ ಶೈಲಿ ಜನಪದ ಶಿಲ್ಪಗಳನ್ನು ರಚಿಸುತ್ತೀರಿಯೇ ? ದೇವರ ಮೂರ್ತಿಗಳಾವುವು ? ದೇವತಾ ಮೂರ್ತಿಗಳಾವುವು ? ವಾಹನಗಳು ಯಾವುವು ? ಇತರೆ ಪ್ರಾಣಿ, ಪಕ್ಷಿಗಳು ಯಾವುವು ?

61. ಜನಪದ ಶೈಲಿ ಶಿಲ್ಪಗಳಲ್ಲಿ ಮಾಂಸಹಾರಿ / ರಕ್ತ ಬಯಸುವ ಸಸ್ಯಹಾರಿ8 / ಶಾಂತಸ್ವಭಾವ ದೇವತಾ ಮೂರ್ತಿಗಳನ್ನು ವಿನಂತಿಸಲಾಗಿದೆಯೇ ? ನೀವು ಯಾವ ರೀತಿಯ ದೇವರುಗಳ ಶಿಲ್ಪಗಳನ್ನು ಕೆತ್ತುವಿರಿ ? ಇದರಲ್ಲಿ ನಿರ್ಭಂಧವೇನಾದರೂ ಇದೆಯೇ ? ಬಳಸುವ ಮಾಧ್ಯಮಗಳಲ್ಲಿ ಏನಾದರೂ ವ್ಯತ್ಯಾಸವಿದೆಯೇ ? ಯಾಕೆ ?

62. ಜನಪದ ಶೈಲಿ ಶಿಲ್ಪಗಳ ನಿರ್ಮಾಣ ಈ ಹಿಂದೆ ಮತ್ತು ಇಂದಿಗೆ ವ್ಯತ್ಯಾಸ / ಏರುಪೇರು ಕಂಡಿದೆಯೇ ? ಕಂಡಿದ್ದರೆ ಕಾರಣಗಳೇನು ? ಮಾಧ್ಯಮಗಳ ಕೊರತೆ ಇದೆಯೇ ? ಶಿಲ್ಪಕಾರರ ಕೊರತೆ ಇದೆಯೇ ? ಅಥವಾ ಬೇಡಿಕೆಯ ಕೊರತೆಯೇ ?

63. ಸಂಪ್ರದಾಯಿಕ / ಜನಪದ ಶಿಲ್ಪಗಳ ನಿಮಾಣದಲ್ಲಿ ಪರಿವರ್ತನೆಯಾಗಿದೆಯೇ ? ಇದು ಒಳಿತೇ ? ಅದು ಹೇಗೆ ?

64. ಬಣ್ಣಗಳ ಬಳಕೆಯನ್ನು ಜನಪದ / ಸಂಪ್ರದಾಯಿಕ ಶಿಲ್ಪಗಳಲ್ಲಿ ತಯಾರಿಕೆಯಲ್ಲಿ ಬಳಸುತ್ತೀರಿಯೇ ? ಯಾವ ಯಾವ ಮಾಧ್ಯಮಗಳಲ್ಲಿ ಬಣ್ಣಗಳನ್ನು ಬಳಸುತ್ತೀರಿ ?

65. ಬಳಸುವ ಬಣ್ಣಗಳ ತಯಾರಿಕೆಯನ್ನು ಸ್ವಂತ ಶಿಲ್ಪಗಳೇ ಮಾಡುತ್ತೀರಿಯೇ ? ಅಥವಾ ಯಾರು ತಯಾರಿಸುತ್ತಾರೆ ? ಯಾವ ರೀತಿ ಬಣ್ಣಗಳು ತಯಾರಾಗುತ್ತವೆ ? ಅವುಗಳ ಮೂಲ ಯಾವುವು ?

66. ಶಿಲ್ಪಗಳ ರಚನೆಯಲ್ಲಿ ಅರಗು / ಅಂಟುಗಳನ್ನು ಬಳಸುತ್ತೀರಿಯೇ ? ಯಾವ ಮಾಧ್ಯಮಗಳಲ್ಲಿ ಇವುಗಳ ಬಳಕೆಯಾಗುತ್ತದೆ ? ಅವುಗಳ ತಯಾರಿಕೆಯ ಕ್ರಮ ಹೇಗೆ ?

*****

ಆ. ಗ್ರಂಥಋಣ

1. ಆದಿಮಾನವ ಇರ್ವಿಂಗ್ ಮತ್ತು
ಆನಂದನಿಲಯ ಪ್ರಕಾಶನ
ಬೆಂಗಳೂರು- 560018, 2008
ಹನ್ನಾಗೋಲ್ಡ್‌ಮನ್ (ಮೂ.ಲೇ)
ಕೊರಟಿ ಶ್ರೀನಿವಾಸರಾವ್ (ಕ.ಅ)

2. ಇತಿಹಾಸ ಪೂರ್ವಕಾಲದ ಅಥವಾ
ಕರ್ನಾಟಕದ ಪ್ರಾಗೈತಿಹಾಸ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. 1971
ಡಾ. ಅ. ಸುಂದರ

3. ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ
ಪಿ.ಹೆಚ್.ಡಿ ಮಹಾ ಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ 2000
ಯಾದಪ್ಪ ಪರದೇಶಿ

4. ಕರ್ನಾಟಕದ ಜನಪದ ಚಿತ್ರಕಲೆ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಠ,
ಗದಗ 1993
ಡಾ. ಎಸ್. ಸಿ. ಪಾಟೀಲ

5. ಕರ್ನಾಟಕದ ಪ್ರಾಚೀನ ಇತಿಹಾಸ
ಮತ್ತು ಪುರಾತತ್ವ ಅಧ್ಯಯನಗಳ ಮುರುಚಿಂತನೆ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2007
ರಮೇಶ ನಾಯಕ (ಸಂ)

6. ಕರ್ನಾಟಕದ ಪುರಾತತ್ವ ನೆಲೆಗಳು
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ 2001
ಡಾ. ಕೆ. ಬಿ. ಶಿವತಾರಕ್

7. ಕರ್ನಾಟಕದ ಕಲಾದರ್ಶನ
ನವಕರ್ನಾಟಕ ಪ್ರಕಾಶನ,
ಬೆಂಗಳೂರು. 2010
(ಸಂ.) ಎಂ. ಎಚ್. ಕೃಷ್ಣಯ್ಯ

8. ಕರ್ನಾಟಕದ ಪುರಾತತ್ವ
ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ,
ಮೈಸೂರು . 2010
ಡಾ. ಎ. ವಿ. ನರಸಿಂಹಮೂರ್ತಿ

9. ಕಲಾ ಪ್ರಪಂಚ ಡಾ. ಶಿವರಾಂ ಕಾರಂತ
ಎನ್.ಬಿ.ಎಸ್. ಪಬ್ಲಿಕೆಷನ್ ಡಿಸ್ಟ್ರಿಬ್ಯೂಟರ್ಸ್,
ಬೆಂಗಳೂರು. 2008

10. ಕಲಾ ಚರಿತ್ರೆ ಎನ್. ಮರಿಶಾಮಾಚಾರ್ಯ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಬೆಂಗಳೂರು . 2002

11. ಕೊಪ್ಪಳ ಜಿಲ್ಲಾ ದರ್ಶನ (ಸಂ.) ಅಲ್ಲಮಪ್ರಭು ಬೆಟ್ಟದೂರ
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಶ್ರೀ ಎಚ್.ಎಸ್.ಪಾಟೀಲ
ಗುಲಬರ್ಗಾ. 2004

12. ಚಿತ್ರಕಲಾ ಪ್ರಪಂಚ (ಪ್ರ.ಸಂ) ಪಿ. ಆರ್. ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. 2008

13. ಚಿತ್ರಕಲೆ ಮತ್ತು ಸಂವಹನ ಜಿ. ಮಲ್ಲಿಕಾರ್ಜುನ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. 1996

14. ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ ಬಿ. ಎಲ್. ಲಮಾಣಿ
ಪಿ.ಹೆಚ್.ಡಿ ಮಹಾ ಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.2011

15. ಚಿತ್ರಲೇಖ ಮಲ್ಲಿಕಾರ್ಜುನ ಬಾಗೋಡಿ
ಸರಚಂದ್ರ ಪ್ರಕಾಶನ,
ಚಿತ್ತಾಪುರ. 2009

16. ಜನಪದ ಕಸೂತಿ ಡಾ. ಮಧು ವೆಂಕಾರೆಡ್ಡಿ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2000

17. ಜಾಗತಿಕ ಚಿತ್ರಕಲೆ ಬಿ. ಪಿ. ಬಾಯಿರಿ
ಪ್ರತಿಭಾ ಗ್ರಂಥಮಾಲೆ,
ಧಾರವಾಡ. 1985

18. ದೃಶ್ಯಾನುಭವ ಡಾ. ಮೋಹನರಾವ್ ಬಿ. ಪಂಚಾಳ
ಅನ್ನಪೂರ್ಣಾ ಪ್ರಕಾಶನ,
ನಂದಗಾಂವ. 2010

19. ನಿಜದ ನೆಲೆ (ಸಂ) ಡಾ. ಎಸ್. ಸಿ. ಪಾಟೀಲ
ವೈರಾಗ್ಯದ ಮಲ್ಲಣಾರ್ಯ, ಡಾ. ಸತ್ಯಾನಂದ ಪಾತ್ರೋಟಿ
ಬಸವೇಶ್ವರ ವಿದ್ಯಾರ್ಥಿಕ ಸಂಘ,
ಬಾಗಲಕೋಟ 2003

20. **ಪ್ರಾಚ್ಯ ವೈಭವ (ಆಕಾಶವಾಣಿ ಭಾಷಣಗಳು)** — **ಡಾ. ಅ.ಸುಂದರ**
ಶ್ರೀ ಮಾಲಗತ್ತಿ ಆಫ್‌ಸೆಟ್ ಪ್ರಿಂಟರ್ಸ್
ಮತ್ತು ಪ್ರಕಾಶಕರು,
ಬೆಳಗಾವಿ. 1998

21. **ಪ್ರಾಗೈತಿಹಾಸ ಕಾಲದ ಕಲೆ** — **ಡಾ. ಅ.ಸುಂದರ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. 1994

22. **ಪುರಾತತ್ವ ಪರ್ಯಾಟನೆ** — **ಡಾ. ಮೈಸೂರು ನಾಗರಾಜಶರ್ಮ**
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು . 2011

23. **ಪ್ರಾಣಿಶಾಸ್ತ್ರ** — **ಡಾ. ಟಿ. ಎ. ಬಾಲಕೃಷ್ಣ**
ಡಾ. ಬಿ. ಎ. ಬಾಲಕೃಷ್ಣ ಮತ್ತು
ಬಾನುಮತಿ. ಎಸ್. ಶಾಹು ಪ್ರಕಾಶನ,
ಗಾಂಧಿನಗರ, ಬೆಂಗಳೂರು. 1999

24. **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,** — **ಕೃಷ್ಣವೇಣಿ**
ಪಿ.ಹೆಚ್.ಡಿ ಮಹಾ ಪ್ರಬಂಧ
ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2012

25. **ಬಳ್ಳಾರಿ ಜಿಲ್ಲೆಯ ಚಿತ್ರಕಲೆ** — **ಡಾ. ಎಚ್. ಈ. ಬಸವರಾಜಪ್ಪ**
(ಮಂಟಪ ಮಾಲೆ/142)
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2006

26. **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ** — **ಡಾ. ವಾಸುದೇವ ಬಡಿಗೇರ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2012

27. **ಬಾಗಲಕೋಟ ಜಿಲ್ಲೆಯ ಚಿತ್ರಕಲೆ ಡಾ. ಎಸ್. ಸಿ. ಪಾಟೀಲ**
ಬಾಗಲಕೋಟ ಜಿಲ್ಲಾ
ಕನ್ನಡ ಸಾಹಿತ್ಯ ಪರಿಷತ. 2012

28. **ಭಾರತೀಯ ಚಿತ್ರಕಲೆ (ಲೇ)** — **ಸಿ. ಶಿವರಾಮಮೂರ್ತಿ**
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ — **(ಅನು) ಪಿ.ಆರ್.ತಿಪ್ಪೇಸ್ವಾಮಿ**
ಬೆಂಗಳೂರು, 1998

29. ಭಾರತೀಯ ಬಹುಮುಖಿ ಸಂಸ್ಕೃತಿ **ಚಟ್ಟೋಪದ್ಯಾಯ**
ನವ ಕರ್ನಾಟಕ ಪ್ರಕಾಶನ
ಬೆಂಗಳೂರು, 2011

30. ಬಳ್ಳಾರಿ ಜಿಲ್ಲಾ ದರ್ಶನ **(ಸಂ) ಡಾ. ಕೆ.ರವಿಂದ್ರನಾಥ**
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ, 2005

31. ಮಾನವ ಮತ್ತು ಸಾಂಸ್ಕೃತಿಕ ಪಲ್ಲಟಗಳು **(ಸಂ) ಡಾ. ತಾರಿಹಳ್ಳಿ ಹನುಮಂತಪ್ಪ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, 2012

32. ಯಾದಗಿರಿ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ **(ಸಂ) ಶ್ರೀಮತಿ ಶೈಲಾಜಾ ಎನ್.**
ಎಂ.ಆರ್.ಬಾಗೇವಾಡಿ
ಮಹಾಲಕ್ಷ್ಮೀಪೂರಂ, ಬೆಂಗಳೂರು, 2012

33. ವರ್ಣಸಂಚಯ, **ಡಾ. ಎಸ್. ಸಿ. ಪಾಟೀಲ**
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಲಕಲ್ಲ 2001

34. ಶಿಲಾಯುಗದ ಗವಿಚಿತ್ರಗಳು **ಡಾ. ಶರಣಬಸಪ್ಪ ಕೋಲ್ಕಾರ**
ಬಸವ ಪ್ರಕಾಶನ,
ಗುಲಬರ್ಗಾ. 2010

35. ಶಿಲಾಶ್ರಯ ಕಲೆಯ ದೃಶ್ಯಧ್ಯಾನ **ಕೆ. ವಿ. ಸುಬ್ರಹ್ಮಣ್ಯಂ**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2011

36. ಸಾಧನೆಯ ಸಮುಚ್ಛಯ **ಎಲ್. ಶಿವಲಿಂಗಪ್ಪ ಡಾ. ಎಸ್. ಸಿ. ಪಾಟೀಲ**
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ
ಧಾರವಾಡ–07, 2010

37. ಸೌಂದರ್ಯ ಶಾಸ್ತ್ರ **(ಅನು) ಡಾ. ಕಾಶಿನಾಥ ಅಂಬಲಿಗೆ**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. 2008

38. ಸಂಶೋಧನೆ, ಡಾ. ಎಂ. ಚಿದಾನಂದ ಮೂರ್ತಿ
ಡಿ.ವಿ.ಕೆ ಮೂರ್ತಿ ಪ್ರಕಾಶನ,
ಮೈಸೂರು, 2011

39. ಸಂಡೂರು ತಾಲೂಕ ಡಾ. ಗಿರಿಜಾ
(ಒಂದು ಚಾರಿತ್ರಿಕ ಅಧ್ಯಯನ)
ಕನ್ನಡ ಸಾಹಿತ್ಯ ಪರಿಷತ್,
ಬೆಂಗಳೂರು. 2011

40. ಹಂಪಿ ಪರಿಸರದ ಆದಿಮಾನವನ ನೆಲೆಗಳು ಡಾ. ಎಲ್. ಶ್ರೀನಿವಾಸ
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ. 2010

41. ಹಂಪಿ ಸಂಪುಟ ಡಾ. ದೇವರಕೊಂಡಾರೆಡ್ಡಿ
ಕಲೆ, ಕ್ರೀಡೆ ಮತ್ತು ಕೌಶಲ
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. 2006

42. ಜ್ಞಾನ ಗಂಗೋತ್ರಿ (ಪ್ರ.ಸಂ.) ನಿರಂಜನ
ಕಿರಿಯರ ವಿಶ್ವಕೋಶ, ಕಲೆ, ಸಾಹಿತ್ಯ
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ
ಬೆಂಗಳೂರು, 1973

43. ಜ್ಞಾನ ಗಂಗೋತ್ರಿ, ಮನುಕುಲದ ಕಥೆ (ಪ್ರ.ಸಂ.) ನಿರಂಜನ
ಸಂಪುಟ –1
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ,
ಬೆಂಗಳೂರು. 1970

44. ಮನೆಬಳಕೆಯ ವಸ್ತುಗಳಲ್ಲಿ ಕಲಾತ್ಮಕತೆ : ಡಾ.ಜೀ.ಶಂ.ಪರಮಶಿವಯ್ಯ,
ಸಂ : ಡಾ. ಚಕ್ಕರೆ

ಇಂಗ್ಲೀಷ್ ಗ್ರಂಥಗಳು

1. **A Book About Artists** **Kathleen Cook**
Progress Publisher,
Moscow, USSR, 1978

2. **Arts and the Man** **Irwin Edman**
A Mentor Book,
The New American
Library, New York, 1949

3. **Art Experience** **M. Hiriyanna**

Kavyalaya Publications,
Mysore, 1954

4. **Birds and Animals in Indian Art and Crafts Kelkar Museum** — **Raja Dinkar**
Second Edition, Ashish Advertising, Pune, 2003

5. **Chitralakshana A. K. Kumaraswamy**
Sir Asutosh Memorial Volume,
Patna, 1927

6. **Chitralakshan (of Srikumara)** — **Ashok K. Bhattacharya**
Calcutta, 1974

7. **Conservation of Rock Art** — **Edt. Bansi Lal Malla**
Indira Gandhi National Center for the Arts, Aryan Books International,
New Delhi, 1999

8. **Fundamental of Indian Art** — **S. N. Dashupta**
Bharatiya Vidya Bhavana,
Bambay,1954

9. **Indian Painting** — **C. Shivaramamurti**
National Book Trust Indian,
New Delhi, 1996

10. **Indian Art** — **Roy Craven**
World of Art
Thames and Hudson INC
500, 5th Avenue, New York, 1989

11. **Rock Art in Keral** — **Yashodhar Mathpal**
Indira Gandhi National Centre for the Arts, Aryan Books International,
New Delhi, 1998

12. **Rock Art of South India** — **N. Chandramouli**
Bharatiya Kala Prakashan,
New Delhi, 1996

13. **Recent Perspective on Pre Historic Art in India and Allied Subjects** — **Edt. R.K.Sharma**
K.K.Tripathi, Aryan Books International,

New Delhi,1996

14. Rock Art in Orissa — Sadasiba Pradhan
Post Graduate Department of
History Sam Aryan Books International,
New Delhi, 2001

15. The Pocket History of American Paintings — James Thomas
Pocket Books Inc, New York, 1950

ಲೇಖನಗಳು

1. ಅವನತಿಯಲ್ಲಿ ಬಲಿಚಕ್ರದ ರೇಖಾಚಿತ್ರ — ಚಿದಂಬರಪ್ರಸಾದ
ಪ್ರಜಾವಾಣಿ ದಿನಪತ್ರಿಕೆ,
18.04.2013

2. ಅಪರೂಪದ ಗವಿ ವರ್ಣಚಿತ್ರಗಳ ಪತ್ತೆ — ಪ್ರಕಾಶ ಗುಳೆದಗುಡ್ಡ
ಕನ್ನಡಪ್ರಭ ದಿನಪತ್ರಿಕೆ,
13.03.2013

3. ಪೂರ್ವಜರ ಊರು ಸಂಗನಕಲ್ಲು — ಡಾ. ರಹಮತ್ ತರಿಕೆರಿ
ಪ್ರಜಾವಾಣಿ ದಿನಪತ್ರಿಕೆ
ಸಾಪ್ತಾಹಿಕ ಪುರಾವಣಿ
28.07.2013

4. ಜನಪದ ಚಿತ್ರಕಲೆಯ ಪ್ರಾಚೀನತೆ — ಡಾ. ಎಸ್.ಸಿ.ಪಾಟೀಲ
ಶ್ರೀ ಡಿ.ವಿ.ಹಾಲಭಾವಿ ಸ್ಕೂಲ ಆಫ್ ಆರ್ಟ್
ವಜ್ರ ಮಹೋತ್ಸವ ಸಮಿತಿ, ಧಾರವಾಡ
ಸ್ಮರಣ ಸಂಚಿಕೆ 1995

5. ಬಾದಾಮಿ ತಾಲೂಕಿನ ಕರಡಿಗುಡ್ಡದಲ್ಲಿ — ಡಾ. ಎಸ್.ಸಿ.ಪಾಟೀಲ
ಪ್ರಾಗೈತಿಹಾಸಿಕ ವರ್ಣಚಿತ್ರಗಳ ಶೋಧನೆ
ದೃಶ್ಯಕಲಾ ಸಂವೇದನೆ

6. ಆಲ್ಯೋಡ ಒಂದು ಪುರಾತತ್ವ ನೆಲೆ — ಅಮರೇಶ ಆಲ್ಯೋಡ
ಒಂದು ಹೊಸಶೋಧ
ದೀಪಾವಳಿ ವಿಶೇಷಾಂಕ ಸುದ್ದಿಮೂಲ. 2011
ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ
(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)—

ಪರಾಮಾರ್ಶನ ಗ್ರಂಥಗಳು:

1. ಜನಪದ ಮಹಾಕಾವ್ಯ : ಮಲೆಮಾದೇಶ್ವರ : ಸಂಪುಟ 1 : ಪಿ.ಕೆ.ರಾಜಶೇಖರ

2. ಜಾನಪದ ವಿವೇಚನೆ : ನಗವನಹಳ್ಳಿ ರತ್ನ

3. ಕೊಂತಿಪೂಜೆ : ಒಂದು ಅಧ್ಯಯನ : ಆರ್‌ಎಂಕೆ : ಕ್ಯಾತನಹಳ್ಳಿ ರಾಮಣ್ಣ.

4. ಗೊಂದಲಿಗರು – ಒಂದು ಅಧ್ಯಯನ : ಕ್ಯಾತನಹಳ್ಳಿ ರಾಮಣ್ಣ

5. ಜಾನಪದ ಜಿಜ್ಞಾಸೆ : ಬಸವರಾಜ ನೆಲ್ಲಿಸರ.

6. ಜಾನಪದ ದೀಪ್ತಿ : ಡಾ.ಮಲ್ಲಿಕಾರ್ಜುನ ಲಕ್ಕೆ (ಗೊಂಬೆಯಾಟ)

7. ಮಳಲಿಗಿಡ್ಡಮ್ಮ : ಡಾ.ಮಾನಪ್ಪ ನಾಯಕಿ ಪ್ರಧಾನ ಸಂಪಾದಕಿ

ವಸ್ಮ ಪ್ರ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

8. ತುಮಕೂರು ಜಿಲ್ಲೆಯ ಜಾನಪದ ನಂಬಿಕೆಗಳು ಪ್ರ. ಸಂ.: ಹಂಪನಾಗರಾಜಯ್ಯ ಸಂ. ಬ.ನ.ತಿಮ್ಮೇಗೌಡ.

ಕಸಾಪ. : ಚಾಮರಾಜನಪೇಟೆ, ಬೆಂಗಳೂರು.(1981)

9. ಈಡಿಗ ಜನಪದ ಸಂಪ್ರದಾಯಗಳು – ಸಾಂಸ್ಕೃತಿಕ ಅಧ್ಯಯನ : ಹೊ. ಮ. ಸತ್ಯನಾರಾಯಣ.

10. ಮಲೆನಾಡ ಜನಪದ ಸಂಪ್ರದಾಯಗಳು – ಅಂಬಳಿಕೆ ಹಿರಿಯಣ್ಣ

11. ಚನ್ನಾದೇವಿ ಅಗ್ರಹಾರ. ಜಾನಪದೀಯ ಅಧ್ಯಯನ : ಡಾ.ಟಿ.ಗೋವಿಂದರಾಜು : ಚನ್ನದೇವಿ ಅಗ್ರಹಾರ,

ಕಾಡನೂರು ಅಂಚೆ, ದೊಡ್ಡಬಳ್ಳಾಪುರ.

ಇ. ಛಾಯಾಚಿತ್ರಗಳು

ಗಾಜರಕೋಟ್ ಲೋಹಶಿಲ್ಪ ಎರಕದ ಕಾರ್ಯಗಾರದಲ್ಲಿನ ಛಾಯಾಚಿತ್ರಗಳು




WS-01



WS-02



WS-03



WS-04



WS-04a



WS-05


WS-06


WS-07


WS-08


WS-09


WS-10


WS-11


WS-12


WS-13





WS-15




WS-16




WS-17



WS-18



WS-19


WS-20


WS-21


WS-22


WS-23


WS-24


WS-25


WS-26


WS-27


WS-28


WS-29

ಗಾಜರಕೋಟ್ ಲೋಹ ಶಿಲ್ಪ ಎರಕದ ಕಾರ್ಯಾಗಾರದ ಛಾಯಾ ಚಿತ್ರಗಳು:

1.	WS.01	ರಾಳ ಕುಟ್ಟಿ ಪುಡಿ ಮಾಡುತ್ತಿರುವುದು
2.	WS.02	ಪುಡಿ ಮಾಡಿರುವ ರಾಳ
3.	WS.03	ಮೇಣ
4.	WS.04, 4a	ತೂಕ ಮಾಡುತ್ತಿರುವ ಮೇಣದ ಚಿತ್ರ, ಮೇಣ ರಾಳ ಕರಗಿಸುತ್ತಿರುವುದು
5.	WS.05	ಕೋರ್ ಆಕಾರಕ್ಕೆ ಮೇಣದಿಂದ ರೂಪ ನೀಡುತ್ತಿರುವುದು
6.	WS.06	ಅಳತೆಗನುಗುಣವಾಗಿ ಕೋರ್‌ಗೆ ಕಟ್ಟಿರುವ ಮೇಣ
7.	WS.07	ಮೇಣದಿಂದ ತಯಾರಿಸಲ್ಪಟ್ಟ ದೀಪಸುಂದರಿ (ಮೊಳೆಗಳನ್ನು ಅಳವಡಿಸಿದೆ)
8.	WS.08	ಮೇಣದಿಂದ ತಯಾರಿಸಲ್ಪಟ್ಟ ನಂದಿ (ಮೊಳೆಗಳನ್ನು ಅಳವಡಿಸಿದೆ)
9.	WS.09	ಮೇಣದಿಂದ ತಯಾರಿಸಲ್ಪಟ್ಟ ವೀರಭದ್ರ
10.	WS.10	ಮೇಣದಿಂದ ತಯಾರಿಸಲ್ಪಟ್ಟ ಮಾಯ ಮರುತಪ್ಪ
11.	WS.11	ಮೇಣದಿಂದ ತಯಾರಿಸಲ್ಪಟ್ಟ ಭೂತಯ್ಯ (ಕರಾವಳಿ ಮುಖವಾಡ)
12.	WS.12	ಕೋರ್‌ನಿಂದ ಮೇಣದಾಕೃತಿಯನ್ನು ಮೆತ್ತುತ್ತಿರುವುದು
13.	WS.13	ಕೋರ್‌ನಿಂದ ಮೇಣದಾಕೃತಿಯನ್ನು ಮೆತ್ತಿ ಒಣಗಿಸುತ್ತಿರುವುದು
14.	WS.14	ಕೋರ್‌ನಿಂದ ಮೇಣದಾಕೃತಿಗಳನ್ನು ಮೆತ್ತಿದ ನಂತರ ಒಣಗಿಸುತ್ತಿರುವುದು
15.	WS.15	ಲೋಹದ ಎರಕಕ್ಕೆ ಪಂಚ ಲೋಹಗಳನ್ನು ಸಂಗ್ರಹಿಸಿರುವುದು
16.	WS.16	ಲೋಹದ ಎರಕಕ್ಕೆ ಲೋಹಗಳ ಜೊತೆ ತಾಮ್ರವನ್ನು ಸಂಗ್ರಹಿಸಿರುವುದು
17.	WS.17	ಲೋಹದ ಎರಕಕ್ಕೆ ಮೂಸೆಗಳನ್ನು ಸಿದ್ಧಪಡಿಸಿಕೊಂಡಿರುವುದು
18.	WS.18	ಲೋಹದ ಎರಕಕ್ಕೆ ಕಿಲನ್ ಸಿದ್ಧಪಡಿಸಿರುವುದು
19.	WS.19	ಲೋಹದ ಎರಕಕ್ಕೆ ಲೋಹಗಳನ್ನು ಮೂಸೆಯಲ್ಲಿಟ್ಟು ಕಿಲನ್‌ನಲ್ಲಿಟ್ಟಿರುವುದು

20. WS.20	ಲೋಹದ ಎರಕಕ್ಕೆ ಕಿಲನ್‌ನಲ್ಲಿ ಲೋಹ ಕರಗಿಸಲು ಬೆಂಕಿ ಉರಿಸುತ್ತಿರುವುದು
21. WS.21	ಲೋಹದ ಎರಕಕ್ಕೆ ಲೋಹಗಳು ಕರಗುವವರೆಗೆ ತಾಪಮಾನ ಹೆಚ್ಚಿಸುತ್ತಿರುವುದು
22. WS.22	ಲೋಹದ ಎರಕಕ್ಕೆ ಕರಗಿದ ಲೋಹದ ರಸವನ್ನು ಇಕ್ಕಳದಿಂದ ಮೂಸೆಯನ್ನು ಹಿಡಿದಿರುವುದು
23. WS.23	ಲೋಹದ ರಸವನ್ನು ಕೋರ್‌ಗೆ ಛಾನಲ್ ಮೂಲಕ ಕೋರ್‌ಗೆ ಸುರಿಯುತ್ತಿರುವುದು
24. WS.24	ಲೋಹದ ಎರಕವಾದ ನಂತರ ಕೋರ್‌ಉಂಡೆಗಳು ತಣ್ಣಗಾಗಿಸುತ್ತಿರುವುದು
25. WS.25	ಲೋಹದ ಎರಕವಾದ ಮೇಲೆ ಕೋರ್ ಉಂಡೆಗಳನ್ನು ಒಡೆಯುತ್ತಿರುವುದು
26. WS.26	ಲೋಹದ ಎರಕ ನಂತರ ಹೊರಬಂದ ವೀರಭದ್ರ ಮೂರ್ತಿ
27. WS.27	ಲೋಹದ ಎರಕವಾದ ಮೇಲೆ ನುಣುಪಾಗಿ ಉಜ್ಜುತ್ತಿರುವುದು
28. WS.28	ಲೋಹದ ಎರಕದ ನಂತರ ಸಿದ್ಧವಾದ ಮೈಲಾರ ಶಿಲ್ಪ
29. WS.29	ಲೋಹದ ಎರಕಕ್ಕೆ ಮೇಣ ಸಿದ್ಧಪಡಿಸುತ್ತಿರುವ ದಿ. ಭೀಮಣ್ಣ ಕಂಬಾರ

ಗಾಜರಕೋಟ್ ಲೋಹ ಶಿಲ್ಪಗಳ

ಛಾಯಾಚಿತ್ರಗಳು



NUMBER - 1



NUMBER - 2



NUMBER - 3



NUMBER - 4



NUMBER - 5



NUMBER - 6



NUMBER - 7



NUMBER - 8



NUMBER - 9



NUMBER - 10



NUMBER - 11




NUMBER - 12



NUMBER - 13



NUMBER - 14



NUMBER - 15




NUMBER · 16



NUMBER · 17



NUMBER · 18



NUMBER · 19



NUMBER · 20



NUMBER · 21



NUMBER · 22



NUMBER · 23


A photograph by Dr.Lakshmipathy G

NUMBER - 24


A photograph by Dr.Lakshmipathy G

NUMBER - 25


A photograph by Dr.Lakshmipathy G

NUMBER - 26


A photograph by Dr.Lakshmipathy G

NUMBER - 27


A photograph by Dr.Lakshmipathy G

NUMBER - 28


A photograph by Dr.Lakshmipathy G

NUMBER - 29


A photograph by Dr.Lakshmipathy G

NUMBER - 30


A photograph by
Dr.Lakshmipathy G
NUMBER - 31


A photograph by
Dr.Lakshmipathy G
NUMBER - 32


A photograph by
Dr.Lakshmipathy G
NUMBER - 33


A photograph by
Dr.Lakshmipathy G
NUMBER - 34


A photograph by
Dr.Lakshmipathy G


A photograph by
Dr.Lakshmipathy G


A photograph by
Dr.Lakshmipathy G
NUMBER - 37



A photograph by Dr.Lakshmipathy G

NUMBER - 38



A photograph by Dr.Lakshmipathy G

NUMBER - 39



A photograph by Dr.Lakshmipathy G

NUMBER - 40




A photograph by Dr.Lakshmipathy G

NUMBER - 41




A photograph by Dr.Lakshmipathy G

NUMBER - 42



NUMBER 42

photograph by Dr.Lakshmipathy G



A photograph by Dr.Lakshmipathy G

NUMBER - 43



NUMBER 44

A photograph by Dr.Lakshmipathy G


A photograph by
Dr.Lakshmipathy G
NUMBER - 45


A photograph by
Dr.Lakshmipathy G
NUMBER - 46


A photograph by
Dr.Lakshmipathy G
NUMBER - 47


A photograph by
Dr.Lakshmipathy G
NUMBER - 48


A photograph by
Dr.Lakshmipathy G
NUMBER 49


A photograph by
Dr.Lakshmipathy G
50


A photograph by
Dr.Lakshmipathy G
51


A photograph by
Dr.Lakshmipathy G


A photograph by
Dr.Lakshmipathy G

NUMBER - 52


A photograph by Dr.Lakshmipathy G
NUMBER - 53


A photograph by Dr.Lakshmipathy G
NUMBER - 54


A photograph by Dr.Lakshmipathy G
NUMBER - 55



A photograph by Dr.Lakshmipathy G
NUMBER - 56


A photograph by Dr.Lakshmipathy G
NUMBER - 57


A photograph by Dr.Lakshmipathy G
NUMBER - 58


A photograph by Dr.Lakshmipathy G
NUMBER - 59


A photograph by Dr.Lakshmipathy G
NUMBER - 60



NUMBER - 61
A photograph by Dr.Lakshmipathy G



NUMBER - 62
A photograph by Dr.Lakshmipathy G



NUMBER - 63
A photograph by Dr.Lakshmipathy G



NUMBER - 64
A photograph by Dr.Lakshmipathy G




A photograph by Dr.Lakshmipathy G
NUMBER - 65




A photograph by Dr.Lakshmipathy G
NUMBER - 66



NUMBER
...tograph by ...Lakshmipathy G



NUMBER - 68
...tograph by Dr.Lakshmipathy G



A photograph by Dr.Lakshmipathy G
NUMBER 69



A photograph by Dr.Lakshmipathy G
NUMBER - 70



A photograph by Dr.Lakshmipathy G
NUMBER 71



A photograph by Dr.Lakshmipathy G
NUMBER - 72



A photograph by Dr.Lakshmipathy G
NUMBER - 73



A photograph by Dr.Lakshmipathy G
NUMBER - 74



A photograph by Dr.Lakshmipathy G
NUMBER - 75



A photograph by Dr.Lakshmipathy G
NUMBER - 76



NUMBER - 77




NUMBER - 78



NUMBER - 79



NUMBER - 80



NUMBER - 81



NUMBER - 82




NUMBER - 83



NUMBER - 84



NUMBER - 85



NUMBER - 86



NUMBER - 87



NUMBER - 88



NUMBER - 89



NUMBER - 90




NUMBER - 91



NUMBER - 92


A photograph by
Dr.Lakshmipathy G.
NUMBER - 93


A photograph by
Dr.Lakshmipathy G
NUMBER 94


A photograph by
Dr.Lakshmipathy
95


A photograph by
Dr.Lakshmipathy G
NUMBER - 96


A photograph by
Dr.Lakshmipathy G
97


A photograph by
Dr.Lakshmipathy G
NUMBER - 98


A photograph by
Dr.Lakshmipathy G
NUMBER - 99

18	ಮೇಣದ ಶಿಲ್ಪದ ಸುತ್ತ ಕಟ್ಟಲ್ಪಟ್ಟ ಕೋರ್ ಉಂಡೆ	ಚಿತ್ತಾಪುರ
19	ಹರಕೆ ಗಂಟೆ (156 ಕೆಜಿ)	ಗಾಜರಕೋಟ್
20	ಇಸ್ಲಾಂನ ಮೋಹರಂ ಸಂದರ್ಭದ ಪಂಜೆ	ಗಾಜರಕೋಟ್
21	ಸಿದ್ಧಿ ಮತ್ತು ಗಣಪತಿ	ಚಿತ್ತಾಪುರ
22	ಅಭಯ ಹಸ್ತದ ಹನುಮಂತ	ಚಿತ್ತಾಪುರ
23	ಕಹಳೆ	ಗಾಜರಕೋಟ್
24	ಹರಕೆ ಗಂಟೆ (156 ಕೆಜಿ) ಪಾರ್ಶ್ವಭಾಗ	ಗಾಜರಕೋಟ್
25	ಮಾಯೆ ಮರುತಪ್ಪ	ಗಾಜರಕೋಟ್
26	ವೀರಭದ್ರ	ಕಲಬುರಗಿ
27	ಅರ್ಧ ನಾರೀಶ್ವರ, ವೀರಭದ್ರ	ಗಾಜರಕೋಟ್
28	ಶರಣ ಬಸವೇಶ್ವರರ ಮೇಣದ ಮುಖಶಿಲ್ಪಗಳು	ಕಲಬುರಗಿ
29	ನಾಗಮುಕುಟ	ಕಲಬುರಗಿ
30	ಗಣಪತಿ	ಚಿತ್ತಾಪುರ
31	ಮೈಲಾರದೇವನ ಕುದುರೆ ವಾಹನ 120ಕೆಜಿ	ಗಾಜರಕೋಟ್
32	ಮೈಲಾರದೇವನ ಕುದುರೆ ವಾಹನ 120ಕೆಜಿ, ಪಾರ್ಶ್ವಭಾಗ	ಗಾಜರಕೋಟ್
33	ದಕ್ಷ ದಂಪತಿ	ಗಾಜರಕೋಟ್
34	ವೀರಭದ್ರ	ಗಾಜರಕೋಟ್
35	ಕಾಳಮ್ಮ	ಚಿತ್ತಾಪುರ
36	ದೇವಿ	ಚಿತ್ತಾಪುರ
37	ಮಾಯ ಮರುತಪ್ಪ	ಗಾಜರಕೋಟ್
38	ಮೆರವಣಿಗೆ ಪಲ್ಲಕ್ಕಿ	ಚಿತ್ತಾಪುರ
39	ಪೀಠ ಮತ್ತು ಪ್ರಭಾವಳಿ	ಬಿಡದಿ
40	ಪೀರ್ ಹಬ್ಬದ ಪಂಜೆ–1	ಚಿತ್ತಾಪುರ
41	ಪೀರ್ ಹಬ್ಬದ ಪಂಜೆ–2	ಚಿತ್ತಾಪುರ

42	ಪೀರ್ ಹಬ್ಬದ ಪಂಜೆ–3(ಎರಡು)	ಚಿತ್ತಾಪುರ
43	ವೀರಭದ್ರ	ಕಲಬುರಗಿ
44	ಹನುಮಂತ ಹರಕೆ ಶಿಲ್ಪ	ಹನುಮಂತ
45	ಶಿವನ ಮುಖ	ಗಾಜರಕೋಟ್
46	ಶಿವನ ಮುಖ	ಗಾಜರಕೋಟ್
47	ಶಿವನ ಮುಖ	ಗಾಜರಕೋಟ್
48	ಶಿವನ ಮುಖ	ಗಾಜರಕೋಟ್
49	ಮೈಲಾರದೇವ	ಗಾಜರಕೋಟ್
50	ಶಿವನ ಮುಖ	ಗಾಜರಕೋಟ್
51	ತಿಂಥಿಣಿ ಮೌನೇಶ್ವರನ ಕಮಂಡಲ ಮತ್ತು ಪರಶು	ಚಿತ್ತಾಪುರ
52	ಯಲ್ಲಪ್ಪ ಮಹಾರಾಜರು, ದೇವಿ (ದುತ್ತರಗಿ ಭಾಗಮ್ಮ)	ಚಿತ್ತಾಪುರ
53	ಕುದುರೆವಾಹನ	ಚಿತ್ತಾಪುರ
54	ಕಾಳಿಕಾದೇವಿ	ಚಿತ್ತಾಪುರ
55	ಪ್ರಭಾವಳಿಯೊಂದಿಗೆ ಶಿವನ ಮುಖ ಅಂಕರಿಸಿರುವ ಲಿಂಗ	ಚಿತ್ತಾಪುರ
56	ಮಾಯೆ(ಮರುತಪ್ಪನ ಹೆಂಡತಿ)	ಕಲಬುರಗಿ
57	ಶಿವ ನಾಗ ನಂದಿ	ಚಿತ್ತಾಪುರ
58	ವೀರಭದ್ರ ಕುಣಿತದ ಪುರವಂತಿಕೆಯ ತೊಡುಗೆ	ಚಿತ್ತಾಪುರ
59	ತಿಂಥಿಣಿ ಮೌನೇಶ್ವರನ ಕಮಂಡಲ ಮತ್ತು ಪರಶು	ಕಲಬುರಗಿ
60	ಬೆಳ್ಳಿ ಅಡ್ಡಪಲ್ಲಕ್ಕಿ	ಕಲಬುರಗಿ
61	ಲಕ್ಷ್ಮೀ (ಬೆಳ್ಳಿ)	ಕಲಬುರಗಿ
62	ಶಿವ (ಪಂಚಲೋಹ)	ಚಿತ್ತಾಪುರ
63	ಶಿವ (ಬೆಳ್ಳಿ)	ಚಿತ್ತಾಪುರ
64	ಯೋಗದಂಡ ಮತ್ತು ಪಾದುಕೆಗಳು (ಬೆಳ್ಳಿ)	ಚಿತ್ತಾಪುರ
65	ಪಾದುಕೆಗಳು (ಬೆಳ್ಳಿ)	ಚಿತ್ತಾಪುರ

66	ಶಿವ (ಬೆಳ್ಳಿ)	ಚಿತ್ತಾಪುರ
67	ಶಿವ (ಪಂಚಲೋಹ)	ಚಿತ್ತಾಪುರ
68	ಶಿವ (ಬೆಳ್ಳಿ)	ಚಿತ್ತಾಪುರ
69	ಶಿವ ನಾಗ	ಚಿತ್ತಾಪುರ
70	ಮಾಯೆ ಮತ್ತು ಮರುತಪ್ಪ	ಗಾಜರಕೋಟ್
71	ಕುದುರೆ ವಾಹನ	ಗಾಜರಕೋಟ್
72	ಮಾರಮ್ಮ	ಗಾಜರಕೋಟ್
73	ಪರಶು	ಗಾಜರಕೋಟ್
74	ಲಕ್ಷ್ಮೀ (ಬೆಳ್ಳಿ)	ಚಿತ್ತಾಪುರ
75	ನಾಗಲಿಂಗ	ಚಿತ್ತಾಪುರ
76	ಚೌಡಮ್ಮ	ಚಿತ್ತಾಪುರ
77	ಯಲ್ಲಪ್ಪ ಮಹಾರಾಜರು	ಗಾಜರಕೋಟ್
78	ಶರಣ ಬಸವೇಶ್ವರರ ಮೂರ್ತಿ(ಟೊಳ್ಳಿನಾಕೃತಿ)	ಕಲಬುರಗಿ
79	ಶಿವ	ಕಲಬುರಗಿ
80	ಶಿವ	ಗಾಜರಕೋಟ್
81	ಯಲ್ಲಪ್ಪ ಮಹಾರಾಜರು	ಗಾಜರಕೋಟ್
82	ಹಾರಕೂಡ ಚನ್ನಬಸವ ಶಿವಯೋಗಿಗಳು	ಬಸವಕಲ್ಯಾಣ(ಗಾಜರಕೋಟ್ ಶೈಲಿ)
83	ಯಲ್ಲಪ್ಪ ಮಹಾರಾಜರು, ಯಲ್ಲಪ್ಪ ಮಹಾರಾಜರು	ಚಿತ್ತಾಪುರ
84	ನಾಗಲಿಂಗ ಶಿವ	ಚಿತ್ತಾಪುರ
85	ನಾಗಲಿಂಗ ಶಿವ	ಚಿತ್ತಾಪುರ
86	ಮಯೂರ ದೀಪ	ಗಾಜರಕೋಟ್
87	ಕುದುರೆ ಸವಾರಿ ಮಲ್ಲಯ್ಯ ಮತ್ತು ಪತ್ನಿ	ಗಾಜರಕೋಟ್
88	ಕುದುರೆ ಸವಾರಿ ಮಲ್ಲಯ್ಯ ಮತ್ತು ಪತ್ನಿ ಪಾರ್ಶ್ವಭಾಗ	ಗಾಜರಕೋಟ್

89	ತಿಂಥಿಣಿ ಮೌನೇಶ್ವರನ ಕಮಂಡಲ ಮತ್ತು ಪರಶು	ಚಿತ್ತಾಪುರ
90	ಕುದುರೆ	ಗಾಜರಕೋಟ್
91	ಬೀರಲಿಂಗದೇವರ ವಾಹನ	ಚಿತ್ತಾಪುರ
92	ದುರ್ಗಾದೇವಿ ವಾಹನ	ಗಾಜರಕೋಟ್
93	ಆಮೆ	ನಾಗಾವಿ ಎಲ್ಲಮ್ಮ ದೇವಾಲಯ, ಚಿತ್ತಾಪುರ
94	ನಾಗಾವಿ ಎಲ್ಲಮ್ಮ	ನಾಗಾವಿ ಎಲ್ಲಮ್ಮ ದೇವಾಲಯ, ಚಿತ್ತಾಪುರ
95	ನಾಗಾವಿ ಎಲ್ಲಮ್ಮ –2	ನಾಗಾವಿ ಎಲ್ಲಮ್ಮ ದೇವಾಲಯ, ಚಿತ್ತಾಪುರ
96	ಗೃಹೋಪಯೋಗಿ ಉಪಕರಣಗಳು, ಅಲ್ಯೂಮಿನಿಯಂ	ಚಿತ್ತಾಪುರ
97	ಪ್ರಬಾವಳಿ (ಬೆಳ್ಳಿ)	ಚಿತ್ತಾಪುರ
98	ವಿಶ್ವರಾಧ್ಯರು	ಯಾದಗಿರಿ, ತುಮಕೂರು
99	ದಿ. ಭೀಮಣ್ಣ ಕಂಬಾರರ ಸ್ಟುಡಿಯೋ	ಗಾಜರಕೋಟ್

ಈ. ಸಂಕ್ಷೇಪಗಳು

03. ಕ.ಲ.ಅ.ಬೆಂ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

04. ಕ.ಶಿ.ಕ.ಅ.ಬೆಂ. : ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

04. ಪ್ರ.ಸಂ : ಪ್ರಧಾನ ಸಂಪಾದಕರು

05. ಸಂ. : ಸಂಪಾದಕರು

06. ಲೇ. : ಲೇಖಕರು

07. ಅನು. : ಅನುವಾದಕರು

08. ಮ.ಪ್ರ : ಮಹಾಪ್ರಬಂಧ

09. ವಿ.ವಿ : ವಿಶ್ವವಿದ್ಯಾಲಯ

10. ಅ.ಪ್ರ : ಅಪ್ರಕಟಿತ


11. ಪು.ಸಂ : ಪುಟ ಸಂಖ್ಯೆ

12. **ws: workshop**

ಉ. ನಕ್ಷೆಗಳು

District Map of Yadgir






Gajarkot
View larger map
126

jarkot




Bidar
Gulbarga
Bijapur
Yadgir
Bagalk
Belgaum
Raichur
Gadag
Koppal
Dharwad
Bellary
Uttar
Kannad
Haveri
Davangere
Shimoga
Chitradurga
Udupi
Chikmagalur
Tumkur
Chikballapur
Bangalore Rural
Kolar
Hassan
Dakshin
Kannad
Bangalore
Mandya
Ramanagara
Kodagu
Mysore
Chamarajanagar

ಕೃತಜ್ಞತೆಗಳು

ನಾನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಫೆಲೋಷಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ಕೈಗೊಳ್ಳಲು ಕಾರಣಕರ್ತರಾದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಂದಿನ ಅಧ್ಯಕ್ಷರಾದ ಶ್ರೀ ಶಂಭುಲಿಂಗಪ್ಪ ಮಹದೇವಪ್ಪ ಶಿಲ್ಪಿಯವರಿಗೆ, ರಿಜಿಸ್ಟ್ರಾರ್ ಆದಂತಹ ಶ್ರೀಮತಿ. ಹೆಚ್.ವಿ. ಇಂದ್ರಮ್ಮ, ಶ್ರೀ. ಕೆ.ವಿ. ಸುಬ್ರಹ್ಮಣ್ಯಂ ಅಕಾಡೆಮಿಯ ಇತರ ಎಲ್ಲಾ ಸದಸ್ಯರಿಗೆ, ಸಿಬ್ಬಂದಿಯವರಿಗೆ, ಸಂಪನ್ಮೂಲ ವ್ಯಕ್ತಿಗಳಾದಂತಹ ದಿ. ಭೀಮಣ್ಣನವರ ಪುತ್ರರಾದ ಶಿಲ್ಪಿ. ಶ್ರೀ. ನಾಗರಾಜ್ ಬಿ. ಕಂಬಾರ ಅವರಿಗೆ, ಕಲಬುರಗಿಯ ಶಿಲ್ಪಿ. ಶ್ರೀ .ನರಸಿಂಹ ಅವರಿಗೆ, ಸಹಕರಿಸಿದ ಮಿತ್ರ ಶಿಲ್ಪಿ. ನಟರಾಜ್, ಛಾಯಾಚಿತ್ರ ವಿನ್ಯಾಸಮಾಡಿಕೊಟ್ಟ ನನ್ನ ಸಹೋದರ ಜಿ. ಗುರುಪ್ರಸಾದ್, ಡಿಟಿಪಿಗೆ ಸಹಾಯ ಮಾಡಿದ ನನ್ನ ಶ್ರೀಮತಿ. ಆಶಾ ಲಕ್ಷ್ಮೀಪತಿಗೆ, ನನ್ನ ತಂದೆತಾಯಿ ಶ್ರೀ. ಜಿ.ಗೋಪಾಲ್ ಹಾಗೂ ಶ್ರೀಮತಿ. ಗೋಪಮ್ಮ, ಅತ್ತೆ ಮಾವನವರಾದ ಶ್ರೀಮತಿ. ಶಿವಮ್ಮ, ಶ್ರೀ. ಹನುಮಂತಪ್ಪ, ನನ್ನ ಮುದ್ದಿನ ಮಕ್ಕಳಾದ ಕು. ಅನರ್ಘ್ಯ ಹೊನ್ನಿಧಿ. ಎಲ್, ಚಿ. ಅನಂತ ಹೊಂಗಿರಣ. ಎಲ್ ಇವರುಗಳಿಗೆ ಹಾಗೂ ನನ್ನ ಪ್ರೇರಕ ಶಕ್ತಿಯಾಗಿ ಸಂಶೋಧನಾ ಸ್ಫೂರ್ತಿಯಾದ ಹಾಗೂ ಸದರಿ ಪ್ರಬಂಧದ ಮಾರ್ಗದರ್ಶಕರಾದ ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯವರಾದ ಡಾ.ಎಸ್.ಸಿ.ಪಾಟೀಲರವರಿಗೆ, ಪ್ರತ್ಯಕ್ಷ್ಯವಾಗಿ ಪರೋಕ್ಷವಾಗಿ ಸ್ಪಂಧಿಸಿದವರೆಲ್ಲರಿಗೂ ನನ್ನ ಅನಂತಾನಂತ ಧನ್ಯವಾದಗಳು

ತಮ್ಮ ವಿಶ್ವಾಸದ,

(ಡಾ. ಲಕ್ಷ್ಮೀಪತಿ .ಜಿ)

ದಿನಾಂಕ: 19.05.2017
ಸ್ಥಳ : ಬೆಂಗಳೂರು



A photograph by
Dr.Lakshmipathy G

#113, Behind Govt. School
Hennruru, Kalyana Nagara Post
Bangalore -560043, MoB: 90351974
Email: drglakshmipathy@gmail.com